ಆದಿಲಶಾಹಿ ಸಾಹಿತ್ಯ ಸಂಪುಟ : ೧೪

ಫರ್ಮಾನುಗಳು

[ಆದಿಲಶಾಹಿಗಳ ಆದೇಶಗಳು]

ಭಾಗ – ೧

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೪

ಫರ್ಮಾನುಗಳು

[ಆದಿಲಶಾಹಿಗಳ ಆದೇಶಗಳು]

ಆದಿಲಶಾಹಿ ಸಾಹಿತ್ಯ ಸಂಪುಟ : ೧೪

ಫರ್ಮಾನುಗಳು

[ಆದಿಲಶಾಹಿಗಳ ಆದೇಶಗಳು]

ಅನುವಾದಕರು

ಡಾ. ಮಹನೂರ್ ಜಮಾನೀ ಬೇಗಂ

ಪ್ರೊ. ಎ. ಎಚ್. ಮಾಸಾಪತಿ

(ಪುಟ____ರಿಂದ _____ವರೆಗೆ)

ಸೌ. ವಿದ್ಯಾ ಗುಮಾಸ್ತೆ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

Farmans (Adilshahi Adeshagalu) (Volume - 14) –Translated by,
Dr. Mahnoor Jamani Begam & Pro A. H. Masapati [from Persian, 1 to 117]
Sou. Vidya gumaste [from Marathi,118 to 260]

Published by : Dr. P.G.Halakatti Research Centre,
B.L.D.E. Association, Vijayapur, Karnataka

Edition : 2016

Pages : xxiv + 298 = 322

Copies : 1000

Price : Rs. 200.00

Typeset : Dr. P. G. Halakatti Research Centre, Vijayapur

Printed : Print Point, Bengaluru. Mob : 97390 67359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಫರ್ಮಾನುಗಳು [ಆದಿಲಶಾಹಿಗಳ ಆದೇಶಗಳು] ಸಂಪುಟ : ೧೪

ಅನುವಾದಕರು : ಪರ್ಶಿಯನ್ ಭಾಷೆಯಿಂದ ೧ ರಿಂದ ೧೧೭ರ ವರೆಗೆ ಡಾ. ಮಹನೂರ್ ಜಮಾನೀ ಬೇಗಂ ಮತ್ತು ಪ್ರೊ. ಎ. ಎಚ್. ಮಾಸಾಪತಿ, ಮರಾಠಿಯಿಂದ ೧೧೮ ರಿಂದ ೨೬೦ರ ವರೆಗೆ, ಸೌ. ವಿದ್ಯಾ ಗುಮಾಸ್ತೆ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಹಕ್ಕುಗಳು : ಪ್ರಕಾಶಕರು

ಆವೃತ್ತಿ : ಪ್ರಥಮ ೨೦೧೬

ಪುಟಗಳು : xxiv + ೨೯೮ = ೩೨೨

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು
ಮೊ. ೯೭೩೯೦ ೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

(ದಿನಾಂಕ ೩೦-೮-೨೦೧೫ರ ವರೆಗೆ)

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಯಪುರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು-ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರವರೆಗೆ ರಾಜ್ಯಭಾರ ಮಾಡಿದ ರಾಜಮನೆತನವಿದು. 'ದೀನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕ್ಬರ್‌ನಂತೆ 'ದಾದ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಷಹನು ಸಮನ್ವಯ ಸಮಾಜಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ-ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು

ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ, ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯದ ಖಣಿ, ಉರ್ದು–ಪರ್ಶಿಯನ್ ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಸೂತಕಗಳನ್ನು ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ–ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾ ಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು.ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿ ವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ

ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ-ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮ ಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ಎಂ.ಎಸ್.ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ-ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦-೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ

ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫೆರಿಸ್ತಾ : ತಾರೀಖ-ಇ-ಫೆರಿಸ್ತಾ [ಪರ್ಶಿಯನ್]** ಇಂಗ್ಲೀಷಿಗೆ ಅನುವಾದಿಸಿದ್ದಾರೆ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ.೧೮೮೯] ಮೂಲ ಪರ್ಶಿಯುನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ : ಇಬ್ರಾಹಿಮನಾಮಾ [ದಖಣಿ]**
ಪ್ರಕಟವಾಗಿದೆ. ಮೂಲ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಔಂಧ ಅರ್ಕೀವ್ಸ ಸಾತಾರಾದಲ್ಲಿವೆ.

೩. **ಅಸದಬೇಗ : ವಾಕಾಯತೆ ಅಸದಬೇಗ [ಪರ್ಶಿಯನ್]**

ಚಾಪ್‌ಮನ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿ ಭಾಗಶಃ ಅನುವಾದವಾಗಿದೆ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]**
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ ಹೈದ್ರಾಬಾದಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]**
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ.ಭಾಗಶಃ ಬಿ.ಡಿ.ವರ್ಮಾರಿಂದ ಇಂಗ್ಲಿಷಿನಲ್ಲಿ ಅನುವಾದ.

೬. **ನುಸ್ರತಿ : ಅಲಿನಾಮಾ [ದಖಣಿ]**
ಪ್ರಕಟವಾಗಿದೆ. ಪ್ರತಿ ದುರ್ಮಿಳ.

೭. **ಬಶೀರುದ್ದೀನ ಅಹ್ಮದ : ವಾಕಾತೆ ಮಾಮಲಕತ್ ಬಿಜಾಪುರ [ಉರ್ದು]**
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ : ಘುತುಹತೆ ಆದಿಲಶಾಹಿ [ಪರ್ಶಿಯನ್]**
ಮುಂಬಯಿ ಅರ್ಕೀವ್ಸ, ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ : ತದ್ಕಿರಾತ–ಅಲ್–ಮುಲ್ಕ [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್‌ಜೈನುದ್ದೀನ ಅಲ್ ಮಾಬಾರಿ: ತುಹಫತುಲ್ ಮುಜಾಹಿದೀನ [ಪರ್ಶಿಯನ್]**

೧೧. **ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು]**

೧೨. ಸಯ್ಯದ ಮೊಹಿಯುದ್ದೀನ ಪೀರಜಾದಾ : ಅಹವಾಲೆ ಸಲಾತೀನ ಬಿಜಾಪುರ [ಪರ್ಶಿಯನ್]
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸೀ [ಪರ್ಶಿಯನ್]
ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದ್ರಾಬಾದ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. ೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ [ದಖಣಿ ಹಿಂದಿ]
ಕರ್ನಾಟಕ ವಿ.ವಿ.ಯಿಂದ ಪುಸ್ತಕ ಪ್ರಕಟವಾಗಿದೆ.

೧೫. ಜುಬೇರಿ : ರೌಜತ್ ಅಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್]
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಹಸ್ತಪ್ರತಿ ಸಂಖ್ಯೆ ೧೪೮೧೩

೧೬. ಜುಬೇರಿ : ಬುಸಾತಿನೆ ಸಲಾತೀನ [ಪರ್ಶಿಯನ್]
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಸಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. ಮೀರ ಅಹಮದ ಅಲಿ ಖಾನ: ಗುಲದಸ್ತಾ ಎ ಬಿಜಾಪುರ [ದಖಣಿ]
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಬಿಜಾಪುರ ಸೂಫಿ ಸಂತರ ಚರಿತ್ರೆ ೧೭೯೬] [ಪರ್ಶಿಯನ್]
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. ಆದಿಲಶಾಹಿಕಾಲದ ಫರ್ಮಾನುಗಳು: ಭಾರತ ಇತಿಹಾಸ ಸಂಶೋಧಕ ಮಂಡಳ [ಸಾವಿರಕ್ಕೂ ಮಿಕ್ಕಿ] **ಮತ್ತು ಸನದುಗಳು** ಪುಣೆ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : **ತಾರೀಖೆ ಅಲಿ ಆದಿಲಶಹ [ದಖಣಿ]**

೨. ಮೀರ್ ರಫೀಯುದ್ದೀನ ಶಿರಾಜಿ : **ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : **ಹಪ್ತ ಕುರ್ಸೀ [ಪರ್ಶಿಯನ್]**

೪. ಮೀರ ಅಹಮದ ಅಲಿ ಖಾನ : **ಗುಲದಸ್ತಾ ಎ ಬಿಜಾಪುರ [ದಖಣಿ]**

೫. ಜುಹೂರ್ ಬಿನ್ ಜುಹೂರಿ : **ಮಹಮ್ಮದನಾಮಾ [ಪರ್ಶಿಯನ್]**

ಇದಲ್ಲದೆ, ಫೆರಿಸ್ತಾನ ತಾರೀಖ–ಇ–ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಫುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾದ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎಸ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ. ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಘತ್‌ಉಲ್ಲಾಹ್, ಬೆಂಗಳೂರು

೧೪. ಡಾ. ಮಹನೂರ್ ಜಮಾನಿ ಬೇಗಂ, ಬೆಂಗಳೂರು

೧೫. ಪ್ರೊ. ಎ.ಎಚ್. ಮಾಸಾಪತಿ, ಬೆಂಗಳೂರು

೧೬. ಫಕೀರ್ ಮುಹಮ್ಮದ ಕಟ್ಪಾಡಿ, ಬೆಂಗಳೂರು

೧೭. ಮೌಲಾನಾ ಸಯ್ಯದ್ ರಶೀದ್ ಅಲ್ ಖಾಸಿಮಿ, ಬೆಂಗಳೂರು

೧೮. ಶ್ರೀ ಬೋಡೆ ರಿಯಾಜ಼್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

ಈ ಮಹನೀಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ : ೪ ಸಂಪುಟಗಳು.

೨. ಬುಸಾತಿನೆ ಸಲಾತೀನ : ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಘುತುಹತೆ ಅಲಂಗೀರ ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ೧೦ನೆಯ ಸಂಪುಟ

೮. 'ಕಿತಾಬೆ ನವರಸ' ೧೧ನೆಯ ಸಂಪುಟ

೯. ರೌಜತುಲ್ ಔಲಿಯಾಯೆ ಬಿಜಾಪುರ ೧೨ನೆಯ ಸಂಪುಟ.

೧೦. ಕರ್ನಾಟಕದಲ್ಲಿಯ ಅರೇಬಿಕ್, ಪರ್ಶಿಯನ್, ಉರ್ದು ಶಾಸನಗಳ ಸೂಚಿ ೧೩ನೆಯ ಸಂಪುಟ

ಹೀಗೆ ೧೩ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೪ನೆಯ ಸಂಪುಟವಾಗಿ 'ಫರ್ಮಾನುಗಳು (ಆದಿಲಶಾಹಿ ಆದೇಶಗಳು)' ಪರ್ಶಿಯನ್ ಮತ್ತು ಮರಾಠಿಯಿಂದ ೨೬೦ ಫರ್ಮಾನುಗಳ ಕೃತಿಯು ಪ್ರಕಟವಾಗುತ್ತಿದೆ. ಇದನ್ನು ಕನ್ನಡಕ್ಕೆ ಡಾ. ಮಹನೂರ್ ಜಮಾನಿ ಬೇಗಂ, ಪ್ರೊ. ಎ.ಎಚ್. ಮಾಸಾಪತಿ ಮತ್ತು ಸೌ. ವಿದ್ಯಾ ಗುಮಾಸ್ತೆ ಅವರು ಅನುವಾದ ಮಾಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

‘ಆದಿಲಶಾಹಿ ಸಾಹಿತ್ಯ ಅನುವಾದ’ ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ. ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ, ಶ್ರೀ ಡಿ.ರಂದೀಪ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಬಿ. ಶಿವಕುಮಾರ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ವಿಜಯಪುರದ ಆದಿಲಶಾಹಿಗಳು ಸುಮಾರು ೨೦೦ ವರುಷ (ಕ್ರಿ. ಶ. ೧೪೮೯–೧೬೮೬) ಈ ಪ್ರದೇಶವನ್ನು ಆಳಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಅಧೀನ ಸರದಾರರು, ಸುಭೇದಾರರು, ದೇಸಾಯರು, ದೇಶಮುಖರೇ ಆದಿಯಾಗಿ ಹಲವರಿಗೆ ಆದಿಲಶಾಹಿಗಳು, ಕಾಲಕಾಲಕ್ಕೆ ಆದೇಶಗಳನ್ನು ನೀಡಿದ್ದಾರೆ. ಅವರ ರಾಜ್ಯ ಮುಂಬಯಿಯಿಂದ [ಮಹಾರಾಷ್ಟ್ರ] ತಂಜಾವೂರು [ತಮಿಳುನಾಡು], ಗೋವೆಯಿಂದ ಕರ್ನೂಲ [ಆಂಧ್ರಪ್ರದೇಶ] ವರೆಗೆ ಹಬ್ಬಿತ್ತು. ಆಡಳಿತದ ದೃಷ್ಟಿಯಿಂದ ನೂರಾರು ಸುಭೆಗಳು, ಪರಗಣೆಗಳು, ದೇಸಗತಿಗಳಲ್ಲಿ ವಿಭಜಿಸಲಾಗಿತ್ತು. ಅವರೆಲ್ಲರೊಂದಿಗೆ ಅನೇಕ ವಿಷಯಗಳಲ್ಲಿ ಆದೇಶಗಳನ್ನು ನೀಡಬೇಕಾಗುತ್ತಿತ್ತು. ಅವುಗಳು ಸೈನ್ಯದ ವ್ಯವಸ್ಥೆಯಿಂದ ಅರಮನೆಗೆ ಹಾಲುಕೊಡುವ ಎಮ್ಮೆ ಹಸುಗಳನ್ನು ವ್ಯವಸ್ಥೆ ಮಾಡಿ ಕಳಿಸುವವರೆಗೂ ವಿಷಯಗಳನ್ನು ಒಳಗೊಂಡಿವೆ.

ಈ ಆದೇಶಗಳು ಪರ್ಶಿಯನ್ ಭಾಷೆಯಲ್ಲಿವೆ. ಹುಡುಕುತ್ತ ಹೋದಂತೆ, ಸಾವಿರಾರು ಆದೇಶಗಳು ದೊರೆತವು. ಎಲ್ಲೆಲ್ಲಿ ಹೋದೆವೋ ಅಲ್ಲೆಲ್ಲ ಆದಿಲಶಾಹಿಗಳ ಫರ್ಮಾನುಗಳು ದೊರೆತಿವೆ. ರಾಷ್ಟ್ರೀಯ ಪತ್ರಾಗಾರ ಹೊಸ ದೆಹಲಿ, ಆಂಧ್ರಪ್ರದೇಶ ಪತ್ರಾಗಾರ, ಔರಂಗಾಬಾದ ಪತ್ರಾಗಾರ ಇತ್ಯಾದಿ ಬಹುತೇಕ ಎಲ್ಲ ಪತ್ರಾಗಾರಗಳಲ್ಲಿ, ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯಗಳಲ್ಲಿ ಆದಿಲಶಾಹಿಗಳ ಆದೇಶಗಳು ದೊರಕುತ್ತವೆ. ಎಲ್ಲವನ್ನೂ ಸಂಗ್ರಹಿಸಲಾಗಿಲ್ಲ. ಮುಖ್ಯವಾಗಿ ಕಳೆದ ಶತಮಾನದ ಆದಿಯಲ್ಲಿ ಪುಣೆಯ ಭಾರತೀಯ ಇತಿಹಾಸ ಸಂಶೋದಕ ಮಂಡಳವು ಉತ್ತರಕರ್ನಾಟಕದ ಬಹುತೇಕ ದೇಸಾಯಿ, ದೇಶಪಾಂಡೆ, ದೇಶಮುಖರ ಮನೆತನಗಳಲ್ಲಿಯ ಕಾಗದ ಪತ್ರಗಳನ್ನು ಸಂಗ್ರಹಿಸಿತ್ತು. ಅವುಗಳಲ್ಲಿಯ ಆದಿಲಶಾಹಿಗಳ ಆದೇಶಗಳಲ್ಲಿಯ ಕೆಲವನ್ನು ಪರ್ಶಿಯನ್

ಮಿಶ್ರಿತ ಮರಾಠಿಗೆ ಅನುವಾದಿಸಿ ೧೯೨೦ ರಿಂದ ೪೦ರ ಮಧ್ಯದಲ್ಲಿ ತಮ್ಮ ಮಂಡಳದ ತ್ರೈಮಾಸಿಕದಲ್ಲಿ ಪ್ರಕಟಿಸಿತು. ಜೊತೆಗೆ ಕೆಲವು ಫರ್ಮಾನುಗಳನ್ನು ಮೂಲ ಪರ್ಶಿಯನ್ನದಲ್ಲೂ ಪ್ರಕಟಿಸಿದೆ. ಹೀಗೆ ದೊರೆತ ಸುಮಾರು ೬೦೦ ಫರ್ಮನುಗಳಲ್ಲಿ ೨೬೦ ಫರ್ಮಾನುಗಳ ಕನ್ನಡ ಅನುವಾದವನ್ನು ಇಲ್ಲಿ ಕೊಟ್ಟಿದೆ. ಇದರಲ್ಲಿ ಕನ್ನಡದಲ್ಲಿಯೇ ಬರೆದ ಒಂದು ಸನದು ಮತ್ತು ಮೂರು ಆದೇಶಗಳೂ ಸೇರಿವೆ. ಫರ್ಮಾನುಗಳ ಆಯ್ಕೆಯನ್ನು ಮಾಡಿಕೊಳ್ಳುವಾಗ ವಿಶೇಷವಾಗಿ ಕರ್ನಾಟಕದ ಪರಿಸರದಲ್ಲಿಯ ಪ್ರದೇಶಗಳ ದೇಸಾಯರು, ಸರದಾರರನ್ನು ಗಮನಿಸಲಾಗಿದೆ. ಇವುಗಳಲ್ಲಿ,

ಗದಗ ದೇಸಾಯರು ೪೨, ಧಾರವಾಡ ದೇಸಾಯಿ ೧೨, ಆಲಮೇಲ ದೇಶಮುಖರು ೧೮, ಸಂದಲಾಪುರ [ಸೋಲಾಪುರ] ೫೯, ಅಗಡಿ ದೇಸಾಯರು ೩೧, ಮುಧೋಳ ಘೋರ್ಪಡೆ ೨೩, ಜಂಬಗಿ ೩, ಶಹಾಜಿ ಭೋಸಲೆ ಮನೆತನ ೮, ಶಹಾದುರ್ಗ ೨೭, ಕನಕಗಿರಿ ಸನದು ೧, ಅಂಬಾಡೆ ಖೋಪಡೆ ೯, ಮಧುರೆ ನಾಯಕ ೧, ಮೈಸೂರು ಅರಸರು ೧, ಮತ್ತು ಇತರ ೨೫ ಹೀಗೆ ೨೬೦ ಆದೇಶಗಳ ಕನ್ನಡ ಅನುವಾದವನ್ನು ಇಲ್ಲಿ ಪ್ರಕಟಿಸಿದೆ.

ಮೂಧೋಳದ ಘೋರ್ಪಡೆ ಮನೆತನದ ಫರ್ಮಾನು ಅತ್ಯಂತ ಹಳೆಯದಾಗಿದ್ದು ಕ್ರಿ.ಶ.೧೩೫೨ರದ್ದಾಗಿದೆ. ಆಗಿನ್ನೂ ಆದಿಲಶಾಹಿ ರಾಜ್ಯ ಸ್ಥಾಪನೆಯಾಗಿರಲಿಲ್ಲ. ಆದಿಲಶಾಹಿಗಳಲ್ಲಿ ಮೊದಲನೆಯ ಅಲಿ ಆದಿಲಶಾಹನ ಕಾಲದಿಂದ ಫರ್ಮಾನುಗಳು ದೊರೆತಿವೆ. ಮೊದಲಿನ ಮೂರು ಬಾದಶಹರ ಫರ್ಮಾನುಗಳು ದೊರೆತಿಲ್ಲ. ಆದಿಲಶಾಹಿಗಳ ಫರ್ಮಾನುಗಳಲ್ಲಿಯ ವಿಶೇಷವೆಂದರೆ ೨ನೆಯ ಇಬ್ರಾಹಿಮ ಆದಿಲಶಹನು ಜಗದ್ಗುರು ಎಂಬ ಉಪಾಧಿಯನ್ನು ಪಡೆದವನಾಗಿದ್ದನು ಮತ್ತು ಸರಸ್ವತಿಯ ಭಕ್ತನಾಗಿದ್ದನು. ಅವನ ಅದೇಶಗಳು ಶ್ರೀ ಸರಸ್ವತಿಯ ಆದೇಶಗಳೆಂದೇ ಪ್ರಾರಂಭವಾಗುತ್ತವೆ. ಉದಾಹರಣೆಗೆ ಕ್ರಿ.ಶ.೧೬೧೮ರ ಒಂದು ಆದೇಶ ಗದಗ ದೇಸಾಯಿಗೆ ಇದ್ದು ಅದು ಹೀಗೆ ಪ್ರಾರಂಭವಾಗುತ್ತದೆ. [ಕ್ರಮ ಸಂಖ್ಯೆ ೧೦]

'ಪೂಜ್ಯ ಶ್ರೀ ಸರಸ್ವತಿಯವರ ವತಿಯಿಂದ ಸೈನಿಕ ಅಹ್ಮದನ ಪುತ್ರನಾದ ಮಿರ್ಜಾ ಖಾನನಿಗೆ ಕೊಡಲಾದ ಉಲ್ಲೇಖಿತ ತಾಲೂಕಿನ ಗೋಪಾಲಪುರ ಗ್ರಾಮದ ಪಾಲನ್ನು .ಇತ್ಯಾದಿ' ಹೀಗೆ ಸಾಗುತ್ತದೆ. ಫರ್ಮಾನುಗಳಲ್ಲಿ ವಿಷಯ ವೈವಿಧ್ಯತೆ ಇದೆ. ಭಾಷೆ ಮತ್ತು ಸಾಹಿತ್ಯದ ದೃಷ್ಟಿಯಿಂದಲೂ ಗಮನಾರ್ಹವಾಗಿವೆ. ಮಾದರಿಗಾಗಿ ಒಂದನ್ನು ನೋಡಬಹುದು. [ಕ್ರಮ ಸಂಖ್ಯೆ ೩೧]. ಗದಗ ತಾಲ್ಲೈಕಿನ ವೆಂಕಟಾದ್ರಿ ನಾರಾಯಣ ದೇಸಾಯಿಗ ಬರೆದ ಪತ್ರದಲ್ಲಿ, ಕರ್ನಾಟಕ ರಾಜ್ಯಾಧಿಕಾರವನ್ನು ವಹಿಸಿಕೊಟ್ಟ ಖಾನ ಮೊಹಮ್ಮದನ ಬಗ್ಗೆ ಹೇಳುವುದನ್ನು ಕೇಳಿ,

'ಬಾದಶಹನ ಅಪಾರ ಇನಾಮುಗಳ ಆಕಾಂಕ್ಷೆ ತಿಳಿಯುವುದೇನೆಂದರೆ : ವಿಜಯಕಾಲದಲ್ಲಿ ಸೌಭಾಗ್ಯ ಹಾಗೂ ಸಂಪತ್ತಿನ ಉದ್ಯಾನದ ಪ್ರಕಾಶ, ಬೆಳವಣಿಗೆ ಮತ್ತು ವೈಭವಶಾಂತ ಉಪವನದ ಹೊಸ ಸಂತಾನ, ಉತ್ತಮ ಸ್ವಭಾವದ, ಉನ್ನತ ಅದೃಷ್ಟದ, ಶ್ರೀಮಂತ ಬಾದಶಹನ ದರ್ಬಾರಿನಿಂದ ಪಾಲನೆ–ಪೋಷಣೆ ಹೊಂದಿದ, ಉಪಕಾರ ಹಾಗೂ ಸ್ಥಾನಮಾನಕ್ಕೆ ಯೋಗ್ಯ, ಗೌರವಾನ್ವಿತ ಉನ್ನತ ಅಂತಸ್ತಿನವ, ಸನ್ಮಾರ್ಗ ಸಂಪನ್ನನಾದ ಪುತ್ರ ಮೊಹಮ್ಮದ ಇಕ್ಲಾಸಖಾನ್ ಮುಂದಾಳತ್ವ ಮತ್ತು ಸಂಪತ್ತಿನ ಔನ್ನತ್ಯ ಹೊಂದಿದವ, ವಾರಸುದಾರಿಕೆ ಹಾಗೂ ಪ್ರಭುತ್ವಕ್ಕೆ ಶಕ್ತಿ ನೀಡುವವ, ಸಾಮ್ರಾಜ್ಯ ಮತ್ತು ವಿಜಯದ ಭರವಸೆ ನೀಡುವವ, ಸಂಪತ್ತು ಹಾಗೂ ಶೌರ್ಯದ ಉಂಗುರದ ಹರಳು, ಶಕ್ತಿ ಮತ್ತು ಬಲಿದಾನದ ಮುತ್ತಿನ ಮಿಂಚು, ಹೊರಗೆ ಎಳೆಯಲ್ಪಟ್ಟ ಖಡ್ಗ, ರಾಜಪ್ರಭುತ್ವದ ಬೆಂಬಲಿಗ, ತೀಕ್ಷ್ಣಗೊಳಿಸಿದ ಕಠಾರಿ, ಕಡುವೈರಿಗಳೊಂದಿಗೆ ಹೋರಾಡುವವ, ಮಿಂಚು ಮತ್ತು ಶ್ರೇಷ್ಠತೆಯ ಭಂಡಾರ, ಸಂಪತ್ತು ಹಾಗೂ ಉನ್ನತ ಸಿಂಹಾಸನದ ಮುತ್ತು, ರಹಸ್ಯಗಳ ಖಜಾನೆ, ಅಲ್ಲಾಹನ ಪ್ರತಿನಿಧಿ, ಬುದ್ಧಿವಂತಿಕೆ ಹಾಗೂ ಜ್ಞಾನದ ಸಂಗ್ರಹ, ಏಕೇಶ್ವರೀ ವಾದದ ಸಂಸ್ಥಾಪಕ, ವಿಶಿಷ್ಠ ವ್ಯಕ್ತಿಗಳ ಆಯ್ಕೆ, ಪ್ರಮುಖರ ಸಿಂಹಾಸನ, ಕೃಪಾ ಕಟಾಕ್ಷಗಳ ಸ್ಥಾನ, ಇನಾಮುಗಳ ಚಿಲುಮೆ, ದೇವಚರದ ಸ್ವಭಾವ ಹೊಂದಿದವ, ಏಕತಾ ಸಭೆಯ ಸ್ನೇಹಿತ, ಏಕಾಂತ ಸಮ್ಮೇಳನದ ಮಿತ್ರ, ಗಾಂಭೀರ್ಯತೆಯ ಉನ್ನತವಾದ ನಿವಾಸ ಉಳ್ಳವ, ನಾಯಕರ ಸಾರಾಂಶ, ವೈಭವದ ಉಗಮಸ್ಥಾನ, ಜಗತ್ತು ಮತ್ತು ಕಾಲದ ಸರದಾರರ ಆಯ್ಕೆ, ಆದಿಯಿಂದ ಅನಂತದವರೆಗಿನ ಆಜ್ಞಾಪಾಲಕ, ಧರ್ಮರಕ್ಷಣೆಗಾಗಿ ಹೋರಾಡುವವ, ಆಡಳಿತ ನಡೆಸುವ ಮಂತ್ರಿಗಳ ಮಂತ್ರಿ, ನನ್ನ ಪುತ್ರ ಸಮಾನನಾದ ಖಾನ ಮೊಹಮ್ಮದನಿಗೆ ಕರ್ನಾಟಕ ರಾಜ್ಯಭಾರವನ್ನು ದಯಪಾಲಿಸಿ, ಗೌರವ ನೀಡಿ, ದುರ್ದೈವಿಗಳ ದುರ್ಭಾಗ್ಯವನ್ನು ನಿವಾರಿಸಲು ನೇಮಿಸಲಾಗಿದೆ.' ಇದು ಒಂದು ಮಾದರಿ. ಇಂಥ ಹಲವಾರು ಆದೇಶಗಳನ್ನು ಕಾಣಬಹುದು.

ಹಣಕಾಸಿನ ವ್ಯವಹಾರದಲ್ಲಿ ಇಂದು ನಾವು ಬಳಸುವ ಡ್ರಾಫ್ಟ್, ಚೆಕ್, ಹುಂಡಿಗಳ ವ್ಯವಸ್ಥೆ ಅಂದಿನ ಕಾರ್ಯಭಾರದಲ್ಲೂ ಇತ್ತು ಎಂಬುದನ್ನು ಫರ್ಮಾನ ಕ್ರಮ ಸಂಖ್ಯೆ, ೧೧, ೧೩ ಇತ್ಯಾದಿಗಳು ನಿರೂಪಿಸುತ್ತವೆ.

ಈ ಫರ್ಮಾನುಗಳಲ್ಲಿ ಮೂಲ ಪರ್ಶಿಯನ್ನದಿಂದ ೧೧೭ ಫರ್ಮಾನುಗಳನ್ನು ಬೆಂಗಳೂರಿನ ಡಾ. ಮಹನೂರ ಜವಾನೀ ಬೇಗಂ ಮತ್ತು ಪ್ರೊ. ಎಚ್. ಮಾಸಾಪತಿಯವರು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಾರೆ. ೧೧೮ರಿಂದ ೨೬೦ರವರೆಗಿನ ಫರ್ಮಾನುಗಳ ಅನುವಾದ ಭಾರತ ಇತಿಹಾಸ ಸಂಶೋಧಕ ಮಂಡಳದ ಮರಾಠೀ ಅನುವಾದವನ್ನು ಅವಲಂಬಿಸಿದೆ. ಅವುಗಳನ್ನು ಅನುವಾದ ಮಾಡಿಕೊಟ್ಟವರು

ವಿಜಯಪುರದ ಸೌ. ವಿದ್ಯಾ ಗುಮಾಸ್ತೆ ಅವರು. ಮೂವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಫರ್ಮಾನುಗಳನ್ನು ಒದಗಿಸಿ ಕೊಟ್ಟ, ಭಾರತೀಯ ಇತಿಹಾಸ ಸಂಶೋದಕ ಮಂಡಳದ ಕಾರ್ಯದರ್ಶಿ ಪ್ರೊ. ಭಾವೆ ಮತ್ತು ಪುಣೆಯ ಪರ್ಶಿಯನ್, ಮರಾಠೀ ವಿದ್ವಾಂಸೆ ಡಾ. ಅನುರಾಧಾ ಕುಲಕರ್ಣಿ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಕರಡು ತಿದ್ದುವಲ್ಲಿ ಸಹಾಯ ಮಾಡಿದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್.ಮದಭಾವಿ, ಸಹ-ಸಂಯೋಜಕರಾದ ಡಾ. ವಿ.ಡಿ.ಐಹೊಳ್ಳಿ ಅವರನ್ನು ಇಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್‌ಪಾಯಿಂಟ್‌ದ ಶ್ರೀ ಬಿ.ಸಿ. ಪಾಟೀಲ (ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಯನ್ನು ನೆನೆಯುತ್ತೇನೆ.

■

ಗದಗ ದೇಸಾಯಿ

೧

ಹಿ. ೧೦೦೯ ರಮಜಾನ ೧೨ ಶಾ.ಶ.೧೫೨೨ ಫಾಲ್ಗುಣ ಶುದ್ಧ ೧೪
ಇ.೧೬೦೧ ಮಾರ್ಚ್–೭

ಅವನು ಮಿತ್ರನಾಗಿದ್ದಾನೆ ।
ದೇಶವು ದೇವರಿಗಾಗಿ ಇದೆ ।
ಹಜರತ್ ನವಾಬ್ ಯಶಸ್ವಿ ಸೂರ್ಯ.

ಗದಗ ತಾಲ್ಲೂಕಿನ ದೇಸಾಯಿ ಮತ್ತು ಪ್ರಮುಖರಿಗೆ ಈ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಅವರ ಸಂರಕ್ಷಣೆಯಲ್ಲಿ ಇಡಲಾಗಿದ್ದ ಉಲ್ಲೇಖಿತ ತಾಲ್ಲೂಕನ್ನು; ಹಿಜ್ರಿ ಒಂದು ಸಾವಿರದ (೧೦೦೦) ಆರಂಭಿಕ ತಿಂಗಳಿನಿಂದ ಖಾನ್ ಆಲಿಶಾನ್ ಇಕ್ಲಾಸ್‌ಖಾನರ ಅಧಿಕಾರ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಈ ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಅವರು ಕಾರ್ಯಾಚರಣೆ ಮಾಡಿರಬಹುದು.

ಹಿಜ್ರಿ ಒಂದು ಸಾವಿರದ ಒಂಬತ್ತರ (೧೦೦೯) ರಮಜಾಮಲ್ಲ್ ಮುಬಾರಕ್ ತಿಂಗಳಿನ ಹನ್ನೆರಡನೆಯ (೧೨) ತಾರೀಖು.

ಹುಜೂರ್ ಆಶ್ರಫೆ–ಆಲಾರ ಅನುಮತಿ/ಅನುಜ್ಞೆಯಿಂದ.

ಹಿ.೧೦೧೧ ರಮಜಾನ್ ೪ ಶಕ.೧೫೨೪ ಫಾಲ್ಗುಣ ಶುದ್ಧ೪
ಹಿ.ಸಿ.೧೬೦೩ ಫೆಬ್ರವರಿ ೫

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿ ಮತ್ತು ಪ್ರಮುಖರಿಗೆ ಈ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಉಲ್ಲೇಖಿತ ತಾಲ್ಲೂಕಿನ ಹೋಬಳಿ ಹಾಗೂ ಅದರ ಹದಿನಾಲ್ಕು(೧೪) ಗ್ರಾಮಗಳು ನನ್ನ ಪುತ್ರ ಅಲ್‌ಮುಲುಕ್ ಉಲ್ ಮನ್ನಾನ್ ಖಾನ್ ಆಲಿಶಾನ್ ಸಾದತ್ ನಿಶಾನ್ ರಫಿ ಉಲ್ ಖದರ್ ವಲ್ ಮಕಾನ್ ಮುಸ್ತಫಾಖಾನನಿಗೆ; ಆತನ ದೃಢತೆ, ಶೌರ್ಯ, ಮುಂದಾಳತ್ವ, ಘನತೆ, ಆಡಳಿತೆಯ ಸಾಮರ್ಥ್ಯದ ದೆಸೆಯಿಂದ; ಹಿಜ್ರಿ ಒಂದು ಸಾವಿರದ ಮೂರರಿಂದ (೧೦೦೩) ವಿಶಿಷ್ಟವಾಗಿ ಅವನಿಗೆ ಕಾಣಿಕೆಯ ರೂಪದಲ್ಲಿ ನೀಡಲ್ಪಟ್ಟಿದ್ದವು. ಈ ಆಸ್ತಿಯನ್ನು ಹಿಜ್ರಿ ಒಂದು ಸಾವಿರದ ಹನ್ನೊಂದರ (೧೦೧೧) ರಮಜಾನುಲ್ಲ್ ಮುಬಾರಕ್ ತಿಂಗಳಿನ ನಾಲ್ಕನೆಯ(೪) ತಾರೀಖಿಗೆ ಬರೆದಿರುವ ಶುಭದಾಯಕ ಆಜ್ಞೆಗೆ ಅನುಸಾರವಾಗಿ; ಮೇಲೆ ಉಲ್ಲೇಖಿಸಲಾದ ವ್ಯಕ್ತಿಗೆ ಆನುವಂಶಿಕವಾಗಿ ನೀಡಲಾಗಿದೆ.

ಹುಜೂರ್ ಆಶ್ರಫೆ ಅಖದಸ್ ಹುಮಾಯೂನೆ ಆಲಾರ ಅನುಮತಿಯಿಂದ ಅಲಾಮ್‌ಖಾನ್ ಆಲಿಶಾನ್ ರಫಿಉಲ್‌ಖದರ್ ವಲ್‌ಮಕಾನ್ ಶಹನವಾಜ್‌ಖಾನ್ ಮಜ್ಲಿಸಿ ಹುಜೂರ್‌ರ ಮೂಲಕ ಕಳುಹಿಸಿ ಕೊಡಲಾಗಿದೆ.

ಹಿ. ೧೦೧೩ ಜಿಲ್ಹೇಜ್ ೫ ಶಾ. ೧೫೨೭ ವೈಶಾಖ ಶುದ್ಧ ೬
ಇ. ೧೬೦೫ ಏಪ್ರಿಲ್ ೧೪

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿ ಮತ್ತು ಪ್ರಮುಖರಿಗೆ ಈ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಉಲ್ಲೇಖಿತ ತಾಲ್ಲೂಕಿನ ಸೋಮಾಪುರ ಗ್ರಾಮದ ಪಾಲನ್ನು ಇಬ್ಬರು ಶಸ್ತ್ರಾಗಾರದ ಅಧಿಕಾರಿಗಳು ಸ್ವ-ಇಚ್ಛಾನುಸಾರ ತ್ಯಜಿಸಿದ್ದರು.

ವೇತನದ ಬದಲಾಗಿ ಅವರಿಗೆ ಅಂದರೆ :

ಹಿಜ್ರಿ ಒಂದು ಸಾವಿರದ ಮೂರರಿಂದ (೧೦೦೩) ನೇಮಿಷಲ್ಪಟ್ಟಿದ್ದ ಸಿದ್ದೀ ಹಿಲಾರ್ ನಾಯಬ್ ನಿಜಾಮ್‌ಶಾಹಿ ಲಷ್ಕರಿ ಜರೀದ್

ಪೂಜ್ಯಶ್ರೀ ಹಾಗೂ ಸರಸ್ವತಿಯವರ ಸೇವಕನಾಗಿದ್ದ ಖ್ವಾಜಾ ಸಿದ್ದೀಗೆ ಶ್ರೀಗಳು ಒಟ್ಟು ಮೊತ್ತ : ಆರು ನೂರು(೬೦೦) ಹೂನ್=ಅರವತ್ತು ನೌರಸ್ ಹಾಗೂ ಆರು(೬) ಹೂನ್ ಕೊಟ್ಟಿದ್ದಾರೆ.

ಸಿದ್ದೀ ಸಂದಲ್(?) ಬದ್ರುದ್ದೀನನಿಗಾಗಿ: ನಾಲ್ಕು ನೂರು (೪೦೦) ಹೂನ್= ನಲ್ವತ್ತು ನಾಲ್ಕು-ನೌರಸ್ ಮತ್ತು ನಾಲ್ಕು ಹೂನ್(೪)

ಸಿದ್ದೀ ಜೌಹರ್‌ನಿಗಾಗಿ : ಎರಡು ನೂರು ಹೂನ್ (೨೦೦) =ಇಪ್ಪತ್ತೆರಡು (೨೨) (ಒಟ್ಟುಮೊತ್ತ) ನೌರಸ್ ಹಾಗೂ ಎರಡು(೨) ಹೂನ್.

ಆಜ್ಞೆಯಲ್ಲಿ, ಉಮಜಿ ಗ್ರಾಮದ ಪಾಲಿನಲ್ಲಿ ಬಾದಾಮಿ ಕೋಟೆಯನ್ನು ನಮೂದಿಸಲಾಗಿದೆ. ಉಲ್ಲೇಖಿತ ತಾಲ್ಲೂಕಿನ ಪಾಲನ್ನು ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಮೇಲ್ಕಾಣಿಸಿದ ವಿಷಯದಲ್ಲಿ ಸೇರಿಸಬೇಕು.

ಹಿಜ್ರಿ ಒಂದು ಸಾವಿರದ ಹದಿಮೂರರ(೧೦೧೩) ಜಿಲ್ಲ್‌ಹಜ್ಜಾ ತಿಂಗಳಿನ ಐದನೆಯ (೫) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫೆಎ ಆಲಾರ ಅನುಮತಿಯಿಂದ ಅಲಾಮ್‌ಖಾನ್ ಆಲಿಶಾನ್ ರಫಿಉಲ್ ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

ಹಿ. ೧೦೨೦, ಜಿಲ್ಕಾದ್ ೧೬ ಶಕ. ೧೫೩೩ ಪೌಷ್ಯ ವದ್ಯ ೨/೩
ಇ. ೧೬೧೨ ಜನವರಿ ೨೦

೨ನೇ ಇಬ್ರಾಹಿಂ ಆದಿಲ್‌ಶಾಹ > ಮಾಮಲೇತೊರಗಲ್‌ದ ಹವಾಲ್ದಾರ ಮಲಿಕ್ ಶೇರ್‌ದಿಲ್ ಮತ್ತು ಕಾರಕೂನ.

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಮಲಿಕ್ ಶೇರ್‌ದಿಲ್ಲ್ ಹವಾಲ್ದಾರ್ ಮತ್ತು ತೊರಗಲ್ ವ್ಯವಹಾರದ ಕಾರಕೂನರಿಗೆ ಈ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಗದಗ ತಾಲ್ಲೂಕಿನ ಮಂಗವಾಡ ಗ್ರಾಮವನ್ನು ಹಿಜ್ರಿ ೧೦೧೨ರಲ್ಲಿ (ಒಂದು ಸಾವಿರದ ಹನ್ನೆರಡು) ಪೂಜ್ಯಶ್ರೀ ಸರಸ್ವತಿಯವರಿಂದ ಜಾನ್ ಅಲಿ ಲಿಷ್ಕರಿಯ ಪುತ್ರನಾದ ಅಲಿಖಾನನಿಗೆ ಕೊಡಲಾಗಿದೆ. ಉಲ್ಲೇಖಿತ ವ್ಯವಹಾರದ ಸಮಯದಲ್ಲಿ ಆಸುಪಾಸಿನ ಕ್ಷೇತ್ರದಿಂದ ಇವರನ್ನು ಹೊರಗೆ ಹಾಕಿ, ಪುನಃ ನೇಮಿಸಲಾಗಿತ್ತು. ನೀವು ಈ ಗ್ರಾಮದ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದು. ಜಂಗಪಟ್ಟಿ ಗ್ರಾಮದ ತಹಸೀಲ್ದಾರನನ್ನು ಉಲ್ಲೇಖಿತ ವಿಷಯದ ಹಣಕಾಸಿಗಾಗಿ ಕಳುಹಿಸಿರುವ ಸಂಗತಿಯು ಸ್ಪಷ್ಟವಾಗಿದೆ. ಈ ವಿವಾದಾಂಶವನ್ನು ಕುರಿತು ನಿಮಗೇನು ಸಂಬಂಧವಿದೆ? ಮೇಲ್ಕಾಣಿಸಿದ ಗ್ರಾಮದ ದೇಸಾಯಿಯು ಹಣಕಾಸು ವಸೂಲು ಮಾಡಿ, ಹುಜೂರ್ ಅವರಿಗೆ ಕೊಡುವನು. ಈ ವಿಷಯದಲ್ಲಿ ನಿಮಗೆ ಯಾವುದೇ ಸಂಬಂಧವಿರುವುದಿಲ್ಲ. ನೀವು ಇದರಲ್ಲಿ ಅಡೆತಡೆಯನ್ನುಂಟು ಮಾಡಬಾರದು. ಈ ವಿವಾದಾಂಶದಲ್ಲಿ ದೇಸಾಯಿಯು ಹಿಂಸಾಚಾರ ನಡೆಸಿ, ಗಾವ್‌ಗೊರವಿಯನ್ನು ತಲುಪಿ; ಉಲ್ಲೇಖಿತ ತಾಲ್ಲೂಕಿನ ತೂಪದಕರಿಹಟ್ಟಿ ಮತ್ತು ಬಲಿವಾರ್ ಗ್ರಾಮಗಳಲ್ಲಿ ದಂಗೆ ಉಂಟಾಗಲು ಕಾರಣವಾಗಿದ್ದಾನೆ. ಸ್ವಂತದ ಅಗತ್ಯಗಳಿಗಾಗಿ, ಉಲ್ಲೇಖಿತ ತಾಲ್ಲೂಕನ್ನು ಸಂಕಷ್ಟದಲ್ಲಿ ಸಿಲುಕಿಸಿದ್ದಾನೆ. ಗದಗ ತಾಲ್ಲೂಕಿನ ಗ್ರಾಮಗಳೊಂದಿಗೆ ಆತನ ಸಂಬಂಧದ ಮಿತಿಯು ಎಷ್ಟಿದೆಯೆಂಬುದರ ಅಂದಾಜು-ಆತನಿಗೆ ಇಲ್ಲ. ಗೌವ್‌ಗೊರವಿ ಗ್ರಾಮದಿಂದ ಏನೆಲ್ಲವನ್ನು ತೆಗೆದುಕೊಂಡು ಬರಲಾಗಿದೆಯೋ; ಅದನ್ನು ಶೀಘ್ರವಾಗಿ ಹಿಂತಿರುಗಿಸಿರಿ. ಅವಶ್ಯಕತೆಗಳ ಕಾರಣದಿಂದ, ಉಲ್ಲೇಖಿತ ತಾಲ್ಲೂಕಿನ ಗ್ರಾಮಗಳಿಗೆ ಅಡ್ಡಿ-ಆತಂಕ ಹಾಗೂ ಸಂಕಷ್ಟ ಕೊಡಬೇಡಿರಿ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಈ ವಿಷಯದಲ್ಲಿ ಸಾಕಷ್ಟು ಎಚ್ಚರಿಕೆಯನ್ನು ನೀಡಲಾಗಿದೆ.

ಹಿಜ್ರಿ ಒಂದು ಸಾವಿರದ ಇಪ್ಪತ್ತರ (೧೦೨೦) ಜಿಲ್‌ಕಾಯ್ದಾ ತಿಂಗಳಿನ ಹದಿನಾರನೆಯ (೧೬) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಆಶ್ರಫೆ ಆಲಾರ ಅನುಮತಿಯಿಂದ, ಅಲಾಮ್‌ಖಾನ್ ಅಲಿಶಾನ್ ರಫಿಉಲ್ ಖದರ್ ವಲ್ ಮಕಾನ್ ಇಕ್ಲಾಸ್‌ಖಾನ್ ಅಮೀರ್ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

ಹಿ ೧೦೨೨ ರಜಬ್ ೫ | ಶಕ. ೧೫೩೫, ಭಾದ್ರಪದ ಶುದ್ಧ ೬
ಇ. ೧೬೧೩ ಅಗಸ್ಟ್ ೧೧

೨ನೇ ಇಬ್ರಾಹಿಂ ಆದಿಲ್‌ಶಾಹ > ಗದಗ ಪರಗಣೆಯ ದೇಸಾಯಿ

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಉಲ್ಲೇಖಿತ ತಾಲ್ಲೂಕಿನ ಗೋಪಾಲಪುರ ಗ್ರಾಮದ ಪಾಲಿನ ವಿಷಯದಲ್ಲಿ, ಪೂಜ್ಯಶ್ರೀ ಸರಸ್ವತಿಯವರು ಹಿಜ್ರಿ ಒಂದು ಸಾವಿರದ ಹದಿಮೂರರಿಂದ (೧೦೧೩); ಸೈನಿಕ ಶಾಹಾಮುರಾದನ ಪುತ್ರನಾದ ಹುಸೇನಖಾನನಿಗೆ ಕೊಟ್ಟಿರುವ ಪಾಲನ್ನು; ಹಿಜ್ರಿ ಒಂದು ಸಾವಿರದ ಇಪ್ಪತ್ತೊಂದರ (೧೦೨೧) ಶಾಬಾನ್ ತಿಂಗಳಿನ ಇಪ್ಪತ್ತೊಂಬತ್ತನೆಯ(೨೯) ತಾರೀಖಿಗೆ, ಹೊಸ ನಮೂನೆಯ-ಪೂರ್ಣಗೊಳಿಸಿದ ಕಾಗದದ ಮೇರೆಗೆ ನೇಮಿಸಲ್ಪಟ್ಟ ಸೇವಕನಾದ ಸೈನಿಕ ಮೀರ್ ಅಹ್ಮದನ ಪುತ್ರನಾದ ಮಿರ್ಜಾಖಾನನಿಗೆ ಮಾಸಿಕ ವೇತನದಬದಲಾಗಿ; ಒಂದು ನೂರು ಐವತ್ತು (೧೫೦) ಹೂನ್=ಹದಿನಾರು(೧೬) ನೌರಸ್ ಮತ್ತು ಆರು (೬) ಹೂನ್ ಕೊಡಲಾಗಿದೆ. ಏಕೆಂದರೆ: ಮೊದಲು ಉಲ್ಲೇಖಿತ ವ್ಯಕ್ತಿಗಳು ಆ ಸಮಯದವರೆಗೆ ಮರಣ ಹೊಂದಿದ್ದರು.

ಕ್ರಮಬದ್ಧತೆ –

ಆಜ್ಞೆಯಲ್ಲಿ, ರಾಯಬಾಗ್ ತಾಲ್ಲೂಕಿನ ಉಗಾರ್ ಗ್ರಾಮವನ್ನು ಸೇರಿಸಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಗ್ರಾಮದ ಪಾಲನ್ನು ಸೇರಿಸಿಕೊಳ್ಳಬೇಕು. ಹಿಜ್ರಿ ಒಂದು ಸಾವಿರದ ಇಪ್ಪತ್ತೆರಡರ (೧೦೨೨) ರಜ್ಜಬ್ ತಿಂಗಳಿನ ಐದನೆಯ (೫) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಆಶ್ರಫೆ ಅಖ್‌ದಸ್ ಆಲಾರ ಅನುಮತಿಯಿಂದ ಅಲಾಮ್‌ಖಾನ್ ಆಲಿಖಾನ್ ರಫಿಉಲ್ ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

೬

ಹಿ.೧೦೨೩ ರಬಿವುಲ್ ೭ ಶಕ, ೧೫೩೬ ವೈಶಾಖ ಶುದ್ಧ ೮
ಇ. ೧೬೧೪, ಏಪ್ರಿಲ್ ೭

೨ನೇ ಇಬ್ರಾಹಿಂ ಆದಿಲ್‌ಶಾಹ > ಗದಗ ಪರಗಣೆಯ ಕಾರಕೂನ

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ಒಂದು ಸಾವಿರದ ಹದಿನಾಲ್ಕರಿಂದ (೧೦೧೪) ಪೂಜ್ಯಶ್ರೀ ಸರಸ್ವತಿಯವರು ಜೈನುಲ್ ಆ ಬಿದೀನ್ ಶಹಾಮುರಾದ, ಕಸಾಯಿಖಾನೆಯ ಮೇಲ್ವಿಚಾರಕ (ಸಲಾಖ್‌ದಾರ)ನಿಗೆ ಕೊಟ್ಟಿರುವ ಉಲ್ಲೇಖಿತ ತಾಲ್ಲೂಕಿನ ಗೋಪಾಲ್‌ಪುರ ಗ್ರಾಮದ ಪಾಲನ್ನು, ಆತನ ಗೈರುಹಾಜರಿಯ ದೆಸೆಯಿಂದ ಹಿಂಪಡೆದುಕೊಂಡು; ಹಿಜ್ರಿ ಒಂದು ಸಾವಿರದ ಹದಿಮೂರರಲ್ಲಿ (೧೦೧೩) ಪೂರ್ಣಗೊಳಿಸಿದ ನಮೂನೆ/ಕಾಗದದ ಮೇರೆಗೆ ನೇಮಿಸಲ್ಪಟ್ಟ ಖಿದಮತ್‌ಗಾರ ಸೈನಿಕ ಶಹಾ ಕಮಾಲುದ್ದೀನ್ ಶಹಾ ಇಸ್ಮಾಯಿಲ್‌ನಿಗೆ ವೇತನದ ಬದಲಾಗಿ; ಒಟ್ಟು ಮೊತ್ತ : ಒಂದು ನೂರು ಐವತ್ತು ಹೂನ್(೧೫೦) = ಹದಿನಾರು (೧೬) ನೌರಸ್ ಮತ್ತು ಆರು(೬) ಹೂನ್ ಕೊಡಲಾಗಿದೆ.

ಕ್ರಮಬದ್ಧತೆ –

ವಾರ್ಷಿಕವಾಗಿ, ಒಂದು ಸಾವಿರದ ಐದು ನೂರು (೧, ೫೦೦) ಹೂನ್= ಒಂದು ನೂರು ಅರವತ್ತಾರು (೧೬೬) ನೌರಸ್ ಮತ್ತು ಆರು (೬) ಹೂನ್.

ಒಟ್ಟುಮೊತ್ತವು, ಮೊದಲು ಬರೆದಿರುವ ರಾಯ್‌ಬಾಗ್ ತಾಲ್ಲೂಕಿನ – ಉಗಾರ್ ಗ್ರಾಮದ ಪಾಲು/ಹಿಸ್ಸಾ : ಒಂದು ಸಾವಿರದ ಮೂರು ನೂರ ಐವತ್ತು (೧,೩೫೦) ಹೂನ್ = ಒಂದು ನೂರು ಐವತ್ತು (೧೫೦) ನೌರಸ್ ಮತ್ತು ಮಿಕ್ಕಿದ್ದು : ಹಣಕಾಸು ರೂಪದಲ್ಲಿ

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಮೇಲ್ಕಾಣಿಸಿದ ಗ್ರಾಮದ ಪಾಲನ್ನು ಹಿಂದಿನ ಉಲ್ಲೇಖದೊಂದಿಗೆ ಸೇರಿಸಬೇಕು. ಹಿಜ್ರಿ ಒಂದು ಸಾವಿರದ ಇಪ್ಪತ್ತು ಮೂರರ (೧೦೨೩) ರಬಿವುಲ್ ಅವ್ವಲ್‌ದ ಏಳನೆಯ (೭) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಆಶ್ರಫೆ ಆಲಾರ ಅನುಮತಿಯಿಂದ, ಅಲಾಮ್‌ಖಾನ್ ಆಲಿಶಾನ್ ರಫಿಉಲ್‌ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

೭

ಹಿ. ೧೦೨೩, ರಬಿವುಲ್ ೨೫ ಶಕ. ೧೫೩೬, ವೈಶಾಖ ವದ್ಯ ೧೨
ಇ. ೧೬೧೪ ಏಪ್ರಿಲ್ ೨೫

೨ನೇ ಇಬ್ರಾಹಿಂ ಆದಿಲ್‌ಶಾಹ > ನರಸಿಂಗ ಕೋಳಿಯ ಕಾರಕೂನ ಮತ್ತು ದೇಸಾಯಿ ಗದಗ ಪರಗಣೆ.

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ನರಸಿಂಗ್‌ರಾವ್ ವತಿಯಿಂದ ನೇಮಿಸಲ್ಪಟ್ಟ ಕಾರಕೂನರು ಮತ್ತು ದೇಸಾಯಿಯರಿಗಾಗಿ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಮೊಅಲ್ಲಾ ದರ್ಗಾದ ಪರಿಚಾರಕರ ಮೇಲ್ವಿಚಾರಕನಾದ ಶೇಖ್ ಮಗ್‌ದೂಮ್ ಜುನೇದಿಯು ಪೂಜ್ಯಶ್ರೀ ಸರಸ್ವತಿಯವರಿಗೆ ಹಿಜ್ರಿ ಒಂದು ಸಾವಿರದ ಹದಿನಾಲ್ಕರಲ್ಲಿ (೧೦೧೪) ವಿನಂತಿ ಮಾಡಿಕೊಂಡಿರುವದೇನೆಂದರೆ :

ಮೊದಲಿನ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ತಾಲ್ಲೂಕಿನ ಜಿತ್ತಲ್ ಗ್ರಾಮದ ಹೊರಗೆ ಬೇಲಿಕಟ್ಟಿ, ಪಾಪೋಶಿ ಮೇಜಬಾನಿ, ಗಾವುಜರಾದ್ ಖಾನಾ ಮತ್ತು ಜಂಗಪಟ್ಟಿಯ ಹೊರತಾಗಿ ಮಿಕ್ಕಿದ ಎಲ್ಲ ಪಾಲನ್ನು ಸೇರ್ಪಡಿಸಲು; ಹೊರಗೆ ಹಾಕಲ್ಪಟ್ಟ ವ್ಯಕ್ತಿಯನ್ನು ಕಳುಹಿಸಲಾಗಿದೆ. ಏಕೆಂದರೆ : ಗ್ರಾಮವು ಹಾಳು ಬಿದ್ದಿದೆ (ಖರಾಬ್). ದೇಮನ್ ಗೌಂಡಾ ಹಾಗೂ ಸಿದ್ಧಗೌಂಡಾ ಪಟೇಲ್‌ರು ವಿಶ್ರಾಂತಿ ವೇತನ ಮತ್ತು ಪಟೇಲ್ ವೃತ್ತಿಯ ಅಗತ್ಯಗಳ ಬಗೆಗೆ ಚಿಂತಾಗ್ರಸ್ತರಾಗಿದ್ದಾರೆ. ಅವರು ವಿಷಯದ ಪರಿಶೀಲನೆಗಾಗಿ, ಕುಂದಗೋಳ್ ಹೋಬಳಿಗೆ ಹೋಗಿ; ಹಕ್ಕು ಹಾಗೂ ಪ್ರಾಮಾಣಿಕತೆಯನ್ನು ಖಚಿತಪಡಿಸಿಕೊಂಡು ಬಂದಿದ್ದಾರೆ. ಈ ಕಾರಣದಿಂದ ಉಲ್ಲೇಖಿತ ತಾಲ್ಲೂಕಿನ ಠಾಣೆಯಿಂದ ಮಿಠಾಯಿಯನ್ನು ಕೇಳಲಾಗುತ್ತದೆ. ಅದರಿಂದ ಪಟೇಲರು ಮತ್ತು ಜನಸಾಮಾನ್ಯರು ಅತೃಪ್ತರಾಗಿ ಗ್ರಾಮದಿಂದ ಹೊರಗೆ ಹೋಗಿ; ಗ್ರಾಮಕ್ಕೆ ಕೆಟ್ಟ ಹೆಸರು ತರುವ ಅರ್ಥವೇನು? ಮಿಠಾಯಿಯ ದೆಸೆಯಿಂದ, ಮೇಲ್ಕಾಣಿಸಿದ ಪಟೇಲರಿಗೆ ತೊಂದರೆ ಕೊಡಬಾರದು ಭರವಸೆ ಹಾಗೂ ಸಮಾಧಾನ ನೀಡಿ, ಅವರನ್ನು ಕರೆಯಿಸಿಕೊಂಡು ಗ್ರಾಮದಲ್ಲಿ ನೆಲೆಗೊಳಿಸಿ; ಗ್ರಾಮವನ್ನು ವಾಸ್ತವ್ಯಕ್ಕೆ ಯೋಗ್ಯಗೊಳಿಸಬೇಕು.

ಜಕಾತಿಯ (ದೇವರ ಹೆಸರಿನಲ್ಲಿ ಮಾಡುವ ದಾನ) ಕೊರತೆಯು ಪ್ರತಿ ನಿಮಿಷ ತೊಂದರೆ ಮತ್ತು ವ್ಯಾಕುಲತೆಯನ್ನುಂಟು ಮಾಡುತ್ತದೆ. ಮೊದಲಿನ ಆಜ್ಞೆಗೆ ಅನುಸಾರವಾಗಿ, ನಾಲ್ಕು ವಿಷಯಗಳನ್ನು ಹೊರತುಪಡಿಸಿ; ಎಲ್ಲ ನಿಯಮ ಹಾಗೂ ಅಗತ್ಯಗಳೊಂದಿಗೆ ಉಲ್ಲೇಖಿತ ಗ್ರಾಮವನ್ನು ಮೇಲ್ಕಾಣಿಸಿದ ವ್ಯಕ್ತಿಯೊಂದಿಗೆ ಸೇರಿಸಲಾಗಿದೆ. ಆದುದರಿಂದ, ಜಕಾತಿ ಕೊರತೆಯ ತೊಂದರೆಯನ್ನುಂಟು ಮಾಡುವ ಕಾರಣವಿಲ್ಲ. ಜಕಾತಿ ಕೊರತೆಯ ತಾಕೀತು ಮಾಡುವದನ್ನು ಮರೆಯಬಾರದು. ಏಕೆಂದರೆ: ಆನಂತರ ತೊಂದರೆ ಆಗಬಾರದು. ಶುಭದಾಯಕ ಆಜ್ಞೆಗೆ ಅನುಸಾರವಾಗಿ ಈ ವಿಷಯದಲ್ಲಿ ಅಗತ್ಯವಾದ ಎಚ್ಚರಿಕೆಯನ್ನು ಕೊಡಲಾಗಿದೆ.

ಹಿಜ್ರಿ ಒಂದು ಸಾವಿರದ ಇಪ್ಪತ್ತು ಮೂರರ (೧೦೨೩) ರಬಿಉಲ್ ಅವ್ವಲ್ ತಿಂಗಳಿನ ಇಪ್ಪತ್ತೈದನೆಯ (೨೫) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಆಶ್ರಫೆಎ ಆಲಾರ ಅನುಮತಿಯಿಂದ, ಅಲಾಮ್‌ಖಾನ್ ಆಲಿಶಾನ್ ರಫಿಉಲ್ ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾರ ಮುಖಾಂತರ ಕಳುಹಿಸಿಕೊಡಲಾಗಿದೆ.

ಹಿ. ೧೦೨೪, ರಬಿಲುಸ್ಸಾನಿ ೨೨ ಶಕ ೧೫೩೭ ವೈಶಾಖ ವದ್ಯ ೯
ಇ. ೧೬೧೫, ಮೇ ೧೧

೨ನೇ ಇಬ್ರಾಹಿಂ ಆದಿಲ್‌ಶಾಹ > ಕಾರಕೂನ ಮತ್ತು ದೇಸಾಯಿ ಗದಗ.

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ಕಾರಕೂನರು ಮತ್ತು ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಪೂಜ್ಯಶ್ರೀ ಸರಸ್ವತಿಯವರು ಹಿಜ್ರಿ ಒಂದುಸಾವಿರದ ಹದಿನೈದರಿಂದ (೧೦೧೫) ಸೈನಿಕ ಬಾಬಾನ ಪುತ್ರನಾದ ಅಬ್ದುಲ್‌ರಹಮಾನನಿಗೆ ಉಲ್ಲೇಖಿತ ತಾಲ್ಲೂಕಿನ ಮಲ್ಲಸಮುದ್ರ ಗ್ರಾಮವನ್ನು ಕೊಟ್ಟಿದ್ದರು. ಆದರೆ, ಹಿಜ್ರಿ ಒಂದು ಸಾವಿರದ ಇಪ್ಪತ್ಮೂರರ (೧೦೨೩) ಶವ್ವಾಲ್ ತಿಂಗಳಿನ ಹದಿನಾರನೆಯ (೧೬) ತಾರೀಖಿಗೆ, ಅವರಿಬ್ಬರ ಮರಣದ ವಾರ್ತೆ ತಲುಪಿದ ನಂತರ ಅವರ ಹೆಸರನ್ನು ರದ್ದು ಮಾಡಿರುವ ದೆಸೆಯಿಂದ; ಹಿಜ್ರಿ ಒಂದು ಸಾವಿರದ ಹದಿಮೂರರಿಂದ (೧೦೧೩) ಸೇವಕನಾಗಿದ್ದ ಸೈನಿಕ ಇಸ್‌ಹಾಕ್‌ನ ಪುತ್ರನಾದ ಅಲಿರಜಾನಿಗೆ ಹೊಸದಾಗಿ ಪೂರ್ಣಗೊಳಿಸಿದ ನಮೂನೆಯ ಕಾಗದದ ಮೇರೆಗೆ, ಮಾಸಿಕ ವೇತನದ ಬದಲಾಗಿ; ಬೆಲೆಕಟ್ಟಿ, ಪಾಪೋಶಿ ಮೇಜ್‌ಬಾನಿ ಹಾಗೂ ಗಾವ್‌ಜರಾದ್‌ಖಾನಾ ಗ್ರಾಮಗಳನ್ನು ಹೊರತುಪಡಿಸಿ; ಬಾಡಿಗೆ ಹಣ, ನಗದು ಹಣ, ಇತರ ಅಗತ್ಯಗಳು, ವೇತನರಹಿತ ಶ್ರಮದ ಬೇಡಿಕೆಯನ್ನು ದಾಖಲೆಗೊಳಿಸಲು ಮತ್ತು ಆದಾಯ ನಿಗದಿಮಾಡುವದು. ಕಾಂಕಿಪರಕಿ, ನದಿ ತೋಕ್ರಾ ಹಾಗೂ ಜಂಗಪಟ್ಟಿಯನ್ನು ಹೊರತುಪಡಿಸಿ; ಸಂಯೋಜಿಸಲಾದ ಎಲ್ಲ ವಿಷಯಗಳನ್ನು ಕೊಡಲಾಗಿದೆ.

ಕ್ರಮಬದ್ಧತೆ –

ಮೇಲ್ಕಾಣಿಸಿದ ವ್ಯಕ್ತಿಗೆ ವಾರ್ಷಿಕವಾಗಿ, ಅರವತ್ತು ಸಾವಿರ (೬೦,೦೦೦) ತಿನಕಾ = ಆರು ಸಾವಿರದ ಆರು ನೂರು ಅರವತ್ತಾರು ಸೌರಸ್ (೬,೬೬೬) ಮತ್ತು ಆರು (೬) ತಿನಕಾ

ಉಲ್ಲೇಖಿತ ಗ್ರಾಮದ ಒಟ್ಟು ಮೊತ್ತವನ್ನು ಮೊದಲು ಬರೆಯಲಾಗಿದೆ.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಗ್ರಾಮವನ್ನು ಸೇರಿಸಿಕೊಳ್ಳಬೇಕು.

ಹಿಜ್ರಿ ಒಂದು ಸಾವಿರದ ಇಪ್ಪತ್ತು ನಾಲ್ಕು (೧೦೨೪)ರ ರಬಿಉಸ್‌ಸಾನಿ ತಿಂಗಳಿನ ಇಪ್ಪತ್ತೆರಡನೆಯ (೨೨) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಆಶ್ರಫೆ ಆಲಾರ ಅನುಮತಿಯಿಂದ, ಅಲಾಮ್‌ಖಾನ್, ಆಲಿಶಾನ್ ರಫಿಉಲ್ ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್, ಅಮೀರ ಜುಮ್ಲಾರ ಮುಖಾಂತರ ಕಳುಹಿಸಿ ಕೊಡಲಾಗಿದೆ.

೯

ಹಿ.೧೦೨೫ ಮೊಹರಂ ೧೫ ಶಕ ೧೫೩೭, ಮಾಘ ವದ್ಯ ೧
ಇ. ೧೬೧೬ ಜನವರಿ ೨೪

೨ನೇ ಇಬ್ರಾಹಿಂ ಆದಿಲ್‌ಶಾಹ > ಶಾಹಾ ನವಾಜಖಾನ್‌ನ ಅಧಿಕಾರಿ ಮತ್ತು ಗದಗ ಪರಗಣೆ ದೇಸಾಯಿ

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ನವಾಬ್ ಮುಸ್ತಾಬ್ ಮೊಅಲ್ಲಾ ಅಲ್‌ಖಾಬ್ ಇತಿಜಾದ್ ಉಲ್ ಮುಮಾಲಿಕ್ ಇತಮಾದುದ್ ದೌಲತ್ ಉಲ್ ಕುಬ್ರಾ ಸಾಹೇಬುಲ್ ಕಮಾಲಾತುಸ್ ಸೂರ್ಯ ವಲ್ ಫಜಾಯಿಲುಲ್ ಮಾನವೀಯ್ ರುಕುನುಸ್ ಸಲ್‌ತನತುಲ್ ಖಾಯೆರಾ ಮೊತಮಿನುದ್ ದೌಲತ್ ಖಿದ್ವ ಏ ಖವಾನೀನ್ ಬುಲಂದ್ ಮಕಾನ್ ನವಾಬ್ ಶಾಹ ನವಾಜ್ ಖಾನ್ ಸರ್ ಮಜ್ಲಿಸಿಯ ವತಿಯಿಂದ ನೇಮಿಸಿದ ಅಧಿಕಾರಿಗಳು ಮತ್ತು ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ಒಂದು ಸಾವಿರದ ಹದಿನಾರರಿಂದ (೧೦೧೬) ಪೂಜ್ಯಶ್ರೀ ಸರಸ್ವತಿಯವರು ಇದಕ್ಕಿಂತ ಮೊದಲು, ಮಲಿಕ್ ಆಲಿಶಾನ್ ಸಾದತ್ ನಿಶಾನ್ ಮೀರಾನ್ ಮೊಹಿಯುದ್ದೀನ್ ಅಬ್ದುಲ್ ಖಾದರನಿಗೆ ಕೊಟ್ಟು, ಹಿಂಪಡೆದುಕೊಂಡಿರುವ ಕುರ್ತಕೋಟಾ ಗ್ರಾಮ ಹಾಗೂ ಉಲ್ಲೇಖಿತ ತಾಲ್ಲೂಕಿನ ನೀಲಗುಂದ ಮತ್ತು ಬೇಟೂರ್ ಗ್ರಾಮಗಳ ನಡುವೆ ಸಮಗ್ರವಾದ ವ್ಯಾಜ್ಯವಿತ್ತು. ಹಿಂದಿನ ಕಾಲದ ವ್ಯವಸ್ಥಾಪಕನಾದ ದಿವಂಗತ ಐಯಾಜ್‌ನ ಠಾಣೆದಾರಿಕೆಯಲ್ಲಿ, ಜನರ ಸಹಮತದಿಂದ, ಅದನ್ನು ನ್ಯಾಯಸಮ್ಮತಗೊಳಿಸಲಾಯಿತು.

..............ಜನರನ್ನು ನೆಲೆಗೊಳಿಸಿದಂತಹ ನೀಲಗುಂದ ಹಾಗೂ ಬೀತೂರ್ ಸಂಘ ಗ್ರಾಮಗಳ ಹಳೆಯ ಸೀಮಿತವಾದ ಗಡಿರೇಖೆಯನ್ನು; ವ್ಯವಸ್ಥಾಪಕನಾದ ಕರ್‌ನಾಯಕನು ಒತ್ತಾಯಪೂರ್ವಕವಾಗಿ ವಿಸ್ತರಿಸಿದನು...........

ಕೈಕೊಳ್ಳಲಾದಂತಹ ನಿರ್ಣಯದ ಮೇರೆಗೆ, ಹಳೆಯ ಸೀಮಿತ ಗಡಿರೇಖೆಯನ್ನು ಯಥಾ ಪ್ರಕಾರವಾಗಿ ಸ್ಥಿರಪಡಿಸಬೇಕು. ....ಪುನಃ ಎರಡೂ ಗ್ರಾಮಗಳ ಜನರು ಗೊಂದಲವೆಬ್ಬಿಸಿ ಬೀತೂರ್ ಸಂಘದ ಭೂಮಿಯನ್ನು ವಿಸ್ತರಿಸಿ, ಸ್ವಾಧೀನಪಡಿಸಿಕೊಂಡಿದ್ದಾರೆ. ಗೌರವಾನ್ವಿತ ಆಜ್ಞೆಗೆ ಅನುಸಾರವಾಗಿ, ಎರಡೂ ಗ್ರಾಮಗಳಿಗೆ

ಎಚ್ಚರಿಕೆ ನೀಡಿ, ಆ ಭೂಮಿಯನ್ನು ಹಿಂಪಡೆದು; ಬೀತೂರ್ ಸಂಘವನ್ನು ಅದರ ಮೊದಲಿನ ಸ್ಥಾನದಲ್ಲಿ ಸ್ಥಿರಗೊಳಿಸಿ, ಜನರ ಚಿಂತೆಯು ಕಾರಣವನ್ನು ಪರಿಶೀಲಿಸಬೇಕು............ ಒತ್ತಾಯ ಪೂರ್ವಕವಾಗಿ ಸ್ವಾಧೀನಪಡಿಸಿಕೊಳ್ಳಲಾದಂತಹ ಮೋಲ್‌ಗುಂದ ಹೋಬಳಿ ಮತ್ತು ಉಲ್ಲೇಖಿತ ಎರಡು ಗ್ರಾಮಗಳು ಹಾಗೂ ಬೀರೂರ್ ಸಂಘದ ಜಮೀನನ್ನು ತೆರಿಗೆಯ ಜೊತೆಗೆ, ಕುರ್ತಕೋಟಿಯೊಂದಿಗೆ ಸೇರಿಸಬೇಕು. ಸಜ್ಜನಿಕೆಯ ಆಜ್ಞೆಯಲ್ಲಿ ಈ ವಿಷಯದ ಬಗೆಗೆ; ಪ್ರಬುದ್ಧವಾದ ಎಚ್ಚರಿಕೆಯನ್ನು ನೀಡಲಾಗಿದೆ.

ಹಿಜ್ರಿ ಒಂದು ಸಾವಿರದ ಇಪ್ಪತ್ತೈದರ (೧೦೨೫) ಮೊಹರಮ್ ತಿಂಗಳಿನ ಹದಿನೈದನೆಯ (೧೫) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫೆ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯಿಂದ ಅಲಾಮ್‌ಖಾನ್ ಆಲಿಶಾನ್ ರಫಿ ಉಲ್‌ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

೧೦

ಹಿ. ೧೦೨೭, ಜಮಾದಿಲುಸ್ಸಾನಿ ೨೫ ಶಕ. ೧೫೪೦ ಜೇಷ್ಠ ವದ್ಯ ೧೨
ಇ. ೧೬೧೮, ಜೂನ್ ೯

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಆಜ್ಞಾಪಿಸಲಾಗಿದೆ:

ಪೂಜ್ಯ ಶ್ರೀ ಸರಸ್ವತಿಯವರ ವತಿಯಿಂದ ಸೈನಿಕ ಅಹ್ಮದ್‌ನ ಪುತ್ರನಾದ ಮಿರ್ಜಾಖಾನನಿಗೆ ಕೊಡಲಾದ ಉಲ್ಲೇಖಿತ ತಾಲ್ಲೂಕಿನ ಗೋಪಾಲಪುರ ಗ್ರಾಮದ ಪಾಲನ್ನು (ತಂದೆ ಮತ್ತು ಪುತ್ರನ ಹತ್ತಿರ ಕುದುರೆ ಇಲ್ಲದ ಕಾರಣ) ಹಿಂಪಡೆದು; ಪರಿಚಾರಕನಾದ ಸೈನಿಕ ಅಶ್ರಫ್‌ಖಾನನ ಪುತ್ರನಾದ ಅಶ್ರಫ್‌ಖಾನನಿಗೆ ಹಿಜ್ರಿ ಒಂದು ಸಾವಿರದ ಹದಿನಾಲ್ಕರಲ್ಲಿ (೧೦೧೪) ತೊರಗಲ್ಲ್ ವ್ಯವಹಾರದಲ್ಲಿ ಇಂಗಳದ ಹಳ್ಳಿ ಗ್ರಾಮದ ಪಾಲು :

ಒಂಬತ್ತು ನೂರು (೯೦೦) ಹೂನ್ = ಒಂದು ನೂರು (೧೦೦) ನೌರಸ್

ಉಲ್ಲೇಖಿತ ಹಿಜ್ರಿಯಲ್ಲಿ, ಅಹಸನಾಬಾದ್ ನಗರದ ಜಾಸೂರ್‌ದ ಕಡೆಗಿನ ಸಣ್ಣ ಮೊಗಲಿ ಗ್ರಾಮ ಮತ್ತು ಹಿಪ್ಪರಗಾ ಗ್ರಾಮವನ್ನು ಹಣಕಾಸು ತೆಗೆದುಕೊಳ್ಳದೇ ಸ್ವಯಂ-ನಿರ್ಗಮಿಸುವ ಬದಲಿಗೆ/ಪ್ರತಿಫಲವಾಗಿ, ಅದರ ಒಟ್ಟು ಮೊತ್ತ : ಆರು ನೂರು ಐವತ್ತು (೬೫೦) ಹೂನ್ = ಎಪ್ಪತ್ತೆರಡು (೭೨) ನೌರಸ್ ಮತ್ತು ಎರಡು (೨) ಹೂನ್ ಕೊಡಲಾಗಿದೆ.

ಕ್ರಮಬದ್ಧತೆ (ಇಸ್‌ತಾವಾ) –

ಮೇಲ್ಕಾಣಿಸಿದ ವ್ಯಕ್ತಿಗೆ ವಾರ್ಷಿಕವಾಗಿ, ಒಂದು ಸಾವಿರದ ಎರಡು ನೂರು (೧,೨೦೦)ಹೂನ್=ಒಂದು ನೂರು ಮೂವತ್ತು ಮೂರು (೧೩೩) ನೌರಸ್ ಮತ್ತು ಮೂರು (೩) ಹೂನ್. ಒಟ್ಟು ಮೊತ್ತ : ಹಣಕಾಸು ರೂಪದಲ್ಲಿ, ಮೊದಲಿಗೆ ಬರೆಯಲಾಗಿದೆ.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಗ್ರಾಮದ ಪಾಲನ್ನು ಸೇರಿಸಿಕೊಳ್ಳಬೇಕು.

ಹಿಜ್ರಿ ಒಂದು ಸಾವಿರದ ಇಪ್ಪತ್ತೇಳರ (೧೦೨೭) ಜಮಾದಿ ಉಸ್‌ಸಾನಿ ತಿಂಗಳಿನ ಇಪ್ಪತ್ತೈದನೆಯ ತಾರೀಖಿಗೆ (೨೫) ಬರೆಯಲಾಗಿದೆ.

ಹುಜೂರ್ ಅಶ್ರಫೆ ಆಲಾರ ಅನುಮತಿಯ ಮೇರೆಗೆ, ಅಲ್ಲಾಮ್‌ಖಾನ್ ಆಲಿಶಾನ್ ಸಾದತ್ ನಿಶಾನ್ ರಫಿಉಲ್‌ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

೧೧

ಹಿ. ೧೦೨೭, ಶಾಬಾನ್ ೩ ಶಕ ೧೫೪೦, ಶ್ರಾವಣ ಶುದ್ಧ ೫
ಇ. ೧೬೧೮ ಜುಲೈ ೧೬

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ವೆಂಕಟಾದ್ರಿ ನಾರಾಯಣ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :

ಪೂಜ್ಯ ಶ್ರೀ ಸರಸ್ವತಿಯವರ ವತಿಯಿಂದ (ಬಾದಶಾಹನ) ಖಜಾನೆಯ ಕಟ್ಟಡವನ್ನು ಸಂರಕ್ಷಿಸುವಂತಹ ಪ್ರಸಿದ್ಧ ನರಸೊ ಪಂಡಿತನಿಗೆ ಮಾಸಿಕ ವೇತನದ ಹೊರತಾಗಿ; ಉಲ್ಲೇಖಿತ ತಾಲ್ಲೂಕಿನ ಇತರ ಕಾರಣಗಳಿಂದ, ಹಿಜ್ರಿ ಒಂದು ಸಾವಿರದ ಹದಿನೇಳರ (೧೦೧೭)ವರೆಗೆ ಕಟ್ಟಡಗಳ ಪಾಲು/ಹಿಸ್ಸೆಗೆ ಬದಲಾಗಿ;

ನಾಲ್ವತ್ತಾರು (೪೬) ಹೂನ್, ಮೂರು (೩) ರುಬಾ= ಐದು (೫) ನೌರಸ್, ಮೂರು (೩) ಹೂನ್ ಮೂರು (೩) ರುಬಾ ಕೊಡಲಾಗಿದೆ.

ಹಿಜ್ರಿ ಒಂದು ಸಾವಿರದ ಹದಿನಾರಕ್ಕೆ (೧೦೧೬) ಹಾಜರು ಹಿಜ್ರಿ ಒಂದು ಸಾವಿರದ ಹದಿನಾಲ್ಕಕ್ಕೆ (೧೦೧೪)

ಪಡಿಸಿದ ನುಸ್ರತ್ ಆಬಾದ್ ವ್ಯವಹಾರದ್ದ ಹಾಜರು ಪಡಿಸಿದ ಅಹಸನ್ ಆಬಾದ ನಗರದ

ಡ್ರಾಪ್ಟಿನ ಬದಲು, ಮೂರು (೩) ರುಬಾ ಇಪ್ಪತ್ತೆರಡು (೨೨) ಹೂನ್=೨ (ಎರಡೂ) ನೌರಸ್, ಮೂರು (೩) ದವಲ್ ಮತ್ತು ೪(ನಾಲ್ಕು) ಹೂನ್ ಹಿಜ್ರಿ ಒಂದು ಸಾವಿರದ ಹದಿನಾಲ್ಕಕ್ಕೆ (೧೦೧೪)

ಹಿಜ್ರಿ ಒಂದು ಸಾವಿರದ ಹದಿನಾಲ್ಕಕ್ಕೆ (೧೦೧೪) ಹಾಜರು ಹಾಜರುಪಡಿಸಿದ ಬಂಕಾಪುರ್ ವ್ಯವಹಾರ

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಒಟ್ಟು ಮೊತ್ತವನ್ನು ಕೊಡಬೇಕು. ಹಿಜ್ರಿ ಒಂದು ಸಾವಿರದ ಇಪ್ಪತ್ತೇಳರ (೧೦೨೭) ಶಾಬಾನ್ ತಿಂಗಳಿನ ಮೂರನೇ(೩) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಆಲಾರ ಅನುಮತಿಯಿಂದ, ಅಲಾಮ್‌ಖಾನ್ ಆಲಿಶಾನ್ ಸಾದತ್ ನಿಶಾನ್ ರಫಿ ಉಲ್‌ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾ ಮುಖಾಂತರ ಕಳುಹಿಸಲಾಗಿದೆ.

೧೨

ಹಿ ೧೦೨೭, ಜಿಲ್ಹಾದ್ ೧೦ ಶಕ, ೧೫೪೦ ಕಾರ್ತೀಕ ಶುದ್ಧ ೧೧
ಇ. ೧೬೧೮ ಅಕ್ಟೋಬರ್ ೧೯

೨ನೇ ಇಬ್ರಾಹಿಂ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ಒಂದು ಸಾವಿರದ ಹತ್ತೊಂಬತ್ತರಲ್ಲಿ (೧೦೧೯) ಸೈನಿಕ ಸೈದಿ ಇಸ್ಮಾಯಿಲ್‌ನು ಉಲ್ಲೇಖಿತ ತಾಲ್ಲೂಕಿನ ಬಲಿವಾರ್ ಗ್ರಾಮದಿಂದ ಹೊರಗೆ ಹಾಕಲ್ಪಟ್ಟ ಪರಿಚಾರಕನಾದ ಸಿದ್ಧೀ ಅಂಬರ್‌ನ ಬಗೆಗೆ, ದರ್ಗಾಹೇ ಮೊಅಲ್ಲ (ದರ್ಬಾರ್)ದಲ್ಲಿ, ಪೂಜ್ಯಶ್ರೀ ಸರಸ್ವತಿಯವರ ವತಿಯಿಂದ, ಮನವಿಯನ್ನು ಸಲ್ಲಿಸಿದನು.

ಉಲ್ಲೇಖಿತ ಗ್ರಾಮದ ಪಟೇಲನು ಲಂಚಕೋರನಾಗಿದ್ದಾನೆ. ಒತ್ತಾಯಪೂರ್ವಕವಾಗಿ, ದುರ್ಬಲರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾನೆ. ಅವರ ಭೂಮಿಯ ಬೆಳೆ/ಪೈರನ್ನು ಸ್ವಾರ್ಥಕ್ಕಾಗಿ ಬಳಕೆಮಾಡಿಕೊಂಡಿದ್ದಾನೆ. ಇತರರಿಗೆ ಏನೂ ಕೊಡುವದಿಲ್ಲ. ವಿವಿಧ ಪ್ರಕಾರದ ಬಲಾತ್ಕಾರ ಮಾಡುವ ಅರ್ಥವೇನು? ಆಜ್ಞೆಯು ದೊರಕುತ್ತಲೇ, ನೀವು ಉಲ್ಲೇಖಿತ ದುರ್ಬಲ ಜನರ ಗ್ರಾಮಕ್ಕೆ ಹೋಗಿ; ಭೂಗೋತಾಸಾಲಾಬಾದ್ ಹಾಗೂ ಆಸುಪಾಸಿನ ಜನರ ಅಭಿಪ್ರಾಯದ ಮೇರೆಗೆ, ನ್ಯಾಯದೊಂದಿಗೆ ಅವರ ಗ್ರಾಮದ ಗಡಿರೇಖೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು; ಮೇಲ್ಕಾಣಿಸಿದ ಗ್ರಾಮದೊಂದಿಗೆ ಸೇರಿಸಿರಿ. ಆ ಭೂಮಿಯನ್ನು ವಶಪಡಿಸಿಕೊಳ್ಳಲು ಉಲ್ಲೇಖಿತ ಪಟೇಲನಿಗೆ ಅವಕಾಶ ನೀಡಬೇಡಿರಿ. ಹೊರಗೆ ಹಾಕಲ್ಪಟ್ಟ ವ್ಯಕ್ತಿಯ ಪಾಲನ್ನು ಅವನಿಗೆ ಕೊಡಿರಿ.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಇಂತಹ ಫಿರ್ಯಾದಿಗಳು ಪುನಃ ಮರುಕಳಿಸದಂತೆ ಮಾಡಿರಿ. ಈ ವಿಷಯದಲ್ಲಿ ಎಚ್ಚರಿಕೆಯನ್ನು ನೀಡಲಾಗಿದೆ.

ಹಿಜ್ರಿ ೧೦೨೭ (ಒಂದು ಸಾವಿರ ಇಪ್ಪತ್ತೇಳು) ಝಿಖಾಯ್ದಾ ತಿಂಗಳಿನ ೧೦ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫೆ ಅಖ್‌ದಸೆ ಆಲಾರ ಅನುಮತಿಯಿಂದ, ಅಲ್ಲಾಮ್‌ಖಾನ್ ಆಲಿಶಾನ್ ಸಾದತ್ ನಿಶಾನ್ ರಫಿಉಲ್‌ಖದರ್ ವಲ್‌ಮಕಾನ್ ಇಕ್ಲಾಸ್ ಖಾನ್ ಅಮೀರೆ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

ಹಿ. ೧೦೨೮ ಶವ್ವಾಲ್ ೨೩ ಶಕ. ೧೫೪೧ ಭಾದ್ರಪದ ವದ್ಯ ೧೧

ಇ. ೧೬೧೯ ಸೆಪ್ಟೆಂಬರ್ ೨೩

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೧೯ರಲ್ಲಿ (ಒಂದು ಸಾವಿರದ ಹತ್ತೊಂಬತ್ತು) ಪೂಜ್ಯ ಶ್ರೀ ಸರಸ್ವತಿಯವರ ವತಿಯಿಂದ; ಉಲ್ಲೇಖಿತ ತಾಲ್ಲೂಕಿನ ನಾಗಾವಿ ಗ್ರಾಮದ ಪಾಲನ್ನು ಬೇರ್ಪಡಿಸಿ, ಒಟ್ಟು ಮೊತ್ತ: ೫೦೦ (ಐದು ನೂರು) ಹೊನ್=೫೫(ಐವತ್ತೈದು) ನೌರಸ್ ಮತ್ತು ೫ (ಐದು) ಹೊನ್ ಹೀಗೆ ಒಟ್ಟು : ೨೦೦ (ಎರಡು ನೂರು) ಹೊನ್ =೨೨(ಇಪ್ಪತ್ತೆರಡು) ನೌರಸ್ ಮತ್ತು ೨ (ಎರಡು) ಹೊನ್.

ವಿವರ ಹೀಗಿದೆ :

ಮೊದಲು ಪ್ರಸ್ತುತಪಡಿಸಿದ ವಜಾ ಮಾಡಿದ ಹಣ : 400(ನಾಲ್ಕು ನೂರು) ಹೊನ್=44(ನಾಲ್ವತ್‌ನಾಲ್ಕು) ನೌರಸ್ ಮತ್ತು 4 (ನಾಲ್ಕ) ಹೊನ್
ಇದು ಒಟ್ಟು : ಇಬ್ಬರು ಸೈನಿಕರದು.
ಉಲ್ಲೇಖಿತ ತಾರೀಖಿಗೆ ದಾವೂದ್‌ಖಾನನು ಕಳುಹಿಸಿದ ಚೆಕ್ : 100 (ನೂರು) ಹೊನ್=12 (ಹನ್ನೆರಡು) ನೌರಸ್ ಮತ್ತು 1 (ಒಂದು) ಹೊನ್
ಅಬೂ ಆಕಾನ ಪುತ್ರ ಕಾಶೀಮ್ ಆಕಾನಿಗಾಗಿ 50(ಐವತ್ತು) ಹೊನ್=5(ಐದು) ನೌರಸ್ ಮತ್ತು 5 (ಐದು) ಹೊನ್

ಉಲ್ಲೇಖಿತ ತಾರೀಖಿಗೆ ಮೇಲ್ಕಾಣಿಸಿದ ಗ್ರಾಮದ ಪ್ರಸ್ತುತ ಪಡಿಸಿದ ಜರಾವಾ 100(ನೂರು) ಹೊನ್ =12(ಹನ್ನೆರಡು) ನೌರಸ್ 1 (ಒಂದು) ಹೊನ್.
ಶೇಖ್‌ಮಹಮ್ಮದನ ಪುತ್ರನಾದ ಖಾಬಾಜಿಗಾಗಿ ಐವತ್ತು(50)ಹೊನ್=(5) ಐದು ನೌರಸ್ ಮತ್ತು ಐದು (5) ಹೊನ್

ಇದರ ಒಟ್ಟು ಮೊತ್ತ :

ಹಿಜ್ರಿ ೧೦೧೮(ಒಂದು ಸಾವಿರದ ಹದಿನೆಂಟು) ರಲ್ಲಿ ಹೊಸದಾಗಿ ಪೂರ್ಣಗೊಳಿಸಲಾದ ನಮೂನೆಯ ಕಾಗದಕ್ಕೆ ಅನುಸಾರವಾಗಿ 'ಸೇವಕ'ನೆಂದು ನೇಮಿಸಲ್ಪಟ್ಟಿದ್ದ ಸೈನಿಕ ಸಾವಂತರಾವ್‌ನ ಪುತ್ರನಾದ ಯಶವಂತ್ ರಾವ್‌ನ ವೇತನದ ಬದಲಾಗಿ; ಅವನಿಗೆ ಆ ಸಮಯದಲ್ಲಿ ಮಲಿಕ್ ಆಲಿಶಾನ್ ಸಾದತ್ ನಿಶಾನ್ ಮಿರಾನ್ ಮೊಯಿಯುದ್ದೀನನ ವತಿಯಿಂದ ಜಮಾಮಾಡಿದ ಚೆಕ್ಕಿನ ರೂಪದಲ್ಲಿ, ಮೇಲ್ಕಾಣಿಸಿದ ಹಣದ ಜೊತೆಗೆ ಕೊಡಲಾಗಿದೆ.

ಕ್ರಮಬದ್ಧತೆ–

ಆಜ್ಞೆಯಲ್ಲಿ, ಮೇಲೆ ಉಲ್ಲೇಖಿಸಲಾದ ವ್ಯಕ್ತಿಗಾಗಿ, ಕರ್‌ಹರ್ ತಾಲ್ಲೂಕಿನ ಬೈಲೂಸಿ ಗ್ರಾಮವನ್ನು ಬರೆಯಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ ಉಲ್ಲೇಖಿತ ಗ್ರಾಮದ ಪಾಲನ್ನು ಸೇರಿಸಬೇಕು.

ಹಿಜ್ರಿ ೧೦೨೮ (ಒಂದು ಸಾವಿರದ ಇಪ್ಪತ್ತೆಂಟು)ರ ಶವ್ವಾಲ್ ತಿಂಗಳಿನ ೨೩ ನೇ (ಇಪ್ಪತ್ತು ಮೂರನೆಯ) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫೆ ಆಲಾರ ಅನುಮತಿಯಿಂದ, ಅಲಮ್‌ಖಾನ್, ಆಲಿಶಾನ್ ಸಾದತ್ ನಿಶಾನ್ ರಫಿ ಉಲ್‌ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾರ ಮುಖಾಂತರ ಕಳುಹಿಸಲಾಗಿದೆ.

ಹಿ. ೧೦೨೯, ಜಬ್ಬಲ್ ೯

ಶಕ ೧೫೪೨, ಚೈತ್ರ ಶುದ್ಧ ೧೦
ಇ. ೧೬೨೦ ಏಪ್ರಿಲ್ ೨

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಪೂಜ್ಯಶ್ರೀ ಸರಸ್ವತಿಯವರ ವತಿಯಿಂದ, ಹಿಜ್ರಿ ೧೦೨೦ರಲ್ಲಿ (ಒಂದು ಸಾವಿರದ ಇಪ್ಪತ್ತು) ಸೈನಿಕ ಯುಸುಫ್ ತುರ್ಕಮಾನ್‌ನ ಪುತ್ರನಾದ ಅಬ್ದುಲ್‌ಗನಿಗೆ ಕೊಡಲಾದ ಉಲ್ಲೇಖಿತ ತಾಲ್ಲೂಕಿನ ಸೋಮನಕಟ್ಟಾ ಗ್ರಾಮವನ್ನು; ಹಸನ್ ರೂಮಿಖಾನನ ಅನುಸಾರವಾಗಿ, ಹಿಜ್ರಿ ೧೦೨೮ರ (ಒಂದು ಸಾವಿರದ ಇಪ್ಪತ್ತೆಂಟು) ಝಿಖೈದಾ ತಿಂಗಳಿನ ೧೨ನೇ(ಹನ್ನೆರಡು) ತಾರೀಖಿಗೆ ಅಬ್ದುಲ್‌ಗನಿಯು ಮರಣಹೊಂದಿದ್ದರಿಂದ; ಅವನ ಹೆಸರನ್ನು ರದ್ದುಗೊಳಿಸಿದ ಕಾರಣದಿಂದ, ಹೊಸದಾಗಿ ಸೇವಕನೆಂದು ನೇಮಿಸಲ್ಪಟ್ಟ ಅವನ ಪುತ್ರನಾದ ಮೂಸಾನ ವೇತನದ ಬದಲಾಗಿ; ಉತ್ಪಾದನೆ, ನಗದುಹಣ, ಇತರ ಅಗತ್ಯಗಳು, ವೇತನರಹಿತ ಶ್ರಮದ ಬೇಡಿಕೆಯನ್ನು ದಾಖಲೆಗೊಳಿಸಲು ಮತ್ತು ಆದಾಯ ನಿಗದಿ ಮಾಡುವದು, ಬೆಲೆ ಕಟ್ಟಿ, ಪಾಪೋಶಿ ಮೇಜ್‌ಬಾನಿ; ಜಂಗಪಟ್ಟಿ, ಗಾವ್‌ಜರಾದ್‌ಖಾನಾ, ಕಾಂಕಿಪರಕಿ, ಮಾಯಹ್ ತಾಜ್‌ವನ್ನು ಹೊರತುಪಡಿಸಿ; ಇತರ ಎಲ್ಲ ವಿಷಯಗಳನ್ನು ಸೇರಿಸಿ, ಆತನ ತಂದೆಯ ಪಾಲನ್ನು ವಜಾಮಾಡಿ, ನಿಗದಿಪಡಿಸಿದ ಮೊತ್ತವನ್ನು ಆತನಿಗೆ ಕೊಡಬೇಕು.

ಒಟ್ಟು ಮೊತ್ತ : ೩೩೬ (ಮೂರು ನೂರು ಮೂವತ್ತಾರು) ಹೊನ್ =೩೨ ನೌರಸ್ ಮತ್ತು ೩ ಹೊನ್

ಕ್ರಮಬದ್ಧತೆ –

ಹಿಜ್ರಿ ೧೦೨೮ರ (ಒಂದು ಸಾವಿರದ ಇಪ್ಪತ್ತೆಂಟು) ಝಿಖೈದಾ ತಿಂಗಳಿನ ೨೬ನೇ (ಇಪ್ಪತ್ತಾರು) ತಾರೀಖಿನ ಕಾಗದದ ಅನುಸಾರವಾಗಿ ನಿಗದಿಪಡಿಸಿದ ನಂತರ ಹಿಜ್ರಿ ೧೦೨೯ರ (ಒಂದು ಸಾವಿರದ ಇಪ್ಪತ್ತೊಂಬತ್ತು) ಝಿಖೈದಾ ತಿಂಗಳಿನ ೩ನೇ (ಮೂರು) ತಾರೀಖಿವರೆಗೆ; ೧೨ ತಿಂಗಳು ೮ ದಿನಗಳ ಅವಧಿಗಾಗಿ, ವಾರ್ಷಿಕ ವೇತನವು : ೧೨೦೦ ಹೊನ್ =೧೩೩ ನೌರಸ್ ಮತ್ತು ೩ ಹೊನ್. ಉಲ್ಲೇಖಿತ ಅವಧಿಗಾಗಿ, ೧, ೧೨೬ಹೊನ್ ಮತ್ತು ಅರ್ಧ ಚೌಲ್‌ಬೇಲ್ =೧೨೫ ನೌರಸ್, ೧ ಹೊನ್ ಮತ್ತು ಅರ್ಧಚೌಲ್‌ಬೇಲ್. ಹೀಗೆ ಕಟ್ಟಡಗಳ ಸಂರಕ್ಷಣೆಗಾಗಿ ವೇತನ : ೬೩೪ ಹೊನ್ = ೭೦ ನೌರಸ್ ಮತ್ತು ೪ ಹೊನ್.

ವಿವರಗಳು ಇಂತಿವೆ :

ನುಸ್ರತ್ ಆಬಾದ್ ವ್ಯವಹಾರದ ಜಾಲಹಳ್ಳಿ ಗ್ರಾಮವನ್ನು ವಜಾಮಾಡಿ, ಒಟ್ಟುಮೊತ್ತ : ೨೭೩ ಹೂನ್ ಅರ್ಧ=೩೧ ನೌರಸ್ ಮತ್ತು ೪ ಹೂನ್ ಅರ್ಧ	ಗ್ರಾಮದ ಹಂಚುವಿಕೆ: ಹಳಿಯಾಳ್ ಕೋಟೆ ಒಟ್ಟು ಮೊತ್ತ : ೨೨೫ ಹೂನ್=೨೫ ನೌರಸ್

ನಗದು ಹಣದ ಆದಾಯ: ಒಟ್ಟುಮೊತ್ತ : ೨೦೦ಹೂನ್=೨೨ ನೌರಸ್ ಮತ್ತು ೨ ಹೂನ್	ರಿಕಾಬು/ಅಂಗವಣೆ ಮತ್ತು ಠಾಣೆಯ ಬಗೆಗಿನ ತನಗಾಗಿ ೪೧ ಹೂನ್೩ ರುಬಾ= ೪ನೌರಸ್ ೫ಹೂನ್ ೫ ಹೂನ್ ಹೂನ್ ಅರ್ಧದ ಎರಡು ಪಟ್ಟು=೯ರೋಸ್ ಮತ್ತು ೨ಹೂನ್ ಅರ್ಧ	ಕಶೇಲಿ ಗ್ರಾಮದ ಹಂಚುವಿಕೆ: ಖೇಲ್‌ನಾ ಕೋಟಿಯ ಒಟ್ಟುಮೊತ್ತ ೧೦೦ಹೂನ್ ಅರ್ಧ ೧೨ನೌರಸ್ ಮತ್ತು ೧ ಹೂನ್ ಅರ್ಧ ಕೋಲಾಪೂರ್ ತಾಲ್ಲೂಕಿನ ವಾಡಿಕನ್‌ಧೂ ಗ್ರಾಮದ ಹಂಚುವಿಕೆ : ಒಟ್ಟುಮೊತ್ತ : ೨೫ಹೂನ್=೨ನೌರಸ್ಮತ್ತ ೭ಹೂನ್ (ಏಳು)

ಉಲ್ಲೇಖಿತ ಗ್ರಾಮದ ಬಾಕಿಯನ್ನು ಮೇಲೆ ಹಣಕಾಸಿನ ರೂಪದಲ್ಲಿ ಬರೆಯಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಗ್ರಾಮವನ್ನು ಸೇರಿಸಬೇಕು. ಹಿಜ್ರಿ ೧೦೨೯ರ (ಒಂದು ಸಾವಿರದ ಇಪ್ಪತ್ತೊಂಬತ್ತು) ಜಮಾ .... ತಿಂಗಳಿನ ೯ನೇ (ಒಂಬತ್ತು) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫೆ ಆಲಾರ ಅನುಮತಿಯ ಮೇರೆಗೆ, ಅಲಾಮ್‌ಖಾನ್ ಆಲಿಶಾನ್ ಸಾದತ್‌ನಿಶಾನ್ ರಫಿ ಉಲ್‌ಖದರ್ ವಲ್‌ಮಕಾನ್ ಇಕ್ಲಾಸ್‌ಖಾನ್ ಅಮೀರೆ ಜುಮ್ಲಾ ಮುಖಾಂತರ ಕಳುಹಿಸಲಾಗಿದೆ.

ಹಿ. ೧೦೩೦ ರಬಿವುಲ್ ೨೬	ಶಕ ೧೫೪೨, ಮಾಘವದ್ಯ ೧೨ ಇ. ೧೬೨೧ ಫೆಬ್ರವರಿ ೮

೨ನೇ ಇಬ್ರಾಹಿಂ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಜಗತ್ತಿಗೆ ಆಜ್ಞೆ ನೀಡುವವನ ಶುಭದಾಯಕ ಅವಧಿಯಲ್ಲಿ ಆಜ್ಞೆಯು ಪ್ರಕಟವಾಗಿದೆ. ಉಲ್ಲೇಖಿತ ತಾಲ್ಲೂಕಿನ ಬಾದಶಾಹನ ಖಜಾನೆ ಮತ್ತು ಜಂಗಪತಿ ಇತ್ಯಾದಿಯ ನಿಗದಿ ಮಾಡಲಾಗಿ ವೇತನದ ಹಣವನ್ನು, ತ್ವರಿತವಾಗಿ ಪಡೆದುಕೊಂಡು ಬಾದಶಾಹನ ದರ್ಬಾರಿಗೆ ಕಳುಹಿಸಿ ಕೊಡಿರಿ. ಖಜಾನೆಗೆ ಸಂಬಂಧಿಸಿದ ಹಣವನ್ನು, ರಬಿಉಸ್ ತಿಂಗಳಿನ ೨೭ನೇ (ಇಪ್ಪತ್ತೇಳನೆಯ) ತಾರೀಖಿನವರೆಗೆ, ನೌರೋಜದ ಶುಭಕಾರಕ ದಿನವಾದುದರಿಂದ ಪ್ರಕಾಶಪೂರ್ಣನಾದ ಬಾದಶಾಹನ ಸನ್ನಿಧಿಗೆ ತಲುಪಿಸಬೇಕು. ಒಂದು ವೇಳೆ ಈ ಕಾರ್ಯದಲ್ಲಿ ವಿಳಂಬ ಹಾಗೂ ಉದಾಸೀನತೆ ಸಂಭವಿಸಿ; ಉಲ್ಲೇಖಿತ ಹಣವು ಬಾದಶಾಹನಿಗೆ ತಲುಪದಿದ್ದರೆ, ನಾವು ಸ್ವತಃ ಬಂದು ಹಣವನ್ನು ಪಡೆಯಬೇಕಾಗುತ್ತದೆ. ಆದರೆ ಇಂತಹ ಕ್ರಮವು ಬಾದಶಾಹನಿಗೆ ಇಷ್ಟವಾಗುವದಿಲ್ಲ.

ಆಜ್ಞಾನುಸಾರವಾಗಿ, ಕಾರ್ಯಾಚರಣೆ ಮಾಡಲು ಎಚ್ಚರಿಕೆ ನೀಡಲಾಗಿದೆ. ಹಿಜ್ರಿ ೧೦೩೦ರ (ಒಂದು ಸಾವಿರದ ಮೂವತ್ತು) ರಬಿಉಲ್ ಅವ್ವಲ್ಲ್ ತಿಂಗಳಿನ ೨೬ನೇ (ಇಪ್ಪತ್ತಾರನೆಯ) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ,

ಅಲಾಮ್ (ರುಕುನ್) ಉದ್ದೌಲಾ ಪಸಂದೀದಾ ಸುಲೂಕ್ ದಿಯಾನತ್‌ಉಲ್ ಮುಲೂಕ್ ಸರ್ ಮಜ್ಲಿಸ್‌ರ ಮುಖಾಂತರ ಕಳುಹಿಸಲಾಗಿದೆ.

೧೬

ಹಿ. ೧೦೩೪, ರವ್ವಲ್ ೫ ಶಕ. ೧೫೪೬, ಪೌಷ್ಯ ಶುದ್ಧ ೭
ಇ. ೧೬೨೪ ಡಿಸೆಂಬರ್ ೬

೨ನೇ ಇಬ್ರಾಹಿಂ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ
ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೨೫ (ಒಂದು ಸಾವಿರದ ಇಪ್ಪತ್ತೈದು)ರಲ್ಲಿ, ಉಲ್ಲೇಖಿತ ತಾಲ್ಲೂಕಿನ ಕೋಪ್‌ಖುರದ್ ಗ್ರಾಮದ ಅರ್ಧಪಾಲಿನಿಂದ ಹೊರಗೆ ಹಾಕಲ್ಪಟ್ಟ ಸೈನಿಕ ಶಮಸುದ್ಧೀನನ ಪುತ್ರನಾದ ಮೀರಾನ್‌ನು, ದರ್ಬಾರಿಗೆ ಮನವಿ ಸಲ್ಲಿಸಿದ್ದೇನೆಂದರೆ:

ಉಲ್ಲೇಖಿತ ಗ್ರಾಮದಿಂದ ಕಾಂಕಿಪರಕಿಯ ಒಟ್ಟು ಮೊತ್ತ : ೭೬(ಎಪ್ಪತ್ತಾರು) ಹೂನ್ ರುಬಾ, ಕಾನೂನುಬದ್ಧ ಸಾದಿಲ್ವಾರದ ೭ (ಏಳು) ಹೂನ್‌ರುಬಾ ಮತ್ತು ನದಿತೋಕ್ರಾದ ಅರ್ಧ

ಮುಲೂಕ್ ಉಲ್ ಆಝುಮ್ ಮಲಿಕ್ ಖಾಸಿಮ್‌ನು ನೇರವಾಗಿ ಒಟ್ಟುಮೊತ್ತ : ೮೬(ಎಂಭತ್ತಾರು) ಹೂನ್ ಕಳುಹಿಸಿದ್ದಾನೆ. ಏಕೆಂದರೆ : ಉಲ್ಲೇಖಿತ ಗ್ರಾಮವು ಚಿಕ್ಕದಾಗಿದ್ದು, ಯಾರೂ ಅದಕ್ಕೆ ಸಹಾಯ ನೀಡುವದಿಲ್ಲ. ಮತ್ತು ಅದು ಸ್ವಯಂ ಯಾರಿಂದಲೂ ಏನೂ ಕೇಳುವದಿಲ್ಲ. ಕೃಪಾದೃಷ್ಟಿಯನ್ನು ಬೀರಿ, ಅಧಿಕಾರಿಗಳಿಗೆ ತಿಳಿಸಿ; ಉಲ್ಲೇಖಿತ ಅರ್ಧ ಗ್ರಾಮದಿಂದ ಕಳುಹಿಸಿದ ಹಣದಲ್ಲಿ, ಉಳಿದ ಹಣವನ್ನು ಸೇರಿಸಲಾಗಿದೆ. ಅವನ ಮನವಿಯನ್ನು ಅಧಿಕಾರಿಗಳ ಗಮನಕ್ಕೆ ತಂದು ಕಾಂಕಿಪರಕಿ, ಕಾನೂನುಬದ್ಧ ಸಾದಿಲ್ವಾರ್ ಹಾಗೂ ನದಿ ತೋಕ್ರಾದ ಹಣದಲ್ಲಿ ಮೀರಾನ್‌ನಿಗಾಗಿ ೪೩ (ನಾಲ್ವತ್ತುಮೂರು) ಹೂನ್ ಸೇರಿಸಲಾಗಿದೆ.

ಕಾಂಕಿಪರಕಿಯ ೩೯ ಹೂನ್ ಚವಲ್	ಕಾನೂನುಬದ್ಧ ಸಾದಿಲ್ವಾರ್‌ದ ೩(ಮೂರು) ಹೂನ್ ಅರ್ಧ ಚವಲ್	ನದಿ ತೋಕ್ರಾದ ಒಂದು ರುಬಾ ಹೂನ್

ಮೇಲೆ ಉಲ್ಲೇಖಿಸಲಾದ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಾಗಿ, ಉಲ್ಲೇಖಿತ ಒಟ್ಟು ಮೊತ್ತವನ್ನು ಸೇರಿಸಬೇಕು. ಯಾವುದೇ ಕಾರಣಕ್ಕೂ.......... ಮರೆಯಬಾರದು.

ಹಿಜ್ರಿ ೧೦೩೪ (ಒಂದು ಸಾವಿರದ ಮೂವತ್ತು ನಾಲ್ಕು) ರಬೀಉಲ್ ಅವ್ವಲ್ಲ್ ತಿಂಗಳಿನ ೫ನೇ (ಐದು) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಆಶ್ರಫೆ ಅಖ್‌ದಸೆ ಆಲಾರ ಅನುಮತಿಯ ಮೇರೆಗೆ, ರುಕುನುಸ್ ಸಲ್ತ್‌ನಾ (ಅಲ್ಲ್ ಅಲೈಯಲ್ ಆಲಿಯಾ) ಫರ್ಜನ್‌ಂದಿ ಶಹಾನವಾಜ್‌ಖಾನ್ ಸರ್ ಮಜ್ಲಿಸ್ ಆಲಾಮ್‌ರ ಮುಖಾಂತರ ಕಳುಹಿಸಲಾಗಿದೆ.

೧೭

ಹಿ. ೧೦೩೫, ರಬಿ ಉಸ್ಸಾನಿ ೧೪   ಶಕ ೧೫೪೭, ಪೌಷ್ಯ ವದ್ಯ ೧

ಇ. ೧೬೨೬ ಜನವರಿ ೩

೨ನೇ ಇಬ್ರಾಹಿಂ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೨೬ರಲ್ಲಿ (ಒಂದು ಸಾವಿರದ ಇಪ್ಪತ್ತಾರು) ಸೈನಿಕ ಖ್ವಾಜಾ ಅಲಿ ಷುಸ್ತರಿಯ ಪುತ್ರನಾದ ಸೇವಕ ಮಹಮ್ಮದ ಅಮೀನನು ಬಾದಶಹನ ದರ್ಬಾರಿಗೆ ಮನವಿ ಸಲ್ಲಿಸಿದ್ದೇನೆಂದರೆ :

"ಉಲ್ಲೇಖಿತ ತಾಲ್ಲೂಕಿನ ಸಂಗದುರ್ಗ ಗ್ರಾಮವನ್ನು ಒಂದು ಡ್ರಾಪ್ಪಿನ ಬದಲಾಗಿ ಕೊಡಲಾಗಿತ್ತು. ಆನಂತರ ನನಗೆ ಕೊಡಲಾದ ಗ್ರಾಮವನ್ನು ಹಿಂಪಡೆದುಕೊಂಡು ಸೈನಿಕ ವಲಿಯ ಪುತ್ರನಾದ ಶೇಖ್ ಅಲಾಉದ್ದೀನನಿಗೆ ಆ ಡ್ರಾಪ್ಪ್‌ನ್ನು ಕಳುಹಿಸಿಕೊಡಲಾಗಿದೆ. ಆದರೆ ಉಲ್ಲೇಖಿತ ಗ್ರಾಮವು ಇನ್ನೂವರೆಗೆ, ಭಗೋಟಾನ ಹತ್ತಿರವಿದೆ. ಕೃಪೆಮಾಡಿ, ಉಲ್ಲೇಖಿತ ಗ್ರಾಮವನ್ನು ನನಗೆ ಕೊಡಿರಿ."

ಈ ಮನವಿಯನ್ನು ಗಮನಿಸಿ ಬಾದಶಾಹನು, ಉಲ್ಲೇಖಿತ ಗ್ರಾಮವನ್ನು ಸೈನಿಕ ಶೇಖ್ ಅಲಾಉದ್ದೀನನಿಂದ ಹಿಂಪಡೆದುಕೊಂಡು; ಸೈನಿಕ ಮಹಮ್ಮದ ಅಮೀನ್‌ನಿಗೆ ಮೊದಲಿನಂತೆ ವೇತನದ ಬದಲಾಗಿ ೪೦೦(ನಾಲ್ಕು ನೂರು) ಹೂನ್ ಕಡತ ಮಾಡಿ, ಅವನಿಗೆ ನೇಮಕ ಮಾಡಿದನು.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಗ್ರಾಮವನ್ನು ಅವನಿಗೆ ಕೊಡಬೇಕು.

ಹಿಜ್ರಿ ೧೦೩೫ರ (ಒಂದು ಸಾವಿರದ ಮೂವತ್ತೈದು) ರಬಿಉಸ್‌ಸಾನಿ ತಿಂಗಳಿನ ೧೪ನೇ (ಹದಿನಾಲ್ಕು) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫೆ ಅಖ್‌ದಸೆ ಆಲಾರ ಅನುಮತಿಯ ಮೇರೆಗೆ,

ಅಲ್ಲಾಮ್ ರುಕುನುಸ್ ಸಲ್ತನಉಲ್ ಅಲಿಯ ಉಲ್ ಆಲಿಯಾ ಫರ್ಜಂದಿ ಶಹಾನವಾಜ್‌ಖಾನ್ ಸರ್ ಮಜಲಿಸ್ ಮತ್ತು ವಜೀರೆ ಹುಕೂಮತ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ..... ಶಕ ೧೫೪೭-೪೮

ಇ ೧೬೨೫-೨೬

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಉಲ್ಲೇಖಿತ ತಾಲ್ಲೂಕಿನ ಹಳ್ಳಿಗಳು ಮತ್ತು ನಗದು ಹಣವು ಹಿಜ್ರಿ ೧೦೨೬(ಒಂದು ಸಾವಿರದ ಇಪ್ಪತ್ತಾರು)ರಿಂದ ರಾಮಣ್ಣಾ ಎರಡು ...... ಬಹದ್ದೂರ್ ದೌಲತ್‌ಮಂದ್‌ನ ಮೊಮ್ಮಗನಾದ ಮಖದೂಮ್ ರೆಹಾನ್....ಆಗಿದೆ. ಬೆಲೆಕಟ್ಟಿ ಮತ್ತು ಜಂಗಪಟ್ಟಿಯ ಹಣವನ್ನು ಹೊರತುಪಡಿಸಿ, ಉಲ್ಲೇಖಿತ ತಾಲ್ಲೂಕಿನ ಹಳ್ಳಿಗಳು, ಎಲ್ಲವನ್ನು ಹಾಗೂ ನಗದನ್ನು ಸೇರಿಸಿ, ಆಜ್ಞಾನುಸಾರವಾಗಿ ಪುನಃ ಅವರ ಬಳಕೆಗಾಗಿ, ಅವರಿಗೆ ಕೊಡಿರಿ ....

...........೨೦(ಇಪ್ಪತ್ತು) ....ಕ್ಕೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ,

ಅಲ್ಲಾಮ್ ರುಕುನುಸ್ ಸಲ್ತನಉಲ್ ಅಲಿಯಉಲ್ ಆಲಿಯಾ ಫರ್ಜಂದಿ ಶಹಾನವಾಜ್‌ಖಾನ್, ಸರ್ ಮಜಲಿಸ್ ಮತ್ತು ವಜೀರೆ ಹುಕೂಮತ್‌ರ ಮುಖಾಂತರ ಕಳುಹಿಸಲಾಗಿದೆ.

೧೯

ಹಿ. ೧೦೩೫, ಜಮಾದಿ ಉಸ್ಸಾನಿ ೧೩ ಶಕ ೧೫೪೭, ಫಾಲ್ಗುಣ ಶುದ್ಧ ೧೫
ಇ ೧೬೨೬ ಮಾರ್ಚ್ ೨

೨ನೇ ಇಬ್ರಾಹಿಂ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೨೬ರಲ್ಲಿ (ಒಂದು ಸಾವಿರದ ಇಪ್ಪತ್ತಾರು) ರಾತ್ರಿ ಸಮಯದಲ್ಲಿ ಕಟ್ಟಡದ ಕಾವಲುಗಾರನಾದ ಸೈನಿಕ ಮಿರ್ಜಾಹುಸೇನ್ ಜಮ್‌ಸೀದ್‌ಖಾನ್ ಮತ್ತು ಉಲ್ಲೇಖಿತ ತಾಲ್ಲೂಕಿನ ಬಂಕಾಪೂರ್ ವ್ಯವಹಾರದ ಆಸುಪಾಸಿನ ಕಂಕನ್‌ಹಾಳ್ ಗ್ರಾಮದಿಂದ ಹೊರಗೆ ಹಾಕಲ್ಪಟ್ಟ ಪರಿಚಾರಕರಾದ ಖ್ವಾಜಾ ಶೇಕ್ ಮಿಯಾ ಶಿರಾನ್ ಹಾಗೂ ಶೇಕ್ ಅಲಾಉದ್ದೀನ್‌ನು; ಬಾದಶಾಹನ ದರ್ಬಾರಿಗೆ ಮನವಿ ಸಲ್ಲಿಸಿದ್ದಾರೆ.

ಉಲ್ಲೇಖಿತ ತಾಲ್ಲೂಕಿನ ದೇಸಾಯಿಯು ಮೇಲ್ಕಾಣಿಸಿದ ಹಳ್ಳಿಯ ಈ ವರ್ಷದ ಆದಾಯವನ್ನು ಸ್ವಂತಕ್ಕಾಗಿ ಬಳಕೆ ಮಾಡಿಕೊಂಡಿದ್ದಾನೆ. ಈ ಹಳ್ಳಿಯು ಉಲ್ಲೇಖಿತ ಬಂಕಾಪೂರ ವ್ಯವಹಾರದ ಆಸುಪಾಸಿನಲ್ಲಿದೆ. ಪರಿಚಾರಕರು ಈ ತಿಂಗಳುಗಳಲ್ಲಿ ಸಾಕಷ್ಟು ಸೇವೆ ಹಾಗೂ ತ್ಯಾಗ ಮಾಡಿದ್ದರೂ ಸಹ; ಉಲ್ಲೇಖಿತ ಹಳ್ಳಿಯ ದೇಸಾಯಿಯು ಆದಾಯವನ್ನು ಬಳಕೆ ಮಾಡಿಕೊಂಡಿದ್ದಾನೆ. ಹೊರಗೆ ಹಾಕಲ್ಪಟ್ಟ ಪರಿಚಾರಕರು ಅಲ್ಲಿಗೆ ಹೋಗುವದು ಎಷ್ಟೊಂದು ಕಷ್ಟದಾಯಕವೆಂಬುದರ ಅಂದಾಜು ದೇಸಾಯಿಗೆ ಆಗಲು ಹೇಗೆ ಸಾಧ್ಯ? ಈ ಆಜ್ಞೆಯು ದೊರಕುತ್ತಲೇ ದೇಸಾಯಿಯು ಉಲ್ಲೇಖಿತ ಗ್ರಾಮದ ಎಷ್ಟು ಆದಾಯವನ್ನು ಬಳಕೆ ಮಾಡಿಕೊಂಡಿದ್ದಾನೆಯೋ; ಅದೆಲ್ಲವನ್ನೂ ಮೇಲ್ಕಾಣಿಸಿದ ಹೊರಗೆ ಹಾಕಲ್ಪಟ್ಟ ಪರಿಚಾರಕರಿಗೆ ಹಿಂತಿರುಗಿಸಬೇಕು. ಉಲ್ಲೇಖಿತ ಹಳ್ಳಿಯಲ್ಲಿ ಹಸ್ತಕ್ಷೇಪ ಮಾಡಬಾರದು ಹಾಗೂ ವೇತನರಹಿತವಾದ ಕೆಲಸದ ಬೇಡಿಕೆ ಅಥವಾ ಖರೀದಿ ಮಾಡಬಾರದು. ದೇಸಾಯಿಯು ತನ್ನ ಜನರನ್ನು ಈ ಹಳ್ಳಿಯ ಪರಿಸರದಲ್ಲಿ ಕಳುಹಿಸಬಾರದು. ಒಂದು ವೇಳೆ, ಹೊರಗೆ ಹಾಕಲ್ಪಟ್ಟ ಪರಿಚಾರಕರು ಮನಃ ತಕರಾರು ಮಾಡಿದರೆ; ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಅದರ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ.

ಹಿಜ್ರಿ ೧೦೩೫ರ (ಒಂದು ಸಾವಿರ ಮೂವತ್ತೈದು) ಜಮಾದಿ ಉಸ್‌ನಾನಿ ತಿಂಗಳಿನ ೧೩ನೇ (ಹದಿಮೂರು) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಅರ್‌ಫಾ ಹುವಾಯೂನೆ ಆಲಾರ ಅನುಮತಿಯಮೇರೆಗೆ,

ಅಲ್ಲಾಮ್ ರುಕುನುಸ್ ಸಲ್ತನಉಲ್ ಅಲಿಯಉಲ್ ಆಲಿಯಾ ಫರ್ಜಂದಿ ಶಾಹನವಾಜ್‌ಖಾನ್ ಸರ್ ಮಜಲಿಸ್ ಮತ್ತು ವಜೀರೆ ಹುಕೂಮತ್‌ರ ಮುಖಾಂತರ ಕಳುಹಿಸಲಾಗಿದೆ.

೨೦

ಹಿ. ೧೦೩೫, ಶವ್ವಾಲ್ ೯ ಶಕ ೧೫೪೭, ಆಷಾಡ ಶುದ್ಧ ೧೦
ಇ ೧೬೨೬, ಜೂನ್ ೨೪

೨ನೇ ಇಬ್ರಾಹಿಂ ಆದಿಲ್‌ಶಾಹ > ವೆಂಕಟಾದ್ರಿ ನಾರಾಯಣ ದೇಸಾಯಿ
ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ವೆಂಕಟಾದ್ರಿ ನಾರಾಯಣ್ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :

ಹಿಜ್ರಿ ೧೦೨೬ರಲ್ಲಿ (ಒಂದು ಸಾವಿರದ ಇಪ್ಪತ್ತಾರು) ನೀವು ಉಲ್ಲೇಖಿತ ತಾಲ್ಲೂಕಿನ ಮಾಪನ ಮಾಡಿ ದಾಖಲೆಗೊಳಿಸಿದ ಸುರ್‌ತೂರ್ ಮತ್ತು ಬೆಳವಂಕಿ ಗ್ರಾಮದ ಗಿರವಿ ಹಣವನ್ನು .... ಖಾನ್‌ನ ಬಾಬತ್ತಿನಲ್ಲಿ ಆ ವರ್ಷದ ೩೦೦ ಹೂನ್ (ಮೂರು ನೂರು) ಹಾಗೂ ಹಿಜ್ರಿ ೧೦೨೭ರ (ಒಂದು ಸಾವಿರದ ಇಪ್ಪತ್ತೇಳು) ೨೦೦ ಹೂನ್ (ಎರಡು ನೂರು) ಒಟ್ಟು ಮೊತ್ತ : ೫೦೦ ಹೂನ್ (ಐದು ನೂರು) .... ಕಳುಹಿಸಿದ್ದೀರಿ.

ಇವೆರಡು ಗ್ರಾಮಗಳನ್ನು ನೆಲೆಗೊಳಿಸಲು ಮತ್ತು ಈ ಗ್ರಾಮಗಳ ಶ್ರಮಜೀವಿಗಳ .....ರಶೀದಿಗಳನ್ನು ದರ್ಬಾರಿಗೆ ಕಳುಹಿಸಿರಬಹುದು.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಇವೆರಡು ಗ್ರಾಮಗಳ ಬಗೆಗೆ ಬಾದಶಾಹರ ಆಜ್ಞೆಯನ್ನು ಜಾರಿಗೊಳಿಸುವ ಪೂರ್ವದಲ್ಲಿ; ಈ ವಿಷಯವನ್ನು ಕುರಿತು ಕಾರ್ಯಾಚರಣೆ ಮಾಡಬೇಕು.

ಹಿಜ್ರಿ ೧೦೩೫ರ (ಒಂದು ಸಾವಿರದ ಮೂವತ್ತೈದು) ಶವ್ವಾಲ್ ತಿಂಗಳಿನ ೯ನೇ (ಒಂಬತ್ತು) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ,

ಅಲ್ಲಾಮ್ ರುಕುನುಸ್ ಸಲ್ತನಉಲ್ ಅಲಿಯಉಲ್ ಆಲಿಯಾ ಫರ್ಜಂದಿ ಶಾಹನಾವಾಜ್ ಖಾನ್ ಸರ್ ಮಜಲಿಸ್ ಮತ್ತು ವಜೀರೆ ಹುಕುಮತ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ ೧೦೩೫ ಜಿಲ್ಹೇದ್ ೨೦ ಶಕ ೧೫೪೮, ಭಾದ್ರಪದ ವದ್ಯ ೭
ಇ ೧೬೨೬, ಸೆಪ್ಟೆಂಬರ್ ೨

೨ನೇ ಇಬ್ರಾಹಿಂ ಆದಿಲ್‌ಶಾಹ > ಮೀದ್ ಅಲಿ ರಜಾ ಹವಾಲ್ದಾರ ಮಾಮಲೆ
ಬಂಕಾಪುರ

ದೇಶವು ದೇವರಿಗಾಗಿ ಇದೆ.

ಬಂಕಾಪೂರ ವ್ಯವಹಾರದ ಬಹಾದ್ದೂರ್ ಮತ್ತು ಉನ್ನತ ದರ್ಜೆಯ ಹವಾಲ್ದರ್ ಮೀರ್ ಅಲಿ ರಜಾನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :

ಠೇವಣಿ ಇಟ್ಟಿರುವಂತಹ ದೊಡ್‌ತಲೆ ಗ್ರಾಮದ ಭದ್ರತೆಗಾಗಿ ಠೇವಣಿ ಹಣವನ್ನು ಕೊಡಿರಿ. ಮಿತಿಯನ್ನು ಮೀರಬಾರದು. ಈ ವಿಷದಲ್ಲಿ ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಸಾಕಷ್ಟು ಎಚ್ಚರಿಕೆಯನ್ನು ನೀಡಲಾಗಿದೆ.

ಹಿಜ್ರಿ ೧೦೩೫ರ (ಒಂದು ಸಾವಿರದ ಮೂವತ್ತೈದು) ಝಿಲ್‌ಹಜ್ಜಾ ತಿಂಗಳಿನ ೨೦ನೇ (ಇಪ್ಪತ್ತನೆಯ) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ,

ಅಲ್ಲಾಮ್ ರುಕುನುಸ್ ಸಲ್ತನಉಲ್ ಅಲಿಯಉಲ್ ಆಲಿಯಾ ಫರ್ಜಂದಿ ಶಾಹನಾವಾಜ್ ಖಾನ್ ಸರ್ ಮಜಲಿಸ್ ಮತ್ತು ವಜೀರೆ ಹುಕುಮತ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ. ೧೦೩೬, ರವ್ವಲ್ ೧೭ ಶಕ. ೧೫೪೮, ಮಾರ್ಘಶೀರ್ಷ ವದ್ಯ ೩೨
ಇ. ೧೬೨೬ ನವೆಂಬರ್ ೨೬

ಾನೇ ಇಬ್ರಾಹಿಂ ಆದಿಲ್‌ಶಾಹ > ವೆಂಕಟಾದ್ರಿ ನಾರಾಯಣ ದೇಸಾಯಿ
ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ವೆಂಕಟಾದ್ರಿ ನಾರಾಯಣ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :

ಈ ಪೂರ್ವದಲ್ಲಿ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಳ ತೊಂದರೆಗಳನ್ನು ನಿವಾರಿಸಲು; ಉಲ್ಲೇಖಿತ ತಾಲ್ಲೂಕು ಹೆಚ್ಚು ಸಹಾಯಮಾಡಿದೆ. ಇಂದೂ ಸಹ, ಈ ಪ್ರದೇಶವು ಬಾದಶಾಹನ ಸ್ವಾಧೀನದಲ್ಲಿದೆ. ಇದು ಸಮೃದ್ಧ ಹಾಗೂ ಜನಭರಿತವಾಗಿದೆ. ನೀನು ಬಾದಶಾಹನ ಸೇವಕನಾಗಿರುವೆ. ಆರಂಭದಿಂದಲೂ ಅಂತ್ಯದವರೆಗೆ, ನಿನ್ನನ್ನು ದೇಸಾಯಿಗಿರಿಯ ಹುದ್ದೆಗೆ ನೇಮಿಸಲಾಗಿದೆ. ದೇಶವು ಬಾದಶಾಹನಿಗೆ ಸೇರಿದೆ. ಹೆಚ್ಚು ಅಥವಾ ಕಡಿಮೆ ಮಾಡುವಂತಹ ಕಾರ್ಯವು, ನಿನಗೆ ಸೂಕ್ತವಲ್ಲ. ಉಲ್ಲೇಖಿತ ತಾಲ್ಲೂಕಿಗೆ ಹೆಚ್ಚು ಸಹಾಯಮಾಡಿ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಳ ಮುಖ್ಯಸ್ಥನಿಗೆ, ನೀನು ಹಣವನ್ನು ತಲುಪಿಸಬೇಕು. ಹೊರಗೆ ಹಾಕಲ್ಪಟ್ಟ ವ್ಯಕ್ತಿಯ ಬಗೆಗೆ ಬರೆಯಲಾಗಿರುವದೇನೆಂದರೆ: ಅವನಿಗೆ ಮೊದಲು ೧,೬೦೦ ಹೂನ್ (ಒಂದು ಸಾವಿರದ ಆರು ನೂರು) ಕೊಡಲಾಗಿದೆ. ಅವನು ದರ್ಬಾರಿನಲ್ಲಿ ಹಾಜರಾಗಿ; ೧,೪೦೦ ಹೂನ್ (ಒಂದು ಸಾವಿರದ ನಾಲ್ಕು ನೂರು) ಮಾತ್ರ, ತೆಗೆದುಕೊಂಡಿರುವದಾಗಿ ಹೇಳಿದ್ದಾರೆ. ಆದರೆ, ಆತನು ಹೆಚ್ಚಿಗೆ ಹಣ ತೆಗೆದುಕೊಂಡಿದ್ದಾನೆಂದು, ಆ ಪ್ರದೇಶದ ಜನರು ಸುಳ್ಳು ಹೇಳುತ್ತಾರೆ.

ಈಗ ಈ ವ್ಯಕ್ತಿಗೆ ಹೆಚ್ಚು ಸಹಾಯ ಮಾಡಿರಿ. ಮೊದಲು ಪಡೆದಿದ್ದ ೧,೪೦೦ ಹೂನ್(ಒಂದು ಸಾವಿರದ ನಾಲ್ಕು ನೂರು) ವಜಾ ಮಾಡಿ; ಅವನಿಗೆ ಉಳಿದ ಹಣವನ್ನು ಹಿಂತಿರುಗಿರಬೇಕು. ವ್ಯವಹಾರ ನೀತಿಗೆ ಅನುಸಾರವಾಗಿ ಅವನ ಹೆಸರನ್ನು ಸೂಚಿಸಲಾಗಿದೆ. ಈ ವಿಷಯದಲ್ಲಿ ನೀಡಲಾಗಿರುವ ಎಚ್ಚರಿಕೆಯು ಸಮಯದ ಔಚಿತ್ಯವಾಗಿದೆ.

ಹಿಜ್ರಿ ೧೦೩೬ರ (ಒಂದು ಸಾವಿರದ ಮೂವತ್ತಾರು) ರಬಿಉಲ್ ಅವ್ವಲ್ ತಿಂಗಳಿನ ೧೭ನೇ (ಹದಿನೇಳು) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ,

ಅಲ್ಲಾಮ್ ರುಕುನುಸ್ ಸಲ್ತನಉಲ್ ಅಲಿಯಉಲ್ ಆಲಿಯಾ ಫರ್ಜಂದಿ ಶಾಹನಾವಾಜ್ ಖಾನ್ ಸರ್ ಮಜಲಿಸ್ ಮತ್ತು ವಜೀರೆ ಹುಕುಮತ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ ೧೦೪೧ ರವ್ವಲ್ ೧೫ ಶಕ ೧೫೫೩ ಆಶ್ವಿನ್ ವದ್ಯ ೨
ಇ ೧೬೩೧ ಅಕ್ಟೋಬರ್ ೨

ಮೊಹಮ್ಮದ್ ಆದಿಲ್‌ಶಾಹ > ಹಸನ್‌ಶಾಹ ಹವಾಲ್ದಾರ ಮತ್ತು ಕಾರಕೂನ ಮಾಮಲೆ ಮುದ್ಗಲ್

ದೇಶವು ದೇವರಿಗಾಗಿ ಇದೆ.

ಇಜ್ಜತ್ ಮಾ ಆಬ್ ಹಸನ್‌ಶಾಹ ಹವಾಲ್ದಾರ್ ಮತ್ತು ಮುದ್ಗಲ್ ವ್ಯವಹಾರದ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :

ಹಿಜ್ರಿ ೧೦೩೧ರಲ್ಲಿ, ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ, ವೆಂಕಟಾದ್ರಿ ನಾರಾಯಣನಿಗೆ ದರ್ಬಾರಿನ ಗೌರವ ವಸ್ತ್ರ ನೀಡಿ, ಸನ್ಮಾನ ಮಾಡಿ, ಉಲ್ಲೇಖಿತ ವ್ಯವಹಾರದಲ್ಲಿ; ಕಂದಗಲ್ಲ್ ಹಾಗೂ ಸಿರಗುಪ್ಪೆಯ ಕಡೆಗೆ, 'ದೇಸ್ ಕುಲಕರ್ಣಿಕಿ'ಯನ್ನು ಕೊಡಲಾಯಿತು. ಮಶಹೂರ್ ಉಲ್ ಹಜರತ್ ರಾಯಾರಾವ್ ಸರ್ ದೇಸಾಯಿ ಮತ್ತು ಸರ್ ದೇಸ್ ಕುಲಕರ್ಣಿಯ ಪ್ರದೇಶದಿಂದ ಒಂದು ವರ್ಷದ ಒಟ್ಟು ಕಾಣಿಕೆ : ೫೦ ಹೂನ್ ಅವರಿಂದ ವಸೂಲು ಮಾಡಿರಿ.

ಹಿಜ್ರಿ ೧೦೩೨ರ ೨೫ ಹೂನ್, ಹಿಜ್ರಿ ೧೦೩೩ ೧೨ ಹೂನ್ ಅರ್ಧ ಮತ್ತು ಹಿಜ್ರಿ ೧೦೩೪ರ ೧೨ಹೂನ್ ಅರ್ಧ ಒಟ್ಟು ನಿಗದಿ ಪಡಿಸಲಾಗಿದೆ. ಉಲ್ಲೇಖಿತ ದಿಕ್ಕುಗಳಲ್ಲಿ ಜಮೀನಿನ ಇನಾಮು ೬ ದಿರಮ್. ಪ್ರತಿಯೊಂದು ಗ್ರಾಮದಲ್ಲಿ ಒಂದು ಹಿತ್ತಲು (ಪಿಥೋರಿ); ಕುಲಕರ್ಣಿಕೆಗಾಗಿ ಅಗತ್ಯವಿರುವ ಸಾಮಾನುಗಳನ್ನು ಒಂದು ತಿಂಗಳಿಗಾಗಿ ನಿಗದಿ ಮಾಡಿ, ಕಳುಹಿಸಲಾಗಿದೆ. ಕಾನೂನಿನ ಮೇರೆಗೆ, ಉಲ್ಲೇಖಿತ ಕಂದಗಲ್ಲ್ ಹಾಗೂ ಸಿರಗುಪ್ಪೆಯ ದಿಕ್ಕಿನಲ್ಲಿ, ದೇಸ್ ಕುಲಕರ್ಣಿಕೆಯ ಮಹತ್ಕಾರ್ಯ ಜಾರಿಗೊಳಿಸಬೇಕು.

ಉಲ್ಲೇಖಿತ ಇನಾಮು, ಸುಂಕ, ನಗದು ಮತ್ತು ಕಟ್ಟಡಗಳು, ವೇತನರಹಿತ ಕೆಲಸಗಾರರು ಹಾಗೂ ಬೇಡಿಕೆಯ ಒಟ್ಟು ಅಗತ್ಯ ಸಾಮಾನುಗಳು ಮತ್ತು ಪ್ರತಿಯೊಂದು ಗ್ರಾಮದಲ್ಲಿ ಒಂದು ಪಿಥೋರಿ; ಮೇಲ್ಕಾಣಿಸಿದ ಗ್ರಾಮಗಳ ಕುಲಕರ್ಣಿಗಳ ಹಕ್ಕುಗಳಲ್ಲಿ ಸೇರಿಸಿದಂತಹ ಇನಾಮುಗಳಾಗಿವೆ. ಚಾವರ್...... ಕಮತ್, ಪಸ್ವಾ, ಪಸಂತಿ, ಪಲ್ಕಿ ಹಾಗೂ ಕೆಲವು ಅಗತ್ಯ ಸಾಮಾನುಗಳನ್ನು, ಒಂದು ವರ್ಷದಲ್ಲಿ ಒಂದು ತಿಂಗಳಿಗಾಗಿ ನಿಗದಿಪಡಿಸಿದಂತಹ ಇನಾಮಿನೊಂದಿಗೆ ಸೇರಿಸಬೇಕು. ಆನಂತರ, ಅವರ ಮಕ್ಕಳು ಮತ್ತು ಮೊಮ್ಮಕ್ಕಳಿಗಾಗಿ ಜಾರಿಗೊಳಿಸಬೇಕು.

ಸಂಚನಿ, ತಲಬ್, ತಹಶೀಲ್, ಮಹಾಜಿರ್, ಮಫ್‌ರೂ, ಇತ್ಯಾದಿಗಳನ್ನು; ಕುಲಕರ್ಣಿಯರ ಸಲಹೆಯೊಂದಿಗೆ ನಿರ್ಧರಿಸಿರಿ. ಈ ವಿಷಯದಲ್ಲಿ ಯಾವುದೇ ಅವಿವೇಕ ಮಾಡಬಾರದು. ಉಲ್ಲೇಖಿತ ಎರಡೂ ತಾರೀಖಿನ ನಡುವೆ, ಜಾಮ್‌ದಾರಖಾನೆಯಲ್ಲಿ ಜಮಾ ಆಗಿರುವ ಹಣ: ೨೫ ಹೂನ್ ವಜಾ ಮಾಡಿ, ಉಳಿದ ಹಣ: ಹಿಜ್ರಿ ೧೦೩೩ರ ೧೨ ಹೂನ್ ಅರ್ಧ, ಹಿಜ್ರಿ ೧೦೩೪ರ ೧೨ ಹೂನ್ ಅರ್ಧ ವಸೂಲ್ ಆಗಿರುವಂತಹ ಹಣವನ್ನು ದರ್ಬಾರಿಗೆ ಕಳುಹಿಸಿರಿ. ಬಾದಶಾಹನ ಆಜ್ಞೆಗೆ ಅನುಸಾರವಾಗಿ, ಪಟ್ಟಿಯನ್ನು ತಯಾರಿಸಿ, ಮೂಲ ಆಜ್ಞೆಯನ್ನು ಹಿಂತಿರುಗಿಸಿರಿ.

ಹಿ ೧೦೪೨ ಮೊಹರಂ ೧೫ ಶಕ ೧೫೫೪ ಶ್ರಾವಣ ವದ್ಯ ೨
ಇ ೧೬೩೨, ಜುಲೈ ೨೩

ಮುಹಮ್ಮದ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೩೨ರಿಂದ (ಒಂದು ಸಾವಿರದ ಮೂವತ್ತೆರಡು) ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ, ಮೀರ್ ಅಲಿ ರಜಾನಿಗೆ ಕೊಡಲಾದ ಉಲ್ಲೇಖಿತ ತಾಲ್ಲೂಕಿನ ಗ್ರಾಮವನ್ನು, ಶಹಾಜಿ ಭೋಸ್ಲೆಯ ಪುತ್ರನಾದ ಇಜ್ಜತ್ ಪನಾಹ್ ರಫತ್ ದಸ್ತಗಾ ಸ್ಮಜಾತ್ ಇಂತಬಾ ಅಮ್‌ದತುಲ್ಲ್ ಅಮಾಯಿಲ್ ವಲ್ ಅಖ್ರಾನ್ ನತೀಜಾತುಲ್ ಅಹಾಲಿ ವಲ್ ಆಯಾನ್ ಲಾಯಕುಲ್ ಮರಾಹಿಮ್ ವಲ್ ಎಹ್‌ಸಾನ್ ಸಂಬಾಜಿಯ ದೃಢತೆ/ ಸ್ಥೈರ್ಯಕ್ಕಾಗಿ; ಸರ್ವ ಅಗತ್ಯ ಸಾಮಾನುಗಳೊಂದಿಗೆ ಅನುಗ್ರಹಿಸಲಾಗಿದೆ. ಅವನಿಗೆ ಉಲ್ಲೇಖಿತ ಗ್ರಾಮವನ್ನು ಕೊಡಬೇಕು. ಆಜ್ಞಾನುಸಾರವಾಗಿ, ಈ ಗ್ರಾಮವನ್ನು ಆತನ ಬಳಕೆಗಾಗಿ ನೀಡಬೇಕು.

ಹಿಜ್ರಿ ೧೦೪೨ರ (ಒಂದು ಸಾವಿರದ ನಾಲ್ವತ್ತೆರಡು) ಮೊಹರಮ್ ತಿಂಗಳಿನ ೧೫ನೇ (ಹದಿನೈದು) ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ,

ಅಲ್ಲಾವ್‌ಖಾನ್ ಆಲಿಶಾನ್ ಸಾದತ್ ನಿಶಾನ್ ರಫಿ ಉಲ್‌ಖದರ್ ವಲ್‌ಮಕಾನ್ ದೌಲತ್‌ಖಾಸ್‌ಖಾನ್ ಸರ್‌ಖಾಸ್ ಹುಜೂರ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ. ೧೦೪೭ (೪?) ರಜ್ಜಬ್ ಶಕ. ೧೫೫೯, ಮಾರ್ಘಶೀರ್ಷ
ಇ ೧೬೩೭, ನವೆಂಬರ್-ಡಿಸೆಂಬರ್

ಮುಹಮ್ಮದ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

(ಹಿಜ್ರಿಯಿಂದ)......... ಬಾದಶಾಹನ ಅಪಾರ ಕೃಪೆ ಮತ್ತು ಇನಾಮುಗಳ ರೂಪದಲ್ಲಿ; ಬೆಲೆಕಟ್ಟಿ ಹಾಗೂ ಪಾಪೋಶಿ ಮೇಜಬಾನಿ......ಯ ಹಣವನ್ನು ಉಲ್ಲೇಖಿತ ತಾಲ್ಲೂಕಿನ ಬೆಟಗೆರೆ ಗ್ರಾಮದ ಬರಾಹ್ ಮಲಿಕ್ ಖುರದ್‌ನ ಹೊರಗೆ ಹಾಕಲ್ಪಟ್ಟ ಪುತ್ರರಾದ ಖಾದರ್ ಮಹಮ್ಮದ್ ಮತ್ತು ಅಬ್ದುರ್ ರಹೀಮನಿಗೆ .... ಕೊಡಲಾಗಿದೆ. ಉಲ್ಲೇಖಿತ ಆಸ್ತಿಗಳನ್ನು .... ಪಡೆದುಕೊಂಡು...... ಆಸುಪಾಸಿನಲ್ಲಿ ತಲುಪಿಸಿರಿ.

ಈ ವಿಷಯದಲ್ಲಿ ಪೂರ್ಣ ಎಚ್ಚರಿಕೆ ನೀಡಲಾಗಿದೆ. ....ದಲ್ಲಿ ಬರೆಯಲಾಗಿದೆ.

ಹಿ ೧೦೪೮ ಜಖ್ಬರ ೧೫ ಶಕ ೧೫೬೦ ಆಶ್ವೀನ ವದ್ಯ ೧
ಇ. ೧೬೩೮ ಅಕ್ಟೋಬರ್ ೧೩

ಮುಹಮ್ಮದ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೪೯ರಲ್ಲಿ (ಒಂದು ಸಾವಿರದ ನಾಲ್ವತ್ತೊಂಬಂತ್ತು) ಬಾದಶಾಹನ ಖಜಾನೆಯ ಕಟ್ಟಡದ ವೇತನ ದೇಸಾಯಿಂದ, ಉಲ್ಲೇಖಿತ ತಾಲ್ಲೂಕಿನ ಬೆಟಗೆರೆ ಗ್ರಾಮದ ಆಸ್ತಿಗಳ ಕಾರಣದಿಂದ ಹಿಂದಿನ ವರ್ಷ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಳನ್ನು ಸೇರಿಸಲಾಗಿದೆ. ಉಲ್ಲೇಖಿತ ಹಿಜ್ರಿಯಲ್ಲಿ ಇದಕ್ಕಾಗಿ ನಿಗದಿಪಡಿಸಲಾದ ಒಟ್ಟು ಮೊತ್ತ : ೬೭ ಹೂನ್ (ಅರವತ್ತೇಳು) ಅರ್ಧ ಕೊಡಲಾಗಿದೆ.

(ಬೆಲೆಕಟ್ಟಿ) ೨೨ ಹೂನ್ ಅರ್ಧ ಪಾಪೋಶಿ ಮೇಜಬಾನಿ : ೧೫ ಹೂನ್ ಅರ್ಧ

ಗಾವ್‌ಜರಾದ್‌ಖಾನಾ : ೭ ಹೂನ್ ಅರ್ಧ ಜಂಗಪಟ್ಟಿ : ೨೨ ಹೂನ್ ಅರ್ಧ

ಈ ಎಲ್ಲ ಹಣವನ್ನು ತ್ವರಿತವಾಗಿ ಪಡೆದು, ಉಲ್ಲೇಖಿತ ಖಜಾನೆಯ ಕಟ್ಟಡಕ್ಕೆ ಕಳುಹಿಸಿ ಕೊಡಬೇಕು. ಉನ್ನತ ಆಜ್ಞೆಗೆ ಅನುಸಾರವಾಗಿ, ಈ ವಿಷಯದಲ್ಲಿ ಪೂರ್ಣ ಎಚ್ಚರಿಕೆ ನೀಡಲಾಗಿದೆ.

ಹಿಜ್ರಿ ೧೦೪೮ರ ಜಮಾದಿ ಉಸ್‌ಸಾನಿ ತಿಂಗಳಿನ ೧೫ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ,

ಅಲ್ಲಾಮ್‌ಖಾನ್ ಆಲಿಶಾನ್ ಸಾದತ್ ನಿಶಾನ್ ಮೊರಿದೆ ಅಲ್ತಾಫ್ ಮಾಲಿಕ್ ಉಲ್‌ಮುಲ್ಕ್ ಅಮೀನ್‌ಉಲ್ ಮುಲ್ಕ್ ವಜೀರೆ ಹುಕೂಮತ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ ೧೦೪೯ ಶಾಬಾನ್ ೧೧ ಶಕ ೧೫೬೧ ಮಾರ್ಗಶೀರ್ಷ ಶುದ್ಧ ೧೨

ಇ. ೧೬೩೯ ನವೆಂಬರ್ ೨೭

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೪೦ರಲ್ಲಿ (ಒಂದು ಸಾವಿರ ನಾಲ್ವತ್ತು) ಮಶೂರ್ ಉದೌಲತ್ ದಾದಾಜಿ ಪಂಡಿತನನ್ನು ನೆರವು ನೀಡುವ ಸೈನ್ಯಕ್ಕಾಗಿ ಆಹಾರಧ್ಯಾನವನ್ನು ಪೂರೈಸಲು ಕಳುಹಿಸಲಾಗಿತ್ತು. ಜಗತ್ತಿಗೆ ಆಜ್ಞೆನೀಡುವವನ ಆಜ್ಞೆಯನ್ನು ಪಡೆದುಕೊಂಡ ನಂತರ; ನೆರವು ನೀಡುವ ಸೈನ್ಯಕ್ಕೆ ಆಹಾರಧಾನ್ಯವನ್ನು ಮೇಲಿಂದ ಮೇಲೆ ಕಳುಹಿಸುತ್ತಿರಬೇಕೆಂದು; ತರಕಾರಿ ಮಾರಾಟಗಾರರು ಹಾಗೂ ಕೆಲವು ಜನರಿಗೆ ಎಚ್ಚರಿಕೆ ನೀಡಬೇಕು. ಜಕಾತ್ (ದಾನದ ಹಣ) ಮತ್ತು ಇತರ ಸಾಮಾನುಗಳ ರೂಪದಲ್ಲಿ, ತರಕಾರಿ ಮಾರಾಟಗಾರರು ಹಾಗೂ ಇತರ ಜನರು ಅಡ್ಡಿ ಆತಂಕ ಮಾಡಬಾರದು. ಈ ವಿಷಯದ ಬಗೆಗೆ ಬರೆಯಲಾಗಿರುವ ಸಂಗತಿಯನ್ನು, ಮೇಲ್ಕಾಣಿಸಿದ ಪಂಡಿತನು ಕಾರ್ಯಾಚರಣೆಗೊಳಿಸಿರಬಹುದು. ಅವನು ಸಂಪೂರ್ಣ ನಿಷ್ಠೆಯಿಂದ ಇದರ ಅರ್ಥವನ್ನು ತಿಳಿದುಕೊಂಡು ಸಾಮಾನುಗಳನ್ನು ಕಳುಹಿಸುತ್ತಿರಬಹುದು. ಒಂದು ವೇಳೆ ಆಹಾರ ಧಾನ್ಯ ರವಾನೆ ಮಾಡುವ ಕಾರ್ಯದಲ್ಲಿ ವಿಳಂಬವಾಗಿ, ನಿರ್ಲಕ್ಷ್ಯ ಮಾಡಿದರೆ; ಪರಿಣಾಮವು ಒಳ್ಳೆಯದಾಗಲಾರದು. ಎಲ್ಲ ದೋಷವು ಆತನ ಮೇಲೆ ಬರುವದು.

ಹಿಜ್ರಿ ೧೦೪೯ರ ಶಾಬಾನ್ ತಿಂಗಳಿನ ೧೧ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ,

೨೮

ಹಿ. ೧೦೫೦ ರವ್ವಲ್ ೧೨ ಶಕ. ೧೫೬೨ ಆಷಾಢ ಶುದ್ಧ ೧೪

ಇ ೧೬೪೦ ಜೂನ್ ೨೨

ಮುಹಮ್ಮದ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೪೦ ರಿಂದ (ಒಂದು ಸಾವಿರದ ನಾಲ್ವತ್ತು) ೧೦೪೧ರ ವರೆಗೆ, ಬರ್ತನ್‌ದಾಜಾನ್ ಪರಿಚಾರಕರ ಒಟ್ಟು ವೇತನದ ಬದಲಾಗಿ; ಉಲ್ಲೇಖಿತ ತಾಲ್ಲೂಕಿನ ಬೆಟಗೆರೆ ಗ್ರಾಮದ ಬಾದಶಾಹನ ಖಜಾನೆ ವ್ಯವಹಾರದ ಹಣ ಮತ್ತು ಹಿಜ್ರಿ ೧೦೪೦ರ ಕಟ್ಟಡಗಳ ಚೆಕ್ ಕೊಡಿಸಿ; ಒಟ್ಟು ಮೊಬಲಗು : ೬೭ (ಅರವತ್ತೇಳು) ಹೊನ್ ಅರ್ಧ ಕೊಡಲಾಗಿದೆ.

ಬೆಲೆಕಟ್ಟಿಯ	**ಪಾಪೋಶಿ ಮೇಜಬಾನಿಯ**	**ಗಾವ ಜರಾದ್‌ಖಾನಾದ**
೨೨ಹೊನ್ ಅರ್ಧ	**೫೦ಹೊನ್**	**೭ ಹೊನ್ ಅರ್ಧ**
ಜಂಗೀ (ಜಂಗಪಟ್ಟಿ?)	ಸರಿ	ಸರಿ
೨೨ ಹೊನ್ ಅರ್ಧ		

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಒಟ್ಟು ಮೊಬಲಗನ್ನು ಕೊಡಬೇಕು.

ಹಿಜ್ರಿ ೧೦೫೦ರ ರಬಿಉಲ್ ಅವ್ವಲ್ ತಿಂಗಳಿನ ೧೨ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸೆ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ,

ಹಿ. ೧೦೫೧, ಜವ್ವಲ್ ೧೭ ಶಕ ೧೫೬೩ ಶ್ರಾವಣ ವದ್ಯ ೫

ಇ ೧೬೪೧ ಅಗಸ್ಟ್ ೧೫

ಮುಹಮ್ಮದ ಆದಿಲ್‌ಶಾಹ > ರಾಯಾಜಿ ತಿರ್‌ಮಲ್ ಠಾಣೇದಾರ ಮತ್ತು ಕಾರಕೂನ ಬಾದಾಮಿ ಕೋಟೆ

ದೇಶವು ದೇವರಿಗಾಗಿ ಇದೆ.

ಮಶಹೂರ್ ಉಲ್ ಅನಾಮ್ ರಾಮಾಜಿ ತಿರ್‌ಮಲ್ ಠಾಣೇದಾರ್ ಮತ್ತು ಬಾದಾಮಿ ಕೋಟೆಯ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೪೧ರಲ್ಲಿ (ಒಂದು ಸಾವಿರದ ನಾಲ್ವತ್ತೊಂದು) ಮಲ್ಲಿಕಾರ್ಜುನನ ಪುತ್ರನಾದ ಮಹಾಕೂಟನು ದರ್ಬಾರಿಗೆ ಮನವಿ ಸಲ್ಲಿಸಿದನು. ನಾಡಗೌಡನ ವಂಶಪರಂಪರಾಗತ ಆಸ್ತಿಯಾಗಿರುವ ಉಲ್ಲೇಖಿತ ಕೋಟೆಯು ನನ್ನದಾಗಿದೆ. ಆದರೆ, ಈಗ ಲಚಮೀಧರ್ ತುಕದೇವ್ ಮತ್ತು ತಿಮಾಜಿ ಕ್ರಿಸ್ತೋ ಇದರಲ್ಲಿ ಹಸ್ತಕ್ಷೇಪ ಮಾಡಲಾರಂಭಿಸಿದ್ದಾರೆ. ಕೃಪೆ ಮಾಡಿ, ನನ್ನ ವಂಶಪರಂಪರಾಗತ ಆಸ್ತಿಯನ್ನು ನನಗೆ ನೀಡುವಂತಹ ಆಜ್ಞೆಯನ್ನು ಜಾರಿಗೊಳಿಸಿರಿ. ನಾವು ಈ ವರೆಗಿನ ಒಂದು ವರ್ಷದ ಹಣ : ೭೫ ಹೂನ್ ಒಪ್ಪಿಕೊಂಡಿದ್ದೇವೆ. ಇದರ ಹೊರತಾಗಿ ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ; ನಾಡಗೌಡರ ವಂಶಪಾರಂಪರಿಕ ಆಸ್ತಿಯಾದ ಉಲ್ಲೇಖಿತ ಕೋಟೆಯನ್ನು ಮೊದಲಿನಂತೆ ಮೇಲ್ಕಾಣಿಸಿದ ಮಹಾಕೂಟ ಮಲ್ಲಿಕಾರ್ಜುನನ ಹೆಸರಿನಲ್ಲಿ ನಿಗದಿಪಡಿಸಲಾಗಿದೆ. ನಿಯಮದ ಅನುಸಾರವಾಗಿ, ನಾಡಗೌಡನು ಯುದ್ಧದಲ್ಲಿ ಗೆದ್ದಿರುವ ಪ್ರದೇಶವನ್ನು ಮಹಾಕೂಟನಿಗೆ ಕೊಡಬೇಕು. ನರಗುಂದ ಗ್ರಾಮದ ಆರು ಮಾರು ಜಮೀನು, ಮೇಗೂರ್ ಗ್ರಾಮದ ಒಂದು ಪಟ್ಟಿ, ಮಾರನಕೇರಿ ಗ್ರಾಮದ ಎರಡು ಮಾರು, ಕೆಲವು ಇತರ ಇನಾಮುಗಳು, ಹಕ್ಕಿನ ಸಾಮಾನುಗಳು ಮತ್ತು ದೇಸಾಯಿಯ ಹತ್ತಿರ ಗಿರವಿ ಇಟ್ಟಿರುವ ಉಲ್ಲೇಖಿತ ಕೋಟೆಯ ಪಟ್ಟಿ ಪಚೋಡಿ ಹಾಗೂ ಹೂಗಿ (?) ಗ್ರಾಮಗಳನ್ನು ಮಹಾಕೂಟನಿಗೆ ಇನಾಮು ರೂಪದಲ್ಲಿ ಕೊಡಬೇಕು. ಇವೆಲ್ಲವುಗಳನ್ನು ಆ ವ್ಯಕ್ತಿಗೆ ಕೊಡುವ ಕಾರ್ಯದಲ್ಲಿ ಈ ಗ್ರಾಮಗಳಿಂದ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಳು ಹಾಗೂ ಇತರ ಯಾವುದೇ ವ್ಯಕ್ತಿಗಳು ಅಡ್ಡಿ-ಆತಂಕವನ್ನುಂಟು ಮಾಡಲು ಅವಕಾಶ ನೀಡಬಾರದು. ಆಶ್ರಿತರ ಹಣವನ್ನು ಮೇಲ್ಕಾಣಿಸಿದ ಹಣದೊಂದಿಗೆ ಸೇರಿಸಿರಿ. ಏಕೆಂದರೆ......... ಎಲ್ಲ ಉಲ್ಲೇಖಿತ ಪ್ರದೇಶಗಳ

ಕಾಗದ–ಪತ್ರಗಳನ್ನು ಕೊಡಲಾಗಿದೆ. ಆಧಾರ ಪತ್ರ ಮತ್ತು ನೈಜ ಮಾರ್ಗದ ಪರಿಚಯ ಮಾಡಿ; ಅವನಿಗೆ ಹಾಗೂ ಅವನ ಸಂತತಿಗೆ ಕೊಡಿರಿ. ಅಡ್ಡಿ–ಆತಂಕದ ಪತ್ರ ತಡೆಹಿಡಿದು, ಶುಭದಾಯಕ ಆಜ್ಞೆಯನ್ನು ಜಾರಿಗೊಳಿಸಬೇಕು. ಆಜ್ಞಾನುಸಾರ ಕಾರ್ಯಾಚರಣೆ ಮಾಡಿರಿ. ಈ ವಿಷಯದಲ್ಲಿ ಯಾವುದೇ ಹಸ್ತಕ್ಷೇಪ ಮಾಡಬಾರದೆಂದು; ಲಚಮೀಧರ್ ತುಕದೇವ್ ಮತ್ತು ತಿಮಾಜಿ ಕ್ರಿಸ್ಟೋನಿಗೆ ಎಚ್ಚರಿಕೆ ನೀಡಬೇಕು.

ಹಿಜ್ರಿ ೧೦೫೧ರ ಜಮಾದಿ .... ತಿಂಗಳಿನ ೧೭ನೇ (....... ತಾರೀಖಿಗೆ) ಬರೆಯಲಾಗಿದೆ.

ಹುಜೂರ್ ಖಿರ್ಶಿದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ,

ಅಲಾಮ್‌ಖಾನ್ ಆಲಿಶಾನ್, ಸಾದತ್‌ನಿಶಾನ್, ರಫಿಉಲ್‌ಖದರ್, ಬುಲಂದ್ ಮಕಾನ್ ಇಕ್ಲಾಸ್ ಖಾನ್ ವಜೀರೆ ಹುಕೂಮತ್‌ರ ಮೂಲಕ ಕಳುಹಿಸಲಾಗಿದೆ.

೩೦

ಹಿ. ೧೦೬೫ ರವ್ವಲ್ ೧೨ ಶಕ ೧೫೭೬, ಪೌಷ್ಯ ಶುದ್ಧ ೧೪
ಇ ೧೬೫೫, ಜನವರಿ ೧೧

ಮುಹಮ್ಮದ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ, ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ರಹೀಮ್ ಮೊಹಮ್ಮದನ ಪುತ್ರನಾದ ಶರೀಫ್ ಮೊಹಮ್ಮದನಿಗೆ ಕೊಡಲಾಗಿರುವ ಉಲ್ಲೇಖಿತ ತಾಲ್ಲೂಕಿನ ತುಪ್ಪದ ಕೋರಿಹಟ್ಟಿಯನ್ನು ಹಿಜ್ರಿ ೧೦೫೫ರಲ್ಲಿ; ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ ಭದ್ರತೆ, ಮುಂದಾಳತ್ವ, ಪ್ರಶಂಸೆಗೆ ಆಶ್ರಯದಾತ, ಸನ್ಮಾರ್ಗದರ್ಶಕ, ಸಭ್ಯತೆ/ಸಜ್ಜನಿಕೆಯ ಜ್ಞಾನಿ, ಸೌಭಾಗ್ಯ/ಸಂಪತ್ತಿನ ಔನ್ನತ್ಯ ಸಂಪನ್ನ, ಆಡಳಿತೆ ಹಾಗೂ ಗಾಂಭೀರ್ಯದ ಪ್ರವೀಣ, ಪ್ರವಾದಿ ಮನೆತನದ ಸಾರಾಂಶ, ಪ್ರವಾದಿ ಅಲಿಯ ಕುಟುಂಬದ ವಿಮರ್ಶಕ, ಸುಲೇಮಾನ್‌ನ ದರ್ಬಾರಿನ ವಿಶ್ವಾಸಿಕ, ಸಾಮ್ರಾಟನ ರಹಸ್ಯಗಳ ಜ್ಞಾನಿ, ಖಾಖಾನ್‌ನ ದರ್ಬಾರಿನ ನಂಬಿಗಸ್ಥ, ಸಜ್ಜನಿಕೆಯ ಸ್ವಭಾವ ಉಳ್ಳವ, ಪ್ರಾಮಾಣಿಕ ಜನರ ಆಯ್ಕೆ, ನಿಷ್ಠೆಯ ಸಂರಕ್ಷಕ, ಸೌಭಾಗ್ಯದ ನಿಯಮಗಳನ್ನು ದೃಢಗೊಳಿಸುವವ, ಸಾಮ್ರಾಜ್ಯಾಧಿಕಾರ/ಸಾಂಪ್ರದಾಯಗಳ ಮುನ್ನುಡಿಕಾರ, ಅನಂತ ಸಂಪತ್ತಿನ ಶುಭವಾರ್ತೆ ನೀಡುವವ, ಶಾಶ್ವತ ಸಾಮ್ರಾಜ್ಯದ ಸಂರಕ್ಷಕ, ಅನಂತತೆಯ ಕಾರ್ಯಗಳ ಜ್ಞಾನಿ, ವೈಭವಶಾಲಿ, ಉನ್ನತ ಘನತೆಯುಳ್ಳವ ಎತ್ತರದ ನಿಲುವಿನವ, ಪರಮೋಚ್ಚ ಸಾಮ್ರಾಜ್ಯದ ಸದಸ್ಯ, ಉತ್ತರಾಧಿಕಾರತ್ವದ ಬೆಂಬಲಿಗ, ಖಾಖಾನಿಯಾದ ಬೆಳಕು, ಸಯ್ಯದ್ ವಂಶದ ಸತ್ವ ಸತ್ಯವಂತನಾದ ಶಾಹ ಅಬುಲ್ ಹಸನ್‌ನಿಗೆ; ಸರ್ವ ಸಾಮಾನುಗಳೊಂದಿಗೆ ಕೊಡಲಾಗಿದೆ. ಉಲ್ಲೇಖಿತ ಗ್ರಾಮವನ್ನು ಸೇರಿಸಬೇಕು. ಶುಭದಾಯಕ ಆಜ್ಞೆ ಅನುಸಾರವಾಗಿ, ಮೇಲೆ ಸೂಚಿಸಲಾದ ಉನ್ನತ ಸಾಮ್ರಾಜ್ಯದ ಸದಸ್ಯನ ಬಳಕೆಗಾಗಿ ಹಿಂತಿರುಗಿಸಬೇಕು.

ಹಿಜ್ರಿ ೧೦೬೫ರ ರಬಿಉಲ್ ಅವ್ವಲ್ ತಿಂಗಳಿನ ೧೨ನೇ ತಾರೀಖಿಗೆ ಬರೆಯಲಾಗಿದೆ.

ಹೂಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ, ಅಲ್ಲಾಮ್ ರುಕುನುಸ್ ಸಲ್ತನತುಲ್ ಅಲಿಯಾ ಉಲ್ ಆಲಿಯಾ ಸಲಾಲಾ ಸಾದಾತ್ ಮೊತಮೀನ್ ಶಾಹ ಅಬುಲ್ ಹಸನ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ. ೧೦೬೭, ಸಫರ್೧೫ ಶಕ ೧೫೭೮ ಮಾರ್ಗಶೀರ್ಷ ವದ್ಯ ೧
ಇ. ೧೬೫೬, ನವೆಂಬರ್ ೨೨

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ವೆಂಕಟಾದ್ರಿ ನಾರಾಯಣ್ ದೇಸಾಯಿಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಬಾದಶಾಹನ ಅಪಾರ ಇನಾಮುಗಳ ಆಕಾಂಕ್ಷೆ ತಿಳಿಯುವದೇನೆಂದರೆ: ವಿಜಯದ ಕಾಲದಲ್ಲಿ, ಸೌಭಾಗ್ಯ ಹಾಗೂ ಸಂಪತ್ತಿನ ಉದ್ಯಾನದ ಪ್ರಕಾಶ, ಬೆಳವಣಿಗೆ ಮತ್ತು ವೈಭವಶಾಂತ ಉಪವನದ ಹೊಸ ಸಂತಾನ, ಉತ್ತಮ ಸ್ವಭಾವದ, ಉನ್ನತ ಅದೃಷ್ಟದ, ಶ್ರೀಮಂತ, ಬಾದಶಹನ ದರ್ಬಾರಿನಿಂದ ಪಾಲನೆ-ಪೋಷಣೆ ಹೊಂದಿದ, ಉಪಕಾರ ಹಾಗೂ ಸ್ಥಾನಮಾನಕ್ಕೆ ಯೋಗ್ಯ, ಗೌರವಸ್ಥ, ಉನ್ನತ ಅಂತಸ್ತಿನವ, ಸನ್ಮಾರ್ಗ ಸಂಪನ್ನನಾದ ಪುತ್ರ ಮೊಹಮ್ಮದ್ ಇಕ್ಲಾಸ್‌ಖಾನ್; ಮುಂದಾಳತ್ವ ಮತ್ತು ಸಂಪತ್ತಿನ ಔನ್ನತ್ಯ ಹೊಂದಿದವ, ವಾರಸುದಾರಿಕೆ ಹಾಗೂ ಪ್ರಭುತ್ವಕ್ಕೆ ಶಕ್ತಿ ನೀಡುವವ, ಸಾಮ್ರಾಜ್ಯ ಮತ್ತು ವಿಜಯದ ಭರವಸೆ ನೀಡುವವ, ಸಂಪತ್ತು ಹಾಗೂ ಶೌರ್ಯದ ಉಂಗುರದ ಹರಳು, ಶಕ್ತಿ ಮತ್ತು ಬಲಿದಾನದ ಮುತ್ತಿನ ಮಿಂಚು, ಹೊರಗೆ ಏಳೆಯಲ್ಪಟ್ಟ ಖಡ್ಗ, ರಾಜಪ್ರಭುತ್ವದ ಬೆಂಬಲಿಗ, ತೀಕ್ಷ್ಣಗೊಳಿಸಿದ ಕಠಾರಿ, ಕಡುವೈರಿಗಳೊಂದಿಗೆ ಹೋರಾಡುವವ, ಮಿಂಚು ಮತ್ತು ಶ್ರೇಷ್ಠತೆಯ ಭಂಡಾರ, ಸಂಪತ್ತು ಹಾಗೂ ಉನ್ನತ ಸಿಂಹಾಸನದ ಮುತ್ತು, ರಹಸ್ಯಗಳ ಖಜಾನೆ, ಅಲ್ಲಾಹನ ಪ್ರತಿನಿಧಿ, ಬುದ್ಧಿವಂತಿಕೆ ಹಾಗೂ ಜ್ಞಾನದ ಸಂಗ್ರಹ ಏಕೇಶ್ವರೀವಾದದ ಸಂಸ್ಥಾಪಕ, ವಿಶಿಷ್ಟ ವ್ಯಕ್ತಿಗಳ ಆಯ್ಕೆ, ಪ್ರಮುಖರ ಸಿಂಹಾಸನ, ಕೃಪಾಕಟಾಕ್ಷಗಳ ಸ್ಥಾನ, ಇನಾಮುಗಳ ಚಿಲುಮೆ, ದೇವಚರದ ಸ್ವಭಾವ-ಹೊಂದಿದವ, ಏಕತಾ ಸಭೆಯ ಸ್ನೇಹಿತ, ಏಕಾಂತ ಸಮ್ಮೇಳನದ ಮಿತ್ರ, ಗಾಂಭೀರ್ಯತೆಯ ಉನ್ನತವಾದ ನಿವಾಸಉಳ್ಳವ, ನಾಯಕರ ಸಾರಾಂಶ, ವೈಭವದ ಉಗಮಸ್ಥಾನ, ಜಗತ್ತು ಮತ್ತು ಕಾಲದ ಸರದಾರರ ಆಯ್ಕೆ, ಆದಿಯಿಂದ ಅನಂತದವರೆಗಿನ ಆಜ್ಞಾಪಾಲಕ, ಧರ್ಮರಕ್ಷಣೆಗಾಗಿ ಹೋರಾಡುವವ, ಆಡಳಿತ ನಡೆಸುವ ಮಂತ್ರಿಗಳ ಮಂತ್ರಿ ನನ್ನ ಪುತ್ರಸಮಾನನಾದ ಖಾನ್ ಮೊಹಮ್ಮದ್‌ನಿಗೆ ಕರ್ನಾಟಕ ರಾಜ್ಯಾಧಿಕಾರವನ್ನು ದಯಪಾಲಿಸಿ, ಗೌರವ ನೀಡಿ; ದುರ್ದೈವಿಗಳ ದುರ್ಭಾಗ್ಯವನ್ನು ನಿವಾರಿಸಲು ನೇಮಿಸಲಾಗಿದೆ.

ಗೌರವ ಪಡೆದಂತಹ ವ್ಯಕ್ತಿಯ ಇಚ್ಛೆ ಮತ್ತು ಅವಶ್ಯಕತೆಗೆ ಅನುಸಾರವಾಗಿ, ವಿಧೇಯತೆ ಹಾಗೂ ಪರಿಶ್ರಮದಿಂದ ಕಾರ್ಯಮಾಡಿ; ಸೇವೆಯ ಧ್ಯೇಯವನ್ನು ತಲುಪಬೇಕು. ಹೀಗೆ ಸೇವೆಯ ಸನ್ನದು ಮತ್ತು ಉನ್ನತಿಯು ಪ್ರಾಪ್ತವಾಗುವದು. ಬಾದಶಾಹನ ಆಜ್ಞೆಗೆ ಅನುಸಾರವಾಗಿ ಕಾರ್ಯಾಚರಣೆ ಮಾಡಿರಿ.

ಹಿಜ್ರಿ ೧೧೬೭ರ ಸಫರ್ ತಿಂಗಳಿನ ೧೫ನೇ ತಾರೀಖಿಗೆ ಬರೆಯಲಾಗಿದೆ. ಹುಜೂರ್ ಖುರ್ಶಿದ್ ಜುಹೂರ್ ಆಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ

೩೨

ಹಿ. ೧೧೬೭ ರಖರ್ ೧೯ ಶಕ ೧೫೭೮, ಮಾಘ ವದ್ಯ ೬

ಇ. ೧೬೫೭, ಜನವರಿ ೨೫

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೧೫೭ರಲ್ಲಿ ಅಶ್ರಫ್ ಅಖ್‌ದಸ್‌ರ ಆಜ್ಞೆಯು ಜಾರಿಆಯಿತು. ಬಾದಶಾಹನ ದರ್ಬಾರಿನ ಸಂಪತ್ತು ಪಡೆದಂತಹ ಹಾಗೂ ಪಾಲನೆ-ಪೋಷಣೆ ಹೊಂದಿದಂತಹ ಅವನು; ಬಾದಶಾಹನ ಆಜ್ಞೆಯು ತಲುಪುತ್ತಲೆ, ಬಾದಶಾಹನ ಸೇವೆಯ ಸಮಯದಲ್ಲಿ ತನ್ನ ಸೇವಕರೊಂದಿಗೆ ಅತಿ ತ್ವರಿತವಾಗಿ ದರ್ಬಾರಿನಲ್ಲಿ ಹಾಜರಾಗುವುದು. ಈ ವ್ಯವಹಾರದಲ್ಲಿ ಈ ಮಾತು ಸೇವೆಯ ಸನ್ನದು ಮತ್ತು ಗೌರವಕ್ಕೆ ಕಾರಣವಾಗುವುದು. ಸೇವಕರಿಗಾಗಿ ಖರ್ಚುಮಾಡಿದ ಹಣವನ್ನು ದರ್ಬಾರಿಗೆ ಬಂದ ನಂತರ; ಯಾವುದೇ ಕೊರತೆ ಇಲ್ಲದೇ ಅವನಿಗೆ ತಲುಪಿಸಲಾಗುವುದು. ಅವನ ಹತ್ತಿರ ಹಾಜರ್ ಇರುವಂತಹ ಯಾವುದೇ ಸೇವಕರನ್ನು ಅವನು ಕರೆದುಕೊಂಡು ಬರಲಿ.

ಎಷ್ಟು ಪ್ರಮಾಣದಲ್ಲಿ ಹೆಚ್ಚು ಸೇವಕರು ದೊರಕಲು ಸಾಧ್ಯವೋ ಅವರೆಲ್ಲರನ್ನು ಕಳುಹಿಸಿಕೊಡಲಿಯೆಂದು; ಆತನ ನಿಕಟವರ್ತಿಗಳಿಗೆ ಎಚ್ಚರಿಕೆ ನೀಡಬೇಕು. ಸಮಯ ಬಂದಾಗ, ಸೇವೆಗಾಗಿ ಹಾಜರಾಗಬೇಕಾಗುತ್ತದೆ. ಇದು ವಾರಸುದಾರಿಕೆಯ ಸೊತ್ತು ಮತ್ತು ನ್ಯಾಯ ಸಮ್ಮತಿಯೂ ಅಗತ್ಯವಾದ ನಿಯಮವಾಗಿದೆ.

ಹಿಜ್ರಿ ೧೧೬೭ರ ರಬಿಉಸ್‌ಸಾನಿ ತಿಂಗಳಿನ ೧೯ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶಿದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ,

೩೩

ಹಿ. ೧೦೬೮, ರಬ್ಬಿರ ೧ ಶಕ ೧೫೭೯, ಪೌಷ್ಯ ಶುದ್ಧ ೩

ಇ ೧೬೫೭ ಡಿಸೆಂಬರ್ ೨೭

೨ನೆಯ ಅಲಿ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೫೦ರಲ್ಲಿ ಉಲ್ಲೇಖಿತ ತಾಲ್ಲೂಕಿನ ತುಪ್ಪದ ಕೋರಿಹಟ್ಟಿ ಗ್ರಾಮದ ಕುದುರೆ ಕಟ್ಟುವ ಸ್ಥಳದಿಂದ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಳಿಗೆ ದಿವಾಣಿ, ಪಟ್ಟಿ, ಶಿಕ್ಕಾ, ಹುಮಾಯೂನ್, ಕಾರ್ ಇಮಾರತ್ ಹಾಗೂ ಇತರ ಕೆಲವು ಕಟ್ಟಡಗಳ ಹಣವನ್ನು; ಪವಿತ್ರವಾದ ಶಾಂತಿಯ ಗಣಿ, ಸಂತೋಷದ ಉಗಮಸ್ಥಾನಕ್ಕೆ ಕಳುಹಿಸಲಾಗಿದೆ. ಈಗ ಬೆಲೆಕಟ್ಟಿಯ ೧೮ಹೂನ್; ಪಾಪೋಶಿ ಮೇಜಬಾನಿಯ ೬ ಹೂನ್, ೩ರುಬಾ; ಗಾವ್ ಜರಾದ್‌ಖಾನೆಯ ೩ಹೂನ್ ಅರ್ಧ, ಜಂಗಪಟ್ಟಿಯ ೪೦ಹೂನ್ ಮತ್ತು ಹರದೋಪಟ್ಟಿಯ ಹಣ..... ಉಲ್ಲೇಖಿತ ಗ್ರಾಮದ ಒಟ್ಟುಮೊತ್ತ : ೯೮ ಹೂನ್, ಅಲ್ಲಿಂದ ತೆಗೆದುಕೊಂಡು ಬನ್ನಿರಿ. ಮೇಲ್ಕಾಣಿಸಿದ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಳಿಗೆ ಅವರ ವೇತನದ ಬದಲಾಗಿ; ರಿತಿಗೋನಿಯ ಒಟ್ಟು ಮೊತ್ತ : ೭೯೪ ಹೂನ್, ೩ರುಬಾ, ಜಾಮದಾರ್‌ಖಾನೆಯ ಸೇವೆಯ ಹಣವನ್ನು ವಜಾಮಾಡಿ ಕೊಡಲಾಗಿದೆ. ಲಿಖಿತ ರೂಪದ ಹೇಳಿಕೆಯ ಮೇರೆಗೆ, ಈ ಹಣವನ್ನು ವಜಾಮಾಡಿ ಕಳುಹಿಸಲಾಗಿದೆ. ತಂಬಾಕು ಮತ್ತು ತೀಪ್‌ಬರ್ಗ್‌ದ ಸುಂಕವನ್ನು ಹೊರತುಪಡಿಸಿ; ಉಲ್ಲೇಖಿತ ಗ್ರಾಮದ ಇತರ ಕೆಲವು ವ್ಯವಹಾರಗಳ ಹಣವನ್ನು ಇದರಲ್ಲಿ ಸೇರಿಸಿರಿ. ಮೇಲ್ಕಾಣಿಸಿದ ಗ್ರಾಮದಿಂದ ಈ ವರೆಗೆ ಏನೆಲ್ಲವನ್ನು ತೆಗೆದುಕೊಳ್ಳಲಾಗಿದೆಯೋ; ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಅದನ್ನು ಹಿಂತಿರುಗಿಸಿರಿ.

ಹಿಜ್ರಿ ೧೦೬೮ರ ರಬಿಉಸ್‌ಸಾನಿ ತಿಂಗಳಿನ ೧ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾ ಅಲ್ ಮುಬನಿ ಹರ್‌ದೋ ಏಕ್ ಮುಜ್ರಾರ ಅನುಮತಿಯ ಮೇರೆಗೆ.

೩೪

ಹಿ. ೧೦೬೮, ಜವ್ವಲ್ ೧೯ ಶಕ ೧೫೭೯, ಮಾಘ ವದ್ಯ ೫

ಇ ೧೬೫೮ ಫೆಬ್ರವರಿ ೧೨

೨ನೆಯ ಅಲಿ ಆದಿಲ್‌ಶಾಹ > ದೇಸಾಯಿ ಪರಗಣೆ ಗದಗ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ದೇಸಾಯಿಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೫೮ರಲ್ಲಿ ಸಮೃದ್ಧಿಯ ದಿನಗಳಲ್ಲಿ; ಗೌರವ ಮತ್ತು ಶೌರ್ಯದಲ್ಲಿ ಪರಣಿತನಾದ, ಸುಸ್ವಭಾವದ, ಜ್ಞಾನಿಯಾದ, ಕಾರ್ಯಕುಶಲನಾದ, ಸನ್ಮಾನ್ಯ ಮಂತ್ರಿಗಳಲ್ಲಿ ವಿಶ್ವಾಸಾರ್ಹನಾದ (ಮಹಾನ್ ನಾಯಕರ ಸಾರಾಂಶ) ......ಮಾನವೀಯತೆ ಹಾಗೂ ಬಾಹುಬಲದ ಗಣಿಯ ಅಮೌಲ್ಯ ಹರಳು, ಇರಾನಿಯ ವಿಜಯ ಮತ್ತು ಬುದ್ಧಿವಂತಿಕೆ ಹೊಂದಿದವ, ಶೌರ್ಯದ ರಣರಂಗವೆನಿಸಿದ ವೀರತ್ವ ಮೈದಾನದ ಯುದ್ಧ ಪ್ರಿಯನಾದ ಕೃಪೆಗೆ ಪರಮ ಯೋಗ್ಯನಾದ,........ ಪ್ರಶಂಸೆಗೆ ಭೂಷಣನಾದ, ಸರದಾರನಾದ, ಅತಿಶ್ರೇಷ್ಠ, ಉನ್ನತ ಸೌಭಾಗ್ಯದ ಸಂಕೇತ, ಸನ್ಮಾರ್ಗ ಸಂಪನ್ನನಾದ ಪುತ್ರ, ಸೇನಾಧಿಪತಿ, ಯಾರಿಗಾಗಿ ಆಕಾಶವು ದೇವರ ಸ್ತುತಿಯ ಬದಲು 'ಅಫಜಲ್, ಅಫಜಲ್' (ಶ್ರೇಷ್ಠ, ಶ್ರೇಷ್ಠ) ಎಂಬ ಧ್ವನಿಯನ್ನು ಮೊಳಗಿಸುತ್ತದೆಯೋ ಅಂತಹ ವ್ಯಕ್ತಿ, ಒಳ್ಳೆಯತನದ ಆಕಾಂಕ್ಷಿಗಳ ಸಾರಾಂಶ, ಸಾಮ್ರಾಜ್ಯಾಡಳಿತಗಾರ, ವಿಜಯಶಾಲಿಯಾದ ಅಫಜಲ್‌ಖಾನ್ ಮೊಹಮ್ಮದ್ ಶಾಹಿಯನ್ನು (ಸುಬಾ.......ದಯಪಾಲಿಸಿ) ಪ್ರಬಲ ಸೈನ್ಯದೊಂದಿಗೆ ಕಳುಹಿಸಲಾಗಿದೆ. ಸನ್ಮಾನಿತನಾದ ಖಾನ್‌ನ ನಿಯಂತ್ರಣದಲ್ಲಿ.......ಇದ್ದು, ಸೇವೆ ಹಾಗೂ ಪ್ರಾಮಾಣಿಕ ದಾಸ್ಯಾರಾಧನೆಯ ಸಂಪ್ರದಾಯವನ್ನು ಪಾಲಿಸಬೇಕು. ಅವನಿಗೆ ಸೌಲತ್ತು ಕೊಡಬಹುದೆಂದು, ಲೆಕ್ಕಪತ್ರ ತಯಾರಿಸುವ ಸಮಯದಲ್ಲಿ ಸನ್ಮಾನಿತನಾದ ಖಾನ್‌ನಿಗೆ ತಿಳಿಸಲಾಗಿದೆ. ಇದರಲ್ಲಿಯೇ, ಆತನ ಉನ್ನತಿ ಮತ್ತು ಕಲ್ಯಾಣವಿದೆ.

ಹಿಜ್ರಿ ೧೦೬೮ರ ಜಮಾದಿ ಉಲ್ ಅವ್ವಲ್ ತಿಂಗಳಿನ ೧೯ನೇ ತಾರೀಖಿಗೆ ಬ

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾರ ಅನುಮತಿಯ ಮೇರೆಗೆ.

ಹಿ. ೧೦೬೯ ರಖ್ಬರ್ ೧೯ ಶಕ ೧೫೮೦ ಪೌಷ್ಯ ವದ್ಯ ೫

ಇ ೧೬೫೯, ಜನವರಿ ೩

೨ನೆಯ ಅಲಿ ಆದಿಲ್‌ಶಾಹ > ವೆಂಕಟಾದ್ರಿ ದೇಸಾಯಿ ಪರಗಣೆ ಗದಗ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ವೆಂಕಟಾದ್ರಿ ದೇಸಾಯಿಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೫೯ರಲ್ಲಿ ಮೊದಲಿನ ಆಜ್ಞೆಗೆ ಅನುಸಾರವಾಗಿ, ಬಾದಾಮಿ ಕೋಟೆಯ ೧೪ ಗ್ರಾಮಗಳಿಗೆ ಅಗತ್ಯವಾದ ವಸ್ತುಗಳು, ಮೋಪ್ ಸಿದ್ಧತೆಗಳು ಮತ್ತು ಧಾನ್ಯ ಭಂಡಾರವನ್ನು; ಉಲ್ಲೇಖಿತ ಕೋಟೆಗೆ ಸಂಬಂಧಿತವಾದ ಸಾಮಾನುಗಳೊಂದಿಗೆ ಕಳುಹಿಸಲಾಗಿದೆ. ಮೇಲ್ಕಾಣಿಸಿದ ಕೋಟೆಯ ಹಿರೇಹಾಳ್ ಗ್ರಾಮದಲ್ಲಿ ಸೇವಕರು ಹಾಗೂ ಸವಾರರನ್ನು ಇಟ್ಟು; ಅವನು ಗ್ರಾಮಕ್ಕೆ ತೊಂದರೆಯನ್ನು ನೀಡಿ, ಅದನ್ನು ನಾಶಮಾಡಿದ್ದಾನೆಂದು; ಏತನ್ಮಧ್ಯೆ ದರ್ಬಾರಿಗೆ ತಿಳಿಸಲಾಗಿದೆ. ಆಜ್ಞೆಗೆ ಅನುಸಾರವಾಗಿ, ಪ್ರಾಸ್ತಾವಿಕ ಕೋಟೆಯ ಮೇಲ್ಕಾಣಿಸಿದ ಗ್ರಾಮಕ್ಕೆ ಅಗತ್ಯವಾದ ವಸ್ತುಗಳನ್ನು ಕಳುಹಿಸಿದಾಗ, ಅವನು ಅವಿಧೇಯನಾಗಿ ಆಜ್ಞೋಲ್ಲಂಘನೆ ಮಾಡಿ; ಗ್ರಾಮದಲ್ಲಿ ಆತಂಕ ಸೃಷ್ಟಿಸಿದ್ದಾನೆ. ಈಗ ಬಾದಶಾಹನ ಆಜ್ಞೆ ತಲುಪುತ್ತಲೇ ಆತಂಕವನ್ನು ಅಂತ್ಯಗೊಳಿಸಿ; ಉಲ್ಲೇಖಿತ ಗ್ರಾಮದಿಂದ ಸೇವಕರು ಹಾಗೂ ಸವಾರರನ್ನು ಹೊರಗೆ ಹಾಕಿ, ಗ್ರಾಮಕ್ಕೆ ಯಾವುದೇ ಪ್ರಕಾರದ ತೊಂದರೆಯನ್ನು ಮಾಡಬಾರದು. ಕಳುಹಿಸಲಾಗಿರುವ ಅಗತ್ಯ ಸಾಮಾನುಗಳೊಂದಿಗೆ ಕೋಟೆಯನ್ನು ಗ್ರಾಮದೊಂದಿಗೆ ಸೇರಿಸಿರಿ. ಗ್ರಾಮದಿಂದ ಏನೆಲ್ಲ ವಸ್ತುಗಳನ್ನು ತೆಗೆದುಕೊಳ್ಳಲಾಗಿದೆಯೋ, ಅವೆಲ್ಲವುಗಳನ್ನು ಗ್ರಾಮಕ್ಕೆ ತ್ವರಿತವಾಗಿ ಹಿಂತಿರುಗಿಸಿರಿ. ಈ ವಿಷಯದಲ್ಲಿ ಪುನಃ ತಕರಾರು ಬಾರದಂತೆ ಖಾತ್ರಿ ಮಾಡಿಕೊಳ್ಳಿರಿ. ಒಂದು ವೇಳೆ, ತಕರಾರು ಬಂದರೆ, ಒಳಿತು ಆಗುವದಿಲ್ಲ.

ಹಿಜ್ರಿ ೧೦೬೯ರ ರಬಿಉಸ್ಸಾನಿ ತಿಂಗಳಿನ ೧೯ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಪುರ್‌ನೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾರ ಅನುಮತಿಯ ಮೇರೆಗೆ.

ಅಲ್ಲಾಮ್ (ಸರ್‌ದಾರಿ ಔರ್ ಶರಾಫತ್) ಶಿಯಾದತ್ ವ ನಕಾಬತ್ ದಸ್ತಗಾಮಿಜಾಜ್‌ದಾನ್ ಕಾರ್‌ಆಗಾಹ್ ಸಯ್ಯದ್ ನೂರುಲ್ಲಾ ಸುರ್ಖಿಲೆ ಮುಮಾಲಿಕ್‌ರ ಮುಖಾಂತರ ಕಳುಹಿಸಲಾಗಿದೆ.

ಹಿ ೧೦೭೧ ಜಿಲ್ಹಾದ್ ೧೭ ಶಕ ೧೫೮೩, ಆಷಾಢ ವದ್ಯ ೪
ಇ ೧೬೬೧ ಜುಲೈ ೫

೨ನೆಯ ಅಲಿ ಆದಿಲ್‌ಶಾಹ > ಶ್ರೀನಿವಾಸ ವೆಂಕಟಾದ್ರಿ ದೇಸಾಯಿ ಪರಗಣೆ ಗದಗ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ಶ್ರೀನಿವಾಸ ವೆಂಕಟಾದ್ರಿ ದೇಸಾಯಿ ಮತ್ತು ಬಾದಾಮಿ ಕೋಟೆಯ ನಾಡಗೌಡನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೬೧ರಲ್ಲಿ, ಉಲ್ಲೇಖಿತ ಬಾದಾಮಿ ಕೋಟೆಯ ೪೦ಗ್ರಾಮಗಳಿಗೆ ಅಗತ್ಯ ವಸ್ತುಗಳನ್ನು ಪೂರೈಸಲು; ಉಲ್ಲೇಖಿತ ತಾಲ್ಲೂಕಿನ ಶ್ರೀನಿವಾಸ ದೇಸಾಯಿಯ ತಂದೆಗೆ ಹಿಂದಿನ ಆಜ್ಞೆಗೆ ಅನುಸಾರವಾಗಿ, ೧೫೦ ನೌಕರರನ್ನು; ನಾಯಕತ್ವ ಮತ್ತು ಶ್ರೀಮಂತಿಕೆಗೆ ಆಶ್ರಯ ನೀಡುವವ, ಆಡಳಿತೆ ಹಾಗೂ ವೈಭವದಲ್ಲಿ ತಜ್ಞ, ಸತ್ಯ ಮತ್ತು ಶ್ರೇಣಿಯಲ್ಲಿ ಔನ್ನತ್ಯ ಹೊಂದಿದವ, ವಿಶ್ವಾಸ ಹಾಗೂ ಪ್ರಾಮಾಣಿಕತೆಯಲ್ಲಿ ಅತಿ ಎತ್ತರದ, ಕೃಪೆ ಮತ್ತು ವಿಶಿಷ್ಟತೆಗೆ ಯೋಗ್ಯ, ಸುಶಿಕ್ಷಿತ ಸ್ಥಾನ ಹೊಂದಿದ, ಉನ್ನತ ಹುದ್ದೆಗಳಿಗೆ ಪಾತ್ರ, ಗೌರವಸ್ಥ, ಸೂಕ್ಷ್ಮದರ್ಶಕ, ಭವ್ಯತೆ ಹಾಗೂ ಅತ್ಯುತ್ತಮತೆ ಉಳ್ಳವ, ಬೃಹದ್ ವಂಶವೃಕ್ಷದವ, ಸೌಭಾಗ್ಯದ ಉದ್ಯಾನ, ಸಂಪತ್ತು ಮತ್ತು ಸೌಭಾಗ್ಯ ಸಿಂಹಾಸನದ ಅಮೌಲ್ಯ ಹರಳು, ಸತ್ಯದ ಅಮೌಲ್ಯ ಬಾಗಿಲು, ಉಂಗುರದ ಹರಳಿನ ಮುದ್ರೆ, ಶೌರ್ಯ ಹಾಗೂ ವೀರತ್ವ ರಣರಂಗದ ಮಹಾನ್ ಬಲಿದಾನಿ, ಚುರುಕುತನ ಮತ್ತು ಶೂರತ್ವ ಸಾಗರದ ಮೊಸಳೆ, ಸಾಮ್ರಾಜ್ಯ ಕಾರ್ಯದ ವ್ಯವಸ್ಥಾಕ, ಉತ್ತರಾಧಿಕಾರತ್ವ/ಮಹಾಕಾರ್ಯದ ವಜ್ರ, ಮಹೋನ್ನತ ಸಾಮ್ರಾಜ್ಯದ ಸದಸ್ಯ ಸಾಮ್ರಾಜ್ಯದ ಬಾಹು, ಮಿನುಗುವ ಸರದಾರ, ಉನ್ನತ ವೈಭವ ಹಾಗೂ ಮೌಲ್ಯ-ಸಂಪನ್ನ, ಎತ್ತರ ಗೃಹದ ನಿವಾಸಿ, ಉಪಕಾರ ಮತ್ತು ಕೃಪಾಗುಣ ಸಂಪನ್ನ, ಸಾಮ್ರಾಜ್ಯದ ಮಂತ್ರಿಯಾದ ಮೊಹಮ್ಮದ್ ಇಕ್ಲಾಸ್ ಖಾನನು; ಕಳುಹಿಸಿದ್ದನು. ವೆಂಕಟಾದ್ರಿ ದೇಸಾಯಿ ಮರಣ ಹೊಂದಿರುವದರಿಂದ; ನಾಡಗೌಡತ್ವಕ್ಕೆ ಸಂಬಂಧಿಸಿದ ಉತ್ತರಾಧಿಕಾರತ್ವ ಆಸ್ತಿನ ಇನಾಮಿನ ಬದಲು; ಉಲ್ಲೇಖಿತ ಕೋಟೆಯ ಹಿರೇಹಾಳ್ ಹಾಗೂ ಬೇನಿಹಾಳ್ ಗ್ರಾಮಗಳನ್ನು ಶ್ರೀನಿವಾಸ ದೇಸಾಯಿಗೆ ಕೊಡಲಾಗಿದೆ. ಈಗ ಬಾದಶಾಹನ ಆಜ್ಞೆಯ ಪ್ರಕಾರ,

ಉಳಿದ ೧೨ ಗ್ರಾಮಗಳನ್ನು, ಅಗತ್ಯ ವಸ್ತುಗಳ ಪೂರೈಕೆ ಮಾಡುವ ನೌಕರರ ಬದಲು, ಶ್ರೀನಿವಾಸ್ ದೇಸಾಯಿಗೆ ಕೊಡಬೇಕು. ....

ಹಿಜ್ರಿ ೧೦೭೧ರ ಜೀಖಾಯದಾ ತಿಂಗಳಿನ ೧೭ನೇ ತಾರೀಖಿಗೆ ಬರೆಯಲಾಗಿದೆ.

ಹಿ ೧೦೭೬ ರಜ್ಜಬ್ ೨೫ ಶಕ ೧೫೮೭ ಆಶ್ವಿನ್ ವದ್ಯ ೧೨

ಇ ೧೬೬೫ ಅಕ್ಟೋಬರ್ ೨೫

೨ನೆಯ ಅಲಿ ಆದಿಲ್‌ಶಾಹ > ಅಧಿಕಾರಿ ಮತ್ತು ದೇಸಾಯಿ ಕೋಟೆ ಕೊಪ್ಪಳ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಕೊಪ್ಪಳ ಕೋಟೆಯ ದೇಸಾಯರು ಮತ್ತು ವರ್ತಮಾನ ಹಾಗೂ ಭವಿಷತ್ತಿನ ಅಧಿಕಾರಿಗಳಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೬೬ರಲ್ಲಿ ಗದಗ ತಾಲ್ಲೂಕಿನ ದೇಸಾಯಿ ಮತ್ತು ಉಲ್ಲೇಖಿತ ಕೊಪ್ಪಳ ಕೋಟೆಯ ಕಲಕೇರಾದ ದಿಕ್ಕಿನಲ್ಲಿರುವ ಬಾದಾಮಿ ಕೋಟೆಯ ನಾಡಗೌಡ ಹಾಗೂ ರೋಲ್‌ಕುಂದಾ ಶ್ರೀನಿವಾಸ್ ವೆಂಕಟಾದ್ರಿ ದೇಸಾಯಿಯು, ದರ್ಬಾರಿನಲ್ಲಿ ಮನವಿ ಮಾಡಿಕೊಂಡಿರುವದೇನೆಂದರೆ :-

ಬಾದಾಮಿ ಕೋಟೆಯ ಹಳೆಯ ವಾರಸುದಾರನಾಗಿದ್ದ ಕ್ರಿಸ್ಟೊ ನಾಡಗೌಡನ ಪರಿಸ್ಥಿತಿಯು ಹದಗೆಟ್ಟಿದ್ದರಿಂದ, ಅವನು ಕಚೇರಿ ಮತ್ತು ಆದಾಯದ ಮೇಲ್ವಿಚಾರಣೆ ಮಾಡಲು ಅಸಮರ್ಥನಾದುದರಿಂದ...... ಉಲ್ಲೇಖಿತ ವಾರಸುದಾರಿಕೆಯ ಆಸ್ತಿಯನ್ನು ಮಾರಾಟಮಾಡಿದನು. ನಾನೇ ಅದನ್ನು ಖರೀದಿಸಿದ್ದೆನು. ಅದರ ಮಾರಾಟದ ಬಾಂಡ್, ಪ್ರಮಾಣ ಪತ್ರ ಹಾಗೂ ಮಾರಾಟದ ಕಾಗದ ಪತ್ರವು ನನ್ನ ಹತ್ತಿರ ಇದೆ. ಆನಂತರ ಹವಾಲ್ದಾರ್ ತ್ರ್ಯಂಬಕ್ ಸಂಕಾಜಿಯು ಉಲ್ಲೇಖಿತ ಕೋಟೆಯ ನಾಡಗೌಡತ್ವದ ಮಹಾತ್ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಲಾರಂಭಿಸಿದನು. ಕಲಕೇರಾದ ದಿಕ್ಕಿನಲ್ಲಿ; ಹಿಂಗಹಳ್ಳಿ, ದತ್ತಿ, ಕೊಡಗೆರೆ ಮತ್ತು ಹಲ್ವಾಕಲ್-ನಾಲ್ಕೂ ಗ್ರಾಮಗಳ ಪಟೇಲನಾಗಿದ್ದ ಅವನು; ನಾಡಗೌಡತ್ವದ ಇನಾಮಿನ ಬದಲು; ಈ ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳ ಆದಾಯವನ್ನು ಅಗತ್ಯ ವಸ್ತುಗಳ ಹಕ್ಕುಗಳೊಂದಿಗೆ ತನ್ನ ಪ್ರಯೋಜನಕ್ಕಾಗಿ ಬಳಕೆ ಮಾಡಿಕೊಂಡನು. ಕೃಪೆ ಮಾಡಿ, ತ್ರ್ಯಂಬಕ್ ಸಂಕಾಜಿಯ ಸ್ವಾಧೀನದಲ್ಲಿರುವ ನಮ್ಮ ಪರಂಪರಾಗತ ಆಸ್ತಿಯಾದ ಉಲ್ಲೇಖಿತ ಕೋಟೆಯ ನಾಡಗೌಡತ್ವವನ್ನು, ನನಗೆ ಕೊಡಿರಿ.

ಅವನ ಮನವಿಯನ್ನು ಗಮನಿಸಿ, ಉಲ್ಲೇಖಿತ ಕೋಟೆಯ ನಾಡಗೌಡತ್ವವನ್ನು ತ್ರ್ಯಂಬಕ್ ಸಂಕಾಜಿಯಿಂದ ಹಿಂಪಡೆದುಕೊಂಡು; ಶ್ರೀನಿವಾಸ್ ವೆಂಕಟಾದ್ರಿಯ

ಸ್ವಾಧೀನದಲ್ಲಿ ಕೊಡಲಾಗಿದೆ. ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಕೋಟೆಯ ನಾಡಗೌಡತ್ವವನ್ನು; ಶ್ರೀನಿವಾಸ್ ವೆಂಕಟಾದ್ರಿಗೆ ನೀಡಿರಿ. ನಾಡಗೌಡರಿಗೆ ಇನಾಮು ರೂಪದಲ್ಲಿ ಸಿಗುವಂತಹ ಮೇಲ್ಕಾಣಿಸಿದ ನಾಲ್ಕು ಗ್ರಾಮಗಳ ಅಗತ್ಯವಾದ ಸಾಮಾನುಗಳ ಹಕ್ಕು ಪಟ್ಟಿ ಮತ್ತು ಪಚೋಡಿಯನ್ನು ಉಲ್ಲೇಖಿತ ವ್ಯಕ್ತಿಗೆ ರವಾನೆ ಮಾಡಿರಿ. ಆನಂತರ, ಅವನ ಮಕ್ಕಳು ಮತ್ತು ಆತನ ಮುಂದಿನ ತಲೆಮಾರಿನವರೆಗೆ, ಈ ಹಕ್ಕನ್ನು ಜಾರಿಗೊಳಿಸಿರಿ. ಅವರ ಪಟ್ಟಿ ತಯಾರಿಸಿ, ಮೂಲ ಆಜ್ಞೆಯನ್ನು ಹಿಂತಿರುಗಿಸಿರಿ.

ಹಿಜ್ರಿ ೧೦೭೬ರ ರಬಿಉಲ್ ಆಖರ್ ತಿಂಗಳಿನ ೨೫ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾರ ಅನುಮತಿಯ ಮೇರೆಗೆ.

ಹಿ. ೧೦೮೪ ಮೊಹರಂ ೧೬ ಶಕ ೧೫೫೫, ವೈಶಾಖ ವದ್ಯ ೩

ಇ. ೧೬೭೩ ಮಾರ್ಚ್ ೨೫

ಸಿಕಂದರ ಆದಿಲ್‌ಶಾಹ > ತಂಬಾಕು ಖಾತೆಯ ಮುಖ್ಯಸ್ಥ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ತಂಬಾಕು ತಯಾರಿಕೆಯ ಕಟ್ಟಡದ ಅಧಿಕಾರಿಗಳಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೭೩ರಲ್ಲಿ ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ; ಉಲ್ಲೇಖಿತ ಕಟ್ಟಡದ ಒಟ್ಟು ಮೊಬಲಗನ್ನು ಕಟ್ಟಡದ ಪರಿಚಾರಕನಾದ ಧೋಂಡು ವೆಂಕಟಾದ್ರಿಯ ವೇತನದ ಬದಲಾಗಿ–ರಾಜ್ಯಾಡಳಿತೆಗೆ ಸಂಬಂಧಿಸಿ ಜಮಾ ಆಗಿರುವ ಹಣದಿಂದ ಒಟ್ಟು : ೨೫ ಹೂನ್ ಕೊಡಲಾಗಿದೆ.

ಆಜ್ಞಾನುಸಾರವಾಗಿ, ಉಲ್ಲೇಖಿತ ಹಣವು ನಿಗದಿಸಲ್ಪಟ್ಟಿದೆಯೆಂದು ತಿಳಿದು ಕೊಡಬೇಕು. ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಆಜ್ಞೆಗೆ ಅನುಸಾರವಾಗಿ, ಪ್ರತಿ ವರ್ಷದಂತೆ ಆಜ್ಞೆಯ ಕುಂಟು ನೆಪ ಹೇಳಬಾರದು.

ಹಿಜ್ರಿ ೧೦೮೪ರ ಮೊಹರಮ್ ಉಲ್ ಹರಾಮ್ ತಿಂಗಳಿನ ೧೬ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾರ ಅನುಮತಿಯ ಮೇರೆಗೆ.

ಹಿ ೧೧೯೫, ಜಿಲ್ಹೇಜ್ ೨೪ ಶಕ ೧೬೦೬, ಕಾರ್ತಿಕ ವದ್ಯ ೧೦

ಇ ೧೬೮೪, ನವೆಂಬರ್ ೨೨

ಸಿಕಂದರ ಆದಿಲ್‌ಶಾಹ > ಶ್ರೀನಿವಾಸ ವೆಂಕಟಾದ್ರಿ ದೇಸಾಯಿ ಪರಗಣೆ ಗದಗ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ಶ್ರೀನಿವಾಸ ವೆಂಕಟಾದ್ರಿ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೧೮೫ರಲ್ಲಿ, ಬಾದಶಾಹನ ಮಹತ್ಕಾರ್ಯ ಸಂಭವಿಸುವ ದೆಸೆಯಿಂದ, ಆತನ (ಜಗತ್ತಿಗೆ ಆಜ್ಞೆ ನೀಡುವವನ) ಆಜ್ಞೆಯು ಜಾರಿ ಆಯಿತು. ಸೇವಕರು ಮತ್ತು ಕುದುರೆ ಸವಾರರ ಗುಂಪಿನ ಸರದಾರನು, ಓರ್ವ ನಂಬಿಗಸ್ತ ವ್ಯಕ್ತಿಯೊಂದಿಗೆ ತ್ವರಿತವಾಗಿ ದರ್ಬಾರಿಗೆ ಬಂದು, ಹಾಜರಾಗಿ; ನಾಯಕತ್ವ ಹಾಗೂ ವಿಶ್ವಾಸಾರ್ಹತೆಯನ್ನು ಪ್ರಕಟಿಸಬೇಕು. ಸರದಾರನ ಗೌರವವನ್ನು ಹೆಚ್ಚಿಸಲು, ಅಮೌಲ್ಯವಾದ ಗೌರವ ವಸ್ತ್ರವನ್ನು ಕಳುಹಿಸಲಾಗಿದೆ. ಈ ವಿಷಯದಲ್ಲಿ, ಪ್ರಸಿದ್ಧ ಉನ್ನತ ದರ್ಜೆಯ ಶಿರಸ್ತೇದಾರ ಹಾಗೂ ಸಜ್ಜನನಾದ ರುದ್ರೊ ಚಿಮಣಾಜಿ ಪಂಡಿತನೊಂದಿಗೆ ಒಬ್ಬ ನಂಬಿಗಸ್ತ ವ್ಯಕ್ತಿಯನ್ನು; ಕುದುರೆ ಸವಾರರು ಮತ್ತು ಸೇವಕರೊಂದಿಗೆ, ಅತಿ ಶೀಘ್ರವಾಗಿ ದರ್ಬಾರಿಗೆ ಕಳುಹಿಸಿ ಕೊಡಿರಿ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಆ ವ್ಯಕ್ತಿಯ ಪ್ರಗತಿ ಹಾಗೂ ಪ್ರತಿಷ್ಠೆಗಾಗಿ, ಇದು ಅತಿ ಅವಶ್ಯಕವಾಗಿದೆ.

ಹಿಜ್ರಿ ೧೧೯೫ರ ಜಿಲ್‌ಹಜ್ಜಾ ತಿಂಗಳಿನ ೨೪ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾರ ಅನುಮತಿಯ ಮೇರೆಗೆ.

ಹಿ. ೧೮೯೬ ಸಫರ್ ೫ | ಶಕ ೧೬೦೬ ಪೌಷ್ಯ ಶುದ್ಧ ೬

ಇ ೧೬೮೫, ಜನವರಿ ೧

ಸಿಕಂದರ ಆದಿಲ್‌ಶಾಹ > ಶ್ರೀನಿವಾಸ ವೆಂಕಟಾದ್ರಿ ದೇಸಾಯಿ ಪರಗಣೆ ಗದಗ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಗದಗ ತಾಲ್ಲೂಕಿನ ಶ್ರೀನಿವಾಸ ವೆಂಕಟಾದ್ರಿ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೧೮೫ರಲ್ಲಿ ಗೌರವ–ಘನತೆಯ ತಜ್ಞ, ಶೌರ್ಯ–ವೀರತ್ವದ ಸಂಕೇತವಾದ ಜಮ್‌ಶೀದ್ ಖಾನ್‌ನ ಹೇಳಿಕೆಯ ಮೇರೆಗೆ ಹಾಗೂ ಪ್ರಸಿದ್ಧ, ಉನ್ನತ ಸ್ಥಾನ ನೀಡಲ್ಪಟ್ಟ, ನಾಯಕತ್ವ ಮತ್ತು ಬಲಿದಾನದ ವಾಸ್ತವಿಕತೆಯನ್ನು ಸಂಪೂರ್ಣವಾಗಿ ತಿಳಿದಂತಹ ಶಿರಸ್ತೇದಾರನಾದ ರುದ್ರೊ ಚಿಮಣಾಜಿ ಪಂಡಿತನ ಮನವಿಯು ದರ್ಬಾರಿಗೆ ತಲುಪಿದ ಆಧಾರದ ಮೇಲೆ, ಸೇವಕರು ಹಾಗೂ ಸರದಾರರ ಗುಂಪಿನೊಂದಿಗೆ ಸ್ವಯಂ ಆತನ ಪುತ್ರನನ್ನು ಬಾದಶಾಹನ ಸೇವೆಯಲ್ಲಿ ಕಳುಹಿಸುವ ಬಯಕೆಯ ಸಮಾಚಾರವು ಬಾದಶಾಹನಿಗೆ ತಿಳಿದಾಗ; ಅಪಾರ ಪ್ರಶಂಸೆ ಮಾಡಿ, ಕೃಪಾದೃಷ್ಟಿಯಿಂದ ಅವನಿಗೆ ಮಂತ್ರಿ ಪದವಿಯನ್ನು ನೀಡಲಾಯಿತು. ಅವನು ಬಾದಶಾಹನ ಕೃಪೆಯನ್ನು ಹೊಂದಿದಂತಹ ದರ್ಬಾರಿನ ಹಳೆಯ ಸರದಾರನಾಗಿದ್ದಾನೆ. ಅವನಿಗೆ ಮಂತ್ರಿ ಸ್ಥಾನವನ್ನು ನೀಡಿ, ಪ್ರಸಿದ್ಧಗೊಳಿಸಿ; ಅವನ ಪುತ್ರನನ್ನು ತ್ವರಿತವಾಗಿ ಸೇವಕರು ಮತ್ತು ಸರದಾರರ ಗುಂಪಿನೊಂದಿಗೆ ಪೂರ್ಣಪ್ರಕಾಶಮಾನವಾದ ಬಾದಶಾಹನ ಸೇವೆಗೆ ಕಳುಹಿಸಬೇಕು. ಬಲಿದಾನ, ಆಜ್ಞಾಪಾಲನೆ ಹಾಗೂ ನಾಯಕತ್ವದ ಸಂಪ್ರದಾಯಗಳನ್ನು ನೆರವೇರಿಸಬೇಕು. ಇದರಲ್ಲಿಯೇ ಆತನ ಉನ್ನತಿ ಮತ್ತು ಪ್ರತಿಷ್ಠೆ ಇದೆ.

ಹಿಜ್ರಿ ೧೮೯೬ರ ಸಫರ್‌ಉಲ್ ಮುಜಫರ್ ತಿಂಗಳಿನ ೫ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾರ ಅನುಮತಿಯ ಮೇರೆಗೆ.

೪೧

ಹಿ ೧೦೯೬, ರವ್ವಲ್ ೩ ಶಕ ೧೬೦೬ ಮಾಘ ಶುದ್ಧ ೫

ಇ ೧೬೮೫, ಜನವರಿ ೨೯

ಸಿಕಂದರ ಆದಿಲ್‌ಶಾಹ > ಶ್ರೀನಿವಾಸ ವೆಂಕಟಾದ್ರಿ ದೇಸಾಯಿ ಪರಗಣೆ ಗದಗ

- ಮಹಾ ಉಪಕಾರಿ ಮತ್ತು ಪರಮ ದಯಾಮಯನಾದ ಅಲ್ಲಾಹನ ಹೆಸರಿನಲ್ಲಿ,
- ದೇಶವು ದೇವರಿಗಾಗಿ ಇದೆ.

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ತ್ಯಾಗ ಮತ್ತು ಆಜ್ಞಾಪಾಲನೆಯ ವಾಸ್ತವಿಕತೆ, ಗೌರವ/ಘನತೆಯ ತಜ್ಞ, ಶೌರ್ಯ/ವೀರತ್ವದ ಸಂಕೇತವಾದ ಜಮ್‌ಶೀದ್‌ಖಾನನು ನಿವೇದಿಸಿದ ದೆಸೆಯಿಂದ ಹಾಗೂ ಉನ್ನತ ದರ್ಜೆಯ ಪ್ರಸಿದ್ಧನಾದ ರುದ್ರೋ ಚಿಮಣಾಜಿಯು ಬರೆದ ಅರ್ಜಿಯು ಬಾದಶಾಹನ ಕಿವಿಗೆ ತಲುಪಿದಾಗ; ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ, ಅವನಿಗಾಗಿ ನಾವು ಮಂತ್ರಿಯು ಐದು ನೂರು ಕುದುರೆ ಸವಾರರನ್ನು ನೇಮಿಸಿದ್ದೇವೆಯೆಂದು; ಬಾದಶಾಹನ ಅಪಾರ ಕೃಪೆಯಿಂದ ಉನ್ನತ ಸ್ಥಾನ ಹಾಗೂ ಪ್ರತಿಷ್ಠೆಯನ್ನು ಸಂಪಾದಿಸಿದ ಮಂತ್ರಿಯಾದ ಶ್ರೀನಿವಾಸ ವೆಂಕಟಾದ್ರಿಯು ತಿಳಿಯುತ್ತಾನೆ. ನಾವು ಕೊಟ್ಟಿರುವ ಹೊಸ ಪ್ರದೇಶದ ಜಾಹಗೀರನ್ನು, ಅವನು ವಶಪಡಿಸಿಕೊಳ್ಳುವನು. ಈ ವ್ಯವಹಾರದಲ್ಲಿ, ಎಲ್ಲ ಕಾರಣಗಳನ್ನು ಪ್ರಸ್ತುತ ಪಡಿಸಿ, ಉಲ್ಲೇಖಿತ ಪಂಡಿತನೊಂದಿಗೆ ಅತಿ ಶೀಘ್ರವಾಗಿ ಅವನು (ಶ್ರೀನಿವಾಸನು) ತನ್ನ ಪುತ್ರನನ್ನು ಕುದುರೆ ಸವಾರರು ಮತ್ತು ಸೇವಕರ ಸಣ್ಣ ಗುಂಪಿನೊಂದಿಗೆ; ಪೂರ್ಣಪ್ರಕಾಶಮಾನನಾದ ಬಾದಶಾಹನ ಸನ್ನಿಧಿಗೆ ಕಳುಹಿಸಬೇಕು. ಈ ವಿಷಯದಲ್ಲಿ ಮೇಲ್ಕಾಣಿಸಿದ ಖಾನ್‌ನಿಗೆ ಆಜ್ಞೆ ನೀಡಲಾಗಿದೆ. ಆದುದರಿಂದ, ಬರವಣಿಗೆಯ ಪ್ರಕಾರ; ಅಜ್ಞಾಪಾಲನೆ ಹಾಗೂ ವಿಶ್ವಾಸಾರ್ಹತೆಯ ಲಕ್ಷಣಗಳು ವ್ಯಕ್ತವಾಗಬೇಕು. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಕಾರ್ಯಾಚರಣೆ ಮಾಡಬೇಕು.

ಹಿಜ್ರಿ ೧೦೯೬ರ ರಬಿಉಲ್ ಅವ್ವಲ್ ತಿಂಗಳಿನ ೩ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯುನ್ ಆಲಾರ ಅನುಮತಿಯ ಮೇರೆಗೆ.

ಶಕ ೧೬೧೨, ಚೈತ್ರ ಶುದ್ಧ ೬ ಇ ೧೬೯೦ ಮಾರ್ಚ್ ೦೬

ಅಲಮ್ ಗೀರ್ ಬಾದಶಾಹ >

- ಪವಿತ್ರ ಮತ್ತು ಉನ್ನತ ವೈಭವದ ಹೆಸರಿನಿಂದ,
- ದೇಶವು ದೇವರಿಗಾಗಿ ಇದೆ.

ಶಾಂತಿಯ ದಿನಗಳಲ್ಲಿ ಗದಗ ತಾಲ್ಲೂಕಿನ ದೇಶಮುಖ ಮತ್ತು ಬಾದಾಮಿ ತಾಲ್ಲೂಕಿನ ನಾಡಗೌಡನಾಗಿದ್ದ ಶ್ರೀನಿವಾಸನ ಅಣ್ಣನ ಮಗನಾದ ಶ್ರೀಪತಿಯು ದರ್ಬಾರಿನಲ್ಲಿ ಕರಾರುಪತ್ರ ಪ್ರಸ್ತುತಪಡಿಸಿದನು. ಒಂದು ವೇಳೆ ಮಹೋನ್ನತ ದರ್ಬಾರು, ಉಲ್ಲೇಖಿತ ಚಿಕ್ಕಪ್ಪನ ದೇಶಮುಖತ್ವ ಹಾಗೂ ನಾಡಗೌಡತ್ವದ ಸೇವೆಯನ್ನು ತನಗೆ ಕೊಟ್ಟರೆ; ಆತನ ಸ್ವಾಧೀನದಲ್ಲಿರುವ ಕಲಕೇರಾ ಕೋಟೆ ಮತ್ತು ಎರಡು ಕೋಟೆಗಳನ್ನು ಕಿತ್ತುಕೊಂಡು, ಬಾದಶಾಹನ ಸೇವಕನಿಗೆ ಕೊಡಬೇಕು. ಈ ವ್ಯವಹಾರದ ಎಲ್ಲ ವಿಧಿ–ವಿಧಾನಗಳಿಗೆ ಅನುಸಾರವಾಗಿ, ಒಂದು ಲಕ್ಷ ರೂಪಾಯಿ ಕಾಣಿಕೆ ಹಾಗೂ ಪ್ರತಿವರ್ಷ ಐದು ಸಾವಿರ ಹೂನ್ ಕೊಡಲಾಗುವದು. ಆದುದರಿಂದ (ಬಾದಶಾಹನ) ಉತ್ತರಾಧಿಕಾರತ್ವದ ಆಧಾರದ ಮೇಲೆ ಗದಗ ತಾಲ್ಲೂಕಿನ ದೇಶಮುಖತ್ವ ಮತ್ತು ಬಾದಾಮಿ ತಾಲ್ಲೂಕಿನ ನಾಡಗೌಡತ್ವವನ್ನು ಉಲ್ಲೇಖಿತ ಶ್ರೀಪತಿಗೆ ಕೊಡಲಾಗಿದೆ. ಅದರ ಅಗತ್ಯವಾದ ಸಾಮಾನುಗಳು ಹಾಗೂ ಸಂಪ್ರದಾಯಗಳನ್ನು ಆಚರಿಸಬೇಕಾದ ವಿಧಾನದಲ್ಲಿ ಆಚರಿಸಿ, ಆಜ್ಞಾಪಾಲನೆ ಹಾಗೂ ಸೇವೆಯ ಸೂಕ್ಷ್ಮತೆಯನ್ನು ಅನುಸರಿಸುವಾಗ, ಯಾವುದೇ ಲೋಪ–ದೋಷ ಮಾಡಬಾರದು. ಲಿಖಿತ ರೂಪದಲ್ಲಿರುವ ಕಾಣಿಕೆ ಇತ್ಯಾದಿ ವ್ಯವಹಾರದಲ್ಲಿ, ಕರಾರು ಪತ್ರದ ಮೇರೆಗೆ ಕಾರ್ಯಾಚರಣೆ ಮಾಡಬೇಕು.

ಸಿಂಹಾಸನಾರೋಹಣದ ೩೩ ವರ್ಷಗಳ ನಂತರ, ಜಮಾದಿ ಉಲ್ ಆಖಿರ್ ತಿಂಗಳಿನ ೪ನೇ ತಾರೀಖಿಗೆ ಬರೆಯಲಾಗಿದೆ.

ಮುಖಂಡತ್ವ ಮತ್ತು ಪ್ರಶಂಸೆಪಡೆದವ, ಸಜ್ಜನಿಕೆ/ಸೌಜನ್ಯತೆಯ ತಜ್ಞ, ಶ್ರೇಷ್ಠ ದರ್ಜೆಯ ಮಂತ್ರಿ, ಉನ್ನತ ವೈಭವ ಸಂಪನ್ನ, ನಾಯಕರ ಕೆನೆ, ಮಹೋನ್ನತ ನಿವಾಸ ಹೊಂದಿದವ, ದೇಶ ಹಾಗೂ ಸಂಪತ್ತಿನ ಉಗಮಸ್ಥಾನದ ಕಾರ್ಯನಿರ್ವಾಹಕ, ಸಂಪತ್ತು ಮತ್ತು ಸೌಭಾಗ್ಯಪಥದ ಮೇಲೆ ನಡೆದು ವಿಶಾಲ ಮಾರ್ಗ ಸೃಷ್ಟಿಸುವವ, ಶೌರ್ಯದ ಪ್ರತೀಕ, ರಾಜರ ಸರ್ವಸ್ವ, ಪ್ರಧಾನ ಮಂತ್ರಿಯಾದ ಅಸದ್‌ಖಾನ್‌ನ ನಿಯತಕಾಲಿಕೆಗೆ ಅನುಸಾರವಾಗಿ;

ಮುಧೋಳ ಘೋರ್ಪಡೆ

೪೩

ಹಿ.೭೫೩, ರಮಜಾನ ೨೫ ಶಕ.೧೨೭೪ ಕಾರ್ತಿಕ ವದ್ಯ ೧೨
ಇ.೧೩೫೨ ನವೆಂಬರ ೪

ಅಪಾರ ಶಕ್ತಿಶಾಲಿ ಮತ್ತು ಜಗತ್ತಿಗೆ ಆಜ್ಞೆನೀಡುವ ಸುಲ್ತಾನ್ ಅಲಾಉದ್ದೀನ್ ಹುಸೇನ್‌ರ ಆಜ್ಞೆಯಾಗಿದೆ :

.......ಶೂರ ಹಾಗೂ ಪರಮ ಪ್ರಾಮಾಣಿಕ ಮನೆತನದ ......ವಿಶಿಷ್ಟ ಸೈನ್ಯದ ನಾಯಕನಾದ ಅಜಯಸಿಂಗನ ಮೊಮ್ಮಗ ಮತ್ತು ಸುಜನಸಿಂಗನ ಪುತ್ರನ ಸಾಹಸ ಕಾರ್ಯಗಳಿಂದ ಸಂತೃಪ್ತನಾಗಿ.....ಆತನ ಜೀವನಾಧಾರ/ಪೋಷಣೆಗೆ ಅಗತ್ಯವೆಂದು ಭಾವಿಸಿ; ಮೀರಜ್‌ದ ಹತ್ತು ಗ್ರಾಮಗಳಿಗೆ ಸರಿಸಮಾನವಾದ ದೇವಗಡದ ಕಡೆಗಿನ ಎರಡು..... ಜಾಹಗೀರುಗಳನ್ನು ಕೊಡಲಾಗಿದೆ. ಆದುದರಿಂದ, ಆತನ ಇಚ್ಛೆಗೆ ಅನುಸಾರವಾಗಿ, ಅವನಿಗೆ ಜಾರಿ ಮಾಡಬೇಕು.

ದಿನಾಂಕ : ಹಿಜ್ರಿ ೭೫೩ರ ರಮಂಜಾನ್ ಉಲ್ ಮುಬಾರಕ್ ತಿಂಗಳಿನ ೨೫ನೇ ತಾರೀಖು

ಮಲಿಕ್ ನಾಯಬ್ ಮಸನದ ಆಲಿ

೪೪

ಹಿ. ೮೦೦ ರಬಿಲಾಖರ ೨೫ ಶಕ ೧೫೬೯ ಪೌಷ ವದ್ಯ ೧೨
ಇ. ೧೫೩೮ ಜನವರಿ ೧೫

ದರ್ಬಾರಿನ ಈ ಪರಮ ಧೈರ್ಯವಂತನು ಈ ವ್ಯವಹಾರದಲ್ಲಿ ನಿರತನಾಗಿದ್ದಾಗ, ಸಾಮ್ರಾಜ್ಯದ ಅವಿವೇಕಿ ವಾರಸುದಾರರು ಮತ್ತು ಮೂರ್ಖನಾಯಕರ ದೋಷಪೂರ್ಣ ಪ್ರಯತ್ನಗಳ ದೆಸೆಯಿಂದ, ಧೈರ್ಯಹೊಂದಿ; ಸಾಮ್ರಾಜ್ಯದ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಿ, ಪಿತೂರಿ ಮತ್ತು ಗಲಭೆಯನ್ನು ಸೃಷ್ಟಿಸುವ ಕೆಲವು ಗುಲಾಮರನ್ನು ನಿರ್ನಾಮಗೊಳಿಸುವ ಕಾರ್ಯದಲ್ಲಿ ಮಗ್ನನಾಗಿದ್ದನು. ರಾಜಕಾರಣದ ಕಸಬರಿಗೆಯ ಮೂಲಕ ಸಾಮ್ರಾಜ್ಯದ ಉದ್ಯಾನವನ್ನು ಗುಲಾಮರ ಅಸ್ತಿತ್ವದ ಕಸಕಡ್ಡಿಯಿಂದ ಮುಕ್ತಗೊಳಿಸಲು ಪ್ರಯತ್ನಿಸುತ್ತಿದ್ದನು. ಆದರೆ ಕಾಲದ ಪ್ರತಿಕೂಲ ಪರಿಸ್ಥಿತಿ ಮತ್ತು ಆಕಾಶದ ಹಟಮಾರಿತನವು ಈ ಪ್ರಯತ್ನವನ್ನು ವಿಫಲಗೊಳಿಸಿತು. ಈ ಕಾರ್ಯದಲ್ಲಿ ಸ್ವಲ್ಪ ವಿಳಂಬವಾಯಿತು. ದ್ವೇಷದ ಹನಿಗಳನ್ನು ತೊಟ್ಟಿಕ್ಕಿಸುವ ಸಾಗರವು ಹೃದಯದ ಪ್ರೇಮವನ್ನು ಮಲಿನಗೊಳಿಸಿತ್ತು. ಗುಪ್ತವಾದ ದಿವ್ಯ ಪ್ರೇರಣೆ ಹಾಗೂ ನಿಸ್ಸಂದೇಹವಾದ ಬೋಧನೆಯು ಹೃದಯವನ್ನು ಪವಿತ್ರಗೊಳಿಸಿ, ಈ ದರ್ಪಣದಲ್ಲಿ ಜಗತ್ತಿನ ಪ್ರಕಾಶವನ್ನು ಪ್ರತಿಬಿಂಬಿಸಿತು. ಕೆಲವು ಪ್ರಾಮಾಣಿಕ, ನಂಬಿಗಸ್ತ, ದೂರದೃಷ್ಟಿಯುಳ್ಳ ಮತ್ತು ಧರ್ಮನಿಷ್ಠುರರಾದ ಸೇವಕರು ಆಜ್ಞಾಪಾಲನೆಯ ಮಾರ್ಗದ ಮೇಲೆ ಹೆಜ್ಜೆ ಇಟ್ಟು, ಪ್ರಾಣವನ್ನು ಪಣಕ್ಕಿಟ್ಟರು ಹಾಗೂ ನಮ್ಮನ್ನು ಈ ಪರಿಸ್ಥಿತಿಯಿಂದ ಬಿಡುಗಡೆಗೊಳಿಸಿ; ಉಪಕಾರಗೇಡಿಗಳ ಕರ್ಮಕ್ಕೆ ಯೋಗ್ಯವಾದ ಶಿಕ್ಷೆ ನೀಡಿದರು. ಅಲ್ಲಾಹನ ಕೃಪೆ ಮತ್ತು ಬೋಧನೆಯಿಂದ; ನಾವು ಸಾಗರದ ಕೋಟೆಯ ಕಡೆಗೆ ತೆರಳಿದೆವು. ನಾವು ಯಶಸ್ಸಿನ ಸೂಕ್ತವಾದ ಮಾರ್ಗದ ಮೇಲೆ ಮುನ್ನಡೆಯುತ್ತ ಸಾಗಿದೆವು. ಸಾಗರದ ಠಾಣೇದಾರನಾದ ಸಿದ್ಧಜೀಗೆ ನಮ್ಮ ಸೌಭಾಗ್ಯದ ಗುಪ್ತವಾದ ಸವಾರಿಯ ಸಮಾಚಾರ ತಿಳಿದಾಗ; ಅವನು ನಮ್ಮನ್ನು ಸ್ವಾಗತಿಸಲು ಧಾವಿಸಿ ಬಂದು, ಕುದುರೆಯ ರಿಕಾಬು ಚುಂಬಿಸುವ ಸೌಭಾಗ್ಯವನ್ನು ಪಡೆದನು. ನಮ್ಮ ಅಗತ್ಯವಾದ ಒಳ್ಳೆಯ ದಿಟ್ಟವಾದ ಹೆಜ್ಜೆಗಳನ್ನು ಗೌರವಿಸಿ, ನಮ್ಮ ಸೇವೆ ಮಾಡಲು ಸಂಪೂರ್ಣವಾಗಿ ಸಜ್ಜುಗೊಂಡನು. ನಾವು ಸೈನ್ಯ ಮತ್ತು ಸಾಮ್ರಾಜ್ಯದ ಸಂಗ್ರಹಿಸಲ್ಪಟ್ಟಂತಹ ಸಾಮಾನುಗಳನ್ನು ಪೂರೈಸಲು ಏನೆಲ್ಲವನ್ನು ಹೇಳಿದೆವೋ; ಅವನು ಅದನ್ನು ಹೃದಯಪೂರ್ವಕವಾಗಿ ಪ್ರಯತ್ನಿಸಿ, ನಮಗೆ ಪೂರೈಸಿದನು. ವಿರೋಧಿಗಳು ಹಾಗೂ ದುಷ್ಟರು ತಿಳಿಗೇಡಿತನವನ್ನು ಹೆಚ್ಚಿಸಿ, ಯುದ್ಧವನ್ನಾರಂಭಿಸಿದಾಗ; ಈ ಪ್ರಾಮಾಣಿಕ ವ್ಯಕ್ತಿಯು ರಣರಂಗದಲ್ಲಿ ಸ್ವಯಂ ತನ್ನ ಪ್ರಿಯವಾದ ಪ್ರಾಣವನ್ನು ತ್ಯಜಿಸಿದನು. ಆತನ ದೆಸೆಯಿಂದ ಕೆಲವೇ ದಿನಗಳಲ್ಲಿ

ದೇವರ ಕರುಣೆಯಿಂದ ಇಚ್ಛೆ ಹೂಗಳು ಸಾಮ್ರಾಜ್ಯದ ನಾಯಕರ ಕೈ ಸೇರಿದವು. ನಾವು ಉನ್ನತ ಹಣೆಯ ಬರಹ ಮತ್ತು ಸೌಭಾಗ್ಯದ ನೆರಳಿನಲ್ಲಿ; ಸಿಂಹಾಸನ, ಕಿರೀಟ ಹಾಗೂ ಉತ್ತರಾಧಿಕಾರತ್ವದ ಸಾಮ್ರಾಜ್ಯವನ್ನು ವಶಪಡಿಸಿಕೊಂಡು, ಅದಕ್ಕೆ ಮೆರಗು ನೀಡಿದೆವು.

ಸಿದ್ಧಜೀಯ ಪುತ್ರನಾದ ಭೈರವ ಸಿಂಗನು, ಆ ಯುದ್ಧದಲ್ಲಿ ತನ್ನ ತಂದೆಯ ಜೊತೆಗೆ ಸಂಪೂರ್ಣ ಧೈರ್ಯ ಹಾಗೂ ಶೌರ್ಯದಿಂದ ವೈರಿಗಳೊಂದಿಗೆ ಹೋರಾಟ ಮಾಡಿದನು. ಬಾದಶಾಹನ ಕೃಪೆ ಮತ್ತು ಸೌಲತ್ತುಗಳ ಹಕ್ಕುದಾರನೆಂಬುದನ್ನು ದೃಢಪಡಿಸಿದನು. ಆದುದರಿಂದ, ಆತನನ್ನು ಗೌರವಿಸಲು ಹಾಗೂ ಹಕ್ಕು ನೀಡಲು, ಆತನ ತಂದೆಯ ಬಲಿದಾನದ ಪ್ರತಿಯಾಗಿ, ೬೪ ಗ್ರಾಮಗಳ ಜೊತೆಗೆ ಮುಧೋಳ ಗ್ರಾಮ ಮತ್ತು ರಾಯಬಾಗಿನ ಆಸುಪಾಸಿನ ಕಡೆಗಿನ ಭೂಭಾಗಗಳು ಹಾಗೂ ಜಾಹಗೀರನ್ನು ಉಲ್ಲೇಖಿತ ಭೈರವಸಿಂಗನಿಗೆ ಕೊಡಲಾಗಿದೆ. ನಮ್ಮ ಈ ಇನಾಮಿನ ಮೂಲಕ ಒಂದು ತಲೆಮಾರಿನ ನಂತರ ಇನ್ನೊಂದು ತಲೆಮಾರಿನವರು ಆಸ್ತಿಯನ್ನು ಸ್ವಾಧೀನಪಡಿಸಿಕೊಂಡು; ಬಳಕೆ ಮಾಡಿಕೊಳ್ಳುತ್ತ, ಸಾಮ್ರಾಜ್ಯದ ಸೇವೆಯನ್ನು ಮಾಡುತ್ತ, ವಿಶ್ವಾಸಾರ್ಹವಾದ ಕಾರ್ಯಗಳನ್ನು ಮಾಡುತ್ತಿರಬಹುದು.

ಹಿಜ್ರಿ ೮೦೦ರ ರಬಿಉಲ್ ಆಖರ್ ತಿಂಗಳಿನ ೨೫ನೇ ತಾರೀಖಿಗೆ ಬರೆಯಲಾಗಿದೆ.

ಹಿ. ೮೫೮ ಶಕ ೧೩೭೫
ಇ. ೧೪೫೪

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :

ರಾಣಾ ಭೈರಾಜಿಯ ಪುತ್ರನಾದ ರಾಣಾ ದೇವರಾಜನ ನಂತರ, ಅವನ ಜಾಹಗೀರು ಅವನ ಪುತ್ರನಾದ ಉಗ್ರಸೇನ ಮತ್ತು ಪ್ರತಾಪ್‌ಸಿಂಗನಿಗೆ ಕೊಡಲಾಗಿತ್ತು. ರಾಣಾ ಉಗ್ರಸೇನನು ಕೊಂಕಣದ ಯುದ್ಧದಲ್ಲಿ ಶೌರ್ಯದಿಂದ ಹೋರಾಟ ಮಾಡಿದರೂ ಸಹ; ಸೈನ್ಯದ ಸಹಾಯ ದೊರಕದೇ ವೈರಿಗಳಿಂದ ಕೊಲ್ಲಲ್ಪಟ್ಟನು. ಆದುದರಿಂದ, ದೇವರಾಜನಿಗೆ ಕೊಡಲಾದ ಮೀರಜ್ ಹಾಗೂ ರಾಯಬಾಗ್ ಕಡೆಗೆ ಇರುವಂತಹ ಮೊದಲಿನ ಗ್ರಾಮಗಳನ್ನೊಳಗೊಂಡ; ಆ ಭಾಗದ ಕೋಟೆಗಳು ಮತ್ತು ಗ್ರಾಮಗಳನ್ನು ಆತನ ಮನೆತನದ ಪೋಷಣೆಗಾಗಿ, ಉಲ್ಲೇಖಿತ ಉಗ್ರಸೇನನ ಮಕ್ಕಳಾದ ಕರಣ ಸಿಂಗ್ ಹಾಗೂ ಶುಭಕ್ರಿಶನ್ ಜೀ ಮತ್ತು ಅವರ ಚಿಕ್ಕಪ್ಪನಾದ ಪ್ರತಾಪ್‌ಸಿಂಗನಿಗೆ ನೀಡಿ, ಕಾಯಂಗೊಳಿಸಲಾಗಿದೆ.

ಹಿಜ್ರಿ ೮೫೮ರಲ್ಲಿ ಬರೆಯಲಾಗಿದೆ.

೪೬

ಹಿ. ೮೭೬ ಜಮಾದಿಲಾವಲ ೭ ಶಕ–೧೩೯೩ ಕಾರ್ತೀಕ ಶುದ್ಧ ೯
ಇ. ೧೪೭೧ ಅಕ್ಟೋಬರ್ ೨೨

ವಿಜಯ ಕಾಲದಲ್ಲಿ ಬಾದಶಾಹನ ಕೃಪೆಯಿಂದ ಅಮರವಾದ ಸಾಮ್ರಾಜ್ಯ–ಸೌಭಾಗ್ಯದ ಉದ್ಯಾನದೊಳಗೆ; ವಿಜಯ ಮತ್ತು ಯಶಸ್ಸಿನ ಗಾಳಿಯು ಬೀಸಲಾರಂಭಿಸಿತು. ಶ್ರದ್ಧೆಯ ತೋಟದಲ್ಲಿ ವಿಜಯ ಹಾಗೂ ಸಂತೋಷದ ವಸಂತಕಾಲದ ಆಸೆಯ ಹೂಗಳು ಅರಳಿದವು. ಸುಖ–ಸಂತೋಷದ ಮತ್ತು ಹರ್ಷ–ಪ್ರಮೋದದ ಕಾಲದಲ್ಲಿ; ಲೇಖನಿ ಹಾಗೂ ಬೇಸಿಗೆ ಸಮಯದ ಒಡೆಯನಾದ ಸೈಯ್ಯದ್ ಆಝುಮ್ ಮಗದೂಮ್ ಜಹಾನಿಯಾನ್, ದರ್ಬಾರಿನ ಕಾರ್ಯದರ್ಶಿ, ನವಾಬರ ನಾಯಕ, ಮಹಾನ್ ವರ್ತಕನ ನಾಯಬ್‌ನಾದ "ಖಾಜಾ ಜಹಾನ್" ಎಂಬ ಬಿರುದಿನಿಂದ ಕರೆಯಲ್ಪಡುವ ಮಹಮ್ಮೂದ್ ಗಾವಾನ್‌ನ ಮನವಿಯನ್ನು; ಬಾದಶಾಹನು ಸ್ಪಷ್ಟಪಡಿಸಿದನು. ಶೌರ್ಯ–ಧೈರ್ಯದ ಅರಣ್ಯದ ಸಿಂಹ, ಚುರುಕುತನ ಮತ್ತು ಸಾಹಸ ಸಾಗರದ ಮೊಸಳೆ, ಸಮರ ವೀರರ ನಾಯಕ, ತಬಗ್ ಜನಾನ್‌ದ ಮಾರ್ಗದರ್ಶಕ, ಕೋಟೆಗಳ ವಿಜಯ, ಸಿಂಹಗಳನ್ನು ಸೋಲಿಸುವ ವೀರ, ಪಂಕ್ತಿ ಭೇದಕನಾದ ಹೋರಾಟಗಾರ, ಸಾಮ್ರಾಜ್ಯದ ಆಜ್ಞಾಪಾಲಕ, ಪ್ರಾಣವನ್ನು ಪಣಕ್ಕಿಡುವವ, ಸತ್ಯ ಮಾರ್ಗದ ಮೇಲೆ ನಡೆಯುವವ, ಬಾದಶಾಹನ ಕೃಪೆ ಹಾಗೂ ಇನಾಮುಗಳ ಹಕ್ಕುದಾರ, ಅಗ್ರಸಿಂಗನ ಪುತ್ರನಾದ ರಾಣಾ ಕರಣ ಸಿಂಗನ ಮಗ ರಾಣಾ ಭೀಮಸಿಂಗನನ್ನು ಭಾಗ್ಯಶಾಲಿಗೊಳಿಸಬೇಕು. ಕೊಂಕಣದ ಕೋಟೆಯನ್ನು ಗೆಲ್ಲಲು ವಿಸ್ಮಯಕಾರಕ ಶೌರ್ಯ, ಧೈರ್ಯ ಮತ್ತು ಬಾಹುಬಲವನ್ನು; ಅವನು ಪ್ರದರ್ಶಿಸಿದ್ದಾನೆ. ಕೆಲವು ಹಲ್ಲಿ ಜಾತಿಯ ದೊಡ್ಡ ಪ್ರಾಣಿಗಳಿಗೆ (ಘೋಡಘೋಡ್), ಅರಬರು 'ಜಬ್' ಎಂದು ಹಾಗೂ ದಕ್ಷಿಣ ಭಾರತೀಯರು 'ಘೋಡ್' ಎಂದು ಕರೆಯುತ್ತಾರೆ. ಘೋಡಘೋಡಗಳನ್ನು ಹಿಡಿದು ಅವುಗಳ ಬೆನ್ನಿಗೆ ಹಗ್ಗಕಟ್ಟಿ, ರಾತ್ರಿ ಸಮಯದಲ್ಲಿ ಅವನು ಕೋಟೆಯ ಮೇಲೆ ಏರಿ, ಗಾಢ ನಿದ್ರೆಯಲ್ಲಿ ಮುಳುಗಿದ ಕಾವಲುಗಾರರನ್ನು ಕೊಂದು; ಕೋಟೆಯ ದ್ವಾರವನ್ನು ತೆರೆದನು. ಪ್ರತಿಬಂಧಿಸಲು ಯತ್ನಿಸಿದವರು. ನಿರ್ದಯವಾಗಿ ಕೊಲ್ಲಲ್ಪಟ್ಟರು. ಕೋಟೆಯ ಹೊರಗೆ ನಿರೀಕ್ಷಣೆಯಲ್ಲಿ ನಿಂತಿದ್ದ ಸೈನ್ಯವು ಕೋಟೆಯನ್ನು ಪ್ರವೇಶಿಸಿ; ಬಾಣ, ಬಂದೂಕು, ಕಠಾರಿ ಮತ್ತು ಖಡ್ಗಗಳಿಂದ ವೈರಿಗಳನ್ನು ನಾಶಗೊಳಿಸಿತು. ಶಾಶ್ವತವಾದ ಸಾಮ್ರಾಜ್ಯದ ನಾಯಕರು ಕೋಟೆಯ ಮೇಲೆ ವಿಜಯ ಸಾಧಿಸಿದರು. ಯುದ್ಧದಲ್ಲಿ ಕರಣಸಿಂಗನು ಕೊಲ್ಲಲ್ಪಟ್ಟನು. ಆತನ ಪ್ರಾಣದ ಬಲಿದಾನ ಹಾಗೂ ಭೀಮಸಿಂಗನ ಪ್ರಾಮಾಣಿಕತೆ ಮತ್ತು ಶೌರ್ಯವನ್ನು ಪ್ರಶಂಸಿಸಿ, ಬಾದಶಾಹನು ಈ ಸೇವೆಯ ಪ್ರತಿಯಾಗಿ, ಆತನ

ಮನೆತನದ ಪಾಲನೆ/ಪೋಷಣೆಗಾಗಿ; ಮೊದಲಿನಿಂದಲೂ ಕೊಡಲಾಗಿದ್ದ ಮುಧೋಳ್ ಜಾಹಗೀರ್ ಹಾಗೂ ಅದರ ೬೪ ಗ್ರಾಮಗಳನ್ನು ಕಾಯಂಗೊಳಿಸಲಾಯಿತು. ಇದರ ಹೊರತಾಗಿ ರಾಯಬಾಗ ಹಾಗೂ ಬೇನ್ ತಾಲ್ಲೂಕಿನ ನಡುವಿನ ಕೋಟೆಗಳನ್ನು ಕಾಣಿಕೆಯ ರೂಪದಲ್ಲಿ ಕೊಡಲಾಯಿತು. ರಾಣಾನ ಬದಲಿಗೆ, 'ರಾಜಾ ಘೋರ್ಪಡೆ ಬಹದ್ದೂರ್' ಎಂಬ, ಬಿರುದನ್ನು ಕೊಡಲಾಯಿತು. ಬಾದಶಾಹನ ಸವಾರಿಯನ್ನು ನೆನಪಿನ ಕಾಣಿಕೆಯ ರೂಪದಲ್ಲಿ ನೀಡಲಾಯಿತು. ಆದುದರಿಂದ, ಬಾದಶಾಹನ ಕೃಪೆಗಾಗಿ ಕೃತಜ್ಞತೆಯನ್ನು ಸಲ್ಲಿಸುತ್ತ; ಆತನ ಪುತ್ರರು ಮತ್ತು ಮೊಮ್ಮಕ್ಕಳು, ವಿಧೇಯತೆ ಹಾಗೂ ಸೇವೆಯಲ್ಲಿ ನಿರತರಾಗಿರಬಹುದು.

ಹಿಜ್ರಿ ೮೭೬ರ ಜಮಾದಿ ಉಲ್ ಅವ್ವಲ್‌ದ ೭ನೇ ತಾರೀಖಿಗೆ ಬರೆಯಲಾಗಿದೆ.

೪೭

ಹಿ. ೯೦೧ ಸಫರ ೧೩ ಶಕ ೧೪೧೭ ಕಾರ್ತೀಕ ಶು. ೫೧

ಇ. ೧೪೯೫ ನವೆಂಬರ ೩

'ಕಾಲದ ಕೆನೆ' ಎನಿಸಿದ ರಾಜಾ ಖಿಲೋಜಿ ಘೋರ್ಪಡೆಯು ಶಾಂತಿಯಿಂದ ಜೀವಿಸುತ್ತಿದ್ದನು. ಇಂತಹ ಸಂದರ್ಭದಲ್ಲಿ ಕೆಲವು ವಿಶ್ವಾಸಘಾತುಕ ವ್ಯಕ್ತಿಗಳು ರಾಜ್ಯದಲ್ಲಿ ಗಲಭೆಯನ್ನು ಸೃಷ್ಟಿಸಿ, ಯುದ್ಧ ಮಾಡಲು ಮತ್ತು ಸಾಮ್ರಾಜ್ಯಕ್ಕೆ ಹಾನಿಯನ್ನುಂಟು ಮಾಡಲು ಬಯಸಿದ್ದರು. ಇಂತಹ ಪರಿಸ್ಥಿತಿಯಲ್ಲಿ; ಈ ವೀರರು ಸ್ವಾಮಿ ನಿಷ್ಠೆಯ ಪರೀಕ್ಷೆಯಲ್ಲಿ ಯಶಸ್ಸು ಸಂಪಾದಿಸಿದನು. ಈ ಪತ್ರ ತಲುಪುತ್ತಲೇ ಸೈನ್ಯದೊಂದಿಗೆ ರಾಜಧಾನಿಗೆ ತಲುಪಿ, ಬಾದಶಾಹನ ಕೃಪೆಗಾಗಿ ಪ್ರತಿಕ್ಷೆ ಮಾಡಲಿ ಹಾಗೂ ಹೆಚ್ಚಿಗೆ ಏನೂ ಬರೆಯಲಾಗದು.

ಹಿಜ್ರಿ ೯೦೧ರ ಸಫರ್ ತಿಂಗಳಿನ ೧೩ನೇ ತಾರೀಖಿಗೆ ಬರೆಯಲಾಗಿದೆ.

೪೮

ಹಿ. ೯೦೪ ಶಕ. ೧೪೨೦

ಇ. ೧೪೯೮

ಅಗತ್ಯವಾದ ಸಮಯದಲ್ಲಿ, ಸಾಮ್ರಾಜ್ಯದ ಕಲ್ಯಾಣ ಬಯಸುವವರು, ದರ್ಬಾರಿನಲ್ಲಿ ಹಾಜರಾಗುವ ಅವಶ್ಯಕತೆ ಇದೆ ಎಂಬುದನ್ನು ಕೃಪೆಯ ಆಕಾಂಕ್ಷಿಯಾದ ರಾಜಾ ಖಿಲೋಜಿ ಘೋರ್ಪಡೆಯು ತಿಳಿಯುತ್ತಾನೆ. ಆದುದರಿಂದ ಈ ಆಜ್ಞೆಯು ಜಾರಿಗೊಳ್ಳುತ್ತಲೇ; ಶೀಘ್ರವಾಗಿ ದರ್ಬಾರಿನಲ್ಲಿ ಹಾಜರಾಗಿ, ಸೇವೆಯನ್ನು ಕೈಕೊಳ್ಳಬೇಕು. ನಿಯೋಜಿತ ಸೈನ್ಯವನ್ನು ಜೊತೆಗೆ ತೆಗೆದುಕೊಂಡು ಬರಬೇಕು. ದರ್ಬಾರಿನಲ್ಲಿ ಆತನ ಅವಶ್ಯಕತೆ ಇದೆ. ಶಾಶ್ವತವಾದ ಸಾಮ್ರಾಜ್ಯ ಮತ್ತು ಬಹಮನಿ ಸಾಮ್ರಾಜ್ಯದ ಅಸ್ತಿತ್ವದೊಂದಿಗೆ; ರಾಜಾ ಖಿಲೋಜಿ ಘೋರ್ಪಡೆ ಕುಟುಂಬದ ವಿಶ್ವಾಸ-ನಿಷ್ಠೆಯ ಸಾಕ್ಷಿಯು ಸೇರಿದೆ. ಆದುದರಿಂದ, ಹೆಚ್ಚಿಗೆ ಎಚ್ಚರಿಕೆ ಕೊಡುವ ಅಗತ್ಯವಿಲ್ಲ.

ಹಿ. ೮೯೬ ರಜಬ ೨೨ ಶಕ ೧೪೧೩ ಜ್ಯೇಷ್ಠ ವದ್ಯ ೯
ಇ.೧೪೯೧ ಮೇ ೩೧

ರಾಜಾ ಕರಣಸಿಂಗನ ಪುತ್ರನಾದ ಭೀಮಸಿಂಗನ ಮಗ ರಾಜಾ ಖಿಲೋಜಿ ಬಹಾದ್ದೂರ್ ಘೋರ್ಪಡೆಯ ಪೂರ್ವಜರು; ಹಿತ ಚಿಂತನೆ ಹಾಗೂ ಪರಿಶ್ರಮದಿಂದ ಬಹಮನಿ ಸಾಮ್ರಾಜ್ಯದ ಸೇವೆ ಮಾಡಿ, ಮುಧೋಳ್ ಗ್ರಾಮ, ಬೇನ್ ತಾಲ್ಲೂಕಿನ ೮೪ ಗ್ರಾಮಗಳು ಮತ್ತು ಸಮಾಧಿ ಸ್ಥಳವನ್ನು ಪಡೆದು; ಹುದ್ದೆ ಹಾಗೂ ಬಿರುದು ಸಂಪಾದಿಸಿದ್ದಾರೆಂಬುದನ್ನು ಬಾದಶಾಹನು ಚೆನ್ನಾಗಿ ತಿಳಿಯುತ್ತಾನೆ. ಈ ಮಾತನ್ನು ಗಮನದಲ್ಲಿಟ್ಟುಕೊಂಡು, ಎಲ್ಲ ಪುರಾತನ ಜಾಹಗೀರು, ಹುದ್ದೆ ಹಾಗೂ ಬಿರುದನ್ನು ರಾಜಾ ಖಿಲೋಜಿ ಘೋರ್ಪಡೆಗೆ ನೀಡಿ ಗೌರವಿಸಲಾಗಿದೆ. ಆತನ ತಂದೆ ಮತ್ತು ಪೂರ್ವಜರ ಹಾಗೆ ಸ್ವಾಮಿನಿಷ್ಠೆ ಹಾಗೂ ಬಲಿದಾನದ ಸಾಕ್ಷಿ ನೀಡಿ; ಹುದ್ದೆ, ಬಿರುದು, ಜಾಹಗೀರು ಮತ್ತು ಕೋಟೆಯ ಮೇಲೆ ನಿಯಂತ್ರಣಪಟ್ಟು; ಪ್ರಗತಿ ಸಾಧಿಸುತ್ತ ಸಾಗಲಿ.

ಹಿಜ್ರಿ ೮೯೬ರ ರಜ್ಜಬ್ ಉಲ್ ಮುರಜ್ಜಬ್ ತಿಂಗಳಿನ ೨೨ನೇ ತಾರೀಖಿಗೆ ಬರೆಯಲಾಗಿದೆ.

೫೦

ಹಿ. ೯೨೮ ಶಕ. ೧೪೪೩
ಇ. ೧೫೨೧

ವೀರರ ನಾಯಕ, ರಣರಂಗದಲ್ಲಿ ಪ್ರಾಣಬಲಿದಾನ ಮಾಡುವವರ ಮಾರ್ಗದರ್ಶಕ, ಖಡ್ಗ ಪ್ರಯೋಗದ ಪರಿಣಿತ, ಪಂಕ್ತಿ ಭೇದಕ ಯುದ್ಧ ಭೂಮಿಯಲ್ಲಿ ವೈರಿಗಳನ್ನು ನೆಲಕ್ಕುರುಳಿಸುವವ, ವೀರರ ಖಡ್ಗದ ಅಮೌಲ್ಯ ಹರಳು, ಧೈರ್ಯವೆಂಬ ಸಾಗರದ ಹಿರಿಯ ಮತ್ತು ಆಗಸದ ಸಿಡಿಲು, ವೈರಿಗಳನ್ನು ದಹಿಸುವವ, ಹಗ್ಗದ ಏಣಿ ಎಸೆಯುವ ತಜ್ಞ, ವಿಜಯ ಹಾಗೂ ಯಶಸ್ಸಿನ ಕಟ್ಟಡದ ಕಮಾನು, ತೀಕ್ಷ್ಣವಾದ ಹಸ್ತದ ಹೆಗ್ಗಿಡಗ, ಉನ್ನತ ಧೈರ್ಯದ ಆಕಾಶ, ಕ್ರೋಧ-ಶೌರ್ಯದ ರಣರಂಗದ ಅದ್ವಿತೀಯ, ಸೈನ್ಯದ ಪೀಠಿಕೆ, ಪರಿಪೂರ್ಣವೀರ, ವಿಶ್ವಾಸಾರ್ಹ, ಕಲ್ಯಾಣದ ಆಕಾಂಕ್ಷಿ, ನಿಷ್ಠಾವಂತರ ನಾಯಕ, ಆಕಾಶದಂತಹ ದರ್ಬಾರಿನ ನಿಕಟವರ್ತಿ, ಸ್ವಾಮಿ ನಿಷ್ಠ, ಪ್ರಾಣಬಲಿದಾನ ಮಾಡುವ ರಾಜಾ ಮಹಲೋಜಿ ಬಹದ್ದೂರ್ ಘೋರ್ಪಡೆಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಕಮಾಲ್‌ಖಾನ ಮತ್ತು ಅಂಜುಬುರುಕ ಅಮೀರ್‌ಖಾಸಿಮ್ ಬರೀದ್ ಬಾಗವಾಯಿಯ ಕೊಲೆಯ ನಂತರ; ಕೆಲವು ಬಂಡುಕೋರರು ಸಮತೋಲನ ಮೀರಿ, ನಿಜಾಮ್‌ಶಾಹ ಹಾಗೂ ಕುತುಬ್‌ಶಾಹನ ಸಹಾಯ ಪಡೆದು, ಅಪಾಯಕಾರಿ ಉದ್ದೇಶದಿಂದ ನಮ್ಮ ಸಾಮ್ರಾಜ್ಯದೆಡೆಗೆ ಸೈನ್ಯವನ್ನು ಮುನ್ನಡೆಸಿದರು. ವಿಜಯಪುರದ ಸಮೀಪದ ಅಲಾಹ್‌ಪುರದಲ್ಲಿ ವೈರಿಗಳೊಂದಿಗೆ ಘನ-ಘೋರವಾದ ಯುದ್ಧ ನಡೆಯಿತು. ಪ್ರಳಯ ಕಾಲದಂತಹ ದಂಗೆ ಆಯಿತು. ಈ ಯುದ್ಧದಲ್ಲಿ ಸ್ವಾಮಿನಿಷ್ಠನಾದ ತಂದೆ ಖಿಲೋಜಿಯು ಕೊಲ್ಲಲ್ಪಟ್ಟನು ಮತ್ತು ಅನೇಕರು ಹತರಾದರು. ಧೈರ್ಯ-ಶೌರ್ಯದ ಹೆಸರನ್ನು ಜಗತ್ತಿನ ಕಾಗದದಿಂದ ತೆಗೆದು ಹಾಕಲಾಯಿತು. ಆನಂತರ ಕೃಷ್ಣಾ ನದಿಯ ದಂಡೆಯ ಮೇಲೆ ಬೀಜಾನಗರದ ಸರದಾರನಾದ ತಮ್‌ರಾಜನೊಂದಿಗೆ ಯುದ್ಧ ನಡೆದು; ವೈರಿಗಳ ಸಂಖ್ಯೆಯ ಹೆಚ್ಚಳದ ದೆಸೆಯಿಂದ, ನದಿಯನ್ನು ದಾಟುವ ಮಾರ್ಗವು ಮುಚ್ಚಲ್ಪಟ್ಟಿದ್ದರಿಂದ ಬಾದಶಾಹನು ಚಿಂತಾಗ್ರಸ್ತನಾದನು. ಇಂತಹ ಸಂದರ್ಭದಲ್ಲಿ ಆ ಸ್ವಾಮಿನಿಷ್ಠನು ತನ್ನ ಪ್ರಾಣವನ್ನು ಪಣಕ್ಕಿಟ್ಟು ಅನೇಕ ಪ್ರಯತ್ನಗಳನ್ನು ಮಾಡಿ; ನಮ್ಮನ್ನು ಇಂತಹ ವಿನಾಶಕಾರಿ ನೀರಿನ ಸುಳಿಯಿಂದ ಸಂರಕ್ಷಣೆ ಮಾಡಿ, ಶಾಂತಿಪೂರ್ವಕವಾಗಿ ನದಿ ತೀರವನ್ನು ತಲುಪಿಸಿದನು. ಜಗತ್ತಿನಾದ್ಯಂತ ಪ್ರಶಂಸೆಯ ಧ್ವನಿಯು ಕೇಳಿಬಂದಿತು. ದೇವರು ಇಂತಹ ಅತಿ ಮಹತ್ವದ ಕಾರ್ಯವನ್ನು ನೆರವೇರಿಸಿ,

ನಮ್ಮ ಮನೆತನದ ಸತ್ಯವನ್ನು ಸಿದ್ಧಪಡಿಸಿದನು. ಆದುದರಿಂದ ಅವನು ಅಧಿಕ ಹಕ್ಕುದಾರನಾಗಿದ್ದಾನೆ. ಆ ಸ್ವಾಮಿನಿಷ್ಠನು ತನ್ನ ಸಿಪಾಯಿಗಳು ಹಾಗೂ ಸಹಾಯಕರ ಕೂಟದಲ್ಲಿ ವಂದನೆ ಸಲ್ಲಿಸಿ, ಭೂಮಿಯನ್ನು ಚುಂಬಿಸಿ ಶ್ರದ್ಧೆಯ ಚಿನ್ಹೆಯನ್ನು ಸ್ಥಿರಗೊಳಿಸಿದ್ದಾನೆಂಬುದು ಗೊತ್ತಾಗಿದೆ. ಪ್ರಾಣವನ್ನು ಪಣಕ್ಕಿಡುವ ಮತ್ತು ಪ್ರಾಣ ಬಲಿದಾನ ನೀಡುವಂತಹ ಕಷ್ಟಗಳಿಂದ ನಾವು ಅವನನ್ನು ಬಿಡುಗಡೆಗೊಳಿಸಿದ್ದೇವೆ. ಇಂತಹ ಸೇವೆಯ ಅಗತ್ಯತೆಯು ಔಪಚಾರಿಕ ಹಾಗೂ ಸಾಮಾನ್ಯವಾಗಿದೆ.

ದರ್ಬಾರಿನ ಸರದಾರರು ಇದರ ಇಂಗಿತಾರ್ಥವನ್ನು ತಿಳಿಯುತ್ತಾರೆ. ಉಲ್ಲೇಖಿತ ವ್ಯಕ್ತಿಯೊಂದಿಗೆ, ಇದರ ಬಗೆಗೆ ವಿಚಾರಣೆ ಮಾಡಬಾರದು. ಏಕೆಂದರೆ: ಅವನು ಸ್ವ-ಸಂತೋಷ ಮತ್ತು ಇಚ್ಛೆಯಿಂದ ಸ್ವಾಮಿನಿಷ್ಠೆಯ ಯತ್ನ ಮಾಡಿದ್ದಾನೆ. ನಾವು ಅವನಿಗೆ ಎರಡು ಯುದ್ಧದ ಕಂದಕಗಳನ್ನು ದಯಪಾಲಿಸಿದ್ದೇವೆ.

ಹಿಜ್ರಿ ೯೨೮ರಲ್ಲಿ ಬರೆಯಲಾಗಿದೆ.

೫೧

ಹಿ. ೯೭೨ | ಶಕ. ೧೪೮೬
ಇ. ೧೫೬೪

ಅಗ್ರ ಸಿಂಗನ ಪುತ್ರನಾದ ಕರಣಸಿಂಗನ ಮಗ ಚೋಳರಾಜನಿಗೆ ಶುಭದಾಯಕ ಆಜ್ಞೆಯನ್ನು ಜಾರಿಗೊಳಿಸಿ ಈ ಸಲಹೆಯನ್ನು ನೀಡಲಾಗುತ್ತದೆ :-

ನೀನು ಮತ್ತು ನಿನ್ನ ತಂದೆಯು ಮಹಾಯುದ್ಧದಲ್ಲಿ ಎಂತಹ ಶೌರ್ಯ ಹಾಗೂ ಚುರುಕುತನದಿಂದ ಕಾರ್ಯ ನಿರ್ವಹಿಸಿ, ವೈರಿಗಳನ್ನು ಓಡಿಸುವಂತಹ ಮಿತಿ ಮೀರಿದ ಪ್ರಯತ್ನ ಮಾಡಿದ್ದೀರಿ ಹಾಗೂ ಇಂತಹ ಹೃದಯವಿದ್ರಾವಕವಾದ ಘಟನೆಯಲ್ಲಿ, ಯಾವ ಪ್ರಕಾರವಾಗಿ ನಿನ್ನ ತಂದೆ ಕರಣಸಿಂಗನು ಕೊಲ್ಲಲ್ಪಟ್ಟು ತನ್ನ ಪ್ರಾಣವನ್ನು ದೇವರಿಗೆ ಅರ್ಪಿಸಿದನೆಂಬುದನ್ನು. ಎಲ್ಲರೂ ಗೌರವದ ದೃಷ್ಟಿಯಿಂದ ಕಂಡಿದ್ದಾರೆ. ಆತನು ತನ್ನ ಹೆಸರನ್ನು ಜಗತ್ತಿನ ವೀರರು ಮತ್ತು ಸ್ವಾಮಿನಿಷ್ಠರ ಕೂಟದಲ್ಲಿ ಸೇರಿಸಿದನು. ಅವನ ಈ ಸೇವೆ ಹಾಗೂ ಪರಿಶ್ರಮವನ್ನು ಪ್ರಶಂಸಿಸಿ, ನಿಮ್ಮ ಮನೆತನದ ಕ್ಷೇಮ ಮತ್ತು ಗೌರವಕ್ಕಾಗಿ; ರಾಯಬಾಗ ಹಾಗೂ ಹುಕ್ಕೇರಿಯ ಕಡೆಗೆ ೮೪ ಗ್ರಾಮಗಳ ಜೊತೆಗೆ ನಿಮಗೆ ಮೊದಲಿನಿಂದಲೂ ಕೊಡಲಾಗಿದ್ದ ಮುಧೋಳದ ಜಾಹಗೀರು ಮತ್ತು ಬೇನ್ ತಾಲ್ಲೂಕಿನ ಕೋಟೆಗಳು ಹಾಗೂ ನಾಲ್ಕು ಗ್ರಾಮಗಳನ್ನು ತೊರಗಲ್ಲ್ ತಾಲ್ಲೂಕಿನೊಂದಿಗೆ ನಿಮಗೆ ಅದೇ ಪ್ರಕಾರವಾಗಿ ಜಾರಿಗೊಳಿಸಿ; 'ಹಪ್ತ ಹಜಾರಿ' (ಏಳು ಸಾವಿರ ಕುದುರೆ ಸವಾರರ ಸರದಾರ) ಹುದ್ದೆಗೆ ನೇಮಿಸಲಾಗಿದೆ. ಮುದ್ಗಲ್ ತಾಲ್ಲೂಕಿನಲ್ಲಿ....... ಸ್ಥಾಪಿಸಲಾದ ಸೈನ್ಯದ ವೆಚ್ಚಕ್ಕಾಗಿ, ಕಲ್ಲೂರಿನ ಆಸುಪಾಸಿನ ಗ್ರಾಮಗಳನ್ನು ದಯಪಾಲಿಸಲಾಗಿದೆ. ಆದುದರಿಂದ, ಈ ಇನಾಮು, ಹುದ್ದೆ, ಜಾಹಗೀರು, ಗ್ರಾಮಗಳು ಮತ್ತು ಕೋಟೆಗಳ ಮೇಲೆ ಮೊದಲಿನಂತೆ ಯಾವಾಗಲೂ ನಿಯಂತ್ರಣವಿಟ್ಟು; ಈ ಸಾಮ್ರಾಜ್ಯಕ್ಕಾಗಿ ಸೇವೆ ಮಾಡಲು ಹಾಗೂ ಪ್ರಾಣದ ಬಲಿದಾನ ನೀಡುವ ಪ್ರಯತ್ನದಲ್ಲಿ ಸಹಭಾಗಿಯಾಗುತ್ತಿರಬೇಕು. ನಿಮ್ಮ ಕಲ್ಯಾಣವನ್ನು ತಿಳಿಯಬೇಕು.

ಹಿಜ್ರಿ ೯೭೨ರಲ್ಲಿ ಬರೆಯಲಾಗಿದೆ.

೫೨

ಹಿ. ೧೦೦೭ ರಬಿಲಾವಲ್ ೧೧ ಶಕ ೧೫೨೦ ಆಶ್ವೀನ್ ಶು. ೧೩

ಇ. ೧೫೯೮ ಅಕ್ಟೋಬರ್ ೨

ಆ ಕಾಲದಲ್ಲಿ ಸಾಮ್ರಾಟನ ದರ್ಬಾರಿನ ಸರದಾರರ ಮನವಿಯಿಂದ ಗೊತ್ತಾಗಿರುವ ಸಂಗತಿ ಏನೆಂದರೆ:

ರಾಜಾ ಚೋಳರಾಜ ಘೋರ್ಪಡೆಯ ಮಗನಾದ ರಾಜಾ ಪಿಲಾಜೀ ಘೋರ್ಪಡೆಯು ಸ್ವಾಮಿನಿಷ್ಠೆ ಹಾಗೂ ಹೃದಯಪೂರ್ವಕವಾಗಿ, ಈ ಸಾಮ್ರಾಜ್ಯಕ್ಕೆ ಸೇವೆಯನ್ನು ಸಲ್ಲಿಸಿ, ದೈವೇಚ್ಛೆಯಿಂದ ಮರಣ ಹೊಂದಿದನು. ಅವನ ಪುತ್ರನಾದ ಪ್ರತಾಪಸಿಂಗ್ ಘೋರ್ಪಡೆಯು ತನ್ನ ತಂದೆಯ ಸ್ಥಾನದಲ್ಲಿ ಹೃದಯಪೂರ್ವಕವಾಗಿ ವಿಧೇಯತೆ ಮತ್ತು ಸೇವೆ ಸಲ್ಲಿಸುವ ಪ್ರಯತ್ನ ಮಾಡುತ್ತಿದ್ದಾನೆ. ಅವನು ಶೂರ ಹಾಗೂ ಸ್ವಾಮಿನಿಷ್ಠನಾಗಿದ್ದಾನೆ. ಅವನ ಮತ್ತು ಅವನ ತಂದೆಯ ಹಕ್ಕುದಾರಿಕೆಯನ್ನು ಗಮನಿಸಿ, ಮುಧೋಳ ಗ್ರಾಮ, ೮೪ ಗ್ರಾಮಗಳು, ಆತನ ತಂದೆಯ 'ಹಫ್ತಹಜಾರಿ' ಹುದ್ದೆ ಹಾಗೂ ಜಾಹಗೀರನ್ನು ಕಾಯಂಗೊಳಿಸಲಾಗಿದೆ. ಈ ಇನಾಮುಗಳ ಮೂಲಕ, ಅವನನ್ನು ಗೌರವಿಸಿ ಪ್ರಸಿದ್ಧಗೊಳಿಸಲಾಗಿದೆ. ಅವನು, ತಂದೆ ಮತ್ತು ಪೂರ್ವಜರ ಶಿಷ್ಟಾಚಾರಗಳಂತೆ, ವಿಧೇಯತೆಯ ಪ್ರಯತ್ನ ಮಾಡಬೇಕು. ಸ್ವಾಮಿನಿಷ್ಠೆ ಹಾಗೂ ಪರಿಶ್ರಮದಿಂದ ಕಾರ್ಯನಿರ್ವಹಿಸಿ; ಹುದ್ದೆ, ಜಾಹಗೀರು ಮತ್ತು ಇನಾಮುಗಳನ್ನು ಬಳಕೆ ಮಾಡುತ್ತಿರಲಿ. ಇದರಲ್ಲಿಯೇ ಆತನ ಕಲ್ಯಾಣ ಹಾಗೂ ನಮ್ಮ ಸಂತೋಷವಿದೆ.

ಹಿಜ್ರಿ ೧೦೦೭ರ ರಬೀಉಲ್ಲ್ ಅವ್ವಲ್ಲ್ ತಿಂಗಳಿನ ೧೧ನೇ ತಾರೀಖಿಗೆ ಬರೆಯಲಾಗಿದೆ.

ಹಿ. ೧೦೪೭ ರಜಬ ೧೭ ಶಕ ೧೫೪೫ ಮಾರ್ಗಶೀರ್ಷ ವದ್ಯ ೪
ಇ. ೧೬೩೭ ನವೆಂಬರ ೨೫

ರಾಜಾ ಶಹಾಜೀ ಭೋಸ್ಲೆಯ ಆಕಾಶದಂತಹ ದರ್ಬಾರಿಗೆ ಫಿರ್ಯಾದಿ ಸಲ್ಲಿಸಿದನು :

ಮುಧೋಳದ ಜಾಹಗೀರು, ವಾಯಿನ್ ತಾಲ್ಲೂಕಿನ ಗ್ರಾಮಗಳು, ಅಲ್ಲಿ ಇದ್ದಂತಹ ಕೋಟೆಗಳು, ಹಳೆಯ ಕಾಲದಿಂದಲೂ ಕರಾಡ ತಾಲ್ಲೂಕಿನಲ್ಲಿ ಅರ್ಧ ಪಾಲು ನನ್ನದಾಗಿತ್ತು. ಈಗ ಚೋಳರಾಜನ ಮೊಮ್ಮಗನಾದ ಪ್ರತಾಪರಾವ್ ಬಹಾದ್ದೂರ್ ಘೋರ್ಪಡೆಯು, ಇವೆಲ್ಲ ಗ್ರಾಮಗಳು ಹಾಗೂ ಕೋಟೆಗಳನ್ನು ಒತ್ತಾಯ ಪೂರ್ವಕವಾಗಿ ವಶಪಡಿಸಿಕೊಂಡಿದ್ದಾನೆ. ನನಗೆ ಮತ್ತು ವಲ್ಲಭಸಿಂಗನ ಮೊಮ್ಮಗನಾದ ಮಹಲೋಜಿಗೂ ಪಾಲು ನೀಡಿರುವದಿಲ್ಲ. ಆದರೆ, ಮುಧೋಳ ಗ್ರಾಮಗಳಲ್ಲಿ, ಅಮಾನಸಿಂಗ್ ಹಾಗೂ ಅಂಬಾಜಿಗೆ ಪಾಲು ಕೊಡಲಾಗಿದೆ. ಆದುದರಿಂದ ಬಾದಶಾಹನು ತಾಕೀತು ಮತ್ತು ಎಚ್ಚರಿಕೆಯನ್ನು ನೀಡಿ; ನನ್ನ ಹಾಗೂ ವಲ್ಲಭಸಿಂಗನ ಮೊಮ್ಮಗನಾದ ಮಹಲೋಜಿಯ ಪಾಲನ್ನು ಕೊಟ್ಟಿದ್ದಾನೆ. ಆನಂತರ ಈ ಫಿರ್ಯಾದಿಯನ್ನು ಲಕ್ಷದಲ್ಲಿಟ್ಟುಕೊಂಡು; ಈ ಪುರಾತನ, ಸ್ವಾಮಿನಿಷ್ಠ ಮತ್ತು ವಿಧೇಯ ಮನೆತನದ ಪಾಲನೆ–ಪೋಷಣೆಗಾಗಿ, ಚೋಳರಾಜನ ಮೊಮ್ಮಗನಾದ ಪ್ರತಾಪ ರಾಜನಿಗೆ ಈ ಅಗತ್ಯವಾದ ಆಜ್ಞೆಯನ್ನು ಜಾರಿಗೊಳಿಸಲಾಗಿದೆ. ನಾವು ಜಾರಿಗೊಳಿಸಿದ ಆಜ್ಞೆಯ ಪ್ರಕಾರ, ೮೪ ಗ್ರಾಮಗಳೊಂದಿಗೆ ಮುಧೋಳದ ಗ್ರಾಮ, ತೊರಗಲ್ಲ್ ತಾಲ್ಲೂಕು, ಕರ್ನಾಟಕ ಗ್ರಾಮಗಳ ಅರ್ಧಭಾಗ ಕರಾಡ ಗ್ರಾಮಗಳ ಅರ್ಧ ಮತ್ತು 'ಸಾತ್ ಹಜಾರಿ' ಹುದ್ದೆಯನ್ನು ಸ್ವಾಧೀನಪಡಿಸಿಕೊಂಡಿರಬಹುದು. ರಾಜಾ ಶಹಾಜೀ ಭೋಸ್ಲೆಯು ಅರ್ಧ ವಾಯಿನ್ ತಾಲ್ಲೂಕಿನ ಗ್ರಾಮಗಳು, ಕರಾಡದ ೨೬ ಗ್ರಾಮಗಳು, ಕರ್ನಾಟಕದ ಅರ್ಧ ಭಾಗ ಹಾಗೂ 'ಪಾಂಚ್ ಹಜಾರಿ' ಹುದ್ದೆಯನ್ನು ಸ್ವಾಧೀನಪಡಿಸಿಕೊಂಡಿರಬಹುದು.

ಬಲ್ಲಮ್ ಸಿಂಗನ ಪುತ್ರನಾದ ಭೈರವಸಿಂಗನ ಮಗ ಮಹಲೋಜಿಗೆ ಬಿಜಾನಗರದ ೩೦ ಗ್ರಾಮಗಳು, ದೋಹಜಾರಿ ಹುದ್ದೆ ಮತ್ತು ಪ್ರತ್ಯೇಕವಾಗಿ ಸಿಂದ್‌ವನ್ನು ಕೊಟ್ಟಿರಬಹುದು. ಬಾದಶಾಹನ ಈ ಎಲ್ಲ ಇನಾಮುಗಳ ಮೇಲೆ ಮನೆತನದ ಎಲ್ಲ ಸದಸ್ಯರು ಬಾದಶಾಹನ ಆಜ್ಞೆಯಿಂದ ಸಹಮತಿ ಹೊಂದಿ; ಸೇವೆ ಸಲ್ಲಿಕೆ ಹಾಗೂ ಸ್ವಾಮಿ ನಿಷ್ಠೆಯಿಂದ ಸಾಮ್ರಾಜ್ಯದ ಪ್ರಗತಿಯಲ್ಲಿ ನಿರತರಾಗಿರಬಹುದು.

ಹಿಜ್ರಿ ೧೦೪೭ರ ರಜ್ಜಬ್ ಉಲ್ ಮುರಜ್ಜಲ್ ತಿಂಗಳಿನ ೧೭ನೇ ತಾರೀಖಿಗೆ ಬರೆಯಲಾಗಿದೆ.

೫೪

ಹಿ. ೧೦೫೭ ಸಾಬಾನ ೧೯ | ಶಕ. ೧೫೬೯ ಭಾದ್ರಪದ ವದ್ಯ ೫
ಇ. ೧೬೪೭ ಸೆಪ್ಟೆಂಬರ್ ೯

ದರ್ಬಾರಿನವರ ಗಲಭೆ-ದಂಗೆಯ ದೆಸೆಯಿಂದ; ಪ್ರಾಮಾಣಿಕ ಜನರ ಕೆನೆ, ನಿರ್ದಿಷ್ಟ ಅನುಯಾಯಿಗಳ ನಾಯಕ ಮತ್ತು ಬಾದಶಾಹನ ಕೃಪೆಯಿಂದ ಅನುಗ್ರಹಿತನಾದ ಸೇನಾಪತಿ ರಾವ್ ರಾಜಾ ಬಾಜೀರಾವ್ ಬಹಾದ್ದೂರ್ ಘೋರ್ಪಡೆಯ ತಂದೆಯಾದ ರಾಜಾ ಪ್ರತಾಪರಾವ್ ಬಹದ್ದೂರ್ ಘೋರ್ಪಡೆಯು ಮರಣ ಹೊಂದಿದನೆಂಬ ಸಂಗತಿಯನ್ನು ತಿಳಿದು; ಬಾದಶಾಹನಿಗೆ ಅಪಾರ ದುಃಖವಾಯಿತು. ಈ ಸ್ವಾಮಿನಿಷ್ಠನ ಪೂರ್ವಜರು ಬಹಮನಿ ಸಾಮ್ರಾಟರ ಕಾಲದಿಂದಲೂ ಇತ್ತೀಚೆಗಿನವರೆಗೆ, ಪರಿಶ್ರಮ ಹಾಗೂ ಶ್ರದ್ಧೆಯೊಂದಿಗೆ ಸೇವೆ ಸಲ್ಲಿಸುತ್ತ ಬಂದಿದ್ದರು. ಈತನ ಮನೆತನದಲ್ಲಿ ಇಂತಹ ಶಿಷ್ಟಾಚಾರದ ನಿದರ್ಶನವಿದೆ. ಆದುದರಿಂದ, ಸವಲತ್ತು ಮತ್ತು ಕೃಪೆಯನ್ನು ಆತನ ಹಕ್ಕು ಎಂದು ಪರಿಗಣಿಸಿ; ಆತನ ಮನೆತನಕ್ಕೆ ಜಾರಿಗೊಳಿಸಲಾಗಿದ್ದ 'ಸಾತ್ ಹಜಾರಿ'ಯ ಹುದ್ದೆ, ಸಾತ್ ಹಜಾರ್ ಸವಾರ್, ಸಂಬಂಧಿಸಿದ ಎಲ್ಲ ಪ್ರದೇಶಗಳು, ಬೆನ್ನ್ ಹಾಗೂ ಕರ್ನಾಟಕ ತಾಲ್ಲೂಕಿನ ಅರ್ಧ ಜಾಹಗೀರನ್ನು ಕಾಯಂಗೊಳಿಸಿ; ಅವನಿಗೆ ಮಂತ್ರಿಯ ಸ್ಥಾನವನ್ನು ನೀಡಿರಬಹುದು. ಈ ಸ್ವಾಮಿನಿಷ್ಠನಿಗೆ ಕೊಡಲಾಗಿದ್ದ ಆನೆಗುಂದಿ ಮತ್ತು ಕಂಪ್ಲಿಯ ಆಸುಪಾಸಿನ ಜಾಹಗೀರುಗಳನ್ನು ಸಹ ಹಾಗೂ ಹೆಚ್ಚುವರಿಯಾಗಿ ಅಕ್ಕಪಕ್ಕದ ಭಾಗಗಳನ್ನು ಆತನ ಸೋದರರು ಮತ್ತು ಬಂಧುಗಳಿಗೆ ಕೊಡಬೇಕು. ಏಕೆಂದರೆ: ಪರಸ್ಪರರಲ್ಲಿ ಗಲಭೆ-ದಂಗೆ ಆಗಬಾರದು. ಬಾದಶಾಹನ ಈ ಇನಾಮುಗಳಿಂದ ಗೌರವ ಹೊಂದಿ, ಸಾಮ್ರಾಜ್ಯದ ಸೇವೆಯಲ್ಲಿ ನಿರತರಾಗಬೇಕು.

ಹಿಜ್ರಿ ೧೦೫೭ರ ಶಾಬಾನ್ ಉಲ್ ಮೊಅಜ್ಜಮ್ ತಿಂಗಳಿನ ೧೯ನೇ ತಾರೀಖಿಗೆ ಬರೆಯಲಾಗಿದೆ.

ಅಗಡಿ ದೇಸಾಯಿ

೫೫

ಸು ೯೮೩ ಶಕ.೧೫೦೫ ಭಾದ್ರಪದ ವದ್ಯ ೭

ಹಿಜ್ರ್ ೯೯೧ ಶಾಬಾನ್ ೨೦ ಕ್ರಿ.ಶ.೧೫೮೩ ಅಗಸ್ಟ್ ೨೯

ದೇಶವು ದೇವರಿಗಾಗಿ ಇದೆ

ಬಂಕಾಪೂರ ವ್ಯವಹಾರದ ಕಾರಕೂನರು, ದೇಸಾಂಯರು, ಮೊಕದ್ದಮೆದಾರರು ಮತ್ತು ಹೊರಗೆ ಹಾಕಲ್ಪಟ್ಟ ಹೊರಳೀಪೋಟಿಯ ರೈತರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರ್ ೯೮೩ರಲ್ಲಿ, ಹನುಮಂತಗೌಡ (ಗೌಡಾ ?)ನಿಗೆ ಬಾದಶಾಹನ ಕೃಪೆ ಹಾಗೂ ಇನಾಮುಗಳಿಂದ ಗೌರವಿಸಿ, ಉಲ್ಲೇಖಿತ ಗ್ರಾಮದ 'ಸರದೇಸಾಯಿ' ಎಂದು ನೇಮಕ ಮಾಡಲಾಗಿದೆ. ಏಕೆಂದರೆ : ಇದು ಮೊದಲಿನಿಂದಲೂ ಕೊಡಲ್ಪಟ್ಟ ಮತ್ತು ನಿರಂತರವಾಗಿರುವಂತಹ ಆನುವಂಶಿಕ ಆಸ್ತಿ ಆಗಿತ್ತು. ಆತನ ಸರದೇಸಾಯಿತ್ವವನ್ನು ಕಾಯಂಗೊಳಿಸಿ; ಕಾನೂನಿನ ಪ್ರಕಾರ, ಅವನನ್ನು ಸನ್ಮಾನಿಸಬೇಕು. ಎಲ್ಲ ಜನರು ಅವನಿಗೆ ಭೆಟ್ಟಿಯಾಗಿ ತಮ್ಮ ಸಮಸ್ಯೆಗಳನ್ನು ಪ್ರಸ್ತುತಪಡಿಸಿ, ಆತನ ಅಭಿಪ್ರಾಯದ ಮೇರೆಗೆ ವಿಶ್ವಾಸಾರ್ಹತೆಯನ್ನು ಪ್ರಕಟಿಸಿದ್ದಾರೆ. ಕೋರಿಕೆ ಹಾಗೂ ಧ್ವಜವನ್ನು ಕಾರ್ಯಾಚರಣೆಗೆ ತರಬೇಕು.

ಅವನಿಗೆ ಕೊಡಲಾದ ಇನಾಮಿನ ವಿವರಣೆ

ಗೋಣಿಯ ಅಗತ್ಯ ವಸ್ತುಗಳು	ಖಡ್ಡೇದ ಅಮ್ಲೆ	ಬಿತ್ತನೆ ಮಾಡದಿರುವ
ಮೂರು ಜಿತಲ್	ಪ್ರತಿಯೊಂದರ	ಜಮೀನಿನ ಇನಾಮು
ತೋಟದ ಒಂದು ಭಾಗ	ಎರಡು ಭಾಗ,	ಐದು ಕುಡೊ
	ನಾಲ್ಕು ಪಾಯಲೆ.	

ಅದನ್ನು ಪ್ರತಿವರ್ಷ ಜಾರಿಗೊಳಿಸಿ, ಅವನಿಗೆ ಕೊಡಬೇಕು. ಈ ವಿಷಯದಲ್ಲಿ, ಮಿತಿಯನ್ನು ಮೀರಬಾರದು. ಲಿಖಿತವಾದ ತಡೆಹಿಡಿಯುವಿಕೆಯನ್ನು ಹಿಂಪಡೆದು, ಶುಭದಾಯಕ ಆಜ್ಞೆಗೆ ಅನುಸಾರವಾಗಿ ನೀಡಲ್ಪಟ್ಟಿರುವ ಇನಾಮನ್ನು ಅವನಿಗೆ ಕೊಡಿರಿ.

ಹಿಜ್ರಿ ೯೯೧ರ ಶಾಬಾನ್ ತಿಂಗಳಿನ ೨೦ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫೆ ಆಲಾ ಮತ್ತು ಸರ್‌ಸರೆ ನೌಬತ್ತರ ಅನುಮತಿಯಿಂದ, ಖಾನ್‌ಅಲಿಶಾನ್ ದಿಲಾವರ್‌ಖಾನ್ ಅಮೀರೆ ಜುಮ್ಲಾರ ಜೊತೆಗೆ ಕಳುಹಿಸಲಾದ ಈ ಪತ್ರವನ್ನು ಬರೆದಂತಹ ಮಹಾಲ್‌ಖಾನ್ ಆಜಮ್ ಬಿಲಾಲ್‌ಖಾನ್‌ನು, ದಿಲಾವರ್‌ಖಾನನ ಸೇವಕನಾಗಿದ್ದಾನೆ.

೫೬

ಹಿಜ್ರಿ. ೧೦೩೫ ಜಿಲ್‌ಹಜ್ಜಾ ೧೮ ಶಕ.೧೫೪೮ ಭಾದ್ರಪದ ವದ್ಯ ೫
ಕ್ರಿ.ಶ.೧೬೨೬ ಅಗಸ್ಟ ೩೧

ಅವನು ಮಿತ್ರನಾಗಿದ್ದಾನೆ.
ದೇಶವು ದೇವರಿಗಾಗಿ ಇದೆ.

ಈ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:
ಗುತ್ತಲ್ ತಾಲ್ಲೂಕಿನ ದೇಸಾಯಿಗೆ ಗೊತ್ತಿರುವದೇನೆಂದರೆ :

ಬಂಕಾಪೂರ ಮತ್ತು ಕೆಲವು ಇತರ ಅರಮನೆಗಳ ವ್ಯವಹಾರಗಳು ಶೌರ್ಯ ಹಾಗೂ ಔನ್ನತ್ಯದಲ್ಲಿ ತಜ್ಞನಾದ ಹವಾಲ್ದಾರ ಮೀರ್ ಅಲಿ ರಜಾನ್ ಕಾಲದಲ್ಲಿ, ಲಂಚಕೋರನಾದ ಕೆಂಗನಾಯಕನ ಬಗೆಗೆ ದರ್ಬಾರಿನಲ್ಲಿ ದಾಖಲು ಮಾಡಿದ ಮನವಿಯ ಕಾರಣದಿಂದ; ದೇಸಾಯಿಯು ಬಾದಶಹಾನ ಪ್ರಶಂಸೆಗೆ ಪಾತ್ರನಾದನು.

ಈ ದೇಸಾಯಿಯು ಹಳೆಯ ವಿಶ್ವಾಸಾರ್ಹ ಹಾಗೂ ಆನುವಂಶಿಕ ವಾರಸುದಾರನಾಗಿದ್ದಾನೆ. ಅವನು ಈ ಕಾರ್ಯವನ್ನು ಮೊದಲೇ ಮಾಡಬೇಕಾಗಿತ್ತು. ಆದುದರಿಂದ, ಶುಭದಾಯಕ ಆಜ್ಞೆಗೆ ಅನುಸಾರವಾಗಿ ಈ ಕಾರ್ಯದ ದೆಸೆಯಿಂದ, ಅವನ ಉನ್ನತೀಕರಣವು ಅವಶ್ಯಕವಾಗಿದೆ.

ಹಿಜ್ರಿ ೧೦೩೫ರ ಜಿಲ್‌ಹಜ್ಜಾ ತಿಂಗಳಿನ ೧೮ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ ಮಹಾನ್ ಸಾಮ್ರಾಜ್ಯದ ಸದಸ್ಯನಾದ ಶಹಾನವಾಜ್‌ಖಾನ್ ಮೀರ್ ಮಜ್ಲೀಸ್ ಮತ್ತು ಸರ್ಕಾರದ ಮಂತ್ರಿಯ ಜೊತೆಗೆ ಕಳುಹಿಸಿ ಕೊಡಲಾಗಿದೆ.

ಹಿಜ್ರಿ ೧೧೪೦ ರಬಿಉಸ್‌ಸಾನಿ ೨೪ ಶಕ.೧೫೫೨ ಕಾರ್ತಿಕ ವದ್ಯ ೧
ಕ್ರಿ.ಶ.೧೬೩೦ ನವೆಂಬರ್, ೧೯

ನಕಲು

ಹಿಜ್ರಿ ೧೧೪೦ರ ರಬಿಉಸ್‌ಸಾನಿ ತಿಂಗಳಿನ ೨೪ನೇ ತಾರೀಖಿಗೆ ಬರೆಯಲಾದ ಹೊಳೆ ಹೊನ್ನೂರ್ ತಾಲ್ಲೂಕಿನ ಫೌಜದಾರ್ ಮತ್ತು ಜಾಹಗೀರ್‌ದಾರ ಖಾನ್‌ವಾಲಾ ಶಾನ್ ಶೇರ್‌ಖಾನ್‌ನ ಮುದ್ರೆಯುಳ್ಳ ಪತ್ರದಲ್ಲಿ ಬರೆಯಲಾದ ಸಂಗತಿ ಏನೆಂದರೆ: –

ಹೊಳೆಹೊನ್ನೂರು ಜಾಹಗೀರಿನ ಸರ್ಕಾರದ ಕಾರ್ಯನಿರ್ವಾಹಕರು ತಿಳಿಯುವದೇನೆಂದರೆ : ಮೇಲ್ಕಾಣಿಸಿದ ಮಹಲಿನ ದೇಶಮುಖತ್ವ ಹಾಗೂ ದೇಶಪಾಂಡೆಗಿರಿಯ ಸೇವೆಯಲ್ಲಿ, ಮೊದಲಿನ ಸನ್ನದಿಗೆ ಅನುಸಾರವಾಗಿ, ಹನುಮಂತ ಗೌಡನು ಮುಂದುವರಿದಿದ್ದಾನೆ. ದೇಶಮುಖತ್ವದ ಸಂಪ್ರದಾಯದ ಮೇರೆಗೆ, ಮೂರು ನೂರು ಹೊನ್, ಹನ್ನೆರಡು ಅರ್ಧಹೊನ್ ಮತ್ತು ಉಲ್ಲೇಖಿತ ತಾಲ್ಲೂಕಿನ ಬಿನ್ನಹಗೋಂದಿ ಗ್ರಾಮ ಹಾಗೂ ದೇಶಪಾಂಡೆಗಿರಿಯ ಸಂಪ್ರದಾಯಕ್ಕೆ ಅನುಸಾರವಾಗಿ ಮೂರು ನೂರು ಹೊನ್, ಧರನ್ ಮತ್ತು ದಾಂವ್‌ರಪಿ ಗ್ರಾಮವನ್ನು; ಮೊದಲಿನಂತೆಯೇ ಅವನಿಗೆ ಇನಾಮು ರೂಪದಲ್ಲಿ ಕೊಡಲಾಗಿದೆ. ಅಡೆ-ತಡೆಯನ್ನುಂಟು ಮಾಡಬೇಡಿರಿ. ಪತ್ರದ ನಕಲು ಪಡೆದು, ಮೂಲ ಪ್ರತಿಯನ್ನು ಹಿಂತಿರುಗಿಸಿರಿ. ಪ್ರತಿ ವರ್ಷ ಹೊಸ ಸನ್ನದನ್ನು ಬೇಡಬಾರದು. ಈ ವಿಷಯದಲ್ಲಿ, ಗಂಭೀರವಾದ ಎಚ್ಚರಿಕೆಯನ್ನು ಕೊಡಲಾಗಿದೆ. ಬರೆಯಲಾಗಿದೆ.

ಸು.೧೦೩೯ ಶಕ.೧೫೬೦ ಮಾರ್ಗಶೀರ್ಷ ಶುದ್ಧ ೪
ಹಿಜ್ರಿ. ೧೦೪೮ ಶಾಬಾನ್ ೩ ಕ್ರಿ.ಶ.೧೬೩೮ ನವೆಂಬರ್, ೨೯

ಅವನು ಮಿತ್ರನಾಗಿದ್ದಾನೆ
ದೇಶವು ದೇವರಿಗಾಗಿ ಇದೆ.

ಗಂಗಾವತಿ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:-

ಹಿಜ್ರಿ ೧೦೩೯ರಲ್ಲಿ ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ; ಹನುಮಂತ ಗೌಡನನ್ನು ಮೊದಲಿಗೆ ದೂರಮಾಡಲ್ಪಟ್ಟ ಕಾರಣದಿಂದ, ಈಗ ಅವನಿಗೆ ಉಲ್ಲೇಖಿತ ತಾಲ್ಲೂಕನ್ನು ಅದರ ಸಂಪೂರ್ಣ ವಿಷಯಗಳೊಂದಿಗೆ ಕೊಡಲಾಗಿದೆ.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಈ ತಾಲ್ಲೂಕನ್ನು ಅವನ ಬಳಕೆಗಾಗಿ ನೀಡಬೇಕು.

ಹಿಜ್ರಿ ೧೦೪೮ರ ಶಾಬಾನ್ ತಿಂಗಳಿನ ೩ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

ಸು.೧೦೪೨ ಶಕ.೧೫೬೩ ಪೌಷ ಶುದ್ಧ ೬
ಹಿಜ್ರಿ ೧೦೫೧ ಶವ್ವಾಲ್ ೪ ಕ್ರಿ.ಶ.೧೬೪೧ ಡಿಸೆಂಬರ್, ೨೭

ಅವನು ಮಿತ್ರನಾಗಿದ್ದಾನೆ

ದೇಶವು ದೇವರಿಗಾಗಿ ಇದೆ.

ಗಂಗಾವತಿ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:–

ಹಿಜ್ರಿ ೧೦೪೨ರಲ್ಲಿ ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ; ಉಲ್ಲೇಖಿತ ತಾಲ್ಲೂಕನ್ನು ಮೊದಲು ಕನಕಗಿರಿಯ ಉಡಚಪ್ಪ ನಾಯಕನಿಗೆ ಕೊಡಲಾಗಿತ್ತು. ಈಗ ಗುತ್ತಲದ ಖ್ಯಾತ ದೇಸಾಯಿಯಾದ ಹನುಮಂತ ಗೌಡ(ಗೌಡ?)ನಿಗೆ ಆತನ ದೃಢತೆಗಾಗಿ ನೀಡಲಾಗಿದೆ.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಮೇಲ್ಕಾಣಿಸಿದ ತಾಲ್ಲೂಕನ್ನು; ಹನುಮಂತ ಗೌಡನ ಬಳಕೆಗಾಗಿ ಸ್ವಾಧೀನಕ್ಕೆ ಕೊಡಬೇಕು.

ಹಿಜ್ರಿ ೧೦೫೧ರ ಶವ್ವಾಲ್ ತಿಂಗಳಿನ ೪ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

ಸು.೧೦೪೪ ಶಕ.೧೫೬೫ ಫಾಲ್ಗುಣ ಶುದ್ಧ ೧೧
ಹಿಜ್ರಿ. ೧೦೫೩ ಜಿಲ್‌ಹಜ್ಜಾ ೯ ಕ್ರಿ.ಶ.೧೬೪೪ ಫೆಬ್ರುವರಿ, ೮

ಅವನು ಮಿತ್ರನಾಗಿದ್ದಾನೆ
ದೇಶವು ದೇವರಿಗಾಗಿ ಇದೆ.

ಗೌರವ ಮತ್ತು ಔನ್ನತ್ಯದಲ್ಲಿ ತಜ್ಞನಾದ ಹವಾಲ್ದಾರ್ ಸಿದ್ದಿ ದಿಲಾವರ್ ಮತ್ತು ಬಂಕಾಪೂರ ವ್ಯವಹಾರದ ವರ್ತಮಾನ ಹಾಗೂ ಭವಿಷತ್ತಿನ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ: –

ಹಿಜ್ರಿ ೧೦೪೪ರಲ್ಲಿ ಉಲ್ಲೇಖಿತ ವ್ಯವಹಾರದ ಗುತ್ತಲದ ಕಡೆಗಿನ ದೇಸಾಯಿ ಹನುಮಂತ ಗೌಡನು ದರ್ಬಾರಿನಲ್ಲಿ ಮನವಿ ಸಲ್ಲಿಸಿರುವದೇನೆಂದರೆ :

ಮೇಲ್ಕಾಣಿಸಿದ ವ್ಯವಹಾರದ ಉಲ್ಲೇಖಿತ ದಿಕ್ಕು ಹಾಗೂ ಹಡಗಲಿ, ಹೊರಗಲ್‌ಪೋಲಿ, ಕೆರೂರ್ ಖುರ್ದ್ ಮತ್ತು ತಿಳವಳ್ಳಿಯ ಕಡೆಗಿನ ನಾಡಗೌಡತ್ವವು ಆತನ ಹಳೆಯ ಆನುವಂಶಿಕ ಆಸ್ತಿ ಆಗಿದೆ. ಅದನ್ನು ಭೋಗ್ಯಕ್ಕೆ ಕೊಡಲಾಗಿತ್ತು. ಕರೀಮ್ ಸರ್ಜಾನು ವಾಸ್ತವಿಕ ಸ್ಥಿತಿಯನ್ನು ಅರಿಯಲಾರದೇ, ತಾನೇ ಈ ಹಳೆಯ ಆನುವಂಶಿಕ ಆಸ್ತಿಯ ನಾಡಗೌಡತ್ವವನ್ನು ಹೊಂದಿದ್ದಾನೆಂದು; ಆಜ್ಞೆಯನ್ನು ಪಡೆದುಕೊಂಡಿದ್ದಾನೆ. ದಯಮಾಡಿ, ಸೂಕ್ತವಾದ ಒಪ್ಪಂದವನ್ನು ಮಾಡಿಸಿ; ಹಳೆಯ ಆನುವಂಶಿಕ ಆಸ್ತಿಯ ನಾಡಗೌಡತ್ವಕ್ಕೆ, ನನ್ನನ್ನು ನೇಮಕ ಮಾಡಿರಿ.

ಬಾದಶಾಹನು ಪರಿಸ್ಥಿತಿಯ ಪರಿಶೀಲನೆ ಮಾಡಿ, ಕರೀಮ್ ಸರ್ಜಾನನ್ನು ಉಲ್ಲೇಖಿತ ನಾಡಗೌಡತ್ವದಿಂದ ವಜಾಗೊಳಿಸಿ ಹನುಮಂತ ಗೌಡನನ್ನು ನೇಮಕ ಮಾಡಿ, ಅವನಿಗೆ ಶಾಶ್ವತವಾಗಿ ಕೊಡಲಾಗಿದೆ. ಮೇಲ್ಕಾಣಿಸಿದ ಎಲ್ಲ ಕಡೆಗಿನ ನಾಡಗೌಡತ್ವವನ್ನು, ಹನುಮಂತ ಗೌಡನ ಮಕ್ಕಳು ಹಾಗೂ ಮೊಮ್ಮಕ್ಕಳಿಗೆ ಆನುವಂಶಿಕವಾಗಿ ನೀಡಬೇಕು. ತಡೆಹಿಡಿಯಲ್ಪಟ್ಟ ಆಜ್ಞೆಯನ್ನು ಹಿಂಪಡೆದು; ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಮೂಲಪ್ರತಿಯನ್ನು ಹಿಂತಿರುಗಿಸಿರಿ.

ಹಿಜ್ರಿ ೧೦೫೩ರ ಜಿಲ್‌ಹಜ್ಜಾ ತಿಂಗಳಿನ ೯ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

ಸು.೧೦೪೫ ಶಕ.೧೫೬೬ ಮಾರ್ಗಶೀರ್ಷ ಶುದ್ಧ ೧೧
ಹಿಜ್ರಿ. ೧೦೫೪ ಶವ್ವಾಲ್ ೧೦ ಕ್ರಿ.ಶ.೧೬೪೪ ನವ್ವೆಂಬರ್, ೩೦

ಅವನು ಮಿತ್ರನಾಗಿದ್ದಾನೆ

ದೇಶವು ದೇವರಿಗಾಗಿ ಇದೆ.

ರಟ್ಟಿಹಳ್ಳಿ ಕ್ಷೇತ್ರದ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:-

ಹಿಜ್ರಿ ೧೦೪೫ರಲ್ಲಿ ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ; ಉಲ್ಲೇಖಿತ ಕ್ಷೇತ್ರದ ರಾಣೇಬೆನ್ನೂರಿನ ಗ್ರಾಮಗಳನ್ನು ಅವುಗಳ ಎಲ್ಲ ವ್ಯವಹಾರಗಳ ಜೊತೆಗೆ; ಈ ಅತ್ಯುತ್ತಮ ನಾಯಕ, ಆಜ್ಞಾಪಾಲಕ ಪ್ರತಿಷ್ಠಿತ ಖುಂದ್‌ಮೀರ್ ಆಂಕಸ್‌ಖಾನನಿಗೆ ಆತನ ದೃಢತೆಯ ದೆಸೆಯಿಂದ ಕೊಡಲಾಗಿದೆ. ಮಹೋನ್ನತ ಬಾದಶಾಹನ ಶುಭದಾಯಕ ಆಜ್ಞೆಗೆ ಅನುಸಾರವಾಗಿ ಮೇಲ್ಕಾಣಿಸಿದ ಗ್ರಾಮಗಳನ್ನು; ಉಲ್ಲೇಖಿತ ಖಾನ್ ಆಲಿಶಾನ್‌ನ ಸ್ವಾಧೀನಕ್ಕೆ ನೀಡಬೇಕು.

ಹಿಜ್ರಿ ೧೦೫೪ರ ಶವ್ವಾಲ್ ತಿಂಗಳಿನ ೧೦ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

೬೨

ಸು.೧೦೪೫ ಶಕ.೧೫೬೭ ಶ್ರಾವಣ ವದ್ಯ ೨
ಹಿಜ್ರಿ. ೧೦೫೫ ಜಮಾದಿ ಉಸ್‌ಸಾನಿ ೧೬ ಕ್ರಿ.ಶ.೧೬೪೫ ಜುಲೈ, ೩೦

ಅವನು ಮಿತ್ರನಾಗಿದ್ದಾನೆ

ದೇಶವು ದೇವರಿಗಾಗಿ ಇದೆ.

ಬಂಕಾಪೂರ ವ್ಯವಹಾರದ ಗುತ್ತಲ ಕಡೆಗಿನ ಗೌರವಾನ್ವಿತ ದೇಸಾಯಿ ಹನುಮಂತ ಗೌಡ(ಗೌಡ?)ನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ : –

ಮೊದಲಿನ ಆಜ್ಞೆಗೆ ಅನುಸಾರವಾಗಿ, ಹಿಜ್ರಿ ೧೦೪೫ರಲ್ಲಿ ಗೌರವಾನ್ವಿತ ಕೆಂಗನಾಯಕನನ್ನು ಆತನ ದೃಢತೆಯ ದೆಸೆಯಿಂದ, ಉಲ್ಲೇಖಿತ ವ್ಯವಹಾರದ ಹಡಗಲಿಯ ಕಡೆಗೆ ಹೋಗಿ, ವಾಸಿಸಲು ಕಳುಹಿಸಲಾಗಿದೆ. ಆದರೆ, ಜನತೆಯ ರಾಜಕುಮಾರನ ಅಧಿಕಾರಿಗಳು ಅಡ್ಡಿ–ಆತಂಕವನ್ನುಂಟು ಮಾಡಿ, ಅಲ್ಲಿಗೆ ಹೋಗಲು ನಾಯಕನಿಗೆ ಅವಕಾಶ ನೀಡಲಿಲ್ಲ. ನಾಯಕನು ಅಲ್ಲಿಗೆ ಹೋಗಲು ಮತ್ತು ಅದನ್ನು ಸ್ವಾಧೀನಪಡಿಸಿಕೊಳ್ಳಲು; ರಾಜಕುಮಾರನ ಅಧಿಕಾರಿಗಳು ಪ್ರತಿಬಂಧಿಸುವದರ ಅರ್ಥವೇನು?

ಬಾದಶಾಹನ ಆಜ್ಞೆಯು ದೊರಕುತ್ತಲೇ ಮೇಲ್ಕಾಣಿಸಿದ ನಾಯಕನು ಹಿಂದಿನ ಆಜ್ಞೆಗೆ ಅನುಸಾರವಾಗಿ ಯಾವುದೇ ವಿಳಂಬ ಇಲ್ಲವೆ ನೆಪ ಮಾಡದೇ; ಉಲ್ಲೇಖಿತ ದಿಕ್ಕಿನಲ್ಲಿ ಸ್ವಾಧೀನಪಡಿಸಿಕೊಳ್ಳಲು ಅವನಿಗೆ ಅವಕಾಶ ಕೊಡಿರಿ. ನಾಯಕನಿಗೆ ರಾಜಕುಮಾರನ ಅಧಿಕಾರಿಗಳು ಯಾವುದೇ ಆತಂಕ ಉಂಟುಮಾಡಲು ಬಿಡಬಾರದು. ಈ ವಿಷಯದಲ್ಲಿ ಕಠಿಣವಾದ ಎಚ್ಚರಿಕೆ ನೀಡಲಾಗಿದೆ. ಯಾವುದೇ ಫಿರ್ಯಾದಿಗೆ ಆಸ್ಪದ ಕೊಡಬೇಕು.

ಹಿಜ್ರಿ ೧೦೫೫ರ ಜಮಾದಿ ಉಸ್‌ಸಾನಿ ತಿಂಗಳಿನ ೧೬ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

ಸು.೧೦೪೯ | ಶಕ.೧೫೭೦ ಪೌಷ ವದ್ಯ ೮
ಹಿಜ್ರಿ. ೧೦೫೮ ಜಿಲ್ಹಹಜ್ಜಾ ೨೨ | ಕ್ರಿ.ಶ.೧೬೪೮ ಡಿಸೆಂಬರ್, ೨೭

ಅವನು ಮಿತ್ರನಾಗಿದ್ದಾನೆ

ದೇಶವು ದೇವರಿಗಾಗಿ ಇದೆ.

ಠಾಣೆದಾರಿಕೆಗಾಗಿ ನೇಮಿಸಲ್ಪಟ್ಟ ಶೂರನಾದ ಶೇಖ್ ಅಹ್ಮದ್ ಜುನೇದಿ, ಸಿಲೆಹದಾರ್ ಮತ್ತು ರಟ್ಟಿಹಳ್ಳಿ ಕ್ಷೇತ್ರದ ರಾಣಿಬೆನ್ನೂರದ ಗ್ರಾಮಗಳ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:

ಹಿಜ್ರಿ ೧೦೪೦ರಲ್ಲಿ ದಿವಂಗತ ನವಾಬ್‌ಖಾನ್ ಬಾಬಾನಿಗೆ ಕೊಡಲಾದ ಗ್ರಾಮಗಳ ಖಾಸ್ ಸೈನ್ಯದ ಲೆಕ್ಕ ತಪಾಸಣೆ ಮಾಡುವಾಗ; ಈ ಗ್ರಾಮಗಳು ಸೈದಿ ಸುಂಬುಲ್‌ನ ಮೇಲ್ವಿಚಾರಣೆಯಲ್ಲಿದ್ದವು. ಈಗ ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ ಉಲ್ಲೇಖಿತ ಗ್ರಾಮಗಳನ್ನು; ಉನ್ನತ ದರ್ಜೆಯುಳ್ಳ, ಗೌರವಾನ್ವಿತ, ಅನುಮೋದಕ ವಿಜಯಿ, ಸುದೈವಿ, ವೀಕ್ಷಣ ಶಕ್ತಿಯ ಬೆಳಕು, ಸಂಪತ್ತು ಹಾಗೂ ಉನ್ನತ ಭಾಗ್ಯದ ದರ್ಪ, ಗಾಂಭೀರ್ಯ ಮತ್ತು ಶ್ರೇಷ್ಠತೆಯ ಹಣೆ, ಮಹಾನ್ ಸಾಮ್ರಾಜ್ಯ ಕಿರೀಟದ ಮುತ್ತು, ಮಹಾನ್‌ವಂಶದ ನೈಜ ಹಕ್ಕುದಾರ, ಬೆಳಕಿನ ಉಗಮಸ್ಥಾನ, ದೇವರ ಕೊಡುಗೆ, ದೃಷ್ಟಿಗಳ ಪರಿಶೀಲಕ, ಬಾದಶಾಹನ ಸೂಕ್ಷ್ಮತೆಯುಳ್ಳ ಯಶಸ್ಸಿನ ನಿದರ್ಶನದ ರಾಜಮುದ್ರೆ, ವಿಜಯ ಪೀಠಿಕೆಯ ಶೀರ್ಷಿಕೆ, ಅಮೌಲ್ಯವಾದ ಮುತ್ತು, ವಿಜಯದ ಚಿನ್ಹೆಯುಳ್ಳ, ಎತ್ತರದ ನಿಲುವುಉಳ್ಳ, ಉನ್ನತ ಭಾಗ್ಯದ ರಾಜಕುಮಾರನಾದ ಹಿರಿಯ ಪುತ್ರನಿಗೆ ಆತನ ದೃಢತೆಯ ದೆಸೆಯಿಂದ; ಎಲ್ಲ ಕೃಪೆಯಿಂದ ಕೊಡಲಾಗಿದೆ.

ಅಶ್ರಫ್ ಅಖ್‌ದಸ್ ಫರ್ಮಾನಿನ ಮೇರೆಗೆ ಉಲ್ಲೇಖಿತ ಗ್ರಾಮಗಳನ್ನು ಮೇಲ್ಕಾಣಿಸಿದ ವಿಜಯದ ಲಕ್ಷಣ ಹೊಂದಿದಂತಹ ರಾಜಕುಮಾರನ ಹೆಸರಿನೊಂದಿಗೆ ಸಂಯೋಜನೆ ಮಾಡಿ; ಅವನ ಸಂಬಂಧಿಕರ ಬಳಕೆಗಾಗಿ ಕೊಡಬೇಕು.

ಹಿಜ್ರಿ ೧೦೫೮ರ ಜಿಲ್‌ಹಜ್ಜಾ ತಿಂಗಳಿನ ೨೨ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

೬೪

ಸು.೧೦೪೯ ಶಕ.೧೫೭೦ ಮಾಘ ವದ್ಯ ೬
ಹಿಜ್ರಿ. ೧೦೫೯ ಮೊಹರಮ್ ೨೦ ಕ್ರಿ.ಶ.೧೬೪೯ ಜನವರಿ, ೨೪

ಅವನು ಮಿತ್ರನಾಗಿದ್ದಾನೆ
ದೇಶವು ದೇವರಿಗಾಗಿ ಇದೆ.

ಗುತ್ತಲದ ಕಡೆಗಿನ ಕಾರ್ಯನಿರ್ವಾಹಕ ಸರದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಲಖ್ಪ್ಪ ಬರಾಲ್ ಮತ್ತು ಆಳಂದದ ರಯತ್ ಮಹಲಿನ ಗೋಥಿ ಸಂರಕ್ಷಿತ ಪ್ರದೇಶದಲ್ಲಿ ದೈನಂದಿನಿಕ ಆಹಾರದ ವೇತನ ಪಡೆಯುವಂತಹ ಕೆಲವು ವ್ಯಾಪಾರಸ್ಥರು ತಮ್ಮ ಪಶುಗಳು ಹಾಗೂ ಬಟ್ಟೆಗಳೊಂದಿಗೆ ಕಾರಡಗಿಯ ಕಡೆಗಿನ ಕಲಗೂರ್ ಗ್ರಾಮದೆಡೆಗೆ ಬಂದರು. ಕುಂದಗೋಳ್ ಕಡೆಗಿನ ಕೋಯ್‌ಬಾಳ್ ಗ್ರಾಮದ ಪಟೇಲನು; ಅಂಕಲಗಿ, ಕಮಡೋಳಿ, ತರಳಖಬ್, ಸಂಶಿಯ ಪಟೇಲರೊಂದಿಗೆ ಜೊತೆಗೂಡಿ ದರೋಡೆಗಾರರ ಒಂದು ದೊಡ್ಡ ಗುಂಪನ್ನು ರಚಿಸಿ; ಬ್ಯಾಡಗಿಯಲ್ಲಿ ಉಲ್ಲೇಖಿತ ವ್ಯಾಪಾರಸ್ಥರ ಮೇಲೆ ದಾಳಿ ಮಾಡಿದರು.

ಕೆಲವು ವ್ಯಾಪಾರಸ್ಥರು ಹಾಗೂ ಮಹಾಲ್‌ದಾರರನ್ನು ಗಾಯಗೊಳಿಸಿ; ನಾಲ್ಕು ನೊಗ ಬಟ್ಟೆಗಳು ಮತ್ತು ಒಂದು ಕಂತಾಳಿ ಹಣವನ್ನು ಲೂಟಿ ಮಾಡಿದರು. ಇದಕ್ಕಿಂತ ಮೊದಲಿಗೂ ಸಹ; ಅವರು ಸಿದ್ದಪ್ಪ ಶಾಬಾದಿಯ ಮೂರು ನೊಗ ಬಟ್ಟೆಗಳನ್ನು ದೋಚಿದ್ದನು. ಒಟ್ಟು : ಏಳು ನೊಗ ಬಟ್ಟೆ ಹಾಗೂ ಒಂದು ಕಂತಾಳಿ ಹಣವನ್ನು ಅಪಹರಿಸಿದ್ದರು. ರಯತ್ ಮಹಾಲಿನ ವ್ಯಾಪಾರಸ್ಥರು ಈ ಘಟನೆಯಿಂದ ದುಃಖಿತರಾಗಿ, ವ್ಯಾಪಾರದ ಉದ್ದೇಶವನ್ನು ತ್ಯಜಿಸಿದ್ದಾರೆ ಮತ್ತು ಉಲ್ಲೇಖಿತ ಮಹಲಿನ ಕಾರ್ಯದಲ್ಲಿ ಆತಂಕ ಉಂಟಾಗಿದೆ. ಮೇಲ್ಕಾಣಿಸಿದ ಮಹಲಿನ ವ್ಯಾಪಾರಸ್ಥರು ಪಶುಗಳ ಗುಂಪುಗಳನ್ನು ತೆಗೆದುಕೊಂಡು ಬರುವಾಗ/ಹೋಗುವಾಗ ಖರೀದಿ ಅಥವಾ ಮಾರಾಟ ಮಾಡುವಾಗ, ಕೋಯ್‌ಬಾಳ್ ಪಟೇಲನು; ಇದೇ ಪ್ರಕಾರವಾಗಿ ಆಕ್ರಮಣ ಮಾಡುವಂತಹ ಶಕ್ತಿ ಹಾಗೂ ಧೈರ್ಯವನ್ನು ಹೊಂದಿದ್ದಾನೆ.

ಬಾದಶಾಹನ ಆಜ್ಞೆಯು ತಲುಪುತ್ತಲೇ, ಠಾಣೆಯಿಂದ ಸೇವಕರನ್ನು ಕಳುಹಿಸಿ; ಉಲ್ಲೇಖಿತ ಕೋಯ್‌ಬಾಳ್ ಗ್ರಾಮದ ಪಟೇಲನನ್ನು ಬಂಧಿಸಿ, ಕರೆದುಕೊಂಡು ಬನ್ನಿರಿ. ಅವನು ಎಷ್ಟು ನೊಗ ಬಟ್ಟೆ ಮತ್ತು ನಗದು ದೋಚಿದ್ದಾನೆಯೋ, ಅದರ

ಲೆಕ್ಕಪರಿಶೀಲನೆ ಮಾಡಿ; ದರ್ಬಾರಿಗೆ ಕಳುಹಿಸಿರಿ. ಅವನಿಗೆ ಸೂಕ್ತವಾದ ಶಿಕ್ಷೆ ನೀಡಿರಿ. ಏಕೆಂದರೆ: ಇದರ ನಂತರ, ಅವನು ಕಳ್ಳತನ ಹಾಗೂ ದರೋಡೆಯನ್ನು ತ್ಯಜಿಸಬೇಕು.

ಜಗತ್ತಿಗೆ ಆಜ್ಞೆ ನೀಡುವವನ ಆಜ್ಞೆಗೆ ಅನುಸಾರವಾಗಿ, ಈ ವಿಷಯದಲ್ಲಿ ಎಚ್ಚರಿಕೆ ನೀಡಲಾಗಿದೆ.

ಹಿಜ್ರಿ ೧೦೫೯ರ ಮೊಹರಮ್ ತಿಂಗಳಿನ ೨೦ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಪುರ್‌ನೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

೬೫

ಸು.೧೦೪೯ ಶಕ.೧೫೭೦ ಫಾಲ್ಗುಣ ವದ್ಯ ೧೪

ಹಿಜ್ರಿ. ೧೦೫೯ ಸಫರ್ ೨೭ ಕ್ರಿ.ಶ.೧೬೪೯ ಮಾರ್ಚ್, ೨

ಅವನು ಮಿತ್ರನಾಗಿದ್ದಾನೆ
ದೇಶವು ದೇವರಿಗಾಗಿ ಇದೆ.

ಗುತ್ತಲದ ಖ್ಯಾತನಾದ ಹನುಮಂತ ಗೌಡ(ಗೌಡ?)ನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಉನ್ನತ ಸ್ಥಾನ ಹೊಂದಿದ ಮತ್ತು ಜಗತ್ತಿಗೆ ಆಜ್ಞೆ ನೀಡುವ ಬಾದಶಾಹನ ಆಜ್ಞೆಯು ಜಾರಿಯಾಗಿದೆ. ಬಾದಶಾಹನ ಧೋರಣೆಗೆ ಅನುಸಾರವಾಗಿ, ವಿಜಯಿ ಸೈನ್ಯವನ್ನು ತೆಗೆದುಕೊಂಡು ತನ್ನ ಸಮೂಹ ಹಾಗೂ ಸೇವಕರೊಂದಿಗೆ, ನೇತೃತ್ವ ಹಾಗೂ ಶ್ರೀಮಂತಿಕೆಗೆ ಆಶ್ರಯದಾತ, ಹಿರಿತನ ಮತ್ತು ವೈಭವದಲ್ಲಿ ತಜ್ಞ, ಆಡಳಿತೆ ಹಾಗೂ ಉತ್ತರಾಧಿಕಾರತ್ವಕ್ಕೆ ಶಕ್ತಿ ನೀಡುವ, ಸಾಮ್ರಾಜ್ಯದ ವಿಸ್ತಾರ ಹೆಚ್ಚಿಸುವ ಶೌರ್ಯ ಮತ್ತು ಸುದೈವದ ಉಂಗುರದ ಹರಳು, ಬಲಿದಾನ ಹಾಗೂ ವೀರತ್ವವೆಂಬ ಮುತ್ತಿನ ಮಿಂಚು, ಸಾಮ್ರಾಜ್ಯದ ತೋಳಿನ ತೆರೆದ ಖಡ್ಗ, ಸೋಮಾರಿ ವೈರಿಯ ರಣರಂಗದ ತೀಕ್ಷ್ಣಗೊಳಿಸಿದ ಕಠಾರಿ, ಸೈನ್ಯದ ಪೀಠಿಕೆ, ದೇಶ ಜಯಿಸುವ ಸೈನಿಕ, ವಿಜಯ ಹಾಗೂ ಯಶಸ್ಸಿನ ಮೈದಾನದ ಮುಂದಾಳು, ಕಾಂತಿ ಮತ್ತು ಶ್ರೇಷ್ಠತೆಯ ವಿಧಾನಗಳ ಅನ್ವೇಷಕ, ಸಂಪತ್ತು ಹಾಗೂ ಸೌಭಾಗ್ಯ ಸಿಂಹಾಸನದ ಮುತ್ತು, ದೇವರ ಪ್ರತಿನಿಧಿಗಳ ರಹಸ್ಯದ ಖಜಾನೆ, ಚಾಣಾಕ್ಷತೆ ಮತ್ತು ಬೇಹುಗಾರಿಕೆಯ ಸಂಗ್ರಹ, ಬಾದಶಾಹನ ನಿಕಟವರ್ತಿಗಳ ಆಧಾರ ಶಿಲೆ, ಅತ್ಯಂತ ಖಾಸಗಿ ರಹಸ್ಯಜ್ಞ, ಸಂತೋಷ ತುಂಬುವ ಚೀಲದ ಸಿಂಹಾಸನ, ಕೃಪಾದೃಷ್ಟಿಯ ಸಂಗ್ರಹ,ದೇವರ ಇನಾಮುಗಳ ಹಕ್ಕುದಾರ, ಏಕತಾ ಸಭೆಯ ಮಿತ್ರ, ಏಕಾಂತ ಕೂಟದ ಜೊತೆಗಾರ, ಆಲಿಶಾನ್ ರಫಿಮಕಾನ್, ಮಹಾನ್ ನಾಯಕರ ಸಾರಾಂಶ, ಜಗತ್ತು ಹಾಗೂ ಕಾಲದ ನಾಯಕರ ಕೆನೆ, ಜಗತ್ತಿನ ಆರಂಭ ಮತ್ತು ಅಂತ್ಯದ ಆಜ್ಞಾಪಾಲಕ, ಧರ್ಮರಕ್ಷಕ, ಆಡಳಿತದ ಮಂತ್ರಿಯಾದ ಖಾನ್ ಮೊಹಮ್ಮದನ ಬಳಿಗೆ ಹೋಗಬೇಕು.

ಆಜ್ಞೆಯು ಪ್ರಾಪ್ತವಾದ ನಂತರ, ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಆಡಳಿತಗಾರನ ಹತ್ತಿರ ಹೋಗಿ; ಜೀವದ ಹಂಗು ತೊರೆದು ಬಲಿದಾನ ಮಾಡುವ ಧೈರ್ಯದ ಚಿನ್ಹೆಯನ್ನು ಬಹಿರಂಗಗೊಳಿಸಿ, ಸ್ವಾಮಿ ನಿಷ್ಠೆಯ ಸಾಕ್ಷಿಯನ್ನು ಕೊಡಬೇಕು. ಇದು ಆತನ ಉನ್ನತಿಗಾಗಿ ಅಗತ್ಯವಿದೆ.

ಹಿಜ್ರಿ ೧೦೫೯ರ ಸಫರ್ ತಿಂಗಳಿನ ೨೭ನೇ ತಾರೀಖಿಗೆ ಬರೆಯಲಾಗಿದೆ.

ಸು.೧೦೪೯ ಶಕ.೧೫೭೧ ಜೇಷ್ಠ ಶುದ್ಧ ೪
ಹಿಜ್ರಿ. ೧೦೫೯ ಜವಲ್ ೨ ಕ್ರಿ.ಶ.೧೬೪೯ ಮೇ,೫

ಅವನು ಮಿತ್ರನಾಗಿದ್ದಾನೆ
ದೇಶವು ದೇವರಿಗಾಗಿ ಇದೆ.

ಶಾಹೆದೀನ್ ಮೊಹಮ್ಮದ ಇಬ್ರಾಹೀಮರ ಕೈಕೆಳಗೆ ಏಳು ಜಗತ್ತುಗಳು ಬಂದಿವೆ.

ಬಂಕಾಪೂರ ವ್ಯವಹಾರದ ಕೆರೂರ್ ಕಡೆಗಿನ ಕಾರ್ಯನಿರ್ವಾಹಕರೇ ಮತ್ತು ದೇಸಾಯರಿಗೆ, ಈ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೪೯ರಲ್ಲಿ ಗೋವಿಂದ ನಾಯಕ್ ಹಾಗೂ ತಿಮ್ಮಾಜಿ ನಾಯಕನ ಆನುವಂಶಿಕ ಆಸ್ತಿ ಇತ್ಯಾದಿ ಇನಾಮುಗಳ ರೂಪದಲ್ಲಿ ಪ್ರಾಪ್ತವಾಗಿರುವ ಎರಡು ವರ್ಷಗಳ ನಾಲ್ಕು ಸಾವಿರ ಹೂನ್ ದೈನಂದಿನಿಕ ಆಹಾರ ವೇತನದ ಎರಡು ಸಾವಿರ ಹೂನ್ ಮತ್ತು ಹಿಜ್ರಿ ೧೦೫೦ರ ಎರಡು ಸಾವಿರ ಹೂನ್ ಕಳುಹಿಸಲಾಗಿದೆ. ಈ ಆನುವಂಶಿಕ ಆಸ್ತಿಯಲ್ಲಿ ಮೇಲ್ಕಾಣಿಸಿದ ವ್ಯವಹಾರದ ಉಲ್ಲೇಖಿತ ದಿಕ್ಕಿನ ಕಡೆಗಿನ ಇಬ್ರಾಹೀಮ್‌ಪುರದ ಮಹಾಜಂಗೀಪೇಟೆಯ ದೇಸಾಯಿ ಬುಳ್ಳಪ್ಪನ ಎರಡು ವರ್ಷಗಳ ಇನಾಮಿನಲ್ಲಿ, ೧೭೫ಹೂನ್ ಅರ್ಥಾತ್ ಉಲ್ಲೇಖಿತ ತಾರೀಖಿನವರೆಗೆ, ೮೭ ಹೂನ್ ಅರ್ಧ ಹಾಗೂ ಹಿಜ್ರಿ ೧೦೫೦ರ ೮೭ ಹೂನ್ ಅರ್ಧ ನಿಗದಿಮಾಡಲಾಗಿದೆ.

ಉಲ್ಲೇಖಿತ ಹಣವನ್ನು ವಸೂಲು ಮಾಡಿದ ನಂತರ ದೈನಂದಿನಿಕ ಆಹಾರ ವೇತನಕ್ಕಾಗಿ; ಮಹಲಿಗೆ ಕಳುಹಿಸಿ ಕೊಡಬೇಕು. ಒಂದುವೇಳೆ, ಹಣವನ್ನು ಕೊಡಲು ಅಡ್ಡಿ-ಆತಂಕ ಅಥವಾ ನೆಪ ಮಾಡಿದರೆ; ಅಗತ್ಯ ಸಾಮಾನುಗಳ ಹಕ್ಕು, ಇನಾಮು ಮತ್ತು ಇತರ ಠೇವಣಿಯನ್ನು ತೆಗೆದುಕೊಂಡು, ಕಳುಹಿಸಿರಿ. ಜಗತ್ತಿಗೆ ಆಜ್ಞೆ ನೀಡುವವನ ಆಜ್ಞೆಯನ್ನು ಕಾರ್ಯಗತಗೊಳಿಸಿರಿ.

ಹಿಜ್ರಿ ೧೦೫೯ರ ಜಮಾದಿ ಉಲ್ ಅವ್ವಲ್ ತಿಂಗಳಿನ ೨ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಪುರ್‌ನೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

ಸು.೧೦೪೪ ಶಕ.೧೫೭೧ ಶ್ರಾವಣ ಶುದ್ಧ ೧೫
ಹಿಜ್ರಿ. ೧೦೫೯ ಶಾಬಾನ್ ೧೩ ಕ್ರಿ.ಶ.೧೬೪೯ ಅಗಸ್ಟ ೧೨

ಅವನು ಮಿತ್ರನಾಗಿದ್ದಾನೆ
ದೇಶವು ದೇವರಿಗಾಗಿ ಇದೆ.

ಹಿರಿಯ ಬಡತಿ (ಬಡಿ ಸಾಹೇಬಾ)

ಗುತ್ತಲದ ಕಡೆಗಿನ ದೇಸಾಯಿ ಹನುಮಂತ ಗೌಡನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :–

ಹಿಜ್ರಿ ೧೦೪೪ರಲ್ಲಿ, ಪಾವಿತ್ರ್ಯದ ಪರದೆಯಲ್ಲಿರುವ, ಆಕಾಶದಂತಹ ಗೌರವದೊಂದಿಗೆ ಮೈತ್ರಿ ಹೊಂದಿದ, ಗಾಂಭೀರ್ಯ ಮತ್ತು ಭಾಗ್ಯದ ಪರದೆಯುಳ್ಳ, ಮಧುಶಯ್ಯೆಯಲ್ಲಿರುವ, ತನ್ನ ಕಾಲದ ಬಲ್‌ಖೀಸ್ ರಾಣಿ, ಸಮಯ ಪವಿತ್ರ ಖದೀಜಾ, ನೈರ್ಮಲ್ಯದ ಆಶ್ರಯದಾತ, ಹದಾರತ್‌ದಲ್ಲಿ ತಜ್ಞೆ, ಎರಡೂ ಲೋಕಗಳ ಮರ್ಯಾದೆ, ಸಮಗ್ರ ಜಗತ್ತಿನಲ್ಲಿ ಖ್ಯಾತ, ಧರ್ಮನಿಷ್ಠೆಯುಳ್ಳ, ಆಲಿಜನಾಬ್;

ಬಂಕಾಪೂರ ವ್ಯವಹಾರದ ಪೇಟೆಗೆ ಸಂಬಂಧಿಸಿದ ಕೆರೂರದ ಕಡೆಗಿನ ಅವಶ್ಯಕತೆಗಳ ಮಹಲಿಗೆ ಹೋದಾಗ, ದರ್ಬಾರಿಗೆ ತಿಳಿದು ಬಂದಿರುವದೇನೆಂದರೆ : ಮಲ್ಲೂರ್ ಲಖಮ್, ಸಾಯಿನ್ನಾ ಮಂಜೀ, ಭರಪಾ ಕರಲ್ ಮತ್ತು ಚನ್ನಯ್ಯ ಗೌಡ ಗನಿಕೋಪ್ ಈ ನಾಲ್ವರು ದಂಗೆ ಮಾಡಿ, ಉಲ್ಲೇಖಿತ ದಿಕ್ಕಿನ ಗ್ರಾಮಗಳಲ್ಲಿ ಅತ್ಯಾಚಾರ ಮಾಡಿ, ಯಾತನೆ ನೀಡಿ; ದನ-ಕುರಿಗಳನ್ನು ಅಪಹರಿಸಿದರು. ಅವರು ಎಷ್ಟೊಂದು ಲೂಟಿ ಮಾಡಿದ್ದಾರೆಬುಂದನ್ನು ಅಂದಾಜು ಮಾಡಲು ಸಾಧ್ಯವೋ? ಉಲ್ಲೇಖಿತ ಬಂಡುಕೋರರಿಗೆ ದೇಸಾಯಿಯು ಶಿಕ್ಷೆ ನೀಡದೇ ಇರುವ ಅರ್ಥವೇನು?

ಬಾದಶಾಹನ ಆಜ್ಞೆಯು ಪ್ರಕಟವಾಗುತ್ತಲೇ, ಬಂಡುಕೋರರಿಗೆ ಕಡ್ಡಾಯವಾಗಿ ಎಚ್ಚರಿಕೆ ನೀಡಿ; ಮೇಲ್ಕಾಣಿಸಿದ ದಿಕ್ಕಿನ ಕಡೆಗಿನ ಗ್ರಾಮುಗಳಿಂದ ಅಪಹರಣ ಮಾಡಿದಂತಹ ದನ-ಕುರಿಗಳನ್ನು ಬಿಡುಗಡೆಗೊಳಿಸಿ, ಹಿಂತಿರುಗಿಸಿ ಕೊಡಬೇಕು. ಈ ಗ್ರಾಮಗಳಿಗೆ ಯಾವುದೇ ಪ್ರಕಾರದ ತೊಂದರೆ ನೀಡಬಾರದೆಂದು ಎಚ್ಚರಿಕೆ ನೀಡಿ; ಅವರು ತಮ್ಮ ಮಿತಿಯಲ್ಲಿಯೇ ಇರಲು ತಿಳಿಸಬೇಕು. ಈ ಪ್ರದೇಶದಲ್ಲಿ ಜನರನ್ನು ನೆಲೆಗೊಳಿಸಿ, ಪ್ರತಿವರ್ಷ ಈ ಕಾರ್ಯವನ್ನು ವಿಸ್ತಾರಗೊಳಿಸುವ ಮೂಲಕ, ಆತನು

ಸ್ವಾಮಿನಿಷ್ಠೆಯನ್ನು ಪ್ರಕಟಗೊಳಿಸಬೇಕು. ಬಾದಶಾಹನ ಆಜ್ಞೆಯನ್ನು ಅನುಷ್ಠಾನಗೊಳಿಸುವದರಲ್ಲಿಯೇ ಆತನ ಕಲ್ಯಾಣವಿದೆ.

ಹಿಜ್ರಿ ೧೦೫೫ರ ಶಾಬಾನ್ ಉಲ್ ಮೊಅಜ್ಜಮ್ ತಿಂಗಳಿನ ೧೩ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಸು.೧೦೫೨ ಶಕ.೧೫೭೩ ಮಾಘ ವದ್ಯ ೧೩
ಹಿಜ್ರಿ ೧೦೬೨ ಸಫರ್ ೨೬ ಕ್ರಿ.ಶ.೧೬೫೨ ಜನವರಿ, ೨೮

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಗುತ್ತಲದ ಖ್ಯಾತನಾದ ದೇಸಾಯಿ ಹನುಮಂತ ಗೌಡನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಲಕ್ಷ್ಮೇಶ್ವರ ತಾಲ್ಲೂಕಿನ ದೇಸಾಯಿ ಖಾನ್‌ಗೌಡನ ನಿಧನದ ನಂತರ ಕೆಂಚಗೌಡನ ಸೋದರನಾದ ಶಿವನು ಲಂಚಕೋರತನವನ್ನು ಆರಂಭಿಸಿದನೆಂಬುದು ಹಿಜ್ರಿ ೧೦೫೨ರಲ್ಲಿ ದರ್ಬಾರಿಗೆ ತಿಳಿದುಬಂದಿದೆ. ಉಲ್ಲೇಖಿತ ತಾಲ್ಲೂಕಿನ ಶಿರಹಟ್ಟಿ ಗ್ರಾಮದಲ್ಲಿ ಅವನು ವಿವಿಧ ಪ್ರಕಾರದ ಉದ್ಧಟತನ ಮತ್ತು ಫಿತೂರಿಯನ್ನು ಪ್ರೇರೆಪಿಸಿದನು. ಅವನನ್ನು ಎದುರಿಸಿ, ಅವನಿಗೆ ಯೋಗ್ಯ ಶಿಕ್ಷೆಯನ್ನು ನೀಡಲು, ಬಾದಶಾಹನು ವೀರತ್ವಉಳ್ಳ, ಆಜ್ಞಾಧಾರಕನಾದ ಇಬ್ರಾಹೀಮ್ ಮೂಸಾಖಾನನನ್ನು ಸೈನ್ಯದೊಂದಿಗೆ ಮೇಲ್ಕಾಣಿಸಿದ ತಾಲ್ಲೂಕಿನಲ್ಲಿ ನೇಮಕ ಮಾಡಿದ್ದಾನೆ. ಬಾದಶಾಹನ ಆಜ್ಞೆಯು ದೊರಕುತ್ತಲೇ ಖ್ಯಾತನಾದ ದೇಸಾಯಿ ಹನುಮಂತ ಗೌಡನು ತನ್ನ ಗುಂಪು ಹಾಗೂ ಸೇವಕರೊಂದಿಗೆ ಉಲ್ಲೇಖಿತ ತಾಲ್ಲೂಕಿಗೆ ಹೋಗಬೇಕು. ಇಬ್ರಾಹೀಮ್ ಮೂಸಾಖಾನ್‌ನೊಂದಿಗೆ ಜೊತೆಗೂಡಿ, ಅವನ ಅನುಮತಿಯಿಂದ; ದಂಗೆಕೋರರನ್ನು ಕೊಲ್ಲಲು; ಆಕಾಶದಂತಹ ದರ್ಬಾರಿಗಾಗಿ ಪ್ರಾಣಾರ್ಪಣೆ ಮತ್ತು ಸ್ವಾಮಿನಿಷ್ಠೆಗೆ ಆದ್ಯತೆ ನೀಡಬೇಕು. ಒಂದು ಕ್ಷಣವನ್ನೂ ಸಹ, ವ್ಯರ್ಥಮಾಡಬಾರದು. ಹಿಂಜರಿಕೆ ಹಾಗೂ ನಿರ್ಲಕ್ಷ್ಯ ಮಾಡದಿರುವದರಲ್ಲಿಯೇ, ಆತನ ಉನ್ನತಿ ಇದೆ. ಜಗತ್ತಿಗೆ ಆಜ್ಞೆನೀಡುವವವ ಆಜ್ಞೆಗೆ ಅನುಸಾರವಾಗಿ, ಕಾರ್ಯಾಚರಣೆ ಮಾಡಲು ಕಠಿಣ ಎಚ್ಚರಿಕೆಯನ್ನು ನೀಡಿ; ಮೇಲ್ವಿಚಾರಣೆ ಮಾಡಿರಿ.

ಹಿಜ್ರಿ ೧೦೬೨ರ ಸಫರ್ ಉಲ್ ಮುಜಫ್ಫರ್ ತಿಂಗಳಿನ ೨೬ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

ಸು.೧೦೫೫ ಶಕ.೧೫೭೬ ಪೌಷ ಶುದ್ಧ ೬
ಹಿಜ್ರಿ ೧೦೬೫ ರಬಲ್ ೪ ಕ್ರಿ.ಶ.೧೬೫೫ ಜನವರಿ, ૩

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಬಂಕಾಪೂರ ವ್ಯವಹಾರದ ಗುತ್ತಲ್ ದೇಸಾಯಿ ಹನುಮಂತ ಗೌಡನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೫೫ರಲ್ಲಿ, ಆ ದುರಹಂಕಾರಿ ಹಾಗೂ ದುರಾಚಾರಿಗೆ (ಕೆಂಚನ ಗೌಡನ ಸೋದರನಾದ ಶಿವನಿಗೆ)ಗದರಿಕೆ ಮತ್ತು ಎಚ್ಚರಿಕೆ ನೀಡಲು;

ಗೌರವ ಹಾಗೂ ಘನತೆಯಲ್ಲಿ ತಜ್ಞ, ಗಾಂಭೀರ್ಯ ಮತ್ತು ವೈಭವದಜ್ಞಾನಿ, ಶೌರ್ಯ ಹಾಗೂ ವೀರತ್ವಕ್ಕೆ ಆಶ್ರಯದಾತ, ಬಾದಶಾಹನ ದರ್ಬಾರಿನ ಕಾರ್ಯದರ್ಶಿ, ಖಾಖಾನನ ದರ್ಬಾರಿನಂತಹ ಸತ್ಯವಾದಿ, ಅತ್ಯುತ್ತಮ, ಉನ್ನತ ಗೌರವಾನ್ವಿತ, ಎತ್ತರದ ದರ್ಜೆಯ ಮಹಾನ್ ನಾಯಕನಾದ ಮಲೀಕ್ ರೆಹಾನ್‌ನಿಗೆ ನೇಮಕ ಮಾಡಲಾಯಿತು. ಬಾದಶಾಹನ ಆಜ್ಞೆಯು ದೊರಕುತ್ತಲೇ, ನಿಮ್ಮ ಸೇವಕರು ಹಾಗೂ ಕೋಟೆಗಳ ವಿಜಯದಲ್ಲಿ ಸಮರ್ಥರಾದವರನ್ನು; ಉಲ್ಲೇಖಿತ ಮಹಾನ್ ನಾಯಕನ ಸಹಾಯಕ್ಕಾಗಿ ಶೀಘ್ರವಾಗಿ ಕಳುಹಿಸಿರಿ. ಮೇಲ್ಕಾಣಿಸಿದ ಲಂಚಕೋರನಿಗೆ(ಶಿವನಿಗೆ) ಶಿಕ್ಷೆ ನೀಡಿ, ನಿಮ್ಮ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿರಿ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಕಾರ್ಯಾಚರಣೆ ಮಾಡಿರಿ. ಇದು ನಿಮ್ಮ ಕಲ್ಯಾಣ ಮತ್ತು ಉನ್ನತಿಗಾಗಿ ಅಗತ್ಯವಾಗಿದೆ. ಹಿಜ್ರಿ ೧೦೬೫ರ ರಬಿಉಲ್ ಅವ್ವಲ್ ತಿಂಗಳಿನ ೪ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

ಸು. ಶಕ.

ಹಿಜ್ರಿ. ಕ್ರಿ.ಶ.

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಬಾದಶಾಹನ ಕೃಪೆ ಮತ್ತು ಗೌರವದ ಹೆಚ್ಚಳದಿಂದ ಸನ್ಮಾನಿಸಲಾಗಿದೆ.......... ಮಹಮ್ಮದ್ ನಗರದ ವ್ಯವಹಾರದಲ್ಲಿ ನಿಧನ ಹೊಂದಿದನು............ ಉಲ್ಲೇಖಿತ ವ್ಯವಹಾರದ ನಾಯಕತ್ವ .... ಅಮೌಲ್ಯವಾದ ಗೌರವ ವಸ್ತ್ರವನ್ನು ಅವನಿಗೆ ಕಳುಹಿಸಲಾಗಿದೆ.......... ತನ್ನ ತಂದೆಯ ಬಗೆಗೆ ದುಃಖವಿಲ್ಲ......... ದರ್ಬಾರಿಗಾಗಿ ಪ್ರಾಣತ್ಯಾಗ ಹಾಗೂ ಅರ್ಪಣಾಭಾವ .... ದರ್ಬಾರಿಗಾಗಿ ಸಮರ್ಪಣಾ ಭಾವನೆ ಮತ್ತು ಕಲ್ಯಾಣವು ಅತ್ಯಧಿಕವಾಗಿ ಪ್ರಕಟವಾಯಿತು..........

ಹುಜೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಹಿಜ್ರಿ ೧೧೬೭ ರವಲ್ ೨೬ ಶಕ.೧೫೭೮ ಮಾಘ ಶುದ್ಧ ೧
ಕ್ರಿ.ಶ.೧೬೫೭ ಜನವರಿ, ೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಈ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ದುರ್ದೈವದಿಂದ, ದುರಾಚಾರಿಯಾದ ಶಿವನು ಆಜ್ಞಾಪಾಲನೆ ಮತ್ತು ವಿಧೇಯತೆಯ ಮಾರ್ಗದಿಂದ ದೂರ ಸರಿದು; ಬಾದಶಾಹನ ಅಜ್ಞೋಲ್ಲಂಘನೆ ಮಾಡಿದ್ದಾನೆಂಬ ದರ್ಬಾರಿಗೆ ಗೊತ್ತಾಗಿರುವ ಸಂಗತಿಯನ್ನು ಬಾದಶಾಹನ ಅಪಾರ ಕೃಪೆಯ ಆಕಾಂಕ್ಷಿಯಾದ ಗುತ್ತಲದ ಖ್ಯಾತನಾದ ಹನುಮಂತ ಗೌಡನು ತಿಳಿಯುತ್ತಾನೆ.

ನೇತೃತ್ವ ಹಾಗೂ ಶ್ರೀಮಂತಿಕೆಗೆ ಆಶ್ರಯದಾತ, ಕಾಂತಿ ಮತ್ತು ವೈಭವದಲ್ಲಿ ತಜ್ಞ, ಆಡಳಿತೆ ಹಾಗೂ ಉತ್ತರಾಧಿಕಾರತ್ವದ ಸಹಾಯಕ, ದೇಶ ವಿಸ್ತರಣೆಗೆ ಭರವಸೆ ನೀಡುವ, ಶೌರ್ಯ ಮತ್ತು ಸೌಭಾಗ್ಯದ ಉಂಗುರದ ಹರಳು, ವೀರತ್ವ ಹಾಗೂ ಪ್ರಾಣತ್ಯಾಗದ ಮುತ್ತಿನ ಮಿಂಚು, ಬಾದಶಾಹನ ತೋಳಿನ ತೆರೆದ ಖಡ್ಗ, ಸೋಮಾರಿ ವೈರಿಯ ರಣರಂಗದ ತೀಕ್ಷ್ಣಗೊಳಿಸಿದ ಕಠಾರಿ, ಸೈನ್ಯದ ಪೀಠಿಕೆ, ಲೋಕ ಶೃಂಗಾರ ಮಾಡುವವ, ವಿಜಯ ಮತ್ತು ಯಶಸ್ಸಿನ ಮೈದಾನದ ಅಗ್ರಗಾಮಿ, ಶೋಭೆ ಹಾಗೂ ಶ್ರೇಷ್ಠತೆಯ ವಿಧಾನಗಳ ಅನ್ವೇಷಕ, ಸಂಪತ್ತು ಮತ್ತು ಉನ್ನತ ಭಾಗ್ಯ ಸಿಂಹಾಸನದ ಮುತ್ತು, ದೇವರ ಪ್ರತಿನಿಧಿಗಳ ರಹಸ್ಯ ಭಂಡಾರ, ಚಾಣಾಕ್ಷತೆ ಹಾಗೂ ಬೇಹುಗಾರಿಕೆಯ ಸಂಗ್ರಹ, ಬಾದಶಾಹನ ಏಕತೆಯ ಸಂಸ್ಥಾಪಕ, ಅತಿಖಾಸಗಿ ಸಂಗತಿಗಳ ಜ್ಞಾನಿ, ಸಂತೋಷದ ಸಿಂಹಾಸನ; ಇನಾಮು ದೃಶ್ಯಗಳ ಸ್ಥಾನ, ದೇವರ ಕೃಪೆಯ ಹಕ್ಕುದಾರ, ಏಕತಾ ಸಭೆಯ ಮಿತ್ರ ಏಕಾಂಕ ಕೂಟದ ಜೊತೆಗಾರ, ಅತ್ಯುತ್ತಮ, ಉನ್ನತ ದರ್ಜೆಯುಳ್ಳವ, ನಾಯಕರ ಸಾರಾಂಶ, ಜಗತ್ತು ಮತ್ತು ಕಾಲದ ನಾಯಕರ ಕೆನೆ; ಜಗತ್ತಿನ ಆರಂಭ ಹಾಗೂ ಅಂತ್ಯದ ಆಜ್ಞಾಪಾಲಕ, ಧರ್ಮದ ರಕ್ಷಕ, ಆಡಳಿತೆಯ ಮಂತ್ರಿಯಾದ ಖಾನ್ ಮೊಹಮ್ಮದನ ಪುತ್ರನಾದ

ಸಂಪತ್ತು ಮತ್ತು ಸೌಭಾಗ್ಯ ಉದ್ಯಾನದ ಬೆಳಕು, ಗಾಂಭೀರ್ಯ ತೋಟದ ಪ್ರಥಮ ಫಲ, ಆಜ್ಞಾಪಾಲಕ, ಸೌಭಾಗ್ಯ ಸಂಪನ್ನ, ವಿಧೇಯಕ, ಉನ್ನತ ದರ್ಜೆ ಹಾಗೂ ಉಪಕಾರ ಮಾಡುವ ಬಾದಶಾಹನ ದರ್ಬಾರಿನಿಂದ ಪೋಷಿತ, ಗೌರವಾನ್ವಿತ,

ಉನ್ನತ ಹುದ್ದೆ ಹೊಂದಿದ ಮೊಹಮ್ಮದ್ ಇಕ್ಲಾಸ್‌ಖಾನನಿಗೆ; 'ಕರ್ನಾಟಕದ ಸುಬೇದಾರ' ಎಂದು ನೇಮಕ ಮಾಡಿ ಹಿರಿಯ ಮಂತ್ರಿಗಳೊಡನೆ ಮಾಸೂರಿನ ಕಡೆಗೆ ಕಳುಹಿಸಲಾಗಿತ್ತು. ಇವರೆಲ್ಲರೂ, ದುರಾಚಾರಿಯಾದ ಶಿವನೊಂದಿಗೆ ಹೋರಾಟ ಮಾಡಿ; ಅವನನ್ನು ಸೋಲಿಸಿ, ದರ್ಬಾರಿನ ಸ್ವಾಮಿನಿಷ್ಠೆ ಮತ್ತು ಕಲ್ಯಾಣಕ್ಕಾಗಿ ಮಿತಿಮೀರಿ ಪ್ರಯತ್ನ ಮಾಡುತ್ತಿದ್ದರು.

ರಟ್ಟಿಹಳ್ಳಿ ವ್ಯಾಪ್ತಿಯಲ್ಲಿ ಬರುವಂತಹ, ಉನ್ನತ ದರ್ಜೆಯ ಮಂತ್ರಿ ಆಜಮ್‌ಖಾನನಿಂದ ಹಿಂಪಡೆಯಲಾದ ಲಿಂಗದ ಹಳ್ಳಿ ಹಾಗೂ ಕೋಟಿಹಾಳ್ ಗ್ರಾಮಗಳೆರಡನ್ನು; ಅವುಗಳ ಆದಾಯ ನಗದು ಹಣ ಮತ್ತು ಇತರ ವಿಷಯಗಳೊಂದಿಗೆ, ಆ ಸ್ವಾಮಿನಿಷ್ಠನಿಗೆ ಶಾಶ್ವತವಾಗಿ; ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ ಕೊಡಲಾಗಿದೆ. ಈ ಇನಾಮು ಆತನ ಮಕ್ಕಳು ಹಾಗೂ ಮೊಮ್ಮಕ್ಕಳಿಗೆ ಅನುಂಶಿಕವಾಗಿ ಕೊಡಲ್ಪಟ್ಟಿದೆಯೆಂದು ಭಾವಿಸಬೇಕು. ಆಕಾಶದಂತಹ ದರ್ಬಾರಿನ ಸ್ವಾಮಿನಿಷ್ಠೆ ಮತ್ತು ಕಲ್ಯಾಣದ ಪ್ರಯತ್ನವನ್ನು ಮಾಡುತ್ತಿರಬೇಕು. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಇಂತಹ ಕ್ರಮವು ಆತನ ಉನ್ನತಿಗಾಗಿ ಅಗತ್ಯವಾಗಿದೆ.

ಹಿಜ್ರಿ ೧೦೬೭ರ ರಬಿಉಲ್ ಅವ್ವಲ್ ತಿಂಗಳಿನ ೨೯ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಅಶ್ರಫ್ ಅಬ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಸು.೧೦೫೭ ಶಕ.೧೫೭೮ ಮಾಘ ವದ್ಯ ೬
ಹಿಜ್ರ. ೧೦೬೭ ರಬಲ್ ೧೯ ಕ್ರಿ.ಶ.೧೬೫೭ ಜನವರಿ, ೨೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.
ಮೆಹರ್‌ಅಲಿ

ಬಂಕಾಪೂರ ವ್ಯವಹಾರದ ಗುತ್ತಲ್‌ದ ದೇಸಾಯಿ ಹನುಮಂತ ಗೌಡನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರ ೧೦೫೭ರಲ್ಲಿ ಜಾರಿಗೊಳಿಸಲಾದ ಶುಭದಾಯಕ ಆಜ್ಞೆಯ ಮೇರೆಗೆ, ಅವನು ಬಾದಶಾಹನ ದರ್ಬಾರಿನಿಂದ ಘೋಷಿಸಲ್ಪಟ್ಟ ಹಳೆಯ ಸ್ವಾಮಿನಿಷ್ಠನಾಗಿದ್ದಾನೆ. ಈ ಆಜ್ಞೆಯು ತಲುಪುತ್ತಲೇ ಅವನು ತನ್ನ ಸೇವಕರೊಂದಿಗೆ ಅತಿ ಶೀಘ್ರವಾಗಿ ಸೇವೆಗಾಗಿ ದರ್ಬಾರಿಗೆ ಬರಬೇಕು. ಇಲ್ಲಿಗೆ ಬಂದನಂತರ, ಯಾವುದೇ ಕೊರತೆ ಮಾಡದೇ, ಸೇವಕರ ಎಲ್ಲ ವೆಚ್ಚವನ್ನು ಕೊಡಲಾಗುವುದು. ಸಾಧ್ಯವಿದ್ದಷ್ಟು ಅಧಿಕ ಸಂಖ್ಯೆಯಲ್ಲಿ ಸೇವಕರನ್ನು ಕಳುಹಿಸಲು ಬಂಧುಗಳಿಗೆ ಶುಭದಾಯಕ ಆಜ್ಞೆಗೆ ಅನುಸಾರವಾಗಿ ತಿಳಿಸಿರಿ.

ಹಿಜ್ರ ೧೦೬೭ರ ರಬಿಉಸ್‌ಸಾನಿ ತಿಂಗಳಿನ ೧೯ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

೭೩

ಸು.೧೦೬೦ ಶಕ.೧೫೮೧ -೮೨

ಕ್ರಿ.ಶ.೧೬೫೯-೬೦

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ

ದೇಶವು ದೇವರಿಗಾಗಿ ಇದೆ.

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.........

ಹಿಜ್ರಿ ೧೦೬೦ರಲ್ಲಿ, ...

ಶೀಘ್ರವಾಗಿ ಸ್ವಯಂ ಬಂದು, ಎಲ್ಲರೊಂದಿಗೆ ಭೆಟ್ಟಿಯಾಗಿರಿ..........ಮತ್ತು ಅವನಿಗೆ ಹನುಮಂತ ಗೌಡನ ಅಭಿಸಂಬೋಧನೆ ತಿಳಿಸಿರಿ. ಅಭಿಮಾನವು ಆಕಾಶದೆತ್ತರಕ್ಕೆ ತಲುಪಿತು........ ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಕಾರ್ಯನಿರ್ವಹಿಸಿರಿ.........

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ.

ಸು.೧೦೬೧ ಶಕ.೧೫೪೩ ಜೇಷ್ಠ ಶುದ್ಧ ೬
ಹಿಜ್ರಿ. ೧೦೭೧ ಶವ್ವಾಲ್ ೫ ಕ್ರಿ.ಶ.೧೬೬೧ ಮೇ, ೨೪

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ಬಾದಶಾಹ ಅಲಿಆದಿಲ್‌ಶಾಹ
ನಕಲು

ಹಿಜ್ರಿ ೧೦೭೧ರ ಶವ್ವಾಲ್ ತಿಂಗಳಿನ ೫ನೇ ತಾರೀಖಿಗೆ ಹಾಕಲ್ಪಟ್ಟ ಮುದ್ರೆಯುಳ್ಳ ಆಜ್ಞೆಯು

ಬಂಕಾಪೂರ ವ್ಯವಹಾರದ ಹಡಗಲಿ ಕಡೆಗಿನ ಕಾರ್ಯನಿರ್ವಾಹಕರು ಮತ್ತು ದೇಸಾಯರಿಗೆ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹನುಮಂತ ಗೌಡನ ದ್ವಾರಪಾಲಕನು ದರ್ಬಾರಿನಲ್ಲಿ ಸಲ್ಲಿಸಿದ ಮನವಿ ಏನೆಂದರೆ:

ಉಲ್ಲೇಖಿತ ದಿಕ್ಕಿನಲ್ಲಿರುವ ಹೊಳಲ್‌ಗ್ರಾಮದ ಸರಹದ್ದಿನಲ್ಲಿ, ದರೋಡೆಕೋರರ ಚಟುವಟಿಕೆಯು ನಿರಂತರವಾಗಿ ನಡೆಯುತ್ತಿರುವದರಿಂದ; ಮೇಲ್ಕಾಣಿಸಿದ ಗ್ರಾಮದಲ್ಲಿ ಐದು ಸೇವಕರನ್ನು ನೇಮಿಸಿ, ಈ ಪ್ರದೇಶದ ರಕ್ಷಣೆ ಮಾಡಲಾಗುತ್ತದೆ. ದಯವಿಟ್ಟು, ಉಲ್ಲೇಖಿತ ಗ್ರಾಮದ ರಕ್ಷಣೆಗಾಗಿ; ಸರಹದ್ದಿನಲ್ಲಿ ಜಾಗ್ರತೆಯಿಂದ ಕಾವಲು ಕಾಯುತ್ತಿರುವ ಸೇವಕರ ಜೀವನ ನಿರ್ವಹಣೆಗಾಗಿ ಶುಭದಾಯಕ ಆಜ್ಞೆಯನ್ನು ಕಳುಹಿಸಿ, ನ್ಯಾಯವನ್ನು ನೀಡಬೇಕು.

ಬಾದಶಾಹನು ದೇಸಾಯಿಯ ದ್ವಾರಪಾಲಕನ ಮನವಿಯನ್ನು ಗಮನಿಸಿ, ಉಲ್ಲೇಖಿತ ಹಡಗಲಿಯ ಕಡೆಗಿನ ಹೊಳಲ್ ಗ್ರಾಮವನ್ನು ಅದರ ಹೊಲಗಳೊಂದಿಗೆ, ಹನುಮಂತ ಗೌಡನಿಗೆ ಇನಾಮಿನ ವ್ಯವಹಾರ ಮತ್ತು ಕಾನೂನು ಆಧಾರದೊಂದಿಗೆ ಅವನ ಹೆಸರಿನಲ್ಲಿ ಸಂಯೋಜಿಸಲಾಗಿದೆ. ಅದನ್ನು ಅವನ ಮಕ್ಕಳು ಹಾಗೂ ಮೊಮ್ಮಕ್ಕಳಿಗೆ ಆನುವಂಶಿಕವಾಗಿ ಜಾರಿಗೊಳಿಸಬೇಕು.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಪ್ರತಿವರ್ಷ ಹೊಸ ಆಜ್ಞೆಯನ್ನು ಕೇಳುವಂತಹ ನೆಪ ಮಾಡಬಾರದು.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಹಿಜ್ರಿ ೧೧೭೪ ರಮಜಾನ್ ೮ ಶಕ.೧೫೮೬ ಚೈತ್ರ ಶುದ್ಧ ೧೧
ಕ್ರಿ.ಶ.೧೬೬೪ ಮಾರ್ಚ್ ೨೭

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :–

ಗೌರವ ಹಾಗೂ ಘನತೆಯಲ್ಲಿ ತಜ್ಞ, ಶೌರ್ಯ ಮತ್ತು ವೀರತ್ವ....... ನಾಯಕತ್ವ ಹಾಗೂ ಪ್ರಶಂಸೆಯ ಜಾಗ್ರತಿ ಸಂಪನ್ನ ಚುರುಕುತನದ ಮೈದಾನಿನ ಅಶ್ವಾರೋಹಿ ಶೂರತ್ವವೆಂಬ ಅಂಗಳದ ಸವಾರ ಆಸ್ಥಾನಿಕರ ವಿಶ್ವಾಸಾರ್ಹ, ಸಂಬಂಧಿಕರ ಕೆನೆ, ಮಹೋನ್ನತ ದರ್ಜೆ ಹೊಂದಿದಂತಹ ಸಂಬಂಧಿಕರ ಕೆನೆ, ಮಹೋನ್ನತ ದರ್ಜೆ ಹೊಂದಿದಂತಹ ಶರ್ಜಾ ಖಾನನನ್ನು; ತೊರಗಲ್ ವ್ಯವಹಾರ ಮತ್ತು ಮಲ್ನಾಡಿನ ಕಡೆಗೆ ನೇಮಕ ಮಾಡಿ, ಕಳುಹಿಸಲಾಗಿದೆ ಎಂಬ ಸಂಗತಿಯನ್ನು; ಮಂತ್ರಿಪದವಿ ಹೊಂದಿದ, ಬಾದಶಾಹನ ಅಪಾರ ಕೃಪೆಯಿಂದ ಗೌರವಾನ್ವಿತ ಹಾಗೂ ಆಕಾಂಕ್ಷಿಯಾದ ಹನುಮಂತ ಗೌಡನು ತಿಳಿಯುತ್ತಾನೆ. ಈ ಸ್ವಾಮಿನಿಷ್ಠನು ತನ್ನ ಗುಂಪು ಮತ್ತು ಸೇವಕರೊಂದಿಗೆ, ಉಲ್ಲೇಖಿತ ಖಾನನ ಹತ್ತಿರ ಹೋಗಿ; ವೈಭವಪೂರ್ಣ ದರ್ಬಾರಿಗಾಗಿ ಆತ್ಮತ್ಯಾಗ ಹಾಗೂ ಕಲ್ಯಾಣದ ಸೇವೆಯನ್ನು ಪ್ರಕಟಿಸಲಿ. ಈ ವಿಷಯದಲ್ಲಿ ಒಂದು ವೇಳೆ, ಅವನು ವಿಳಂಬ ಅಥವಾ ನೆಪ ಮಾಡಿದರೆ; ಒತ್ತಾಯಪೂರ್ವಕವಾಗಿ, ಅವನಿಗೆ ಎಚ್ಚರಿಕೆ ನೀಡಬೇಕು.

ಹಿಜ್ರಿ ೧೧೭೪ರ ರಮಜಾನ್ ಉಲ್ ಮುಬಾರಕ್ ತಿಂಗಳಿನ ೮ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಹಿಜ್ರಿ. ೧೦೭೫ ರಜ್ಜಬ್ ೪ ಶಕ.೧೫೮೬ ಮಾಘ ಶುದ್ಧ ೫
ಕ್ರಿ.ಶ.೧೬೬೫ ಜನವರಿ ೧೧.

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಬಾದಶಾಹನ ಅಪಾರ ಕೃಪೆಗಳ ಆಕಾಂಕ್ಷಿಯಾದ ದಿವಂಗತ ಹನುಮಂತ ಗೌಡನ ಪುತ್ರನಾದ ಚಿಕ್ಕಪ್ಪ ಗೌಡನು ತಿಳಿದಿರುವದೇನೆಂದರೆ : ಆತನ ತಂದೆಯಾದ ಹನುಮಂತ ಗೌಡನು ಬಾದಶಾಹನ ಧೋರಣೆಗಳನ್ನು ಕಾರ್ಯಗತಗೊಳಿಸುತ್ತ ನಿಧನ ಹೊಂದಿದನೆಂಬುದು; ದರ್ಬಾರಿಗೆ ಗೊತ್ತಾಗಿದೆ. ಆದುದರಿಂದ, ಬಾದಶಾಹನ ಅಪಾರ ಕೃಪೆಗಳಿಗೆ ಅನುಸಾರವಾಗಿ, ಹನುಮಂತ ಗೌಡನಿಗೆ ಕೊಡಲಾಗಿದ್ದ ಅರಮನೆಗಳು ಮತ್ತು ಜಾಹಗೀರನ್ನು; ಈ ಸ್ವಾಮಿನಿಷ್ಠನಿಗೆ ನಿಗದಿ ಮಾಡಿ ಕೊಡಲಾಗಿದೆ. ಈ ಆಜ್ಞೆಯು ದೊರಕುತ್ತಲೇ ದಿವಂಗತ ತಂದೆಯ ಅರಮನೆಗಳು ಹಾಗೂ ಜಾಹಗೀರಿನ ಆನುವಂಶಿಕ ಸೊತ್ತನ್ನು ತನ್ನದೆಂದು ಭಾವಿಸಿ; ದರ್ಬಾರಿನ ಸೇವೆ ಮತ್ತು ಒಳಿತಿಗಾಗಿ ಸ್ಥಿರವಾಗಿರುವದರಲ್ಲಿಯೇ, ಆತನ ಕಲ್ಯಾಣವಿದೆ. ಅಗತ್ಯವಾದ ಸಾಮಗ್ರಿಯ ಪ್ರಮಾಣ ಹಾಗೂ ಅಮೌಲ್ಯವಾದ ಗೌರವ ವಸ್ತ್ರಗಳನ್ನು ಕಳುಹಿಸಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಅಭಿಮಾನದಿಂದ ತಲೆ ಎತ್ತಿ, ಅವನು ಈ ವಸ್ತುಗಳನ್ನು ಸ್ವೀಕರಿಸಿ; ಸ್ವಾಮಿನಿಷ್ಠೆಯನ್ನು ಪ್ರಕಟಿಸಿರಬಹುದು.

ಹಿಜ್ರಿ ೧೦೭೫ರ ರಜ್ಜಬ್ ತಿಂಗಳಿನ ೪ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

೭೭

ಹಿಜ್ರಿ. ೧೦೭೮ ಜವಲ್ ೨೨ ಶಕ.೧೫೮೯ ಕಾರ್ತೀಕ ವದ್ಯ ೮
ಕ್ರಿ.ಶ.೧೬೬೭ ಅಕ್ಟೋಬರ್ ೩೦

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಶುಭದಾಯಕ ಆಜ್ಞೆಯನ್ನು ಜಾರಿಗೊಳಿಸಲಾಗಿದೆ :-

ಹರಪನಹಳ್ಳಿಕರನು ವಿದ್ರೋಹ ಮಾಡಿ; ಬಾದಶಾಹನ ಪ್ರದೇಶದಲ್ಲಿ ಆತಂಕವನ್ನು ಸೃಷ್ಟಿಸಿದನು. ಬಂಕಾಪೂರ ವ್ಯವಹಾರದ ಹಡಗಲಿಯ ಕಡೆಗೆ ಸ್ವಾಧೀನಪಡಿಸಿಕೊಂಡು, ರಕ್ಷಿಸಲ್ಪಟ್ಟಂತಹ ಪ್ರದೇಶವನ್ನು ಅವನು ತನ್ನ ನಿಯಂತ್ರಣಕ್ಕೆ ಒಳಪಡಿಸಲು ಬಯಸುತ್ತಿದ್ದನೆಂಬ ಸಂಗತಿಯನ್ನು; ಬಾದಶಾಹನ ಅಪಾರ ಕೃಪೆಗಳ ಆಕಾಂಕ್ಷೆಯಾದ, ಮಂತ್ರಿ ಸ್ಥಾನವನ್ನು ಹೊಂದಿದ್ದ ಹನುಮಂತ ಗೌಡನು ತಿಳಿದಿದ್ದನು. ಇಂತಹ ಸಮಯದಲ್ಲಿ ಆ ಸ್ವಾಮಿನಿಷ್ಠನು ಹರಪನಹಳ್ಳಿಕರನೊಂದಿಗೆ ಯುದ್ಧ ಮಾಡಿ, ಅವನನ್ನು ಪರಾಜಯಗೊಳಿಸಿ; ಬಾದಶಾಹನ ಪ್ರದೇಶವನ್ನು ವಶಪಡಿಸಿಕೊಂಡನು. ಹೀಗೆ, ಅವನು ತನ್ನ ಸ್ವಾಮಿನಿಷ್ಠೆ ಮತ್ತು ಶ್ರದ್ಧೆಯನ್ನು ಪ್ರಕಟಿಸಿದನು. ಅವನಿಗೆ ಇನ್ನೂ ಅಧಿಕ ಮನ್ನಣೆ ನೀಡಿ, ಅಮೌಲ್ಯವಾದ ಗೌರವ ವಸ್ತ್ರವನ್ನು ಕಳುಹಿಸಲಾಯಿತು. ಹಡಗಲಿಯ ಕಡೆಗಿನ ಪ್ರದೇಶವನ್ನು ಹರಪನಹಳ್ಳಿಕರನಿಂದ ಮುಕ್ತಗೊಳಿಸಿ ಖಾಸಾ ಸೈನ್ಯದ ವಶಕ್ಕೆ ನೀಡಲಾಯಿತು. ಆನಂತರ ಮೇಲ್ಕಾಣಿಸಿದ ದಿಕ್ಕಿನಲ್ಲಿ ಹಸ್ತಕ್ಷೇಪ ಮಾಡಲು, ಹರಪನಹಳ್ಳಿಕರನಿಗೆ ಅವಕಾಶ ನೀಡಲಾಗಿಲ್ಲ. ಈ ಸಂಗತಿಯು ಆತನ ಹೆಚ್ಚಿನ ಗೌರವಕ್ಕೆ ಕಾರಣವಾಯಿತು.

ಹಿಜ್ರಿ ೧೦೭೮ರ ಜಮಾದಿ ಉಲ್ ಅವ್ವಲ್ ತಿಂಗಳಿನ ೨೨ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಹಿಜ್ರಿ. ೧೦೮೧ ಶಾಬಾನ್ ೭ ಶಕ.೧೫೯೨ ಪೌಷ ಶುದ್ಧ ೯
ಕ್ರಿ.ಶ.೧೬೭೦ ಡಿಸೆಂಬರ್ ೧೦

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ನಾಯಕತ್ವ ಮತ್ತು ಪ್ರಶಂಸೆಗೆ ಆಶ್ರಯದಾತ, ಶೌರ್ಯ ಹಾಗೂ ವೀರತ್ವದಲ್ಲಿ ತಜ್ಞ, ಚುರುಕುತನದ ಮೈದಾನಿಕ ಸವಾರ, ಶೂರತ್ವದ ಮುಂಗೈಯ ಅಶ್ವಾರೋಹಿ, ಮಹೋನ್ನತ ದರ್ಬಾರಿನಿಂದ ಸೃಜಿಸಲ್ಪಟ್ಟ ನಂಬಿಗಸ್ಥನಾದ ಶರ್ಜಾಖಾನನ ಪುತ್ರರಾದ ಹಬೀಬ್ ಶಾಹ ಹಾಗೂ ಸೈಯ್ಯದ್ ಮಗದೂಮ್ ಅವರಿಗೆ...... ನಾವು ನೇಮಕ ಮಾಡಿದ್ದೇವೆ. ಆ ಸ್ವಾಮಿನಿಷ್ಠನ ಉನ್ನತಿಗಾಗಿ, ಬಾದಶಾಹನು ಗೌರವ ವಸ್ತ್ರವನ್ನು ಕಳುಹಿಸಿದ್ದಾನೆ. ಉನ್ನತಿ ಪಡೆದಂತಹ ಸನ್ಮಾನಿತನು ತನ್ನ ಸವಾರರು ಮತ್ತು ಸೇವಕರೊಂದಿಗೆ, ಉಲ್ಲೇಖಿತ ಜನರೊಂದಿಗೆ ಸೇರಿಕೊಂಡು ಕಠಿಣ ಪರಿಶ್ರಮ ಹಾಗೂ ಪ್ರಾಣತ್ಯಾಗದ ವಿಧಾನದಿಂದ ಅವರಿಗೆ ಆಜ್ಞಾಧಾರಕತೆಯನ್ನು ಬಹಿರಂಗಗೊಳಿಸಬೇಕೆಂಬುದನ್ನು; ಮಂತ್ರಿಪದವಿ ಹೊಂದಿದ್ದ, ಬಾದಶಾಹನ ಕೃಪೆಯ ಆಕಾಂಕ್ಷಿಯಾದ ಹನುಮಂತ ಗೌಡನು ತಿಳಿದಿದ್ದನು.

ಅತಿ ಶೀಘ್ರವಾಗಿ, ಅವರೊಂದಿಗೆ ಕೂಡಿಕೊಂಡು, ಆಜ್ಞಾನುಸಾರವಾಗಿ ಕಾರ್ಯಾಚರಣೆ ಮಾಡುವದರಲ್ಲಿಯೇ ನಿಮ್ಮ ಯಶಸ್ಸು ಇದೆ. ಒಂದು ಕ್ಷಣವೂ ಸಹ, ವಿಳಂಬ ಮತ್ತು ನೆಪ ಮಾಡಬಾರದು.

ಹಿಜ್ರಿ ೧೦೮೧ರ ಶಾಬಾನ್ ಉಲ್ ಮುಅಜ್ಜಮ್ ತಿಂಗಳಿನ ೭ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶಿದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಹಿಜ್ರಿ ೧೧೦೮೬ ರವಲ್ ೯ ಶಕ.೧೫೯೭ ವೈಶಾಖ ಶುದ್ಧ ೧೧
ಕ್ರಿ.ಶ.೧೬೭೫ ಮೇ ೨೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಬಂಕಾಪೂರ ವ್ಯವಹಾರದ ಲಕ್ಷ್ಮೇಶ್ವರ್ ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :–

ಹಿಜ್ರಿ ೧೧೦೭೫ರಲ್ಲಿ; ಶ್ರೀಮಂತಿಕೆ ಹಾಗೂ ನೇತೃತ್ವಕ್ಕೆ ಆಶ್ರಯದಾತ, ಆಡಳಿತೆ ಮತ್ತು ಮಹಾನತೆಯಲ್ಲಿ ತಜ್ಞ, ಮರ್ಯಾದೆ ಹಾಗೂ ಕೀರ್ತಿಶಾಲಿ ಕುಟುಂಬದ ಸಾರಾಂಶ, ವೈಭವ ಮತ್ತು ಸೌಭಾಗ್ಯ ಹೊಂದಿದ ಮಹಾನ್ ಕುಟುಂಬದ ಖ್ಯಾತ, ಸಂಪತ್ತು ಹಾಗೂ ಸುದೈವದ ದೃಷ್ಟಿಶಕ್ತಿಯ ಪ್ರಕಾಶ, ಶ್ರೇಷ್ಠತೆ ಮತ್ತು ಶೋಭೆಯುಳ್ಳ ಹಣೆಯ ದರ್ಪ, ಕಾಲದ ಪರಾಕ್ರಮಿಗಳ ನಾಯಕ, ಉನ್ನತ ದರ್ಜೆಯ ಸರದಾರರ ಅಗ್ರಗಣ್ಯ, ಶೌರ್ಯದ ಮೈದಾನಿನ ಅಶ್ವಾರೋಹಿ, ವೀರತ್ವ ಗ್ರಂಥದ ಶಿರೋನಾಮೆ, ಆಪ್ತಜನರ ಕೂಟದ ಮಿತ್ರ, ಸಭೆಯ ಜೊತೆಗಾರ, ಹಿರಿಮೆ ಮತ್ತು ಶಕ್ತಿಯ ಉಂಗುರದ ಹರಳು, ಜಗತ್ತಿನ ದೇಶಗಳ ಸಲಹೆಗಾರ, ಉಜ್ವಲವಾದ ಸಂವಿಧಾನ, ಅಪಾರ ಅನುಗ್ರಹಗಳ ಸುಶಿಕ್ಷಿತ, ಭಾಗ್ಯದ ಶಾಸನಗಳ ಸನ್ನದು, ಆಡಳಿತ ವಿಧಾನಗಳ ವಿಷಯ ಪೀಠಿಕೆ, ಉತ್ತರಾಧಿಕಾರತ್ವದ ಬುನಾದಿ ಹಾಕುವವ, ಉನ್ನತ ದರ್ಜೆಯ ಗೌರವಾನ್ವಿತ ಸಾಮ್ರಾಜ್ಯದ ಆಡಳಿತೆಯ ಸಂರಕ್ಷಕ, ಖಾಖಾನಂತಹ ನಾಯಕರಲ್ಲಿ ಅಗ್ರಸ್ಥಾನ–ಸಂಪನ್ನ, ಎತ್ತರದ ಸ್ಥಾನ ಹೊಂದಿದವ, ಕಾಲ ಹಾಗೂ ಜಗತ್ತಿನ ನಾಯಕರ ನಾಯಕ, ಧರ್ಮಸಂರಕ್ಷಕ, ಆಡಳಿತೆಯ ಮಂತ್ರಿಯಾದ ಖಾಸ್‌ಖಾನ್ ಮತ್ತು ದಿವಂಗತ ಖಾನ್ ಮೊಹಮ್ಮದನ ಕೆಲವು ಪುತ್ರರನ್ನು ಉಲ್ಲೇಖಿತ ವ್ಯವಹಾರದ ಗುತ್ತಲ್‌ದ ಕಡೆಗೆ; ಶುಭದಾಯಕ ಆಜ್ಞೆಗೆ ಅನುಸಾರವಾಗಿ ಕಳುಹಿಸಲಾಗಿದೆ.

ಆ ಬಂಡುಕೋರನು ವಿದ್ರೋಹವೆಸಗಿ, ಫತಹಪೂರ್ ಗ್ರಾಮ ಮತ್ತು ಮೇಲ್ಕಾಣಿಸಿದ ದಿಕ್ಕಿನ ಗ್ರಾಮಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದಾನೆಂಬ ಸಂಗತಿಯು ದರ್ಬಾರಿನಲ್ಲಿ ದಿವಂಗತ ಖಾನ್ ಮೊಹಮ್ಮದನ ಪುತ್ರರು ಉಲ್ಲೇಖಿತ ದಿಕ್ಕಿನಲ್ಲಿ ಹೋದಾಗಲೆಲ್ಲ ಅವನು ಪಿತೂರಿಯನ್ನು ಮಾಡಿ, ಫತಹಪೂರ್ ಗ್ರಾಮ ಮತ್ತು ಉಲ್ಲೇಖಿತ ದಿಕ್ಕಿನ ಗ್ರಾಮಗಳನ್ನು ತನ್ನ ಸ್ವಾಧೀನದಲ್ಲಿ ತೆಗೆದುಕೊಳ್ಳುವದರ ಅಂದಾಜು ಏನು?

ಬಾದಶಾಹನ ಆಜ್ಞೆಯು ದೊರಕುತ್ತಲೇ ಮೇಲ್ಕಾಣಿಸಿದ ಗ್ರಾಮ ಹಾಗೂ ಆ ದಿಕ್ಕಿನ ಗ್ರಾಮಗಳನ್ನು ಪುನಃ ಸ್ವಾಧೀನಪಡಿಸಿಕೊಂಡು; ಮೊದಲಿನಂತೆಯೇ ಆಡಳಿತೆಯ ಆಶ್ರಯದಲ್ಲಿರುವಂತಹ ಸಂಬಂಧಿಕರ ಸ್ವಾಧೀನಕ್ಕೆ ಕೊಡಿರಿ. ಯಾವುದೇ ತಕರಾರಿಗೆ ಅವಕಾಶ ನೀಡಬಾರದು.

ಹಿಜ್ರಿ ೧೦೮೭ರ ರಬಿಉಲ್ ಅವ್ವಲ್ ತಿಂಗಳಿನ ೯ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

೮೦

ಸು.೧೦೭೫ ಶಕ.೧೫೯೭ ಜೇಷ್ಠ ಶುದ್ಧ ೧೧
ಹಿಜ್ರ. ೧೦೮೬ ರವಲ್ ೯ ಕ್ರಿ.ಶ.೧೬೭೫ ಮೇ, ೨೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಬಂಕಾಪೂರ ವ್ಯವಹಾರ, ರಟ್ಟಿಹಳ್ಳಿ ಕ್ಷೇತ್ರ ಮೊಹಮ್ಮದ್ ಕೋಟ್ ಉಪನಾಮ ಮಾಸೂರ್ ಕ್ಷೇತ್ರ, ಹರಿಹರ ಕ್ಷೇತ್ರ ಮತ್ತು ಸುಲ್ತಾನ್ ನಗರ ವ್ಯವಹಾರ ಉಪನಾಮ ಬಸವಾಪಟ್ಟಣದ ವರ್ತಮಾನ ಹಾಗೂ ಭವಿಷತ್ತಿನ ಕಾರ್ಯನಿರ್ವಾಹಕರು ಮತ್ತು ನಾಡಗೌಡರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೭೫ರಲ್ಲಿ, ಬಹುದಿನಗಳಿಂದ ಆತನ ಪೂರ್ವಜರು ಭೋಗ್ಯಕ್ಕೆ ಕೊಟ್ಟಂತಹ ಉಲ್ಲೇಖಿತ ವ್ಯವಹಾರದ ಮೇಲ್ಕಾಣಿಸಿದ ದಿಕ್ಕಿನ ಕೆಲವು ಆನುವಂಶಿಕ ಆಸ್ತಿಗಳು ಹಾಗೂ ದೇಶಮುಖತ್ವವನ್ನು ಕುರಿತು; ಹನುಮಂತ ಗೌಡನ ಪುತ್ರನಾದ ಲಿಂಗನ ಗೌಡನು ಉನ್ನತ ದರ್ಬಾರಿನಲ್ಲಿ ಸಲ್ಲಿಸಿದ ಮನವಿ ಏನೇಂದರೆ:-

ಈಗ ನನ್ನ ಸೋದರನಾದ ಚಿಕ್ಕಪ್ಪ ಗೌಡನು ಭ್ರಷ್ಟಾಚಾರ ಆರಂಭಿಸಿ, ಬಂಡುಕೋರನಾಗಿದ್ದಾನೆ. ಆನಂತರ, ಬಾದಶಾಹನು ಅವನಿಗೆ ಶಿಕ್ಷೆ ವಿಧಿಸಿ; ಈ ಆನುವಂಶಿಕ ಆಸ್ತಿಗಳು, ಅವುಗಳ ಅಗತ್ಯ ವಸ್ತುಗಳು ಮತ್ತು ಇನಾಮುಗಳನ್ನು ಅಮಾನತ್ತಿನಲ್ಲಿ ಇಡಲಾಯಿತು. ಅವನು ತನ್ನ ಅಸಭ್ಯತೆಗಾಗಿ ಶಿಕ್ಷೆ ಪಡೆದನು. ಬಂಕಾಪೂರ ವ್ಯವಹಾರದ ಗುತ್ತಲ್ ಕ್ಷೇತ್ರದ ಉಲ್ಲೇಖಿತ ಅರಮನೆಗಳು ಹಾಗೂ ದೇಶಮುಖತ್ವದ ಆನುವಂಶಿಕ ಆಸ್ತಿ, ಮೊಹಮ್ಮದ್ ಕೋಟೆಯ ಕ್ಷೇತ್ರ ಮತ್ತು ಹಂಸಭಾಂವಿಯೊಂದಿಗೆ ರಟ್ಟಿಹಳ್ಳಿಯ ಕ್ಷೇತ್ರವನ್ನು; ಶೇಖ್ ಅಹ್ಮದ್ ಹಾಜಿ ಮುಬಾರಕನಿಗೆ ಕೊಡಲಾಯಿತು. ಬಂಕಾಪೂರ್ ವ್ಯವಹಾರದ ತಿಳುವಳ್ಳಿ ದಿಕ್ಕು, ಹೊಳಲ್ ಕ್ಷೇತ್ರದೊಂದಿಗೆ ಹಡಗಲಿ ದಿಕ್ಕು ಹಾಗೂ ....ದಿಕ್ಕು ಮತ್ತು ಹರಿಹರ ಕ್ಷೇತ್ರದ ದೇಶಮುಖತ್ವವನ್ನು; ನವಾಬ್ ಅಬ್ದುಲ್ ಕರೀಮ್ ಬಹಾವಲ್ ಖಾನನಿಗೆ ಕೊಡಲಾಯಿತು.

ನಾನು ಬಾದಶಾಹನ ಸೇವೆಯಲ್ಲಿ ಸ್ಥಾನ ಹೊಂದಿದ್ದೇನೆ. ನನ್ನ ಪೂರ್ವಜರ ಆನುವಂಶಿಕ ಆಸ್ತಿ, ಅಗತ್ಯ ವಸ್ತುಗಳು, ಇನಾಮುಗಳು, ಉಂಬಳಿ ಮತ್ತು ಭೋಗ್ಯಕ್ಕೆ ಕೊಟ್ಟಿರುವಂತಹ ಕೆಲವು ಆಸ್ತಿಗಳನ್ನು; ನನಗೆ ದಯವಿಟ್ಟು ಕೊಡಿರಿ. ಇದರ ಹೊರತಾಗಿ ಗುತ್ತಲ್ ಕಡೆಗಿನ ತಂಬಹಳ್ಳಿ ಗ್ರಾಮವನ್ನು ನನಗೆ ಇನಾಮಿನ ರೂಪದಲ್ಲಿ ಕೊಡಿರಿ.

ಬಾದಶಾಹನ ಕೃಪೆ ಹಾಗೂ ಇನಾಮಿನ ರೂಪದಲ್ಲಿ, ಶೇಖ್ ಅಹ್ಮದ್ ಹಾಜಿ ಮುಬಾರಕನಿಂದ ಗುತ್ತಲ್ ಕಡೆಗಿನ ದೇಶಮುಖತ್ವದ ಆನುವಂಶಿಕ ಆಸ್ತಿ, ಮೊಹಮ್ಮದ್ ಕೋಟೆ ಉಪನಾಮ ಮಾಸೂರಿನ ಕ್ಷೇತ್ರ ಮತ್ತು ಹಂಸಭಾಂವಿಯೊಂದಿಗೆ ರಟ್ಟಿಹಳ್ಳಿಯ ಕ್ಷೇತ್ರ ಹಾಗೂ ನವಾಬ್ ಅಬ್ದುಲ್ಲ್ ಕರೀಮ್ ಬಹಾವಲ್ ಖಾನನಿಂದ ಹಿಂತಿರುಗಿ ಪಡೆದ ಬಂಕಾಪೂರ್ ವ್ಯವಹಾರದ ತಿಳುವಳ್ಳಿ ದಿಕ್ಕು, ಹೊಳಲ್ ಕ್ಷೇತ್ರದೊಂದಿನ ಹಡಗಲಿ ದಿಕ್ಕು........ ಹೊರಳಿ ಪೋಟೆಯ ದೇಶಮುಖತ್ವ ಮತ್ತು ಹರಿಹರ ಕ್ಷೇತ್ರದ ದೇಶಮುಖತ್ವ........ ಬಂಕಾಪೂರ್ ವ್ಯವಹಾರದ ಕೆಲವು ಜನರ ಬುದ್ಧಿವಂತಿಕೆಯಿಂದ; ಹಾವೇರಿ ದಿಕ್ಕಿನ ಕೆಲವು ಆನುವಂಶಿಕ ಆಸ್ತಿಗಳು, ಮೋಟೆಬೆನ್ನೂರಿನೊಂದಿಗಿನ ಕಾಗಿನೆಲೆ, ತಡಸ್ ದಿಕ್ಕು, ನರೇಗಲ್ಲ್ ದಿಕ್ಕು, ಸಣ್ಣ ಕೆರೂರ್ ದಿಕ್ಕು, ಸುಲ್ತಾನ್‌ನಗರ ಉಪನಾಮ ಬಸವಾಪಟ್ಟಣ ವ್ಯವಹಾರದ ಚನ್ನನ್‌ಗುತ್ತಿ ದಿಕ್ಕು, ಸಾಮ್ರಾಣಿ, ರಾಣೀ ಬೆನ್ನೂರ್ ದಿಕ್ಕಿನ ಹರಿಹರ ಕ್ಷೇತ್ರ, ದೊಡ್ಡಕೆರೂರ್ ದಿಕ್ಕಿನ ರಟ್ಟೀಹಳ್ಳಿ ಕ್ಷೇತ್ರ, ಇನಾಮುಗಳು, ವರ್ತನಾ, ಅಗತ್ಯ ವಸ್ತುಗಳ ಹಕ್ಕುಗಳೊಂದಿಗೆ ಹೊಳೆಹೊನ್ನೂರ್, ದೊಡ್ಡ ಬಿದರಿ.......ಗೆ ಸೇರಿದ ಮಳಲಿ ದಿಕ್ಕಿನ ಉಂಬಳಿ ಮತ್ತು ಭೋಗ್ಯಕ್ಕೆ ಕೊಡಲಾದ ಕೆಲವು ಗ್ರಾಮಗಳು, ಅಹರಣೆಗ್ರಾಮ, ಬಂಕಾಪೂರ ಗ್ರಾಮ ಹಾಗೂ ಚೌಖಿ ಗ್ರಾಮಗಳು, ಚಿಕ್ಕಪ್ಪ ಗೌಡನ ಹೆಸರಿನಲ್ಲಿ ಭೋಗ್ಯಕ್ಕೆ ಕೊಡಲಾದ ಇವೆಲ್ಲವುಗಳನ್ನು ಹನುಮಂತ ಗೌಡನ ಪುತ್ರನಾದ ಲಿಂಗನ ಗೌಡನಿಗೆ ಮಂಜೂರು ಮಾಡಿಕೊಡಲಾಗಿದೆ. ಲಿಖಿತರೂಪದಲ್ಲಿರುವಂತೆ, ಅವನ ಹೆಸರಿಗೆ ಸೇರಿಸಬೇಕು. ಇದರ ಹೊರತಾಗಿ, ಆಡಳಿತೆಯ ಮಂತ್ರಿ ಖಾಸ್‌ಖಾನ್ ಮತ್ತು ದಿವಂಗತ ಖಾನ್ ಮೊಹಮ್ಮದ್‌ನ ಕೆಲವು ಪುತ್ರರಿಗೆ ಕೊಡಲಾದ ಗುತ್ತಲ್ ಕಡೆಗಿನ ತಂಬಹಳ್ಳಿ ಗ್ರಾಮವನ್ನು ಅದರ ಎಲ್ಲ ವ್ಯವಹಾರಗಳೊಂದಿಗೆ (ತಂಬಾಕು, ತೀಪ್‌ಬರ್ಗದ (ಎಲೆಗಳು) ಸುಂಕ ಹಾಗೂ ಇನಾಮುಗಳನ್ನು ಹೊರತುಪಡಿಸಿ), ಲಿಂಗನ ಗೌಡನಿಗೆ ಕೊಡಲಾಗಿದೆ.

ಅವನ ನಂತರ, ಆತನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಜಾರಿಗೊಳಿಸಬೇಕು. ಪ್ರತಿ ವರ್ಷ ಯಾವುದೇ ನೆಪ ಮಾಡಬಾರದು. ಇದೇ ಆಜ್ಞೆಯನ್ನು ಕಳುಹಿಸಬೇಕು. ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರಶುಭದಾಯಕ ಆಜ್ಞೆಗೆ ಅನುಸಾರವಾಗಿ, ತಡೆಹಿಡಿಯುವಿಕೆ ಹಿಂಪಡೆದು; ಅಸಲಿ ಆಜ್ಞೆಯನ್ನು ಹಿಂತಿರುಗಿಸಿರಿ.

ಹಿಜ್ರಿ ೧೧೦೬೭ರ ರಬಿಉಲ್ ಅವ್ವಲ್ ತಿಂಗಳಿನ ೯ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

ಸು.೧೦೭೬ ಶಕ.೧೫೯೭ ಜ್ಯೇಷ್ಠ ಶುದ್ಧ ೧೪

ಹಿಜ್ರಿ ೧೦೮೬ ರವಲ್ ೧೧ ಕ್ರಿ.ಶ.೧೬೭೫ ಮೇ, ೨೭

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಗುತ್ತಲ್ ಕಡೆಗಿನ ಮತ್ತು ಅರಮನೆಗಳ ದೇಸಾಯಿ ಹನುಮಂತ ಗೌಡನ ಪುತ್ರ, ಮಂತ್ರಿಸ್ಥಾನ ಹೊಂದಿದ ಲಿಂಗನ ಗೌಡನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೭೫ರಲ್ಲಿ, ಅವನ ಸೋದರ (ಹನುಮಂತ ಗೌಡನ ಪುತ್ರ) ಚಿಕ್ಕಪ್ಪ ಗೌಡನು ಲಂಚಕೋರತನವನ್ನು ಆರಂಭಿಸಿ; ಪಿತೂರಿಯನ್ನು ಬಹಿರಂಗಗೊಳಿಸಿದನು. ಆನಂತರ, ಬಾದಶಾಹನು ಅವನ ಮೇಲೆ ಕಾವಲು ಇಡುವಂತಹ ಶಿಕ್ಷೆ ನೀಡಿದನು. ಅವನ ಎಲ್ಲ ಆನುವಂಶಿಕ ಆಸ್ತಿಯನ್ನು ಅಮಾನತ್ತುಗೊಳಿಸಲಾಯಿತು. ಚರಿತ್ರಹೀನನಾದ ಚಿಕ್ಕಪ್ಪ ಗೌಡನಿಗೆ ಶಿಕ್ಷೆಯಾಯಿತು. ಲಿಂಗನಗೌಡನು ಬಾದಶಾಹನ ಸ್ವಾಮಿನಿಷ್ಠೆಯಲ್ಲಿ ಸ್ಥಿರವಾಗಿದ್ದು; ಕರುಣೆಯ ರೂಪದಲ್ಲಿ ತನ್ನ ಹಿರಿಯರ ಆನುವಂಶಿಕ ದೇಶಮುಖತ್ವದ ಆಸ್ತಿ ಅಗತ್ಯ ಸಾಮಾನುಗಳ ಹಕ್ಕು, ಮರದ ಕಾಂಡಗಳು, ಉಂಬಳಿ ಮತ್ತು ಅರಮನೆಗಳ ಕೆಲವು ಆನುವಂಶಿಕ ಆಸ್ತಿಗಳನ್ನು ಚಿಕ್ಕಪ್ಪ ಗೌಡನು ಭೋಗ್ಯಕ್ಕೆ ಕೊಟ್ಟಿದ್ದನು. ಅದನ್ನು ಲಿಂಗನಗೌಡನಿಗೆ ದಯಪಾಲಿಸಲಾಯಿತು. ಲಿಖಿತ ರೂಪದ ಅನುಸಾರವಾಗಿ, ಚಿಕ್ಕಪ್ಪ ಗೌಡನಿಗೆ ಕೊಡಲಾಗಿದ್ದ ಹಾಗೂ ಭೋಗ್ಯಕ್ಕೆ ನೀಡಿದಂತಹ ಆನುವಂಶಿಕ ಆಸ್ತಿಯನ್ನು; ಲಿಂಗನಗೌಡನು ಎಲ್ಲ ಬಗೆಯಿಂದಲೂ ಸ್ವಾಧೀನಪಡಿಸಿಕೊಂಡು, ಆಕಾಶದಂತಹ ದರ್ಬಾರಿನ ಸ್ವಾಮಿನಿಷ್ಠೆಯಲ್ಲಿ ದೃಢತೆಯನ್ನು ಹೊಂದಿರಬಹುದು. ಅದರ ಹೊರತಾಗಿ, ಉಲ್ಲೇಖಿತ ದಿಕ್ಕಿನ ತಂಬಹಳ್ಳಿ ಗ್ರಾಮವನ್ನು ಅದರ ಎಲ್ಲ ವ್ಯವಹಾರಗಳೊಂದಿಗೆ (ಸುಂಕ ಮತ್ತು ಇನಾಮುಗಳ ಹೊರತಾಗಿ) ಅವನಿಗೆ ಇನಾಮಿನ ರೂಪದಲ್ಲಿ ಕೊಡಲಾಗಿದೆ.

ಶ್ರೀಮಂತಿಕೆ ಮತ್ತು ನೇತೃತ್ವಕ್ಕೆ ಆಶ್ರಯದಾತ, ಆಡಳಿತೆ ಹಾಗೂ ಔನ್ನತ್ಯದ ತಜ್ಞ, ಗೌರವ ಮತ್ತು ಪ್ರತಿಷ್ಠೆಯ ಸಾರಾಂಶ, ವೈಭವ ಹಾಗೂ ಭಾಗ್ಯಶಾಲಿ ಕುಟುಂಬದ ಖ್ಯಾತ, ಸಂಪತ್ತು ಮತ್ತು ಸೌಭಾಗ್ಯದ ದೃಷ್ಟಿಶಕ್ತಿಯ ಪ್ರಕಾಶ, ಶ್ರೇಷ್ಠತೆ ಹಾಗೂ ಶೋಭೆಯುಳ್ಳ ಹಣೆಯ ದರ್ಪ, ಉನ್ನತ ದರ್ಜೆಯ ಸರದಾರರ ಅಗ್ರಗಣ್ಯ, ಶೌರ್ಯದ ಮೈದಾನಿನ ಅಶ್ವಾರೋಹಿ, ವೀರತ್ವ ಗ್ರಂಥದ ಶಿರೋನಾಮೆ, ಆಪ್ತ ಜನರ ಕೂಟದ

ಮಿತ್ರ, ಆಪ್ತ ಜೊತೆಗಾರರ ಸಹವಾಸಿ, ಹಿರಿಮೆ ಮತ್ತು ಶಕ್ತಿಯ ಉಂಗುರದ ಹರಳು, ಜಗತ್ತಿನ ದೇಶಗಳ ಸಲಹೆಗಾರ, ಉಜ್ವಲ ಸಂವಿಧಾನ, ಅಪಾರ ಅನುಗ್ರಹಗಳ ಸುಶಿಕ್ಷಿತ, ಭಾಗ್ಯದ ಶಾಸನಗಳ ಸನ್ನದು, ಆಡಳಿತ ವಿಧಾನಗಳ ವಿಷಯದ ಪೀಠಿಕೆ, ಉತ್ತರಾಧಿಕಾರತ್ವದ ಬುನಾದಿ ಹಾಕುವವ, ಉನ್ನತದರ್ಜೆಯ ಗೌರವಾನ್ವಿತ ಸಾಮ್ರಾಜ್ಯದ ಆಡಳಿತೆಯ ಸಂರಕ್ಷಕ, ಖಾಖಾನಂತಹ ನಾಯಕರಲ್ಲಿ ಅಗ್ರಸ್ಥಾನ ಹೊಂದಿದವ, ಎತ್ತರದ ಸ್ಥಾನ-ಸಂಪನ್ನ, ಆಲಿಶಾನ್ ವಾಲಾ ಖದರ್, ಬುಲಂದ ಮಕಾನ್, ಕಾಲ ಹಾಗೂ ಜಗತ್ತಿನ ನಾಯಕರ ನಾಯಕ, ಧರ್ಮದ ಸಂರಕ್ಷಕ, ಆಡಳಿತೆಯ ಮಂತ್ರಿಯಾದ ಖಾಸ್‌ಖಾನನ ಬಂಧುಗಳಿಗೆ ಕೊಡಲಾಗಿದ್ದ ಗುತ್ತಲ್ ಕಡೆಗಿನ ಫತಹಪೂರ್ ಮತ್ತು ತಂಬಹಳ್ಳಿ ಗ್ರಾಮಗಳನ್ನು (ಮೊದಲಿಗೆ, ಲಕ್ಷ್ಮೇಶ್ವರದ ದೇಸಾಯಿ ಕೆಂಚನ ಗೌಡನು ಒತ್ತಾಯಪೂರ್ವಕವಾಗಿ ಸ್ವಾಧೀನಪಡಿಸಿಕೊಂಡಿದ್ದನು) ಲಿಂಗನ ಗೌಡನಿಗೆ ಕೊಡಲಾಗಿದೆ.

ಶುಭದಾಯಕ ಆಜ್ಞೆಗೆ ಅನುಸಾರವಾಗಿ; ಇದನ್ನು ಸ್ವೀಕರಿಸಿ, ಉನ್ನತಿ ಹೊಂದಿ ಗೌರವಾನ್ವಿತವಾಗಬೇಕು.

ಹಿಜ್ರಿ ೧೦೮೬ರ ರಬಿಉಲ್ ಅವ್ವಲ್ ತಿಂಗಳಿನ ೧೧ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

೮೨

ಜು.೧೯ ಶಾಬಾನ್ ೨೪ ಶಕ.೧೫೫೧ ಆಶ್ವೀನ ವದ್ಯ ೧೦
ಕ್ರಿ.ಶ.೧೬೭೬ ಅಕ್ಟೋಬರ್ ೨೨

ನೇತೃತ್ವ ಮತ್ತು ಸೌಜನ್ಯಕ್ಕೆ ಆಶ್ರಯದಾತ, ಘನತೆ ಹಾಗೂ ಔನ್ನತ್ಯದಲ್ಲಿ ತಜ್ಞ, ಶೌರ್ಯದ ಸಂಕೇತವಾದ ಶರ್ಜಾಖಾನನು ಸುದೈವದ ಸಹಾಯದಿಂದ ಬಾದಶಾಹನ ಪವಿತ್ರ ದರ್ಬಾರಿನಲ್ಲಿ ಕೃಪಣನಾದ ಅಬ್ದುಲ್ ಕರೀಮ್‌ನ ರಕ್ಷಣೆಯ ಬಗೆಗೆ ವಿನಂತಿ ಮಾಡಿಕೊಂಡನು. ಅವನು ಕೃತಘ್ನತೆ ಮತ್ತು ಗರ್ವದಿಂದ, ಬಿಜಾಪುರದ ಕೋಟೆಯನ್ನು ತನ್ನ ನಿಯಂತ್ರಣದಲ್ಲಿ ತೆಗೆದುಕೊಂಡಿದ್ದಾನೆ. ನ್ಯಾಯಕ್ಕೆ ಆಶ್ರಯ ನೀಡುವವರನ್ನು ತನ್ನ ಕೈದಿಗಳನ್ನಾಗಿ ಮಾಡಿ, ಅತ್ಯಾಚಾರ ಆರಂಭಿಸಿದ್ದಾನೆಂಬುದನ್ನು; ಸಾಂತ್ವನಗೊಳಿಸಲ್ಪಟ್ಟ ಕಾಲದ ಕೆನೆಯೆನಿಸಿದಂತಹ ಲಿಂಗನ ಗೌಡನು ತಿಳಿದಿದ್ದನು.

ಉತ್ತರಾಧಿಕಾರತ್ವ ಹಾಗೂ ಲೋಕಪಾಲನೆಯನ್ನು ಪ್ರಸ್ತುತಪಡಿಸುವ ಸ್ಥಳದಿಂದ, ಜಗತ್ತಿಗೆ ಆಜ್ಞೆ ನೀಡುವವನ ಆಜ್ಞೆಯನ್ನು ಪ್ರಕಟಿಸಲಾಗಿದೆ. ಮೂರ್ಖನಾದ ಅಬ್ದುಲ್ ಕರೀಮನನ್ನು ಬೇರು ಸಹಿತ ಕಿತ್ತಿ ಹಾಕಿ, ನ್ಯಾಯವಂತರನ್ನು ಬಿಡುಗಡೆಗೊಳಿಸಿ; ಮಹತ್ಕಾರ್ಯಗಳ ಕಕ್ಷೆಗೆ ದಕ್ಷಿಣದ ಯಾರಾದರೊಬ್ಬರನ್ನು ನೇಮಕ ಮಾಡಿರಿ. ಯೋಗ್ಯವಾದ ವ್ಯಕ್ತಿಯು ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸಬೇಕೆಂಬುದು; ನಮ್ಮ ತಾತ್ಪರ್ಯವಾಗಿದೆ. ಉಲ್ಲೇಖಿತ ಖಾನನಿಗೆ ಸಹಾಯ ಮಾಡಿ, ನ್ಯಾಯವಂತರನ್ನು ಬಿಡುಗಡೆಗೊಳಿಸಿರಿ ಮತ್ತು ಕೋಟೆಯನ್ನು ಮೇಲ್ಕಾಣಿಸಿದ ಅಬ್ದುಲ್ ಕರೀಮ್‌ನಿಂದ ಹಿಂಪಡೆಯಿರಿ. ಸಂಪೂರ್ಣವಾದ ತಾಳ್ಮೆಯಿಂದ ಅವನ ಶೋಷಣೆಯಿಂದ ಪಾರಾಗಲು ಪೂರ್ಣವಾದ ಪ್ರಯತ್ನ ಮಾಡಿರಿ. ಸಾಮ್ರಾಜ್ಯ ಹಾಗೂ ಉತ್ತರಾಧಿಕಾರತ್ವದ ಒಡೆಯನಿಂದ ಸೇವೆಯ ಫಲಿತಾಂಶ ಆಕಾಂಕ್ಷಿಯಾಗಿರಿ. ಬಿಜಾಪುರದ ಮಹತ್ಕಾರ್ಯಗಳ ಕಕ್ಷೆಯನ್ನು ಹಿಂಪಡೆಯುವವರೆಗೆ ಮೇಲ್ಕಾಣಿಸಿದ ಖಾನನಿಗೆ ವಿಶ್ವಾಸ ಪ್ರದರ್ಶಿಸಿರಿ.

ಜುಲೂಸ್ ೧೯ರ ಶಾಬಾನ್ ತಿಂಗಳಿನ ೨೪ನೇ ತಾರೀಖಿಗೆ ಬರೆಯಲಾಗಿದೆ.

ಹಿಜ್ರಿ. ೧೧೯೧ ಜಿಲ್ಹೇಜ್ ೨೫ ಶಕ.೧೬೦೨ ಪೌಷ್ಯ ವದ್ಯ ೧೨
ಕ್ರಿ.ಶ.೧೬೮೧ ಜನವರಿ ೬

ಅವರು ಮೇಲ್ಕಾಣಿಸಿದ ನವಾಬನ ಬಳಿಗೆ ಬಂದು ಬಾದಶಾಹನ ಧೋರಣೆಗೆ ಅನುಸಾರವಾಗಿ ಕಾರ್ಯಾಚರಣೆ ಮಾಡಿ; ತಮ್ಮ ಸೇವೆ ಮತ್ತು ನಿಷ್ಠೆಯನ್ನು ಬಹಿರಂಗಗೊಳಿಸಿದ್ದಾರೆ. ಅವರ ಸೇವೆಗೆ ಅನುಗುಣವಾಗಿ, ಅವರಿಗೆ ಉನ್ನತಿ ದೊರಕುವದೆಂದು, ಗೊತ್ತಾಗಿರಬಹುದು.

ಹಿಜ್ರಿ ೧೧೯೧ರ ಜಿಲ್ಲ್ ಹಜ್ಜಾ ತಿಂಗಳಿನ ೨೫ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶಿದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ ಅನುಮತಿಯ ಮೇರೆಗೆ.

೮೪

ಜು.೩೨ ಜವಲ್ ೪ ಶಕ.೧೬೧೦ ಫಾಲ್ಗುಣ ಶುದ್ಧ ೬
ಕ್ರಿ.ಶ.೧೬೮೯ ಫೆಬ್ರುವರಿ ೧೫

ಮಾಹಿತಿ ನೀಡುವ ಶರ್ತಿನ ಮೇಲೆ .... ದಿಂದ ಬಸವಾಪಟ್ಟಣದ ಆಡಳಿತೆಯ ದೇಶಮುಖನಾಗಿ, ನೇಮಕವಾಗಿದ್ದನೆಂಬುದನ್ನು ಕಾಲದ ಕೆನೆ, ಲಕ್ಷ್ಯ ಮತ್ತು ಕಾಣಿಕೆಯ ಆಕಾಂಕ್ಷೆಯಾಗಿದ್ದ ಹನುಮಂತ ಗೌಡನು ತಿಳಿದಿದ್ದನು. ಈ ಪತ್ರ ತಲುಪುತ್ತಲೇ ಅವನು ತನ್ನ ೧೦೦ ಕುದುರೆ ಸವಾರರು ಹಾಗೂ ೫೦೦ ಕಾಲ್ದಳದ ಸೈನಿಕರನ್ನು; ಘನತೆ ಮತ್ತು ಶೌರ್ಯಕ್ಕೆ ಆಶ್ರಯದಾತನಾದ ಬಸವಾಪಟ್ಟಣದ ಕಿಲ್ಲೇದಾರ ಗಾಜೀ ಬೇಗನ ಬಳಿಗೆ ಕಳುಹಿಸಬೇಕು. ಉಲ್ಲೇಖಿತ ವ್ಯಕ್ತಿಯೊಂದಿಗೆ ಜೊತೆಗೂಡಿ, ಬಾದಶಾಹನ ಪ್ರದೇಶದ ಬಗೆಗೆ ಜಾಗ್ರತಿ ಹೊಂದಿರಬೇಕು. ಗಾಜೀ ಬೇಗನ ಮುದ್ರೆಯೊಂದಿಗೆ, ಸವಾರರು ಹಾಗೂ ಸೈನಿಕರ ರಶೀದಿ ಪತ್ರವನ್ನು ನಮಗೆ ಕಳುಹಿಸಿ ಕೊಡಬೇಕು. ಈ ಕಾರ್ಯವು ಕಾಲದ ಕೆನೆಯ ಅಧಿಕಾರದಿಂದಲೇ ಆಗಬೇಕಾಗಿದೆ. ಯಾವುದೇ ಜಮೀನ್ದಾರನು ದಂಗೆ ಎಬ್ಬಿಸಲು ಅವಕಾಶ ಕೊಡಬಾರದೆಂದು ಎಚ್ಚರಿಕೆ ನೀಡಿರಿ. ಅಲ್ಲಿಯ ಪ್ರತಿದಿನ ಮಾಹಿತಿಯನ್ನು ಬರೆದು ಕಳುಹಿಸಲು ತಾಕೀತು ಮಾಡಲಾಗಿದೆ.

೩೨ನೇ ಜುಲೂಸ್‌ದ ಜಮಾದಿ ಉಲ್ ಅವ್ವಲ್ ತಿಂಗಳಿನ ೪ನೇ ತಾರೀಖಿಗೆ ಬರೆಯಲಾಗಿದೆ.

ಜು.೪೨ ಶಾಬಾನ್ ೧೮ ಶಕ.೧೬೨೦ ಮಾಘ ವದ್ಯ ೫

ಕ್ರಿ.ಶ.೧೬೯೯ ಫೆಬ್ರುವರಿ ೯

ಬಸವಾಪಟ್ಟಣ ತಾಲ್ಲೂಕಿನ ಕರ್ನಾಟಕ ಸುಬೇದ ರಾಜಧಾನಿ ಬಿಜಾಪೂರ್ ಸರ್ಕಾರದ ವರ್ತಮಾನ ಮತ್ತು ಭವಿಷತ್ತಿನ ಮಹಾತ್ಕಾರ್ಯಗಳ ವ್ಯವಸ್ಥಾಪಕರು, ದೇಸಾಯುರು, ಮುಕದ್ದಮೆದಾರರು, ರೈತರು ಹಾಗೂ ಸಾರ್ವಜನಿಕರು ತಿಳಿಯುವದೇನೆಂದರೆ :-

ದಿವಂಗತ ಸೈಯ್ಯದ್ ಕಾಸೀಮ್‌ಖಾನ್ ವಾಲಿಖಾನ್‌ನ ಪ್ರಕಾರ ಕಾಲದ ಕೆನೆ ಹನುಮಂತ ಗೌಡನು ಉಲ್ಲೇಖಿತ ತಾಲ್ಲೂಕಿನ ದೇಶಮುಖತ್ವದ ಸೇವೆಯಲ್ಲಿ ನೇಮಕಗೊಂಡಿದ್ದಾನೆ. ಆದುದರಿಂದ, ಬಾದಶಾಹನ ಸ್ವಾಮಿನಿಷ್ಠೆ ಮತ್ತು ಸಾಮ್ರಾಜ್ಯದ ಸಂರಕ್ಷಣೆಯ ಶರ್ತಿನೊಂದಿಗೆ ಈಗಲೂ ಉಲ್ಲೇಖಿತ ವ್ಯಕ್ತಿಯ ಸೇವೆಯು ಜಾರಿಯಲ್ಲಿದೆ. ಮೊದಲಿನಂತೆಯೇ ಅವನನ್ನು ದೇಶಮುಖನೆಂದು ಪರಿಗಣಿಸಿ; ತಾಲ್ಲೂಕಿನ ವ್ಯವಹಾರದಲ್ಲಿ ಆತನ ಮೇಲ್ಕಾಣಿಸಿದ ಸೇವೆಯನ್ನು ಮಹತ್ವದೆಂದು ಭಾವಿಸಿರಿ. ಅವನೊಂದಿಗೆ ಚರ್ಚೆ ಮಾಡಿ ಸಲಹೆ ಪಡೆದು; ಅವನು ತನ್ನ ಮಿತಿಯನ್ನು ಮೀರದಂತೆ ಲಕ್ಷವಿಡಿರಿ. ಈ ವಿಷಯದಲ್ಲಿ ಸೂಚನೆ ನೀಡಲಾಗಿರುವಂತೆ ಕಾರ್ಯಾಚರಣೆ ಮಾಡಿರಿ.

ಜುಲೂಸ್ ೪೨ರ ಶಾಬಾನ್ ಉಲ್ ಮೊಅಜ್ಜಮ್ ತಿಂಗಳಿನ ೧೮ನೇ ತಾರೀಖಿಗೆ ಬರೆಯಲಾಗಿದೆ.

ಅಂಬಾಡೆ ಖೋಪಡೆ

೮೬

ಸು.೧೦೪೮ ಶಕ.೧೫೭೦ ಶ್ರಾವಣ ವದ್ಯ ೩೦

ಹಿಜ್ರಿ. ೧೦೫೮ ರಜ್ಜಬ್ ೨೮ ಕ್ರಿ.ಶ.೧೬೪೮ ಅಗಷ್ಟ, ೮

ಬಹುರ್‌ದೆಡೆಗಿನ ರೋಹಡಾ ಕೋಟೆಯ ಕೇದಾರ ಜೀ ಖೋಪಡೆ ದೇಸಾಯಿಗೆ ಶುಭದಾಯಕ ಆಜ್ಞೆಯನ್ನು ಜಾರಿಗೊಳಿಸಲಾಗಿದೆ :-

ಹಿಜ್ರಿ ೧೦೪೮ರಿಂದ ಮರ್ಯಾದೆ ಮತ್ತು ಘನತೆಯಲ್ಲಿ ತಜ್ಞನಾದ, ಶೌರ್ಯ ಹಾಗೂ ವೀರತ್ವದ ಮುನ್ನೆಚ್ಚರಿಕೆ ಹೊಂದಿದಂತಹ ದರ್ಬಾರಿನ ಕಾರ್ಯದರ್ಶಿ ಖಾನ್ ಆಲಿಶಾನ್ ಫತಾಹ್ ಖಾನನು; ಖುದಾವಂದ್ ಖಾನನಿಗೆ ಕೋಂದಾನಾ ಕೋಟೆಯೆಡೆಗೆ ಸುಧಾರಕನ ಹುದ್ದೆಗೆ ನೇಮಿಸಿದ್ದಾನೆ. ನ್ಯಾಯಾಲಯದ ಆಜ್ಞೆಯು ದೊರಕುತ್ತಲೇ ಸವಾರರು ಹಾಗೂ ಸೇವಕರೊಂದಿಗೆ ಆ ಸ್ವಾಮಿನಿಷ್ಠನು; ಉಲ್ಲೇಖಿತ ಖಾನ್ ಆಲಿಶಾನ್ ಫತಾಹ್‌ಖಾನನ ಬಳಿಗೆ ತಲುಪಿ, ಸಿವಿಲ್ ವಿಷಯಗಳ ಕಾರ್ಯಾಲಯದಲ್ಲಿ ತನ್ನ ಸಮ್ಮತಿಯನ್ನು ನೀಡಬೇಕಾಗಿತ್ತು. ಖಾನನ ಪತ್ರದ ಅನುಸಾರವಾಗಿ, ವಿಶ್ವಾಸಾರ್ಹತೆಯು ಪ್ರಕಟವಾಗಿ, ಗೌರವದ ಹೆಚ್ಚಳಕ್ಕೆ ಕಾರಣವಾಗುವದು. ಒಂದು ವೇಳೆ ಹೀಗೆ ಆಗದೇ ಹೋದರೆ, ಕ್ಷಮಿಸಲಾಗುವುದಿಲ್ಲ. ಆಜ್ಞಾನುಸಾರವಾಗಿ, ಈ ವಿಷಯವನ್ನು ಕಾರ್ಯಗತಗೊಳಿಸಲು ಎಚ್ಚರಿಕೆ ನೀಡಲಾಗಿದೆ.

ಹಿಜ್ರಿ ೧೦೫೮ರ ರಜ್ಜಬ್ ತಿಂಗಳಿನ ೨೮ನೇ ತಾರೀಖಿಗೆ ಬರೆಯಲಾಗಿದೆ..........

ಅಶ್ರಫ್ ಅಖ್‌ದಸ್ ಹುಮಾಯೂನ ಆಲಾರ

ನಕಲು ಶಕ.೧೫೭೨ ಕಾರ್ತೀಕ ವದ್ಯ ೬
ಹಿಜ್ರ. ೧೦೬೦ ಜಿಲ್ಕಾದ್ ೧೯ ಕ್ರಿ.ಶ.೧೬೫೦ ನವ್ಹೆಂಬರ್ ೪

ಬಾದಶಾಹನ ಮುದ್ರೆಹೊಂದಿದ ಪತ್ರದ ನಕಲು ಇದಾಗಿದೆ.

ಪ್ರಸಿದ್ಧ ವ್ಯಕ್ತಿಯಾದ ಶಂಕರಾಜಿ ಬನಾಜಿಯು ರೋಹಡಾ ಕೋಟೆಯ ಹವಾಲ್ದಾರನಿಗೆ ಗೌರವ ನೀಡಿದಾಗ ತಿಳಿದುಬಂದಿರುವದೇನೆಂದರೆ : ಉಲ್ಲೇಖಿತ ಕೋಟೆಯ ದೇಸಾಯಿ ಕೇದಾರಜೀಯ ವಾರಸುದಾರನಾದ ಖಂಡೋಜಿಯು ಉದ್ಧಟತನ ಮತ್ತು ದಬ್ಬಾಳಿಕೆ ನಡೆಸಿ; ದೇಸಾಯಿಯ ಮೇಲೆ ಆಕ್ರಮಣ ಮಾಡಿ, ದೇಸಾಯಿಯ ತಾಯಿಯನ್ನು ಕೊಂದನು. ಕೇದಾರಜೀಯು ವಿಶ್ವಾಸಾರ್ಹನಾಗಿದ್ದು, ಮಹತ್ಕಾರ್ಯ ಹಾಗೂ ದರ್ಬಾರಿನ ಸೇವೆಯನ್ನು ಮಾಡುತ್ತಿರಬಹುದು. ಅವನ ಮೇಲೆ ಇಂತಹ ಕಠೋರತೆಯು ಸೂಕ್ತವಲ್ಲ. ಹಿರಡಸ್ ಬೆಟ್ಟದಲ್ಲಿ, ಸದೃಢನಾದ ಶಹಾಜಿಯು ದುರ್ಬಲನಾದನು. ಈ ಪತ್ರವು ತಲುಪಿದ ನಂತರ, ಉಲ್ಲೇಖಿತ ಖಂಡೋಜಿಯು ಎಲ್ಲಿಯೇ ಇರಲಿ ಅವನಿಗೆ ಶಿಕ್ಷೆ ವಿಧಿಸಬೇಕು. ಇದರ ನಂತರ, ಕೇದಾರಜೀ ದೇಸಾಯಿಗೆ ಯಾವುದೇ ಹಾನಿ ಉಂಟಾಗಬಾರದು. ಕೇದಾರಜಿಯು ಕೈಕೊಂಡಿರುವ ಸಿವಿಲ್ ಮಹಾತ್ಕಾರ್ಯಗಳನ್ನು ಜಾರಿಯಲ್ಲಿಟ್ಟು; ಅಗತ್ಯವಾದ ವಸ್ತುಗಳು ಹಾಗೂ ಹಕ್ಕುಗಳನ್ನು ಸೇರಿಸಿ, ಆತನಿಗೆ ಕೊಡಬೇಕು. ಆ ಉದ್ಧಟತನದ ವ್ಯಕ್ತಿಯಾದ ಖಂಡೋಜಿಯಿಂದ ಯಾವುದೇ ತೊಂದರೆ ಆಗದಿರುವಂತೆ; ಕೇದಾರಜೀಗೆ ಸಹಾಯ ಮಾಡಬೇಕು. ಮೇಲ್ಕಾಣಿಸಿದ ರಾಜನು ತನ್ನ ಪುತ್ರನಾದ ಶಿವಾಜಿಯಿಂದ, ಈ ಪತ್ರವನ್ನು ಬರೆಯಿಸಿದ್ದಾನೆ. ಆಲಸ್ಯ ಮಾಡದೇ, ಪತ್ರದಲ್ಲಿ ಬರೆದ ಪ್ರಕಾರವಾಗಿ ಕಾರ್ಯಾಚರಣೆ ಮಾಡಬೇಕು.

ಹಿಜ್ರ ೧೦೬೦ರ ಜೀಖಾಯ್ದಾ ತಿಂಗಳಿನ ೧೧ನೇ ತಾರೀಖಿಗೆ ಬರೆಯಲಾಗಿದೆ.

೮೮

ಸು.೧೦೫೬ ಶಕ.೧೫೭೭ ಕಾರ್ತೀಕ ವದ್ಯ ೧
ಹಿಜ್ರಿ. ೧೦೬೬ ಮೊಹರಮ್, ೧೫ ಕ್ರಿ.ಶ.೧೬೫೫ ನವ್ಹಂಬರ್ ೪

ಉತ್ರೋಳಿ ಬೆಟ್ಟದ ರೋಹಡಾ ಕೋಟೆಯ ದೇಶಮುಖನಾದ ಕೇದಾರಜೀ ಖೋಪಡೆಗೆ ಬರೆಯಲಾಗಿದೆ:

ಹಿಜ್ರಿ ೧೦೫೬ ರಿಂದ ಆತನ ವಾರಸುದಾರನಾದ ಖಂಡೋಜಿ ಖೋಪಡೆಯು ಕುಟಿಲತನದಿಂದ ಸಾಮ್ರಾಜ್ಯಕ್ಕೆ ಹಾನಿಯನ್ನುಂಟು ಮಾಡಿದ್ದಾನೆ. ಅವನು ಇನಾಮು ಮತ್ತು ಅಗತ್ಯ ವಸ್ತುಗಳ ಹಕ್ಕನ್ನು ದುರ್ಬಳಕೆ ಮಾಡಿ, ಬಿತ್ತಿದ ಜಮೀನಿನಲ್ಲಿ ಅಪರಾಧ ಮಾಡಿದ್ದಾನೆಂಬುದು ಗೊತ್ತಾಗಿದೆ. ಬಾದಶಾಹನಿಗೆ ಫಿರ್ಯಾದಿ ತಲುಪಿದ ನಂತರ, ಒಂದು ವೇಳೆ ದೇಶಮುಖತ್ವವನ್ನು ಅನ್ಯ ವ್ಯಕ್ತಿಗೆ ಕೊಡುವ ಪ್ರಸಂಗ ಬಂದರೆ ಅದು ಒಳ್ಳೆಯದಲ್ಲ. ಉಲ್ಲೇಖಿತ ಕೋಟೆಯ ಹವಾಲ್ದರನ ಒಪ್ಪಿಗೆ ಪಡೆದು, ವಿಶ್ವಾಸಘಾತುಕರಿಗೆ ಸೂಕ್ತವಾದ ಶಿಕ್ಷೆ ವಿಧಿಸಬೇಕಾಗಿತ್ತು. ಈ ವಿಷಯದಲ್ಲಿ, ಸ್ಪಷ್ಟವಾದ ಎಚ್ಚರಿಕೆ ನೀಡಲಾಗಿದೆ.

ಹಿಜ್ರಿ ೧೦೬೬ರ ಮೊಹರಮ್ ತಿಂಗಳಿನ ೧೫ನೇ ತಾರೀಖಿಗೆ ಬರೆಯಲಾಗಿದೆ.

ಜ.೧ ನಂತರ

ಶಕ.೧೫೮೦ ಜೇಷ್ಠ ಶುದ್ಧ ೨ ನಂತರ
ಕ್ರಿ.ಶ.೧೬೫೮ ಮೇ, ೨೪

ದೇವರು ಮಹಾನ್ ಆಗಿದ್ದಾನೆ.

ಸೇವಾಭಾವನೆ, ವಿಶ್ವಾಸಾರ್ಹತೆ ಹಾಗೂ ನಿಷ್ಠೆಯ ಹಂಬಲದ ವಾಸ್ತವಿಕತೆಯು ನಾಗೋ ಪಂಡಿತನ ಪ್ರಶಂಸನಾರ್ಹವಾದ ಸೇವೆಯ ನಿದರ್ಶನವಾಗಿದೆಯೆಂದು; ಅನುಗ್ರಹ ಮತ್ತು ಕೃಪೆಯ ಅಭಿಲಾಷಿ ಹಾಗೂ ಸ್ವಾಮಿನಿಷ್ಠರ ಕೆನೆ ಎನಿಸಿದಂತಹ ಕೇದಾರಜೀಯು ತಿಳಿಯುತ್ತಾನೆ. ಉಲ್ಲೇಖಿತ ಪಂಡಿತನು ಯಾವುದೇ ವಾಗ್ದಾನ ಮಾಡಿದರೂ ಸಹ; ಅದನ್ನು ಸ್ವೀಕರಿಸಲಾಗುತ್ತಿತ್ತು. ಮೇಲ್ಕಾಣಿಸಿದ ವ್ಯಕ್ತಿಗೆ ಹೇಳಲಾಗುವ ಯಾವುದೇ ಮಾತನ್ನು ಸಂಪೂರ್ಣ ಸಮಾಧಾನದೊಂದಿಗೆ ಅನುಸರಿಸಬೇಕು. ಬಾದಶಾಹನ ಸೇವೆ ಹಾಗೂ ವಿಶ್ವಾಸಾರ್ಹತೆಯನ್ನು ಆದ್ಯತೆಯೊಂದಿಗೆ ಪೂರ್ಣಗೊಳಿಸಲು ಪ್ರಯತ್ನಿಸುವ ಮೂಲಕ; ಯಶಸ್ವಿ ಪರಿಣಾಮವನ್ನು ಸಂಪಾದಿಸಬೇಕು. ಇದಕ್ಕಿಂತಲೂ ಹೆಚ್ಚಿಗೆ ಏನನ್ನು ಹೇಳಲು ಸಾಧ್ಯ?

ಸು.೧೦೬೦ ಶಕ.೧೫೮೨ ಚೈತ್ರ ಶುದ್ಧ ೮
ಹಿಜ್ರಿ. ೧೦೭೦ ರಜ್ಜಬ್ ೭ ಕ್ರಿ.ಶ.೧೬೬೦ ಮಾರ್ಚ, ೯
ನಕಲು

ದೇಶವು ದೇವರಿಗಾಗಿ ಇದೆ.
ಅತ್ಯುತ್ತಮವಾದ ಆಜ್ಞೆಯ ನಕಲು

ಹಿಜ್ರಿ ೧೦೭೦ರ ರಜ್ಜಬ್ ತಿಂಗಳಿನ ೭ನೇ ತಾರೀಖಿಗೆ ರೋಹಡಾ ಕೋಟೆಯ ದೇಸಾಯರಿಗೆ ಈ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೬೦ರಲ್ಲಿ, ಉಲ್ಲೇಖಿತ ಕೋಟೆಯ ದೇಸಾಯಿಯಾದ ಕೇದಾರಜೀ ನಾಯಕ ಖೋಪಡೆಯು ದರ್ಬಾರಿನಲ್ಲಿ ಅರ್ಜಿಯನ್ನು ಸಲ್ಲಿಸಿದ್ದೇನೆಂದರೆ : ನೇರ್ ಮತ್ತು ಪಳಸೋಸಿ ಗ್ರಾಮಗಳು, ಉತ್ರೋಳಿ ಗ್ರಾಮದ ಪ್ರದೇಶದಲ್ಲಿ ೧೦ ಭಿಗಾ ಭೂಮಿಯ ಪೈರು, ಭಾಗವಡಿ ಗ್ರಾಮದ ಗಂಗೂಮಿಯಾನ ೫ ಭಿಗಾ ಭೂಮಿಯ ಪೈರು, ಪಚೋಡದ ೪ ಭಿಗಾ ಭೂಮಿಯ ಪೈರು, ಪಾಲಿಯಾನ್ ಗ್ರಾಮದ ಪ್ರದೇಶದಲ್ಲಿ ಕಾಮತ್‌ನ ೫ ಭಿಗಾ ಭೂಮಿಯ ಪೈರು, ಬಾಜಾರದ ಹಕ್ಕು, ಹಾಗೂ ಅಗತ್ಯವಾದ ಸಾಮಾನುಗಳು; ಪಥೋಡಿ ಮತ್ತು ಉಲ್ಲೇಖಿತ ಕೋಟೆಯ ವೇತನರಹಿತ ಕೆಲಸದ ಒಟ್ಟು ಸಂಪರ್ಕವನ್ನು; ನನಗೆ ಕೊಡಲಾಗಿತ್ತು. ಏಕೆಂದರೆ : ಬಾದಶಾಹನ ಧೋರಣೆಗೆ ಅನುಸಾರವಾಗಿ; ಶೌರ್ಯ ಹಾಗೂ ವೀರತ್ವ ಉಳ್ಳ, ವೈಭವ/ಗಾಂಭೀರ್ಯದ ಎಚ್ಚರಿಕೆ ಹೊಂದಿದ, ಸನ್ಮಾನ್ಯ ಮಂತ್ರಿಗಳ ವಿಶ್ವಾಸಾರ್ಹ ಮಹಾನ್ ನಾಯಕರ ಕೆನೆ, ಪರಿಶುದ್ಧ ದರ್ಪಣದ ಬೆಳಕು ಸೌಭಾಗ್ಯದ ಗಣಿಯ ಶುದ್ಧ ಮುತ್ತು, ಶೌರ್ಯ ಮತ್ತು ಪುರುಷತ್ವದ ಮುಂದಾಳು, ಪರಾಕ್ರಮ ಹಾಗೂ ಬುದ್ಧಿವಂತಿಕೆಯೆಂಬ ವೃಕ್ಷದ ಪ್ರಾಣಾಂತಕ, ಅಪಾರ ಸ್ವಾಮಿನಿಷ್ಠೆಯ ಉಗಮಸ್ಥಾನ, ಬಾದಶಾಹನ ಅಪಾರ ಇನಾಮುಗಳ ಹಕ್ಕುದಾರ, ಸ್ನೇಹಿತ ಹಿತಸಂರಕ್ಷಕ, ಉನ್ನತ ನಿವಾಸ ಸ್ಥಾನಉಳ್ಳವ, ಸ್ವಾಮಿನಿಷ್ಠರ ನಾಯಕ, ವಿಜಯದ ಸಂಕೇತ, ಖಾನ್‌ಆಲಿಶಾನ್, ಬುಲಂದ್‌ಮಕಾನ್, ಕಾಲದ ಸೇನಾಪತಿಯಾದ ಸಲಾಬತ್‌ಖಾನ್‌ನ ಧೋರಣೆಯನ್ನು ನಾನು ಪ್ರಕಟಿಸುವೆನು. ಇದರ ಆಧಾರದ ಮೇಲೆ ಆತನ ಮನವಿಯನ್ನು ಬಾದಶಾಹನ ಎದುರಿಗೆ ಪ್ರಸ್ತುತಪಡಿಸಿ; ಉಲ್ಲೇಖಿತ ಗ್ರಾಮಗಳು, ಭೂಮಿಯ ಪೈರುಗಳು, ಬಾಜಾರಿನ ಅಗತ್ಯ ಸಾಮಾನುಗಳ ಹಕ್ಕು, ಇತ್ಯಾದಿ; ಮೇಲ್ಕಾಣಿಸಿದ ಕೋಟೆಯ ದೇಸಾಯಿಯಾದ ಕೇದಾರ್‌ಜೀ ನಾಯಕ್ ಖೋಪಡೆಗೆ ಕೊಡಲಾಗಿದೆ. ಅವನಿಗೆ ಮೊದಲಿನಿಂದಲೂ ಕೊಡಲಾಗಿರುವ ಈ ಇನಾಮುಗಳನ್ನು ನಿಗದಿಗೊಳಿಸಬೇಕು. ಏಕೆಂದರೆ : ಅವನು ಬಾದಶಾಹನ

ಧೋರಣೆಗಳನ್ನು ಪರಿಶ್ರಮ ಮತ್ತು ತ್ಯಾಗದೊಂದಿಗೆ ಅನುಷ್ಠಾನಗೊಳಿಸುತ್ತಿರಬಹುದು. ಇದರ ಹೊರತಾಗಿ, ಉಲ್ಲೇಖಿತ ಕೋಟೆಯ ಸರ್‌ದೇಶಮುಖತ್ವದ ಮೂರು ನೂರು ಭಿಗಾ ಜಮೀನಿನ ಅಗತ್ಯ ವಸ್ತುಗಳನ್ನು ಮೊದಲಿನಂತೆಯೇ ಮೇಲ್ಕಾಣಿಸಿದ ಕೇದಾರಜಿಗೆ ಕೊಡಬೇಕು. ಆತನ ನಂತರ, ಅವನ ಮಕ್ಕಳು ಹಾಗೂ ಮೊಮ್ಮಕ್ಕಳಿಗೆ ಇವೆಲ್ಲವುಗಳನ್ನು ನೀಡಿ; ಪ್ರತಿ ವರ್ಷ ಇದೇ ಪ್ರಕಾರ ಆಜ್ಞೆಯನ್ನು ಜಾರಿಗೊಳಿಸಬೇಕು. ತತ್ಕಾಲಿಕವಾದ ತಡೆಹಿಡಿಯುವಿಕೆಯನ್ನು ವಜಾಗೊಳಿಸಿ; ಮೊದಲಿಗೆ ಕೊಡಲಾಗಿರುವ ಇನಾಮುಗಳನ್ನು ಅವನಿಗೆ ಹಿಂತಿರುಗಿಸಿ ನೀಡಬೇಕು.

ಮೇಲೆ ಉಲ್ಲೇಖಿಸಲಾದ ತಾರೀಖಿಗೆ ಬರೆಯಲಾಗಿದೆ. ಹುಜೂರ್ ಖುರ್ಶಿದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನ್ ಆಲಾರ ಅನುಮತಿಯ ಮೇರೆಗೆ,

ಹಿಜ್ರಿ. ೧೦೬೦ ರಜ್ಜಬ್ ೨೦ | ಶಕ.೧೫೮೨ ಚೈತ್ರ ವದ್ಯ ೬
ಕ್ರಿ.ಶ.೧೬೬೦ ಮಾರ್ಚ ೨೨

ಅರಮನೆಗಳ ದೇಶಮುಖರ ಪ್ರತಿಜ್ಞಾಪತ್ರ

ಕೇದಾರಜೀ ನಾಯಕ್ ಖೋಪಡೆ | ಕೆಲವು ದೇಶಮುಖರು
ರೋಹಡಾ ಕೋಟೆಯ ದೇಸಾಯಿ

ಹಿಜ್ರಿ ೧೦೬೦ರಲ್ಲಿ ಸೈಯ್ಯದ್ ಅಬ್ದುಲ್ಲಾನು ಬಾದಶಾಹನ ದರ್ಬಾರಿನಲ್ಲಿ ಬಹಿರಂಗಪಡಿಸಿದ ಸಂಗತಿಯು ಗೊತ್ತಾಗಿದೆ. ದೇಶದಲ್ಲಿ ವೈರಿಗಳು ಇದ್ದಾರೆ. ಅವನಿಗೆ ವೈರಿಗಳು ಸಹಾಯ ಮಾಡಿ, ನಿಮ್ಮ ಬಳಿಗೆ ಕಳುಹಿಸಿದ್ದಾರೆ. ಆತನು ಏನೆಲ್ಲವನ್ನೂ ನಿಮ್ಮೆದುರಿಗೆ ವ್ಯಕ್ತಪಡಿಸುವನೋ; ಅದನ್ನು ಕ್ಷಮಿಸಿ ಬಿಡಿರಿ. ಇದೆಲ್ಲವನ್ನೂ ಅವನು ತನ್ನ ಉನ್ನತಿಗಾಗಿ ಮಾಡುವನು.

ದಿನಾಂಕ : ರಜ್ಜಬ್, ೨೦

ಆಲಂಗೀರ್ ಬಾದಶಾಹನ ಗುಲಾಮನಾದ ಮಿರ್ಝಾ ರಾಜಾ ಜಯಸಿಂಗ.

ನಕಲು

ಅವನು ಮಿತ್ರನಾಗಿದ್ದಾನೆ.

ಖಾನ್‌ಖಾನಾನ್ ಖಾನ್ ಸಾಹೇಬ ಸೇವೆಯಲ್ಲಿ,

ಅಶಕ್ತ ಸೇವಕರಲ್ಲಿ ಎಲ್ಲರಿಗಿಂತಲೂ ಅಶಕ್ತನಾದ ಉತ್ರೋಳಿ ಬೆಟ್ಟದ ರೋಹಡಾ ಕೋಟೆಯ ದೇಸಾಯಿಯಾದ ನರಸೋಜಿ ಖೋಪಡೆಯ ಪುತ್ರ ಶ್ರೀಕರ ಕೇದಾರಜೀಯು ಮನವಿ ಮಾಡಿಕೊಂಡು, ನನ್ನ ಪರಿಸ್ಥಿತಿಯನ್ನು ಪ್ರಸ್ತುತಪಡಿಸುತ್ತೇನೆ :-

ಈ ಅಶಕ್ತನಾದ ಸೇವಕನಿಗೆ ಒಂಭತ್ತು ಸೋದರರಿದ್ದಾರೆ. ನಾನು ಒಂಭತ್ತು ಸೋದರರ ಹಿರಿಯ ಸೋದರನಾಗಿದ್ದು; ಹಿರಿಯ ಮನೆತನದವನಾಗಿದ್ದೇನೆ. ಕೃಷಿಯು ನನ್ನ ವೃತ್ತಿಯಾಗಿದ್ದು, ಅದನ್ನು ಅನೇಕ ವರ್ಷಗಳಿಂದ ನಿರ್ವಹಣೆ ಮಾಡುತ್ತ ಬಂದಿದ್ದೇನೆ. ನಾನು ನಗರಪ್ರದೇಶದಲ್ಲಿ ವಾಸಿಸುತ್ತ, ವ್ಯವಸಾಯದ ನಿರ್ವಹಣೆ ಮಾಡುತ್ತೇನೆ. ಹವಾಲ್ದಾರ್ ಸೈದಿ ಆಜಮ್ ಹಸನ್ನನ ಕಾಲದಿಂದಲೂ ಜೀವನ ಸಾಗಿಸುತ್ತ ಬಂದಿದ್ದೇವೆ. ಸೋದರರ ವಾರಸುದಾರರ ಪೈಕಿ, ಧರ್ಮೋಜಿಯ ಪುತ್ರನಾದ ಖಂಡೋಜಿಯು; ಶಹಾಜಿ ಭೋಸ್ಲೆಯ ಮಗ ಶಿವಾಜಿಯನ್ನು ಜೊತೆಗೂಡಿಸಿಕೊಂಡು, ನನಗೆ ಇನಾಮಿನ ರೂಪದಲ್ಲಿ ದೊರೆತ ಅಂಬೋಡೆ ಗ್ರಾಮದ ಮೇಲೆ ದಾಳಿ ಮಾಡಿ; ನನ್ನ ಮನೆ ಹಾಗೂ ಉಲ್ಲೇಖಿತ ಗ್ರಾಮವನ್ನು ಸಂಪೂರ್ಣವಾಗಿ ನಾಶಮಾಡಿದನು. ಮೂರು ರೈತರನ್ನು ಕೊಂದು, ಹನ್ನೆರಡು ಜನರನ್ನು ಗಾಯಗೊಳಿಸಲಾಗಿದೆ. ಅಪಾರ ಪ್ರಮಾಣದ ಬಂಗಾರ-ಬೆಳ್ಳಿ, ಸಾಮಾನು, ದನ-ಕರು, ಖಡ್ಗ-ಢಾಲು, ಆಹಾರ ಸಾಮಗ್ರಿ ಇತ್ಯಾದಿ ಎಲ್ಲವನ್ನೂ; ಅವರು ಲೂಟಿ ಮಾಡಿದ್ದಾರೆ. ಪಶುಗಳ ಹುಲ್ಲು ಮತ್ತು ಗ್ರಾಮಗಳಿಗೆ ಬೆಂಕಿಹಚ್ಚಿ; ಪ್ರದೇಶವನ್ನು ನಾಶಮಾಡಿದರು. ನಾನು (ಶ್ರೀಕರ) ಮತ್ತು ನನ್ನ ಮಕ್ಕಳ ಪ್ರಾಣವನ್ನು ರಕ್ಷಿಸಿಕೊಂಡು ಪಲಾಯನ ಮಾಡಿದೆವು. ಅವರು ಕೃಷಿ-ಸಂಬಂಧಿತವಾದ ಉಪಕರಣ ಇತ್ಯಾದಿಗಳನ್ನೂ ಸಹ, ಅಪಹರಿಸಿದರು.

ಶಿವಾಜಿಯ ಹತ್ತಿರ ನಾಲ್ಕು ಸಾವಿರ ಕುದುರೆ ಸವಾರರಿದ್ದರು. ಅಶಕ್ತ ದೇಸಾಯಿಯಾಗಿರುವ ನಾನು, ಹತ್ತು - ಇಪ್ಪತ್ತು ಜನರ ಸಹಾಯದಿಂದ ಏನುಮಾಡಲು ಸಾಧ್ಯ? ಈ ಪ್ರದೇಶದಲ್ಲಿ ಪ್ರತಿಯೊಬ್ಬರನ್ನು ಚಿತ್ರಹಿಂಸೆ ಹಾಗೂ ಅತ್ಯಾಚಾರಕ್ಕೆ ಗುರಿಪಡಿಸಲಾಗಿದೆ. ಸಾಹೇಬರಿಗೆ ಮನವಿ ಸಲ್ಲಿಸುವ ಪೂರ್ವದಲ್ಲಿ, ಅವರು ಕೊಡುವದನ್ನು ಕೊಟ್ಟು; ಸಾಹೇಬರ ವಿಶ್ವಾಸ ಗಳಿಸಿದ್ದಾರೆ. ಅವರು ತಮ್ಮ ಅಪರಾಧವನ್ನು

ಒಪ್ಪಿಕೊಳ್ಳುವಂತೆ ಈಗ ಹವಾಲ್ದಾರಿಕೆಯಲ್ಲಿ ಪ್ರಸಿದ್ಧನಾದ ನರಸಿಂಗ್‌ರಾವ್ ಸದೋ ಬಾಬ್‌ಜಿಯು ಮಾಡಿದ್ದಾನೆ. ಅವರು ನನಗೆ ಬಂದು ಭೆಟ್ಟಿಯಾಗಿದ್ದಾರೆ. ನಾನು ನನ್ನ ವ್ಯವಹಾರದ ವ್ಯವಸ್ಥೆ ಮಾಡಿಕೊಂಡು ಈ ಪ್ರದೇಶದಲ್ಲಿ ಜನರನ್ನು ನೆಲೆಗೊಳಿಸುತ್ತಿದ್ದೇನೆ.

ವಿಶ್ವಾಸಾರ್ಹತೆ ಮತ್ತು ಜನರ ನೆಲೆಗೊಳಿಸುವಿಕೆಯನ್ನು ನಾನು ಎಂದಿಗೂ ನಿರ್ಲಕ್ಷಿಸುವದಿಲ್ಲ. ಈಗ ಖಂಡೋಜಿಯು ತನ್ನ ಇಬ್ಬರು ಸೇವಕರನ್ನು ನಿಮ್ಮ ಬಳಿಗೆ ಕಳುಹಿಸಿದ್ದಾರೆ. ಅವರು ಏನೆಲ್ಲವನ್ನು ನಿಮಗೆ ತಿಳಿಸುವರೋ; ಅದೆಲ್ಲವೂ ಅಸತ್ಯ ಹಾಗೂ ದೋಷಪೂರ್ಣವಾಗಿದೆ. ಠಾಣೆಯಲ್ಲಿ ನಿಮ್ಮ ಎದುರಿಗೆ ಅಥವಾ ತನ್ನ ಕುಲ-ಬಾಂಧವರ ಮುಂದೆ ಖಂಡೋಜಿಯು ಬಂದು ನಿಂತರೆ; ನಾನೂ ಅಲ್ಲಿಗೆ ಬಂದು, ಸತ್ಯಾಂಶವನ್ನು ತಿಳಿಸುವೆನು. ಈ ವಿಷಯದಲ್ಲಿ ನಾನು ನ್ಯಾಯವನ್ನು ಅಪೇಕ್ಷಿಸುತ್ತೇನೆ. ನೀವು ನೀಡುವ ನ್ಯಾಯವನ್ನು ನಾನು ಸ್ವೀಕರಿಸುತ್ತೇನೆ. ದಯವಿಟ್ಟು ನೀವು ನ್ಯಾಯದಾನ ಮಾಡಿದ್ದೀರಿ. ಮತ್ತು ನನ್ನ ಇಷ್ಟಾರ್ಥವನ್ನು ಪೂರೈಸಿದ್ದೀರಿ. ಶ್ರೀಮಂತಿಕೆಯ ದಿನಗಳು ಹಾಗೂ ಧರ್ಮವು ನಿರಂತರ ಮತ್ತು ಶಾಶ್ವತವಾಗಿರಲಿ.

ವಂದನೆಗಳು.

ಜು.೮ ಜಿಲ್‌ಹಜ್ಜಾ ೧೩ ಶಕ.೧೫೮೭ ಆಷಾಢ ಶುದ್ಧ ೧೫
ಕ್ರಿ.ಶ.೧೬೬೫ ಜೂನ್ ೧೭

ರೋಹಡಾ ಕೋಟೆಯ ತಾಲ್ಲೂಕಿನ ದೇಶಮುಖರು ದೇಶಪಾಂಡೆಗಳು, ಸಾರ್ವಜನಿಕರು ಮತ್ತು ರೈತರ ಪ್ರತಿಜ್ಞಾಪತ್ರ ಇದಾಗಿದೆ :

ರೋಹಡಾ ಕೋಟೆಯು ಸಾಮ್ರಾಜ್ಯದ ನಾಯಕರ ಬಳಕೆಯಲ್ಲಿದೆ ನಾಯಕರು ತಮ್ಮ ಅರಮನೆ ಹಾಗೂ ಗೃಹಗಳಲ್ಲಿ ಸಂತೋಷದಿಂದ ಇದ್ದು ಕೃಷಿಯ ಬೆಳವಣಿಗೆಗಾಗಿ ಪರಿಶೀಲನೆ ಮಾಡಬೇಕು. ಈಗ, ಕಷ್ಟ ಮತ್ತು ಶೂನ್ಯತೆಯ ದೆಸೆಯಿಂದ ಅಲ್ಲಿ ಯಾರೂ ವಾಸಿಸುವದಿಲ್ಲ. ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದಂತಹ ದೇಶಮುಖತ್ವದ ಶಾಸನವನ್ನು ಕಾಯಂಗೊಳಿಸಿ; ಅಲ್ಲಿ ಜನರನ್ನು ನೆಲೆಗೊಳಿಸಿ, ತಾಲ್ಲೂಕಿನ ಜನಸಂಖ್ಯೆಯ ಸನ್ನದನ್ನು ದೊರಕಿಸಿ ಕೊಡಬೇಕು.

ಜುಲೂಸ್ ೮ರ ಜಿಲ್ಲ್‌ಹಜ್ಜಾ ತಿಂಗಳಿನ ೧೩ನೇ ತಾರೀಖು ಆಲಂಗೀರ್ ಬಾದಶಾಹನ ಶಿಷ್ಯನಾದ ಲತೀಫ್.

೯೪

ಜು.೮ ಜಖರ್ ೨

ಶಕ ೧೫೮೭ ಮಾರ್ಗಶಿರ ಶುದ್ಧ ೪
ಕ್ರಿ.ಶ.೧೬೬೫ ನವ್ಹಂಬರ್ ೩೦

ಉತ್ರೋಳಿಯ ಕಡೆಗಿನ ರೋಹಡಾ ಕೋಟೆಯ ಕಾರ್ಯನಿರ್ವಾಹಕರು ತಿಳಿಯುವುದೇನೆಂದರೆ:–

ಮೊದಲಿನ ಆಡಳಿತಗಾರರ ಸನ್ನದುಗಳ ಅನುಸಾರವಾಗಿ, ಕೇದಾರಜೀ ನಾಯಕನ ಹೆಸರಿನಲ್ಲಿ ಇನಾಮು ಮಂಜೂರು ಮಾಡಲಾಗಿದೆ. ಅದರ ಮೇರೆಗೆ, ಮೊದಲಿನಂತೆಯೇ ಅರಮನೆಯಿಂದ ಈ ಇನಾಮುಗಳನ್ನು ಅವನ ಮಕ್ಕಳು ಹಾಗೂ ಮೊಮ್ಮಕ್ಕಳಿಗೆ ತಲುಪಿಸಲು; ಅವರ ಸ್ವಾಧೀನದಲ್ಲಿ ಕೊಡಲಾಗಿರಬಹುದೆಂದು, ಬರೆಯಲಾಗಿದೆ. ಸಾಮ್ರಾಜ್ಯದ ನಿರಂತರತೆ ಮತ್ತು ಪ್ರಳಯದವರೆಗಿನ ಕಾರ್ಯನಿರ್ವಹಣೆಗಾಗಿ, ಪ್ರಾರ್ಥನೆ ಮಾಡಿರಿ. ಸ್ವಾಮಿನಿಷ್ಠೆ ಹಾಗೂ ಜನರನ್ನು ನೆಲೆಗೊಳಿಸುವ ಪ್ರಯತ್ನ ಮಾಡಿರಿ. ಇದಕ್ಕಿಂತಲೂ ಹೆಚ್ಚಿಗೆ ಏನು ಬರೆಯಲು ಸಾಧ್ಯ ?

ಎಂಟನೆಯ ಜುಲೂಸ್‌ದ ಜಮಾದಿ ಉಸ್‌ಸಾನಿ ತಿಂಗಳಿನ ೨ನೇ ತಾರೀಖಿಗೆ ಬರೆಯಲಾಗಿದೆ.

ಭಾಡಳೆ ಘೋರ್ಪಡೆ

ಬಾಜಿ ಘೋರ್ಪಡೆ

ಮಾಲೋಜಿ ಘೋರ್ಪಡೆ

೯೫

ಸು. ೧೦೬೦ ಶಕ.೧೫೮೧ ಮಾಘ ವದ್ಯ ೩೦
ಹಿಜ್ರಿ ೧೦೭೦ ಜವಲ್ ೨೭ ಕ್ರಿ.ಶ.೧೬೬೦ ಜನವರಿ ೩೧

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ

ದೇಶವು ದೇವರಿಗಾಗಿ ಇದೆ.

ಪ್ರಕಾಶಮಾನವಾದ ರಾಜಧಾನಿ ಮೊಹಮ್ಮದಪುರ ವ್ಯವಹಾರದ ನೇತೃತ್ವ ಹಾಗೂ ಪ್ರಶಂಸೆಗೆ ಆಶ್ರಯದಾತ, ಸೌಜನ್ಯ ಮತ್ತು ಸನ್ಮಾರ್ಗದರ್ಶನದ ಮುನ್ನೆಚ್ಚರಿಕೆ ಹೊಂದಿದ ಹಾಗೂ ಶೌರ್ಯ/ವೀರತ್ವದಲ್ಲಿ ತಜ್ಞನಾದ ಹವಾಲ್ದಾರ್ ಮಂಜ್ಲಾಶಾಹ ಮತ್ತು ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :–

ಹಿಜ್ರಿ ೧೦೬೦ರಲ್ಲಿ ಉಲ್ಲೇಖಿತ ವ್ಯವಹಾರದ ಪಾರ್ಥಂಡಿ, ಮುರಗೋರ್ ಮತ್ತು ಕೊಂಬನಾಕವ್ ಗ್ರಾಮಗಳನ್ನು ಮೊದಲು, ಅಂಬಾಜಿ ಘೋರ್ಪಡೆ ಆದಿಲ್‌ಶಾಹಿಯ ಪುತ್ರನಾದ ಕೃಷ್ಣಾಜೀಗೆ; ಆತನ ದೃಢತೆಗಾಗಿ ಕೊಡಲಾಗಿತ್ತು. ಆ ಸಮಯದಲ್ಲಿ ಈ ಗ್ರಾಮಗಳನ್ನು ಸರ್‌ಸರೆ ನೌಬತ್ ಏತಬಾರ್‌ಖಾನ್‌ನ ಹತ್ತಿರ ಅಮಾನತ್ತಿನಲ್ಲಿ ಇಡಲಾಗಿತ್ತು. ಈಗ ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ, ಮೇಲ್ಕಾಣಿಸಿದ ವ್ಯಕ್ತಿಯ ದೃಢತೆಯ ದೆಸೆಯಿಂದ, ಉಲ್ಲೇಖಿತ ಗ್ರಾಮಗಳನ್ನು ಮೊದಲಿನಂತೆಯೇ ತಂಬಾಕು ಮತ್ತು ತೀಪ್‌ಬರ್ಗ (ಎಲೆಗಳು) ಸುಂಕದ ಹೊರತಾಗಿ, ಎಲ್ಲ ವ್ಯವಹಾರಗಳ ಜೊತೆಗೆ ನಿಗದಿಗೊಳಿಸಿ ಕೊಡಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಗ್ರಾಮಗಳನ್ನು ಆತನ ಹೆಸರಿಗೆ ಸೇರ್ಪಡೆ ಮಾಡಿ, ಆತನ ಬಳಕೆಗಾಗಿ ಹಿಂತಿರುಗಿಸಿ ಕೊಡಬೇಕು.

ಹಿಜ್ರಿ ೧೦೭೦ರ ಜಮಾದಿ ಉಲ್ ಅವ್ವಲ್ ತಿಂಗಳಿನ ೨೮ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

ಸು.೧೦೬೩ ಶಕ.೧೫೮೮ ಪೌಷ್ಯ ವದ್ಯ ೨
ಹಿಜ್ರಿ ೧೦೭೩ ಜವಲ್ ೧೫ ಕ್ರಿ.ಶ.೧೬೬೨ ಡಿಸೆಂಬರ್ ೧೭

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ.

ದೇಶವು ದೇವರಿಗಾಗಿ ಇದೆ.

ಶೌರ್ಯ ಮತ್ತು ವೀರತ್ವದಲ್ಲಿ ತಜ್ಞ, ವೈಭವ ಹಾಗೂ ಗಾಂಭೀರ್ಯದ ಮುನ್ನೆಚ್ಚರಿಕೆ ಹೊಂದಿದ, ಉನ್ನತ ದರ್ಜೆಯುಳ್ಳ, ಮಹೋನ್ನತ ಶ್ರೇಣಿಯ,....... ಯೋಗ್ಯ ಕೃಪೆ ಮತ್ತು ಅಪಾರ ಅನುಗ್ರಹದ ಹಕ್ಕುದಾರ, ಮಾನ್ಯತೆ ಹಾಗೂ ಅಧಿಕ ಸಹಾನುಭೂತಿಗೆ ಅರ್ಹ, ದರ್ಬಾರಿನ ಬೆಂಬಲಿಗರ ಕೆನೆ, ಕಲ್ಯಾಣಾಕಾಂಕ್ಷಿಗಳ ಸಾರಾಂಶ, ಸ್ವಾಮಿನಿಷ್ಠ, ವಿಶ್ವಾಸಾರ್ಹ ಕಾರ್ಯದರ್ಶಿ...... ಸುದೈವದ ಆಶ್ರಯದಾತನಾದ ಖಾನ್; ಅತ್ಯುತ್ತಮ, ಸೌಭಾಗ್ಯದ ಸಂಕೇತ, ಉನ್ನತ ದರ್ಜೆಹೊಂದಿದ, ಎತ್ತರದ ಸ್ಥಾನಉಳ್ಳ, ಕಾಣಿಕೆ, ಕೃಪೆ ಮತ್ತು ಮಹಾನ್ ಉಪಕಾರಕ್ಕೆ ಅರ್ಹನಾದ ಹವಾಲ್ದಾರ್ ಅಫಜಲ್‌ಖಾನ್ ಮೊಹಮ್ಮದ ಶಾಹಿ, ಠಾಣೇದಾರ ಅಹ್ಮದ್‌ಖಾನ್ ಹಾಗೂ ಚಂದನ್ ಕೋಟೆಯ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ : –

ಹಿಜ್ರಿ ೧೦೬೩ರಲ್ಲಿ ದೃಢತೆ, ಮರ್ಯಾದೆ ಹಾಗೂ ಘನತೆಯಲ್ಲಿ ತಜ್ಞನಾದ, ಶೌರ್ಯ ಮತ್ತು ವೀರತ್ವದಲ್ಲಿ ಮುನ್ನೆಚ್ಚರಿಕೆ ಹೊಂದಿದ ಏಕರೂಪ ಹಾಗೂ ಸಮಾನ ದರ್ಜೆಯವರ ವಿಶ್ವಾಸಾರ್ಹ, ಕರುಣೆ ಮತ್ತು ಉಪಕಾರಕ್ಕೆ ಅರ್ಹ, ಆದಿಲ್‌ಶಾಹಿ ಘೋರ್ಪಡೆಗಳ ಕುಲ–ಗೋತ್ರ ಹಾಗೂ ಸೋದರರ ಸಾರಾಂಶರಾದ ಖಂಡೂಜಿ, ಬಾಜಿ, ಅಂಬಾಜಿ ಮತ್ತು ಕೃಷ್ಣಾಜಿಯನ್ನು; ಉಲ್ಲೇಖಿತ ಕೋಟೆಯ ರಸಿಕ ಸೇವಕರ .... ಸಿದ್ಧತೆ, ಸ್ಥಳ ಹಾಗೂ ಧಾನ್ಯಕ್ಕಾಗಿ ಕಳುಹಿಸಲಾಗಿತ್ತು. ಈಗ, ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ...... ಮೇಲ್ಕಾಣಿಸಿದ ವ್ಯಕ್ತಿಗಳ ದೃಢತೆಗಾಗಿ, ಮೊದಲಿನಂತೆಯೇ, ತಂಬಾಕು ಹಾಗೂ ತೀಪ್‌ಬರ್ಗ (ಎಲೆಗಳು) ಸುಂಕದ ಹೊರತಾಗಿ, ಎಲ್ಲ ವ್ಯವಹಾರಗಳನ್ನು ಇನಾಮುಗಳೊಂದಿಗೆ ನಿಗದಿಪಡಿಸಿ; ಅವರಿಗೆ ದಯಪಾಲಿಸಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಗ್ರಾಮಗಳನ್ನು ಮೇಲ್ಕಾಣಿಸಿದ ಘೋರ್ಪಡೆಗಳ ಹೆಸರಿಗೆ ಸೇರ್ಪಡೆ ಮಾಡಿ; ಅವರ ಸ್ವಾಧೀನಕ್ಕಾಗಿ ಹಿಂತಿರುಗಿಸಿ ಕೊಡಬೇಕು.

ಹಿಜ್ರಿ ೧೦೭೩ರ ಜಮಾದಿ ಉಲ್ ಅವ್ವಲ್ ತಿಂಗಳಿನ ೧೫ನೇ ತಾರೀಖಿಗೆ ಬರೆಯಲಾಗಿದೆ. ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

ಸು. ೧೦೭೪ ಶಕ. ೧೫೯೬ ಜ್ಯೇಷ್ಠ ಶುದ್ಧ ೧೪
ಹಿಜ್ರಿ ೧೦೮೫ ರವಲ್ ೧೨ ಕ್ರಿ.ಶ.೧೬೭೪ ಜೂನ್ ೭

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ,
ದೇಶವು ದೇವರಿಗಾಗಿ ಇದೆ.

ಪ್ರಕಾಶಮಾನವಾದ ರಾಜಧಾನಿಯ ಮುಖಂಡತ್ವ ಹಾಗೂ ಪ್ರಶಂಸೆಗೆ ಆಶ್ರಯದಾತನಾದ, ಸೌಜನ್ಯ ಮತ್ತು ಸನ್ಮಾರ್ಗ ದರ್ಶನದ ಮುನ್ನೆಚ್ಚರಿಕೆ ಹೊಂದಿದ, ಶೌರ್ಯದ ಸಂಪ್ರದಾಯವುಳ್ಳ ಹವಾಲ್ದಾರ್ ಶಾಹ ಹಜರತ್ ಹಾಗೂ ವರ್ತಮಾನ/ ಭವಿಷತ್ತಿನ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೭೪ರಲ್ಲಿ, ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ; ಅಲಿಖಾನ್ ದಾವೂದಖಾನ್‌ನಿಗೆ ಕೊಡಲಾದ ಉಲ್ಲೇಖಿತ ವ್ಯವಹಾರದ ಪಟೇಲತ್ವದ ಆನುವಂಶಿಕ ಆಸ್ತಿಯಾದ ಮುಬಾರಕ್‌ಪೂರ ಪೇಟೆಯನ್ನು; ಸಯ್ಯದಿ ಅಬ್ದುಲ್ ಅಜೀಜ್‌ನಿಗೆ ದಯಪಾಲಿಸಿ ನೀಡಲಾಗಿದೆ. ಶಾಸನದ ಅನುಸಾರವಾಗಿ, ಉಲ್ಲೇಖಿತ ಪೇಟೆಯನ್ನು ಸೂಚಿಸಲ್ಪಟ್ಟ ಸಯ್ಯದಿಗೆ ಕೊಡಲಾಗಿದೆ. ಅದು ವಂಶಪರಂಪರಾಗತವಾಗಿ ನಡೆದು ಬಂದಿದೆ. ಅಗತ್ಯ ಸಾಮಾನುಗಳ ಹಕ್ಕು, ವರ್ತನಾ, ಇನಾಮು, ಪಸ್‌ಕಿ, ಪಲ್‌ಕಿ, ಪಟ್ಟಿ ಪಥೋಡಿ ಇತ್ಯಾದಿ ಮೊದಲಿನಿಂದಲೂ ಸಾಗಿಬಂದಿರುವ ಹಕ್ಕುಗಳನ್ನು ಸೇರ್ಪಡೆ ಮಾಡಬೇಕು. ಅವನ ನಂತರ, ಉಲ್ಲೇಖಿತ ಆನುವಂಶಿಕ ಆಸ್ತಿಯನ್ನು; ಆತನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಜಾರಿಗೊಳಿಸಬೇಕು. ಪ್ರತಿ ವರ್ಷ ಹೊಸ ಆಜ್ಞೆಯ ನೆಪಮಾಡಬಾರದು. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಹಿಂತೆಗೆತವನ್ನು ವಾಪಸ್ ಪಡೆದು, ಅಸಲಿ ಫರ್ಮಾನನ್ನು ಹಿಂತಿರುಗಿಸಿರಿ.

ಹಿಜ್ರಿ ೧೦೮೫ರ ರಬಿಉಲ್ ಅವ್ವಲ್ ತಿಂಗಳಿನ ೧೨ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೯೮

ಹಿಜ್ರಿ. ೧೦೭೧ ಜಖರ್ ೧೫ ಶಕ. ೧೫೫೨ ಕಾರ್ತೀಕ ವದ್ಯ ೨
ಕ್ರಿ.ಶ.೧೬೭೦ ಅಕ್ಟೋಬರ್ ೨೦

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಶೌರ್ಯ ಹಾಗೂ ಧೈರ್ಯದಲ್ಲಿ ತಜ್ಞನಾದ ಮಾಲೋಜಿ ರಾಜಾ ಘೋರ್ಪಡೆ ಆದಿಲ್‌ಶಾಹಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ : –

ಹಿಜ್ರಿ ೧೦೬೮ರಲ್ಲಿ, ಬಾದಶಾಹನ ದರ್ಬಾರಿನಲ್ಲಿ ಬಹಿರಂಗಗೊಂಡ ಸಂಗತಿಯೇನೆಂದರೆ : ಶೂರತ್ವ ಮತ್ತು ಸಾಹಸದಲ್ಲಿ ತಜ್ಞನಾದ ನಿಮ್ಮ ತಂದೆ ಬಾಜೀ ರಾಜಾ ಘೋರ್ಪಡೆಯು, ಹಲವಾರು ವರ್ಷಗಳವರೆಗೆ ಗೌರವಾನ್ವಿತ ಬಾದಶಾಹನ ಸೇವೆ ಮಾಡಿದನು. ಮಹೋನ್ನತ ಗೌರವದ ಬಾದಶಾಹ ಹಾಗೂ ರಾವ್ ಶಿವಾಜಿರಾಜಾ ಭೋಸ್ಲೆಯ ಯುದ್ಧಗಳು ನಡೆದ ಸಂದರ್ಭದಲ್ಲಿ; ಆತನು ಶೌರ್ಯ–ಸಾಹಸ ಮತ್ತು ಪರಿಶ್ರಮವನ್ನು ಪ್ರದರ್ಶಿಸಿ, ಬಾದಶಾಹನಿಗಾಗಿ ಪ್ರಾಣ ತ್ಯಾಗ ಮಾಡಿದನು. ಆತನ ಪಾಲಿನ ಜಾಹಗೀರನ್ನು, ನಿನಗೆ ಇನಾಮಿನ ರೂಪದಲ್ಲಿ ಕೊಟ್ಟು; ಮೊದಲಿನ ಸೇವೆಯನ್ನು ಗಮನದಲ್ಲಿಟ್ಟುಕೊಂಡು, ನಿನ್ನನ್ನು ಸೇವೆಯಿಂದ ಮುಕ್ತಗೊಳಿಸಿ, ಇನಾಮಿನ ರೂಪದಲ್ಲಿ; ಮುಧೋಳ, ಜಮ್‌ಗಹ್, ಧವಲ್‌ಸರ್, ಮಾಚಕನೂರ್ ಹಾಗೂ ಲೋಕಾಪೂರ– ಐದು ತಾಲ್ಲೂಕುಗಳನ್ನು ಅವುಗಳ ಹಕ್ಕುದಾರರನ್ನು ಹೊರತುಪಡಿಸಿ; ತಾಲ್ಲೂಕುಗಳ ಎಲ್ಲ ವ್ಯವಹಾರಗಳು ಮತ್ತು ವ್ಯವಸ್ಥೆಯ ಎಲ್ಲ ಕಾನೂನುಗಳೊಂದಿಗೆ ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ ದಯಪಾಲಿಸಲಾಗಿದೆ. ನಿಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ಆನುವಂಶಿಕವಾಗಿ ಇನಾಮುಗಳನ್ನು ಬಳಕೆ ಮಾಡಿಕೊಂಡು; ಸುಖ–ಸಂತೋಷದಿಂದ ಇರಬೇಕು. ಆದುದರಿಂದ ಐದು ತಾಲ್ಲೂಕುಗಳಿಗಾಗಿ ಪ್ರತ್ಯೇಕ ಆಜ್ಞೆಯನ್ನು ಪ್ರಕಟಿಸಲು ಎಚ್ಚರಿಕೆ ನೀಡಲಾಗಿದೆ.

ಹಿಜ್ರಿ ೧೦೮೧ರ ಜಮಾದಿ ಉಸ್‌ಸಾನಿ ತಿಂಗಳಿನ ೧೫ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೯೯

ಹಿಜ್ರಿ.೧೦೮೧ ಜಖರ್ ೧೫ ಶಕ. ೧೫೯೨ ಕಾರ್ತೀಕವದ್ಯ ೨
ಕ್ರಿ.ಶ.೧೬೭೦ ಅಕ್ಟೋಬರ್ ೨೦

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ.
ದೇಶವು ದೇವರಿಗಾಗಿ ಇದೆ.

ಮುಧೋಳ ತಾಲ್ಲೂಕಿನ ದೇಶಮುಖರು, ದೇಸಾಯರು ಹಾಗೂ ನಾಡಗೌಡರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ : –

ಹಿಜ್ರಿ ೧೦೬೮ರಲ್ಲಿ ಶೂರತ್ವ ಮತ್ತು ಸಾಹಸದಲ್ಲಿ ತಜ್ಞನಾದ ಬಾಜೀರಾವ್ ರಾಜಾ ಬಹಾದ್ದೂರ್ ಘೋರ್ಪಡೆ ಆದಿಲ್‌ಶಾಹಿಗೆ ಕೊಡಲಾದ ಜಾಹಗೀರು, ನಿಮ್ಮ ತಾಲ್ಲೂಕು ಆಗಿತ್ತು. ಆ ಸಮಯದಲ್ಲಿ ಬಾಜೀರಾವ್‌ರಾಜಾ ಬಹಾದ್ದೂರ್ ಘೋರ್ಪಡೆ ಆದಿಲ್‌ಶಾಹಿಯ ಹಲವಾರು ವರ್ಷಗಳವರೆಗೆ ಅತ್ಯಂತ ಸ್ವಾಮಿನಿಷ್ಠೆಯಿಂದ ಸಾಮ್ರಾಜ್ಯದ ಸೇವೆ ಮಾಡುತ್ತಿದ್ದನು. ಶಿವಾಜಿರಾಜಾ ಭೋಸ್ಲೆಯೊಂದಿಗೆ ನಡೆದ ಯುದ್ಧದಲ್ಲಿ ಶೌರ್ಯ ಹಾಗೂ ಸಾಹಸದಿಂದ ಹೋರಾಟ ಮಾಡುತ್ತ, ಪ್ರಾಣತ್ಯಾಗ ಮಾಡಿದನು. ಆದುದರಿಂದ, ಶೌರ್ಯ ಮತ್ತು ಸಾಹಸದಲ್ಲಿ ತಜ್ಞನಾದ ಅವನ ಪುತ್ರ ಮಾಲೋಜಿ ರಾಜಾ ಬಹ್‌ದ್ದೂರ್ ಘೋರ್ಪಡೆಗೆ ಇನಾಮು ನೀಡಲು ಅಪೇಕ್ಷಿಸಿ, ಅವನನ್ನು ಸೇವೆಯಿಂದ ಮುಕ್ತಗೊಳಿಸಿ; ಮಹೋನ್ನತ ಬಾದಶಾಹನು ಐದು ತಾಲ್ಲೂಕುಗಳನ್ನು ಅವನಿಗೆ ಇನಾಮಿನ ರೂಪದಲ್ಲಿ ಕೊಟ್ಟಿದ್ದಾನೆ. ಇನಾಮಿಗಾಗಿ ಪ್ರತ್ಯೇಕ ಆಜ್ಞೆಯನ್ನು ಪ್ರಕಟಿಸಲಾಗಿದೆ. ಈ ವಿಷಯದಲ್ಲಿ ಬಾದಶಾಹನು ಅವರಿಗೆ ಎಚ್ಚರಿಕೆ ನೀಡಿದ್ದಾನೆ. ತಾಲ್ಲೂಕುಗಳ ಹಕ್ಕುದಾರರನ್ನು ಹೊರತುಪಡಿಸಿ, ಅವುಗಳ ಎಲ್ಲ ವ್ಯವಹಾರಗಳು ಹಾಗೂ ವ್ಯವಸ್ಥೆಯ ಎಲ್ಲ ಕಾನೂನುಗಳೊಂದಿಗೆ; ಇನಾಮುಗಳ ರೂಪದಲ್ಲಿ ದಯಪಾಲಿಸಲಾಗಿದೆ. ಮೇಲ್ಕಾಣಿಸಿದ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ, ಉಲ್ಲೇಖಿತವಾದ ವ್ಯಕ್ತಿ, ಆತನ ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ ಆನುವಂಶಿಕವಾಗಿ ಸಂಪರ್ಕವಿಡಬೇಕು.

ಆಜ್ಞಾನುಸಾರವಾಗಿ, ಈ ತಾಲ್ಲೂಕುಗಳ ಸೂಕ್ತ ವ್ಯವಸ್ಥೆ ಮಾಡಲು, ಅವರು ಸಮ್ಮತಿಸುವಂತೆ ಮಾಡಿರಿ. ಈ ಆಜ್ಞೆಯ ಪ್ರತಿಯನ್ನು ಪಡೆದು; ಉಲ್ಲೇಖಿತ ವ್ಯಕ್ತಿಗೆ ಭೋಗ್ಯದ ಆಜ್ಞೆಯನ್ನು ಹಿಂತಿರುಗಿಸಿರಿ. ಇದನ್ನು ಕಟ್ಟುನಿಟ್ಟಿನ ಆಜ್ಞೆಯೆಂದು ಪರಿಗಣಿಸಬೇಕು.

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೧೪೦

ಹಿಜ್ರಿ ೧೦೮೧ರ ಜಮಾದಿ ಉಸ್‌ಸಾನಿ ತಿಂಗಳಿನ ೧೫ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೧೦೦

ಹಿಜ್ರಿ ೧೦೭೯ ರಮಜಾನ್ ೨೦ ಶಕ. ೧೫೯೭ ಮಾರ್ಗಶೀರ್ಷವದ್ಯ ೬
ಕ್ರಿಶ. ೧೬೭೫ ನವ್ಹಂಬರ್ ೨೮

ಶ್ರೀಮಂತಿಕೆ ಹಾಗೂ ನೇತೃತ್ವಕ್ಕೆ ಆಶ್ರಯದಾತ, ಶೂರತ್ವ/ ಸಾಹಸದಲ್ಲಿ ತಜ್ಞನಾದ ಮಾಲೋಜಿ ರಾಜಾ, ಬುಲಂದ್ ದರ್ಜಾ, ಬಹಾದ್ದೂರ್ ಘೋರ್ಪಡೆ ಆದಿಲ್‌ಶಾಹಿಯು; ಹಿಜ್ರಿ ೧೦೭೬ರಲ್ಲಿ ಆದಿಲ್‌ಶಾಹಿ ಸರ್ಕಾರದಲ್ಲಿ ಅತ್ಯಧಿಕ ಗೌರವ ಮತ್ತು ಮಾನ್ಯತೆಯನ್ನು ಸಂಪಾದಿಸಿ, ಸಾಮ್ರಾಜ್ಯದ ಕಾರ್ಯಮಾಡಿ ಮಂತ್ರಿ ಪದವಿಯನ್ನು ಪಡೆದನು. ಪೂರ್ವಜರು ಹಾಗೂ ನೀವು ಸ್ವಾಮಿನಿಷ್ಠೆಯಿಂದ, ಪವಿತ್ರನಾದ ಬಾದಶಾಹನ ಸೇವೆ ಮಾಡಿದ್ದೀರಿ. ಮಾಲೋಜಿಯು ಶಿವಾಜಿರಾಜಾ ಭೋಸ್ಲೆಯ ವ್ಯಕ್ತಿತ್ವವನ್ನು ದರ್ಬಾರಿಗೆ ಪ್ರಕಟ ಮಾಡಿದನು. ಶಿವಾಜಿಯು ಅಫಘಾನರನ್ನು ಆದಿಲ್‌ಶಾಹಿಗೆ ಸರಿಸಮಾನ ಶಕ್ತಿಶಾಲಿಯನ್ನಾಗಿ ಮಾಡಿದನ್ನು; ಮಾಲೋಜಿಯು ಆದಿಲ್‌ಶಾಹಿಗಳಿಗೆ ಬಹಿರಂಗಗೊಳಿಸಿ, ಗೌರವವನ್ನು ಸಂಪಾದಿಸಿದನು.

ನಾವು ಅಫಘಾನರಿಗೆ ಶಿಕ್ಷೆ ವಿಧಿಸಲು ಬಯಸುತ್ತೇವೆ. ನೀನು ಅತ್ಯಧಿಕ ಗೌರವ ಮತ್ತು ಮಾನ್ಯತೆ ಹೊಂದಿದ ಅತ್ಯುತ್ತಮ ಮರಾಠಾ ಸರದಾರನಾಗಿ; ವಿಶ್ವಾಸಾರ್ಹವಾದ ಮಹಾನ್ ಕಾರ್ಯಗಳನ್ನು ಮಾಡಿರುವೆ. ಬಾದಶಾಹನ ದರ್ಬಾರಿಗೆ ಬನ್ನಿರಿಯೆಂದು; ನಿಮ್ಮ ಕಾರ್ಯಗಳ ಮೇಲೆ ಭರವಸೆ ಇಟ್ಟು ಸರ್ಕಾರವು, ಈ ಆಜ್ಞೆಯನ್ನು ಪ್ರಕಟಿಸಿದೆ. ಆದಿಲ್‌ಶಾಹಿ ದರ್ಬಾರಿನಿಂದ, ನಿಮಗೆ ಏನೆಲ್ಲ ದರ್ಜೆ, ಹುದ್ದೆ, ಮಂತ್ರಿಪದವಿ, ಆಸ್ತಿ, ಜಾಹಗೀರ್ ಪ್ರಾಪ್ತವಾಗಿದೆಯೋ; ಅದೇ ಪ್ರಕಾರವಾಗಿ, ಎಲ್ಲವನ್ನೂ ಇನಾಮಿನ ರೂಪದಲ್ಲಿ ಕೊಡಲಾಗುವದು ಸಮಾಧಾನ ಹೊಂದಿರಿ.

ಹಿಜ್ರಿ ೧೦೭೯ರ ರಮಜಾನ್ ಉಲ್ ಮುಬಾರಕ್ ತಿಂಗಳಿನ ೨೦ನೇ ತಾರೀಖಿಗೆ ಬರೆಯಲಾಗಿದೆ.

೧೦೧

ಹಿಜ್ರಿ ೧೧೦೯ ಶಾಬಾನ್ ೨೮ ಶಕ. ೧೬೦೦ ಅಶ್ವೀನ ವದ್ಯ ೩೦
ಕ್ರಿ.ಶ.೧೬೭೮ ಅಕ್ಟೋಬರ್ ೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ,
ದೇಶವು ದೇವರಿಗಾಗಿ ಇದೆ.

ಮುಧೋಳ್ ಠಾಣೆಯ ದೇಸಾಯರಿಗೆ ಶುಭದಾಯಕ ಆಜ್ಞೆಯುನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೭೮ರಲ್ಲಿ ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ ಹನುಮಂತರಾವ್ ಘೋರ್ಪಡೆಗೆ ಕೊಡಲಾಗಿದ್ದ ಉಲ್ಲೇಖಿತ ಠಾಣೆಯ ಮುಧೋಳ ಸಣ್ಣಪಟ್ಟಣ, ಶಿರೋಳ್, ಮಳಲಿ ಮತ್ತು ಸೋರಗಾಂವ್ ಗ್ರಾಮಗಳು; ಖಂಡೋಜಿಯ ಪುತ್ರರಾದ ಅಂಬಾಜಿ ಹಾಗೂ ಮಾನಾಜಿಗೆ ಕೊಡಲಾಗಿದ್ದ ಮಂಟೂರ್, ಝುಂಜರ್‌ಕೊಪ್ಪ, ಮುಗಲ್‌ಕೋರ್ ಮತ್ತು ಬುದನಿ ಗ್ರಾಮಗಳನ್ನು; ಗೌರವ ಹಾಗೂ ಮಾನ್ಯತೆಯಲ್ಲಿ ತಜ್ಞನಾದ, ಶೌರ್ಯ/ವೀರತ್ವದಲ್ಲಿ ಮುನ್ನೆಚ್ಚರಿಕೆ ಹೊಂದಿದ, ಏಕರೂಪ ಮತ್ತು ಸಮಾನ ದರ್ಜೆಯವರ ವಿಶ್ವಾಸಾರ್ಹ, ಕರುಣೆ ಹಾಗೂ ಉಪಕಾರಕ್ಕೆ ಅರ್ಹ, ಕುಲ/ಗೋತ್ರ ಮತ್ತು ಸೋದರರ ಸಾರಾಂಶನಾದ ಬಾಜೀ ಘೋರ್ಪಡೆಯ ಪುತ್ರನಾದ ಮಾಲೋಜಿಗೆ; ಆತನ ದೃಢತೆಯ ದೆಸೆಯಿಂದ ಎಲ್ಲ ...... ಇನಾಮುಗಳು...... ಗಳೊಂದಿಗೆ ನಿಗದಿಪಡಿಸಿ ಕೊಡಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಸಣ್ಣಪಟ್ಟಣ ಮತ್ತು ಗ್ರಾಮಗಳನ್ನು ಸೇರ್ಪಡೆಗೊಳಿಸಬೇಕು. ಆತನ ಸಂಬಂಧಿಕರ ಬಳಕೆಗಾಗಿ ಹಿಂತಿರುಗಿಸಿ ಕೊಡಬೇಕು.

ಹಿಜ್ರಿ ೧೧೦೯ರ ಶಾಬಾನ್ ಉಲ್ ಮೊ ಅಜ್ಜಮ್ ತಿಂಗಳಿನ ೨೮ನೇ ತಾರೀಖಿಗೆ ಬರೆಯಲಾಗಿದೆ.

.... ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾನು, ಶ್ರೀಮಂತಿಕೆ ಮತ್ತು ನೇತೃತ್ವಕ್ಕೆ ಆಶ್ರಯದಾತನಾದ, ಶೋಭೆ ಹಾಗೂ ವೈಭವದಲ್ಲಿ ತಜ್ಞನಾದ, ಆಡಳಿತೆ ಮತ್ತು ಉನ್ನತ ಸ್ಥಾನ ಹೊಂದಿದ, ಆನುವಂಶಿಕತೆ ಹಾಗೂ ಪ್ರಭುತ್ವದ ಸಹಾಯಾಕಾಂಕ್ಷಿ, ಸಾಮ್ರಾಜ್ಯ ಮತ್ತು ದೇಶದ ವಿಸ್ತರಣೆಯ ನಂಬಿಗಸ್ಥ, ಕಾರ್ಯನಿರ್ವಹಣೆ ಹಾಗೂ ಬುದ್ಧಿವಂತಿಕೆಯ ಗ್ರಂಥದ ಪೀಠಿಕೆ, ಸದ್ವರ್ತನೆ ಮತ್ತು ಜಾಣ್ಮೆಯ ಪ್ರಶಂಸಾಗೀತೆಯ ಶಕ್ತಿ–ಸಂಪನ್ನ ಹಿತಚಿಂತಕರ ಆಯ್ಕೆ, ಸಾಮ್ರಾಜ್ಯದ

ಆಡಳಿತೆಯ ಕಾರ್ಯನಿರ್ವಾಹಕ, ಉತ್ತರಾಧಿಕಾರತ್ವದ ಮಹಾತ್ಕಾರ್ಯದ ಔನ್ನತ್ಯ, ಸಂಪತ್ತಿನ ನೊಸಲಿಗೆ ಕಾಂತಿದಾಯಕ, ಶ್ರೇಷ್ಠತೆಯ ಕೂಟದ ದೀಪ, ಧರ್ಮನಿಷ್ಠರ ಮಿತ್ರ, ನಂಬಿಗಸ್ಥ, ಕಲ್ಯಾಣಾಕಾಂಕ್ಷಿ, ವಿಶ್ವಾಸದ ಸ್ಥೂಲ ಪರಿಧಿಯ ದ್ವಾರ, ಮಿತ್ರತ್ವದ ಉಂಗುರದ ಹರಳಿನ ನಕ್ಷೆ, ಶಾಶ್ವತವಾದ ಸಂಪತ್ತಿನ ಸಂರಕ್ಷಕ, ನಿರಂತರ ಸಾಮ್ರಾಜ್ಯದ ಅಧಿಕಾರಸ್ಥ, ಮಹೋನ್ನತ ಸಾಮ್ರಾಜ್ಯದ ಸದಸ್ಯ, ಸಾಮ್ರಾಜ್ಯ ಶೃಂಗಾರದ ಬಾಹು, ಅಲ್‌ಬಹಿಖಾನ್ ಅಜಿಮುಶ್‌ಶಾನ್, ರಫಿಉಲ್ ಖದರ್, ವಲ್‌ಮಕಾನ್ ಮಸೂದ್ ಖಾನ್‌ನ ಶಿಫಾರಸ್ಸಿನ ಮೇರೆಗೆ.

೧೦೨

ಹಿಜ್ರಿ. ೧೧೮೯ ಶಾಬಾನ್ ೨೮ ಶಕ. ೧೬೦೦ ಅಶ್ವಿನ ವದ್ಯ ೩೦

ಕ್ರಿ.ಶ.೧೬೭೮ ಅಕ್ಟೋಬರ್ ೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ.
ದೇಶವು ದೇವರಿಗಾಗಿ ಇದೆ.

ಮಂಗಲ್‌ಗಾಹ್ ಸಣ್ಣ-ಪಟ್ಟಣಗಳ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೭೮ರಲ್ಲಿ, ಗೌರವ ಮತ್ತು ಘನತೆಯಲ್ಲಿ ತಜ್ಞನಾದ, ಶೌರ್ಯ-ವೀರತ್ವದ ಮುನ್ನೆಚ್ಚರಿಕೆ ಹೊಂದಿದ, ಏಕರೂಪದ ಹಾಗೂ ಸಮಾನ ದರ್ಜೆಯವರ ವಿಶ್ವಾಸಾರ್ಹ, ಕರುಣೆ ಮತ್ತು ಉಪಕಾರಕ್ಕೆ ಅರ್ಹ, ಕುಲ-ಗೋತ್ರ ಹಾಗೂ ಸೋದರರ ಸಾರಾಂಶನಾದ ಬಾಜೀ ಘೋರ್ಪಡೆ ಆದಿಲ್‌ಶಾಹಿಯ ಪುತ್ರನಾದ ಮಾಲೋಜಿಗೆ, ಆತನ ದೃಢತೆಯ ದೆಸೆಯಿಂದ; ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ ಉಲ್ಲೇಖಿತ ಸಣ್ಣ-ಪಟ್ಟಣಗಳನ್ನು ತಂಬಾಕು, ತೀಪ್‌ಬರ್ಗ್ (ಎಲೆಗಳು) ಸುಂಕ ಹಾಗೂ ಇನಾಮುಗಳನ್ನು ಹೊರತುಪಡಿಸಿ ಎಲ್ಲ ವ್ಯವಹಾರಗಳೊಂದಿಗೆ, ದಯಪಾಲಿಸಿ ಕೊಡಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ ಉಲ್ಲೇಖಿತ ಸಣ್ಣಪಟ್ಟಣಗಳನ್ನು ಮೇಲ್ಕಾಣಿಸಿದ ವ್ಯಕ್ತಿಯ ಸಂಬಂಧಿಕರಿಗೆ ಬಳಕೆಗಾಗಿ ಹಿಂತಿರುಗಿಸಿ ಕೊಡಬೇಕು.

ಹಿಜ್ರಿ ೧೧೮೯ರ ಶಾಬಾನ್ ತಿಂಗಳಿನ ೨೮ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೧೦೩

ಜು.೨೯ ಶಕ. ೧೬೦೭ ಕಾರ್ತೀಕಶುದ್ಧ ೭

ಹಿಜ್ರಿ ೧೧೯೭ ಜಿಲ್ಹೇದ್ ೫ ಕ್ರಿ.ಶ.೧೬೮೫ ಅಕ್ಟೋಬರ್ ೨೪

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ.

ಬಿಜಾಪುರವನ್ನು ಆದಿಲ್‌ಶಾಹಿ ಸಾಮ್ರಾಜ್ಯದ ಶಾಶ್ವತವಾದ ರಾಜಧಾನಿಯೆಂದು, ಪರಿಗಣಿಸಲಾಗಿದ್ದ ವಿಜಯದ ಕಾಲದಲ್ಲಿ; ಬಾಜೀರಾವ್ ಘೋರ್ಪಡೆ ಬಹಾದ್ದೂರ್‌ನ ಪುತ್ರನಾದ ಮಾಲೋಜಿಯ ಪೂರ್ವಜರು ಬಹಮನಿ ಕಾಲ ಹಾಗೂ ಆದಿಲ್‌ಶಾಹಿ ಸಾಮ್ರಾಜ್ಯದೊಂದಿಗೆ ಸೇರಿಕೊಂಡಿದ್ದರು. ಅವರು ಬಲಿದಾನ ಮತ್ತು ಪರಿಶ್ರಮದ ಮೂಲಕ ಸೇವೆ ಮಾಡಿ; ಘೋರ್ಪಡೆ ರಾಜ ಹಾಗೂ ಬಹಾದ್ದೂರ್, ಬಿರುದುಗಳನ್ನು ಪಡೆದಿದ್ದರು. ಇದರ ಹೊರತಾಗಿ, ಸರ್ವವ್ಯವಹಾರ ಮತ್ತು ಎಲ್ಲ ಕಾನೂನುಗಳೊಂದಿಗೆ; ಮುಧೋಳದ ಜಾಹಗೀರು, ಯುದ್ಧದ ಕಂದಕ, ಧ್ವಜ, ಸಪ್ತಹಜಾರಿ ಹುದ್ದೆ, ಏಳು ಸಾವಿರ ಕುದುರೆ ಸವಾರರ ಗೌರವ ಹಾಗೂ ಇನಾಮುಗಳನ್ನು; ಅವರಿಗೆ ದಯಪಾಲಿಸಲಾಗಿತ್ತು. ಭೂಮಿಯನ್ನು ಚುಂಬಿಸುವ ಮತ್ತು ವಿಧೇಯತೆಯನ್ನು ಪ್ರದರ್ಶಿಸುವದರಿಂದ ರಿಯಾಯತಿ ಪಡೆಯುವಷ್ಟು ಗೌರವ ಹಾಗೂ ಮಾನ್ಯತೆಯ ಹಿಂದಿನ ರಾಜರಿಗೆ ಅವರು ಶ್ರೀಮಂತರಾಗಿರುವ ವೈಭವದ ದೆಸೆಯಿಂದ ಪ್ರಾಪ್ತವಾಗಿತ್ತು. ಆದುದರಿಂದ, ಮಾಲೋಜಿಯ ಶ್ರೇಷ್ಠತೆಯ ಕಾರಣದಿಂದ, ಆತನನ್ನು ನಾವು ದರ್ಬಾರಿಗೆ ಕರೆಕಳುಹಿಸಿ; ಆ ಸನ್ಮಾನ್ಯ, ಶೂರ, ಸಾಹಸಿ ಮತ್ತು ಸ್ವಾಮಿನಿಷ್ಠನಿಗೆ ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ; ಆತನ ಆನುವಂಶಿಕ ಜಾಹಗೀರು, ಹುದ್ದೆ, ಅಗತ್ಯ ವಸ್ತುಗಳು, ಬಿರುದು, ಸ್ಥಾನ ಮತ್ತು ಇನಾಮುಗಳನ್ನು ನಿಗದಿಪಡಿಸಿ, ಜಾರಿಗೊಳಿಸಿ; ಅವನನ್ನು ಪ್ರತಿಷ್ಠಿತಗೊಳಿಸಲಾಗಿದೆ. ಅವನು ಸ್ವಾಮಿನಿಷ್ಠನಾಗಿ, ನಮ್ಮ ಮಹಾನ್ ಸಾಮ್ರಾಜ್ಯಕ್ಕೆ ವಿಧೇಯನಾಗಿ; ಬಲಿದಾನ ಮಾಡಲು ಹಿಂಜರಿಯಬಾರದು. ಅವನಿಗೆ ಇನ್ನೂ ಹೆಚ್ಚಿನ ಉನ್ನತಿ ಪ್ರಾಪ್ತವಾಗಲಿ.

ಜುಲೂಸ್ ೨೯ರ ಅನುಸಾರವಾಗಿ, ಹಿಜ್ರಿ ೧೧೯೭ರ ಜಿಲ್‌ಹಜ್ಜಾ ತಿಂಗಳಿನ ೫ನೇ ತಾರೀಖಿಗೆ ಬರೆಯಲಾಗಿದೆ.

೧೦೪

ಜು. ೨೯ ಜಿಲ್ಹೆಜ್ ೨೨ ಶಕ. ೧೬೦೭ ಕಾರ್ತೀಕ ವದ್ಯ ೯
ಕ್ರಿ.ಶ. ೧೬೮೫ ನವ್ಹೆಂಬರ್ ೧೦

ಸಾದ್ರಶ್ಯ / ಉಪಮೇಯ ಮತ್ತು ಸಮೀಪದ ಸಂಬಂಧಿಕರ ಕೆನೆ, ಸೈನಿಕರ ನಾಯಕ, ಪರಾಕ್ರಮದ ಸಂಕೇತ, ಬಾದಶಾಹನ ಇನಾಮು ಹಾಗೂ ಕೃಪೆಯ ಆಕಾಂಕ್ಷಿಯಾದ ರಾವ್ ರಾಜಾ ಮಾಲೋಜಿ ಘೋರ್ಪಡೆಯು ತಿಳಿಯುವದೇನೆಂದರೆ:-

ಸೌಭಾಗ್ಯ ಕಾಲದಲ್ಲಿ, ಭಾಗ್ಯದ ನಕ್ಷತ್ರವು ಅತ್ಯುನ್ನತ ಮಟ್ಟದಲ್ಲಿದ್ದಾಗ, ವಿಧೇಯತೆಯ ದೆಸೆಯಿಂದ; ಕಾಲ ಹಾಗೂ ಭೂಮಿಯ ಒಡೆಯ, ಎರಡೂ ಜಗತ್ತುಗಳ ಬಾದಶಾಹನು ಈ ಸ್ವಾಮಿನಿಷ್ಠನ ಸೇವೆಯನ್ನು ಸ್ವೀಕರಿಸಿ, ಅವನಿಗೆ ಬಿರುದು, ಹುದ್ದೆ, ಜಾಹಗೀರು ಮತ್ತು ಅತ್ಯುನ್ನತ ಸ್ಥಾನವನ್ನು ನೀಡಿ, ಗೌರವಿಸಿದನು. ಜಗತ್ತಿಗೆ ಆಜ್ಞೆ ನೀಡುವವನ ಉನ್ನತ ಆಜ್ಞೆಯು, ಆಕಾಶದಂತಹ ದರ್ಬಾರಿನ ಸೇವಕನಿಗೆ ತಲುಪುತ್ತಲೇ; ಈ ನಂಬಿಗಸ್ಥರು ಶಕ್ತಿಶಾಲಿಯಾದ ಸೈನ್ಯವನ್ನು ಸಿದ್ಧಗೊಳಿಸಿ, ಪ್ರಾಮಾಣಿಕರ ನಾಯಕ, ಶ್ರದ್ಧೆಯ ಸಂಕೇತ, ಕಾರ್ಯದರ್ಶಿಗಳ ಮಾರ್ಗದರ್ಶಕ, ಉನ್ನತ ಕುಟುಂಬ ಹೊಂದಿದವ, ಶಸ್ತ್ರಾಗಾರದ ಅಧಿಕಾರಿಗಳ ಸರದಾರನಾದ ಸೈಯ್‌ದ್ ಅಲಿ ಮೊಹಮ್ಮದನೊಂದಿಗೆ ಕಳುಹಿಸಿ ಕೊಡಬೇಕು. ಈ ಕೃಪೆ ಹಾಗೂ ಸ್ಥಾನೋನ್ನತಿಗಾಗಿ ಕೃತಜ್ಞತೆಯನ್ನು ಸಲ್ಲಿಸುತ್ತ, ಸ್ವಯಂ ಸೈನ್ಯದೊಂದಿಗೆ ದರ್ಬಾರಿನ ಸೇವೆಗಾಗಿ ಬೇಗನೆ ಹಾಜರಾರಿ; ನಿರಂತರ ಸೌಭಾಗ್ಯವನ್ನು ಪಡೆಯಿರಿ.

೨೯ನೇ ಜುಲೂಸ್‌ದ ಜಿಲ್‌ಹಜ್ಜಾ ತಿಂಗಳಿನ ೨೨ನೇ ತಾರೀಖಿಗೆ ಬರೆಯಲಾಗಿದೆ.

೧೦೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ

ದೇಶವು ದೇವರಿಗಾಗಿ ಇದೆ.

ತಾಲ್ಲೂಕಿನ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ:-

ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ, ಸೈಯದ್ ಅಶ್ರಫ್‌ನಿಗೆ ಕೊಡಲಾದ ಉಲ್ಲೇಖಿತ ತಾಲ್ಲೂಕನ್ನು (ಶಿರೂರ್ ಗ್ರಾಮವನ್ನು ಹೊರತುಪಡಿಸಿ); ಗೌರವ ಹಾಗೂ ಘನತೆಯಲ್ಲಿ ತಜ್ಞ, ಶೌರ್ಯ ಮತ್ತು ವೀರತ್ವದಲ್ಲಿ ಮುನ್ನೆಚ್ಚರಿಕೆ ಹೊಂದಿದ, ಕೃಪೆ ಹಾಗೂ ಉಪಕಾರಕ್ಕೆ ಅರ್ಹ, ಕುಲ-ಗೋತ್ರ ಮತ್ತು ಸೋದರರ ಸಾರಾಂಶ, ಆದಿಲ್‌ಶಾಹಿಯ ದೃಢತೆಗಾಗಿ; ಸರ್ವ ವ್ಯವಹಾರಗಳು, ಆಧಾರ/ಪ್ರಮಾಣಗಳು ಮತ್ತು ಎಲ್ಲ ಕಾನೂನುಗಳೊಂದಿಗೆ ದಯಪಾಲಿಸಲಾಗಿದೆ.

ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಶಿರೂರು ಗ್ರಾಮದ ಹೊರತಾಗಿ, ಉಲ್ಲೇಖಿತ ಸಂಪೂರ್ಣವಾದ ತಾಲ್ಲೂಕನ್ನು; ಮೇಲ್ಕಾಣಿಸಿದವರ ಹೆಸರಿನಲ್ಲಿ ಸೇರ್ಪಡೆ ಮಾಡಿ ಅವರ ಸ್ವಾಧೀನಕ್ಕೆ ಕೊಡಿರಿ.

.... ಹಿಜ್ರಿಯ ರವಿ .... ತಿಂಗಳಿನ ೩ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೧೦೬

ಸು. ೯೭೦ ಶಕ. ೧೪೯೧ ಕಾರ್ತೀಕ ಶುದ್ಧ ೧೫
ಹಿಜ್ರಿ. ೯೭೭ ಜವಲ್ ೧೩ ಕ್ರಿ.ಶ.೧೫೬೯ ಅಕ್ಟೋಬರ್ ೨೪

ದೇಶವು ದೇವರಿಗಾಗಿ ಇದೆ.

ಮುಬಾರಕಾಬಾದ್ ವ್ಯವಹಾರದ ನಾಯಬ್ ಗೈಬತ್ ಮಲ್ಲಿಕ್ ಅಶ್ರಫ್ ಮೀರ ತಾಜುದ್ದೀನ್ ಹಾಗೂ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಜಾರಿಗೊಳಿಸಲಾಗಿದೆ:–

ಉಲ್ಲೇಖಿತ ವ್ಯವಹಾರದ ಸವಾದ್ ಸಣ್ಣ ಪಟ್ಟಣದಲ್ಲಿ, ಎರಡು ಚಾವರ್ ಭೂಮಿಯ ಅರ್ಧವನ್ನು ಹಜರತ್ ಖಲಿಫಾ ಇಬ್ರಾಹೀಮ್ ಖತ್ತಾಲ್‌ನಿಗೆ ದಾನ-ಧರ್ಮದ ರೂಪದಲ್ಲಿ ಕೊಡಲಾಗಿದೆ. ಆಜ್ಞಾನುಸಾರವಾಗಿ, ಅವನ ನಂತರ, ಆತನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಪ್ರಾಪ್ತವಾಗುವುದು. ಹಿಜ್ರಿ ೯೭೬ರಲ್ಲಿ ಜಾರಿಗೊಳಿಸಲಾದ ಉಲ್ಲೇಖಿತ ಜಮೀನನ್ನು, ಹಿಜ್ರಿ ೯೭೦ರ ಜಾರಿಗೊಳಿಸಿ ಕಂದಾಯ, ನಗದು ಹಣ ಹಾಗೂ ಅಗತ್ಯ ವಸ್ತುಗಳನ್ನು ಹಕ್ಕುದಾರರ ಹೆಸರಿನಲ್ಲಿ ಸೇರ್ಪಡೆ ಮಾಡಿ, ಅವರಿಗೆ ಹಿಂತಿರುಗಿಸಿ ಕೊಡಿರಿ. ಅವರು ಪ್ರತಿ ವರ್ಷ ಹೊಸ ಆಜ್ಞೆಯನ್ನು ಕೇಳಲಾರದಂತೆ ವ್ಯವಸ್ಥೆ ಮಾಡಿರಿ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ತಡೆಹಿಡಿಯುವಿಕೆಯನ್ನು ಹಿಂಪಡೆದು; ಅಸಲಿ ಫರ್ಮಾನನ್ನು ಅವನ ಬಳಕೆಗಾಗಿ ಕೊಡಿರಿ.

ಆಜ್ಞೆಯ ಹಿಂಬರಹದಲ್ಲಿ ಖಾನ್ ಆಲಿಶಾನ್ ಮಿಜಾಜ್‌ಖಾನ್ ಹಾಗೂ ಅಧಿಕಾರಸ್ಥರ ಅನುಮತಿಯ ಮೇರೆಗೆ.

ಹಿಜ್ರಿ ೯೭೮ ರಜಬ್ ೨೩ ಶಕ. ೧೪೯೨ ಮಾರ್ಗಶೀರ್ಷವದ್ಯ ೧೦
ಕ್ರಿ.ಶ.೧೫೭೦ ಡಿಸೆಂಬರ್ ೨೨

ದೇಶವು ದೇವರಿಗಾಗಿ ಇದೆ.

ಸಾಳಶಿ ಬೆಟ್ಟದ ಠಾಣೇದಾರನಾದ ಖಾನ್‌ಆಜಮ್ ಬಹಾದ್ದೂರ್ ಖಾನ್‌ನಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ : –

ಹಿಜ್ರಿ ೯೭೧ರಲ್ಲಿ, ಉಲ್ಲೇಖಿತ ಬೆಟ್ಟದ ಕುಕದೇ ಪ್ರಭು ದೇಸಾಯಿಯು ನ್ಯಾಯಾಲಯದಲ್ಲಿ ಮಾಡಿದ ಮನವಿಯೇನೆಂದರೆ : ಉಲ್ಲೇಖಿತ ಬೆಟ್ಟದ ಕೆಲವು ದೇಸಾಯರಿಗೆ ಗ್ರಾಮಗಳನ್ನು ಇನಾಮಿನ ರೂಪದಲ್ಲಿ ಕೊಡಲಾಗಿದೆ. ಆದರೆ, ನನಗೆ ಇನಾಮು ನೀಡಲಾಗಿಲ್ಲ. ನಾನು ಎಲ್ಲ ದೇಸಾಯರಂತೆ ಪರಿಶ್ರಮ ಮತ್ತು ನ್ಯಾಯಸಮ್ಮತತೆಯಿಂದ ಕಾರ್ಯ ನಿರ್ವಹಿಸುತ್ತೇನೆ. ನಾನು ನ್ಯಾಯಾಲಯಕ್ಕಾಗಿ ಉಳಿತಾಯ ಮಾಡುತ್ತೇನೆ. ನನಗೂ ಸಹ, ಗ್ರಾಮವನ್ನು ಇನಾಮಿನ ರೂಪದಲ್ಲಿ ಕೊಡಿರಿ. ನಾನು ಉಡುಗೊರೆಯ ೪ ಭಾಗ (ಅಂದರೆ : ೨೫೦ ಹೂನ್) ಜಮಾ ಮಾಡಲು ಒಪ್ಪಿಕೊಂಡಿದ್ದೇನೆ. ಮೇಲ್ಕಾಣಿಸಿದ ಬೆಟ್ಟದ ಕೆಲವು ದೇಸಾಯರಿಗೆ ಸಂಬಂಧಿಸಿದ ಓನ್‌ಂತೊ ಗ್ರಾಮವನ್ನು, ಬೆಟ್ಟದ ಕುಕದೇ ಪ್ರಭು ದೇಸಾಯರಿಗೆ ದಯಪಾಲಿಸಲಾಗಿದೆ. ಉಡುಗೊರೆಯ ೪ ಭಾಗವನ್ನು ಕಡಿತಗೊಳಿಸಿ, ಕಂದಾಯ ಹಾಗೂ ನಗದು ಹಣವನ್ನು ಅವನ ಹೆಸರಿಗೆ ಸೇರ್ಪಡೆ ಮಾಡಿರಿ. ಹಿಜ್ರಿ ೯೭೦ರಲ್ಲಿ ಕೊಡಲಾಗಿದ್ದ ಉಡುಗೊರೆಯ ಹಣವನ್ನು ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಕಾರ್ಯನಿರ್ವಾಹಕ ಅಧಿಕಾರಿ ಖಾಸಾಖಾನ್ ಆಲಿಶಾನ್ ಮುರಾದಖಾನ್ ಗಾಜಿ ಅಮೀರ್ ಜುಮ್ಲಾನಿಗೆ ಕೊಡಿರಿ.

ಹಿಜ್ರಿ ೯೭೮ ರ ರಜ್ಜಬ್ ತಿಂಗಳಿನ ೨೭ನೇ ತಾರೀಖಿಗೆ ಬರೆಯಲಾಗಿದೆ.

ಖಾನ್ ಅಲಿ ...... ಲಿಖಿತ ರೂಪದ ಅನುಮತಿಯ ಮೇರೆಗೆ.

ಸು. ೯೯೦
ಹಿಜ್ರಿ. ೯೯೮ ಜಖರ್ ೪

ಶಕ. ೧೫೧೨ ಚೈತ್ರ ಶುದ್ಧ ೬
ಕ್ರಿ.ಶ.೧೫೯೦ ಮಾರ್ಚ ೩೧

ದೇಶವು ದೇವರಿಗಾಗಿ ಇದೆ.

ಮುಬಾರಕಾಬಾದ್ ವ್ಯವಹಾರದ ಸಯ್ಯದ್ ಉಸ್ಮಾನ್ ಸಯ್ಯದ್ ಮಹಮ್ಮೂದ್ ಮಜ್ಲಿಸಿ ...... ಸಣ್ಣ ನಿಯೋಗ .... ಮತ್ತು ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :–

ಉಲ್ಲೇಖಿತ ವ್ಯವಹಾರದ ಸವಾದ್ ಕಸ್‌ಬಾದ ಉದ್ಯಾನದಲ್ಲಿ ಒಂದು ಚಾವರ್ ಜಮೀನನ್ನು; ಸವಾದ್ ಕಸ್‌ಬಾದ (ಸಣ್ಣ ಪಟ್ಟಣ) ಖುರ್ಶಿದ್‌ಖಾನನಿಗೆ, ದೇವರ ಹೆಸರಿನಲ್ಲಿ ದತ್ತಿಗೆ ನೀಡಲಾಗಿತ್ತು. ಆ ಸಮಯದಲ್ಲಿ....... ದಿವಂಗತ ಖಾನ್ ಮತ್ತು ಆತನ ಪುತ್ರನಿಗೆ ಕೊಡಲಾಗಿತ್ತು. ಹಿಜ್ರಿ ೯೯೦ರಲ್ಲಿ ಅದನ್ನು ಹಿಂಪಡೆದು; ಕಂದಾಯ, ನಗದು ಹಣ, ಎಲ್ಲ ಅಗತ್ಯವಾದ ವಸ್ತುಗಳು, ಮನೆ, ವೇತನರಹಿತ ಶ್ರಮ, ನಿವೇಶನೆ ಎಲ್ಲ ವ್ಯವಹಾರಗಳೊಂದಿಗೆ ಮೊದಲಿನಂತೆಯೇ ಮಸೀದೆಗಾಗಿ; ಮೇಲ್ಕಾಣಿಸಿದ ವ್ಯಕ್ತಿಗೆ ನಿಗದಿಪಡಿಸಿಕೊಡಲಾಗಿದೆ. ಉಲ್ಲೇಖಿತ ಜಮೀನನ್ನು ಆ ವ್ಯಕ್ತಿಯ ಹೆಸರಿನಲ್ಲಿ ಸೇರ್ಪಡೆ ಮಾಡಿ, ಜಾರಿಗೊಳಿಸಬೇಕು. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ತಡೆ ಹಿಡಿಯುವಿಕೆಯನ್ನು ....

ಅಸಲಿ ಆಜ್ಞೆಯನ್ನು ಹಿಂತಿರುಗಿಸಿರಿ.

ಹಿಜ್ರಿ ೯೯೮ರ ಜಮಾದಿ ಉಲ್ ಆಖರ್ ತಿಂಗಳಿನ ೪ನೇ ತಾರೀಖಿಗೆ ಬರೆಯಲಾಗಿದೆ.

.... ಗುಲಾಮ್ .... ಅಶ್ರಫ್ ಆಲಾ .... ಅನುಮತಿಯ ಮೇರೆಗೆ.

೧೦೯

ಸು. ೧೦೫೬ ಶಕ. ೧೫೭೭ ಪೌಷ್ಯ ವದ್ಯ ೧೪
ಹಿಜ್ರಿ ೧೦೬೬ ರವಲ್ ೨೭ ಕ್ರಿ.ಶ.೧೬೫೬ ಜನವರಿ ೧೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಕೊಪ್ಪಳ ಕೋಟೆಯ ದೇಸಾಯರು, ದೇಶ ಕುಲಕರ್ಣಿಗಳು ಹಾಗೂ ನಾಡಗೌಡರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೫೬ರಲ್ಲಿ ಗೌರವ ಹಾಗೂ ಘನತೆಯಲ್ಲಿ ತಜ್ಞ, ಗಾಂಭೀರ್ಯ ಮತ್ತು ಶೋಭೆಯಲ್ಲಿ ಮುನ್ನೆಚ್ಚರಿಕೆ ಹೊಂದಿದ, ಶಾಶ್ವತವಾದ ಕೂಟದ ಮಿತ್ರ, ಬಾದಶಾಹತ್ವದ ರಹಸ್ಯಜ್ಞ, ಖಾನ್ ಅಜೀಮುಶ್ಯಾನ್, ಬುಲಂದ ಖದರ್, ವಾಲಾ ಮಕಾನ್-ಏತಬಾರ್ ಖಾನ್‌ನ ದ್ವಾರಪಾಲಕನು ಉನ್ನತ ದರ್ಬಾರಿನಲ್ಲಿ ಸಲ್ಲಿಸಿದ ಮನವಿ ಏನೆಂದರೆ :-

ಉಡಚ್ ನಾಯಕನು ಉಲ್ಲೇಖಿತ ಕೋಟೆಯ ಪ್ರದೇಶದಲ್ಲಿ ಶಿವಪೂರ ಹಾಗೂ ಇಗಲ್‌ಗೆರೆ –ಎರಡು ಗ್ರಾಮಗಳು, ಕಾವಲಿ, ವರ್ತನಾ, ಧಾನ್ಯ ಇತ್ಯಾದಿ ವಾರ್ಷಿಕವಾಗಿ ಸಂಪಾದನೆ ಮಾಡಿ, ಬಳಕೆ ಮಾಡುತ್ತಿದ್ದಾನೆ. ಸದ್ಯಃ, ಈ ಗ್ರಾಮಗಳು, ಕಾವಲಿ, ವರ್ತನಾ, ಧಾನ್ಯ ಇತ್ಯಾದಿ ವಾರ್ಷಿಕ ಆದಾಯವನ್ನು ಸ್ವಾಧೀನಪಡಿಸಿಕೊಳ್ಳಲಾಗಿರುವದರಿಂದ; ಅವನಿಗೆ ಸಂಪಾದನೆ ಮಾಡಲು ಅಸಾಧ್ಯವಾಗಿದೆ. ಕನಕಗಿರಿಯ ಕೋಟೆಗೆ ಸಿದ್ಧತೆ ಮತ್ತು ಉಸ್ತುವಾರಿ ಬಂದಿರುವುದಿಲ್ಲ. ಈ ವ್ಯವಹಾರದಲ್ಲಿ ನಿರ್ಣಯಾತ್ಮಕ ಆಜ್ಞೆಯನ್ನು ಜಾರಿಗೊಳಿಸಬೇಕು. ಗ್ರಾಮಗಳು, ವರ್ತನಾ, ಕಾವಲಿ, ಧಾನ್ಯ ಇತ್ಯಾದಿ ವಾರ್ಷಿಕವಾಗಿ ಸಂಪಾದನೆ ಮಾಡಲು ಹಾಗೂ ಸ್ವಾಧೀನಪಡಿಸಿಕೊಳ್ಳಲು ಅನುಮತಿ ಕೊಡಬೇಕು.

ಈ ಆಧಾರದ ಮೇಲೆ ಉಲ್ಲೇಖಿತ ಕೋಟೆಯ ಪ್ರದೇಶದಿಂದ ಸೂಚಿಸಲಾದ ಉಡಚ್‌ನಾಯಕನ ಸಂಪಾದನೆಗಾಗಿ, ಸಿದ್ಧತೆ ಹಾಗೂ ಉಸ್ತುವಾರಿಯೊಂದಿಗೆ ಕನಕಗಿರಿಯ ಕೋಟೆಯನ್ನು ಬಾದಶಾಹನು ಕೃಪೆ ಮಾಡಿ ದಯಪಾಲಿಸಿದನು. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಕೋಟೆಯ ಪ್ರದೇಶದ ಎರಡೂ ಗ್ರಾಮಗಳು, ಕಾವಲಿ, ವರ್ತನಾ, ಧಾನ್ಯ ಇತ್ಯಾದಿಯನ್ನು ಮೇಲ್ಕಾಣಿಸಿದ ನಾಯಕನ ಹೆಸರಿನಲ್ಲಿ ಸೇರ್ಪಡೆಗೊಳಿಸಬೇಕು.

ಹಿಜ್ರಿ ೧೦೬೬ರ ರಬಿಉಲ್ ಅವ್ವಲ್ ತಿಂಗಳಿನ ೨೭ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೧೧೦

ಜು. ೧ ಜಖರ್ ೪ — ಶಕ. ೧೬೨೯ ಭಾದ್ರಪದ ಶುದ್ಧ ೫
ಕ್ರಿ.ಶ.೧೬೫೮ ಅಗಷ್ಟ ೨೧

ಅಲ್ಲಾಹನ ಆಜ್ಞೆಯ ಮೇರೆಗೆ,

ದರ್ಬಾರಿನಲ್ಲಿ ಮನವಿಯು ತಲುಪಿದಾಗ, ಜಗತ್ತಿನ ಸಂರಕ್ಷಕನಾದ ಬಾದಶಾಹನ ಗಮನಕ್ಕೆ ಬಂದಿತೆಂಬುದನ್ನು; ಬಾದಶಾಹನ ಕೃಪಾಕಾಂಕ್ಷಿ, ಇಸ್ಲಾಮಿನ ಆಜ್ಞಾಪಾಲಕ, ಸಮಾನರ ಕೆನೆಯಾದ ಗುತ್ತಲದ ದೇಸಾಯಿ ಹನುಮಂತ ಗೌಡ ಇತ್ಯಾದಿಗಳು ತಿಳಿದಿದ್ದರು. ಆಡಳಿತೆಯ ಕಾರ್ಯದಲ್ಲಿ, ಪುರ್‌ದಿಲ್‌ಖಾನನು ಸಹಾಯ ಮಾಡಿದ್ದಕ್ಕಾಗಿ, ಅವನು ಮಹೋನ್ನತ ಮತ್ತು ಹಿರಿಮೆಯ ದರ್ಬಾರಿನಲ್ಲಿ ಪ್ರಶಂಸೆಗೆ ಅರ್ಹನೆಂದು ಪರಿಗಣಿಸಲಾಯಿತು. ಆತನ ಎಲ್ಲ ಉದ್ದೇಶಗಳನ್ನು ವೆಂಕಟರಾವ್‌ನ ಮುಖಾಂತರ ಬಾದಶಾಹನ ಸಮ್ಮುಖದಲ್ಲಿ ಪ್ರಸ್ತುತಪಡಿಸಿದಾಗ, ಅವುಗಳನ್ನು ಸ್ವೀಕರಿಸಲಾಯಿತು. ಅನುಗ್ರಹದ ಮೇಲೆ ಆಧಾರಿತವಾದ ಆ ಆಜ್ಞೆಯನ್ನು ನಾವು ಜಾರಿಗೊಳಿಸಿ, ಗೌರವವನ್ನು ಸಲ್ಲಿಸಿದ್ದೇವೆ. ಈ ಅನುಗ್ರಹದ ರಾಜಾಜ್ಞೆಯು ದೊರಕುತ್ತಲೇ, ಸಮಾಧಾನದೊಂದಿಗೆ; ಸುಶಿಕ್ಷಿತ ಸಮೂಹವನ್ನು ತೆಗೆದುಕೊಂಡು ಬಾದಶಾಹನ ಸೇವೆಗಾಗಿ ಬನ್ನಿರಿ, ವಿವೇಚನೆಗಿಂತಲೂ ಹೆಚ್ಚಿನ ನೌಕರಿಯನ್ನು ದಯಪಾಲಿಸಿ ಇನಾಮುಗಳನ್ನು ಕೊಡಲಾಗುವದು.

೧ನೇ ಜುಲೂಸಿನ ಜಮಾದಿ ಉಲ್ ಆಖರ್ ತಿಂಗಳಿನ ೪ನೇ ತಾರೀಖಿಗೆ ಬರೆಯಲಾಗಿದೆ.

೧೧೧

ಸು. ೧೦೬೨ ಶಕ. ೧೫೮೩ ಆಶ್ವೀನ್ ?
ಹಿಜ್ರ ೧೦೭೨ (ಸಫರ್ ?) ಕ್ರಿ.ಶ. ೧೬೬೧ ಸಪ್ಟಂಬರ್-ಅಕ್ಟೋಬರ್?

ಅಪಾರ ಕರುಣಾಳೂ ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ.

ದೇಶವು ದೇವರಿಗಾಗಿ ಇದೆ.

ಸಾಳಶಿ ಬೆಟ್ಟದ ಸರ್‌ಗಿರೋಹಗಳು, ನಾಯಕವಾಡಿಗಳು ಹಾಗೂ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರ ೧೦೬೨ರಲ್ಲಿ, ಬಾದಶಾಹನ ಸೇವೆಯಲ್ಲಿ ಶಿರಬಾಗುವ, ಆಕಾಶದಂತಹ ಘನತೆಹೊಂದಿದ, ಸಾಮ್ರಾಜ್ಯದ ಅಕ್ಷ, ನೇತೃತ್ವ ಮತ್ತು ಆಡಳಿತೆಗೆ ಆಶ್ರಯದಾತ, ವೈಭವ-ಗಾಂಭೀರ್ಯದಲ್ಲಿ ತಜ್ಞ, ಅದೃಷ್ಟದ ನಿಯಮಗಳ ಸನ್ನದು ಹೊಂದಿದ, ಸಾಮ್ರಾಜ್ಯಾಧಿಕಾರದ ಸಂಪ್ರದಾಯಗಳ ಪೀಠಿಕೆ, ಮುತ್ತು, ಮಹಾನ್ ರಾಜರ ಮೆಚ್ಚುಗೆ ಪಡೆದ, ಉನ್ನತ ಗೌರವ ಸಂಪನ್ನ ಸರದಾರರಲ್ಲಿ ಪ್ರಖ್ಯಾತ, ಉತ್ತರಾಧಿಕಾರತ್ವದ ತಳಹದಿಯ ಸಂಸ್ಥಾಪಕ, ಗೌರವಾನ್ವಿತ ಮಂತ್ರಿ, ಅರಿಸ್ಟಾಟಲ್‌ನಂತಹ ಬುದ್ಧಿವಂತ, ಪ್ಲಾಟೋನಂತಹ ವಿದ್ವಾಂಸ, ಪೊಲೆಮಿಯಂತಹ ಜಾಣ, ಮಹಾನ್‌ಸಂವಿಧಾನ, ಅಧಿಕ ಮರ್ಯಾದೆ, ಹಿರಿಮೆ ಮತ್ತು ಕೃಪೆಯುಳ್ಳವ, ಸ್ಥಾನ-ಮಾನ ಹಾಗೂ ಗೌರವದ ಉಂಗುರದ ಹರಳು, ಎರಡೂ ಜಗತ್ತುಗಳಿಗೆ ಸಲಹೆ ನೀಡುವವ, ದಾನ-ಧರ್ಮವೆಂಬ ಸಾಗರದ ದ್ವಾರ, ಅಸ್ತಿತ್ವ ವರ್ತುಳದ ಅಕ್ಷ, ಸೂರ್ಯೋದಯದ ಸ್ಥಾನ, ಸಮರ್ಥನೆಯ ಉಗಮದ ನೈಪುಣ್ಯ, ಸೃಷ್ಟಿಯ ಉದ್ಯಾನದ ಬೆಳಕು, ಒಳದೃಷ್ಟಿಯ ತೋಟದ ಪ್ರಕಾಶ, ಶುಭದಾಯಕ ಆಕಾಶದ ಸೂರ್ಯ, ನಾಯಕತ್ವದ ಆಭರಣ ಪೆಟ್ಟಿಗೆಯ ಮುತ್ತು, ಮಹೋನ್ನತ ಸ್ಥಾನದ ಧ್ವಜ ಏರಿಸುವವ, ಉನ್ನತ ನಿದರ್ಶನಗಳನ್ನು ಶೃಂಗರಿಸುವವ, ಮಾನವಕುಲದ ಪ್ರಶಂಸಾಗೀತೆಯ ಅತ್ಯುತ್ತಮ ಪಂಕ್ತಿಯ ಹೊಗಳಿಕೆ, ದಯೆ ಮತ್ತು ಉಪಕಾರ ಕೇಂದ್ರದ ಪರಿಧಿ, ಉನ್ನತ ದರ್ಜೆಯ ನಾಯಕರ ಮುಂದಾಳು, ಕಾಲದ ಮಹಾನ್ ಹಾಗೂ ಸಭ್ಯ ಜನರ ಸಾರಾಂಶ, ಶಾಂತಿ ಮತ್ತು ಸಂರಕ್ಷಣೆಯ ಮಧ್ಯಸ್ತಗಾರನಾದ ನವಾಬ್ ಮುಸ್ತಫಾಖಾನ್‌ನು ಉಲ್ಲೇಖಿತ ಬೆಟ್ಟಕ್ಕೆ ಹೋದಾಗ; ಬಾದಶಾಹನಿಗೆ ಗೊತ್ತಾಗಿರುವದೇನೆಂದರೆ : -

ಮಧುನು ರಾಜಾನೊಂದಿಗೆ ವಿಶ್ವಾಸ ದ್ರೋಹ ಮಾಡಿ, ಬೆಟ್ಟದ ಠಾಣೇದಾರನನ್ನು ಕೊಂದು, ನಗದು ಮತ್ತು ಸಾಮಾನುಗಳನ್ನು ಲೂಟಿ ಮಾಡಿ ಬೆಟ್ಟದ ಪ್ರದೇಶದಲ್ಲಿ

ಹಿಂಸಾಚಾರ ನಡೆಸಿದ್ದಾನೆ. ಅದರ ಅರ್ಥವೇನು? ಮತ್ತು ಅದರ ಅಂದಾಜು ಎಷ್ಟು? ಈಗ, ಬಾದಶಾಹನ ಆಜ್ಞೆಯು ಜಾರಿಯಾಗುತ್ತಲೇ, ರಾಜಾನೊಂದಿಗೆ ಸಂಬಂಧಿಸಿದ ಮಧು ಹಾಗೂ ರಾಜಾನು ಬೆಟ್ಟದ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಲಾರದಂತೆ, ಶಿಕ್ಷೆ ವಿಧಿಸಿರಿ. ಸದ್ಯಃ ಶಿಕ್ಷೆ ನೀಡುವ ಸಂಬಂಧವಾಗಿ ಅಲ್ಲಿಯ ಸುಬೇದಾರನಿಗೂ ಸಹ; ಶುಭದಾಯಕ ಆಜ್ಞೆಯನ್ನು ಜಾರಿಗೊಳಿಸಲಾಗಿದೆ. ನಿಮ್ಮ ಪ್ರತಿಯೊಂದು ವ್ಯವಹಾರದಲ್ಲಿ ಸಹಾಯ ಮಾಡಿ; ವಿಶ್ವಾಸಘಾತುಕನಿಗೆ.......

ಹಿಜ್ರಿ ೧೦೭೨ ಹುಜೂರ್ ಅಶ್ರಫ್ ಅಖದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೧೧೨

ಹಿಜ್ರಿ ೧೧೦೪ ಶಾಬಾನ್ ೨೮ ಶಕ. ೧೬೦೦ ಆಶ್ವೀನ ವದ್ಯ ೩೦
ಕ್ರಿ.ಶ.೧೬೭೮ ಅಕ್ಟೋಬರ್ ೫

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.
ಅಲಿ ಆದಿಲ್‌ಶಾಹ ಸುಲ್ತಾನ್ ಸಿಕಂದರ್ ಖಾದ್ರಿಯ ಪುತ್ರ

ನಕಲು ಪ್ರತಿಯು ಅಸಲಿ ಪ್ರತಿಯ ಅನುಸಾರವಾಗಿದೆ.

ತೊರಗಲ್ಲ್ ವ್ಯವಹಾರದ ಗೌರವ/ಘನತೆಯಲ್ಲಿ ತಜ್ಞನಾದ ಸಯ್ಯದಿ ಆಜಮ್ ಅಕ್ರಮ್ ಖುರ್ದ್ ಸಾಲಾ ಹುಜೂರ್ ಸರ್ ಹವಾಲ್ದಾರ್; ಗೌರವ / ಘನತೆಯಲ್ಲಿ ತಜ್ಞನಾದ ಖಾನ್ ಮೊಹಮ್ಮದ್ ಸಯ್ಯದಿ ಸಾಲಿಮ್ ಹವಾಲ್ದಾರ್ ಹಾಗೂ ಕಾರಕೂನರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೭೮ರಲ್ಲಿ ಬಾದಶಾಹನ ಕೃಪೆ ಮತ್ತು ಇನಾಮುಗಳ ರೂಪದಲ್ಲಿ, ಉಲ್ಲೇಖಿತ ವ್ಯವಹಾರದ ಸಂದತ್ತಿ (ಸವದತ್ತಿ?) ಹಾಗೂ ಲೋಕಾಪೂರ್ ಸಣ್ಣಪಟ್ಟಣಗಳು ಸಯ್ಯದ ಅಬ್ದುಲ್ ಖಾದರನ ಸ್ವಾಧೀನದಲ್ಲಿದ್ದವು. ಈಗ, ಗೌರವ/ಘನತೆಯಲ್ಲಿ ತಜ್ಞ, ಶೌರ್ಯ ಹಾಗೂ ವೀರತ್ವದಲ್ಲಿ ಮುನ್ನೆಚ್ಚರಿಕೆ ಹೊಂದಿದ, ಏಕರೂಪದ ಮತ್ತು ಸಂಬಂಧಿಕರ ವಿಶ್ವಾಸಾರ್ಹ, ಕರುಣೆ ಹಾಗೂ ಉಪಕಾರಕ್ಕೆ ಯೋಗ್ಯ, ಕುಲ–ಗೋತ್ರ ಮತ್ತು ಸೋದರರ ಸಾರಾಂಶ ಬಾಜೀ ಘೋರ್ಪಡೆ ಆದಿಲ್‌ಶಾಹಿಯ ಪುತ್ರನಾದ ಮಾಲೋಜಿಗೆ ಆತನ ದೃಢತೆಯ ದೆಸೆಯಿಂದ; ಎಲ್ಲ ವ್ಯವಹಾರಗಳು ಹಾಗೂ ಇನಾಮುಗಳೊಂದಿಗೆ ದಯಪಾಲಿಸಲಾಗಿದೆ. ಅಶ್ರಫ್ ಅಖ್‌ದಸ್ ಅರ್‌ಫಾ ಹುಮಾಯೂನೆ ಆಲಾರ ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಸಣ್ಣ ಪಟ್ಟಣಗಳನ್ನು ಮೇಲ್ಕಾಣಿಸಿದ ವ್ಯಕ್ತಿಯ ಹೆಸರಿನಲ್ಲಿ ಸೇರ್ಪಡೆ ಮಾಡಿ, ಆತನ ಸ್ವಾಧೀನಕ್ಕೆ ಕೊಡಬೇಕು.

ಹಿಜ್ರಿ ೧೧೦೪ರ ಶಾಬಾನ್ ತಿಂಗಳಿನ ೨೮ನೇ ತಾರೀಖಿಗೆ ಬರೆಯಲಾಗಿದೆ.

ಸು. ೧೦೬೨ | ಶಕ. ೧೫೮೩ ಪೌಷಶುದ್ಧ ೧೦
ಹಿಜ್ರಿ ೧೦೭೨ ಜವಲ್ ೭ | ಕ್ರಿ.ಶ.೧೬೬೧ ಡಿಸೆಂಬರ್ ೨೦

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಸಾಳಶಿ ಬೆಟ್ಟದ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ : –

ಹಿಜ್ರಿ ೧೦೬೨ರಲ್ಲಿ ಶುಭದಾಯಕ ಆಜ್ಞೆಗೆ ಅನುಸಾರವಾಗಿ, ನವಾಬ್ ಮುಸ್ತಫಾ ಖಾನನಿಗೆ ಆತನ ದೃಢತೆಗಾಗಿ ಉಲ್ಲೇಖಿತ ಬೆಟ್ಟಕ್ಕೆ ಕಳುಹಿಸಿದಾಗ, ತಿಳಿದು ಬಂದಿರುವದೇನೆಂದರೆ : –

ಪ್ರಸಿದ್ಧ ವ್ಯಕ್ತಿಯಾಗಿದ್ದ ಬಾಬಾಜಿಯು ಸಾಯಂಕಾಲದ ಸಮಯದಲ್ಲಿ...... ಭೆಟ್ಟಿಗಾಗಿ ಮತ್ತು ಸುಬೇದಾರ್ ತಳಕೋಕಣ್‌ನು ಉಲ್ಲೇಖಿತ ಬೆಟ್ಟದ ಪ್ರದೇಶದಲ್ಲಿ ಬಂದು; ಒತ್ತಾಯಪೂರ್ವಕವಾಗಿ ಹಣವನ್ನು ಕೇಳಿದನು. ಶುಭದಾಯಕ ಆಜ್ಞೆಗೆ ಅನುಸಾರವಾಗಿ ದೃಢತೆಯ ದೆಸೆಯಿಂದ ಮೇಲ್ಕಾಣಿಸಿದ ನವಾಬ್ ಅಲ್ಲಿಗೆ ಹೋದಾಗ; ಬಾಬಾಜಿ (ಪಂಡಿತನು) ಉಲ್ಲೇಖಿತ ಬೆಟ್ಟದ ಪ್ರದೇಶದಲ್ಲಿ ಬಂದು, ಹಣ ಕೇಳುವ ಮೂಲಕ ಪ್ರದೇಶವನ್ನು ಹಾಳು ಮಾಡಿ ಬೆಟ್ಟದ ಕಾರ್ಯನಿರ್ವಾಹಕರನ್ನು ಕರೆಕಳುಹಿಸಿ, ಅವರ ಮೇಲೆ ಬಲಾತ್ಕಾರ ಮಾಡುವದದ ಬಗೆಗಿನ ಅಂದಾಜು ಏನು? ಸದ್ಯಃ ಈ ಆಜ್ಞೆಯು ತಲುಪುತ್ತಲೇ, ಮೇಲ್ಕಾಣಿಸಿದ ಬೆಟ್ಟದಲ್ಲಿ ಹಸ್ತಕ್ಷೇಪ ಮಾಡಲು; ಬಾಬಾಜಿ ಪಂಡಿತನಿಗೆ ಅವಕಾಶ ಕೊಡಬಾರದು. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಈ ವ್ಯವಹಾರದಲ್ಲಿ ಕಾರ್ಯಾಚರಣೆ ಮಾಡಲು ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದೆ.

ಹಿಜ್ರಿ ೧೦೭೨ರ ಜಮಾದಿ ಉಲ್ ಅವ್ವಲ್ ತಿಂಗಳಿನ ೭ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೧೧೪

ಸು. ೪೦ ಶಕ. ೧೬೧೮ ಚೈತ್ರಶುದ್ಧ ೩

(ಆಲಮ್‌ಗೀರಿ) ರಮಜಾನ್ ೧ ಕ್ರಿ.ಶ.೧೬೯೬ ಮಾರ್ಚ್ ೨೫

ಗೌರವಾನ್ವಿತರ ಹೆಸರಿನಲ್ಲಿ

ಗೌರವಾನ್ವಿತ ಹಾಗೂ ಉನ್ನತ ದರ್ಜೆಯ ಬಾದಶಾಹನ ಆಜ್ಞೆಯು ಗದಗಿನ ವೆಂಕಟ್‌ದೇಸಾಯಿಗೆ ಇನಾಮ ರೂಪದಲ್ಲಿ ಕೊಡಲಾಗಿದ್ದ ವದವಟ್ಟಿ ಗ್ರಾಮವು ವಿವಾದ/ ವ್ಯಾಜ್ಯದ ದೆಸೆಯಿಂದ; ಲಕ್ಷ್ಮೇಶ್ವರ ಜಮೀನ್ದಾರನಾದ ಶ್ರೀಪತ್‌ಖಾನ್ ಗೌಡನ ಸ್ವಾಧೀನದಲ್ಲಿತ್ತು. ಖಾನ್‌ಗೌಡನು ಉನ್ನತ ಹುದ್ದೆಗಾಗಿ ಸನ್ನದ್ಧನಾದಾಗ, ಆ ಗ್ರಾಮದ ಮೇಲೆ ಆತನ ನಿಯಂತ್ರಣವು ಅಂತ್ಯವಾಗುವದು. ಒಂದು ವೇಳೆ ದುರ್ಭಾಗ್ಯದಿಂದ ಅಥವಾ ನೆಪ ಮಾಡಿ, ಯಶಸ್ವಿ ಆಗದಿದ್ದರೆ; ಉಲ್ಲೇಖಿತ ವೆಂಕಟ್ ದೇಸಾಯಿಗೆ ದಯಪಾಲಿಸಲಾಗುವದು.

೪೦ನೇ ಜುಲೂಸಿನ ರಮಜಾನ್ ತಿಂಗಳಿನ ೧ನೇ ತಾರೀಖಿಗೆ ಬರೆಯಲಾಗಿದೆ.

ಸು. ೧೦೬೧ ಶಕ.೧೫೮೨ ಫಾಲ್ಗುಣ ವದ್ಯ ೮
ಹಿಜ್ರಿ. ೧೦೭೧ ರಜ್ಜಬ್ ೨೨ ಕ್ರಿ.ಶ.೧೬೬೧ ಮಾರ್ಚ ೧೪

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ
ದೇಶವು ದೇವರಿಗಾಗಿ ಇದೆ.

ಬಂದರ್ ಮೈಮೂನ್ ಮುಸ್ತಫಾಬಾದ್‌ದ ಕಾರ್ಯನಿರ್ವಾಹಕರು ಮತ್ತು ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಹಿಜ್ರಿ ೧೦೬೧ರಲ್ಲಿ, ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ, ಉಲ್ಲೇಖಿತ ಬಂದರಿನ ನಾತೂ ಬಾಂದರಿ ಗ್ರಾಮಗಳನ್ನು; ಏಕರೂಪದ ವ್ಯಕ್ತಿಗಳ ಕೆನೆಯಾದ ಪ್ರತಾಪರಾವ್ ದಲ್ವಿಗೆ ಆತನ ದೃಢತೆಗಾಗಿ, ತಂಬಾಕು ಮತ್ತು ತೀಪ್‌ಬರ್ಗ್ (ಎಲೆಗಳು) ಸುಂಕದ ಹೊರತಾಗಿ; ಸರ್ವ ವ್ಯವಹಾರಗಳೊಂದಿಗೆ ದಯಪಾಲಿಸಲಾಗಿದೆ. ಮೇಲ್ಕಾಣಿಸಿದ ಗ್ರಾಮಗಳನ್ನು ಉಲ್ಲೇಖಿತ ವ್ಯಕ್ತಿಯ ಹೆಸರಿನಲ್ಲಿ ಸೇರ್ಪಡೆ ಮಾಡಿ, ಆತನ ಸ್ವಾಧೀನಕ್ಕೆ ಕೊಡಬೇಕು ಹಾಗೂ ಆತನ ವಾರಸುದಾರರಿಗೆ ಹಸ್ತಕ್ಷೇಪ ಮಾಡಲು ಅವಕಾಶ ಕೊಡಬಾರದು.

ಹಿಜ್ರಿ ೧೦೭೧ರ ರಜ್ಜಬ್ ತಿಂಗಳಿನ ೨೨ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

ಸು. ೧೦೬೬ ಶಕ. ೧೫೮೮ ಚೈತ್ರ ವದ್ಯ ೧೦
ಹಿಜ್ರಿ. ೧೦೭೭ ಶವ್ವಾಲ್ ೨೨ ಕ್ರಿ.ಶ. ೧೬೬೬ ಎಪ್ರಿಲ್ ೧೮

ಅಪಾರ ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ

ದೇಶವು ದೇವರಿಗಾಗಿ ಇದೆ.

ಮುಜಫರಾಬಾದ್ ವ್ಯವಹಾರದ ದೇಸಾಯರಿಗೆ ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ.

ಹಿಜ್ರಿ ೧೦೬೬ರಲ್ಲಿ, ಬಾದಶಾಹನ ಕೃಪೆ ಹಾಗೂ ಇನಾಮುಗಳ ರೂಪದಲ್ಲಿ, ಉಲ್ಲೇಖಿತ ವ್ಯವಹಾರದ ಲಾಂಜಾ ಬೆಟ್ಟ, ನವೀನ್ ಪಂಚನಿ ಸವಾರರು ಮತ್ತು ಸೇವಕರ ಹಣಕ್ಕಾಗಿ; ಗಾಂಭೀರ್ಯ/ವೈಭವದಲ್ಲಿ ತಜ್ಞ, ಸುಲೇಮಾನನ ದರ್ಬಾರಿನಂತಹ ದರ್ಬಾರಿನ ಸ್ವಾಮಿನಿಷ್ಠ, ಖಾಖಾನ್‌ನಂತಹ ದೃಷ್ಟಿಯ ಪ್ರಶಂಸಕ, ಬಾದಶಾಹನ ಕೃಪೆಯಲ್ಲಿ ಅಂತರ್ಗತನಾದ, ಶೌರ್ಯವೆಂಬ ಉದ್ಯಾನದ ನೂತನ ಫಲ, ವೀರತ್ವವೆಂಬ ಉಪವನದ ಸೌಂದರ್ಯ, ಸಮರ ಸಾಗರದ ಮೊಸಳೆ, ಖಾನ್ ಅಲಿಶಾನ್, ಸಾದರ್ ನಿಶಾನ್, ರಫಿ ಉಲ್ ಕದರ್, ವಲ್ ಮಕಾನ್, ಜಗತ್ತಿನ ಸೇನಾಪತಿ, ಕಾಲದ ರುಸ್ತುಮ್, ಏಕರೂಪದ ಮತ್ತು ಸಂಬಂಧಿಕರ ಕೆನೆಯಾದ ಬಸಂತರಾವ್ ಪ್ರತಾಪ್‌ರಾವ್ ದಲ್ವಿಗೆ ಆತನ ದೃಢತೆಗಾಗಿ; ತಂಬಾಕು ಹಾಗೂ ತೀಪ್‌ಬರ್ಗ (ಎಲೆಗಳು) ಸುಂಕದ ಹೊರತಾಗಿ, ಎಲ್ಲ ವ್ಯವಹಾರಗಳು ಮತ್ತು ಇನಾಮುಗಳೊಂದಿಗೆ ದಯಪಾಲಿಸಲಾಗಿದೆ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಉಲ್ಲೇಖಿತ ಬೆಟ್ಟವನ್ನು, ಮೇಲ್ಕಾಣಿಸಿದ ವ್ಯಕ್ತಿಯ ಹೆಸರಿಗೆ ಸೇರ್ಪಡೆ ಮಾಡಿ; ಆತನ ಸ್ವಾಧೀನಕ್ಕೆ ಕೊಡಬೇಕು.

ಹಿಜ್ರಿ ೧೦೭೬ರ ಶವ್ವಾಲ್ ತಿಂಗಳಿನ ೨೨ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

೧೧೭

ಹಿಜ್ರಿ ೧೦೭೭ ಜವಲ್ ೨೬ ಶಕ. ೧೫೮೮ ಕಾರ್ತೀಕ ವದ್ಯ ೧೩

ಕ್ರಿಶ. ೧೬೬೬ ನವ್ಹಂಬರ್ ೧೪

ಅಪಾರು ಕರುಣಾಳು ಮತ್ತು ಕೃಪಾಕರನಾದ ಅಲ್ಲಾಹನ ಹೆಸರಿನಲ್ಲಿ

ದೇಶವು ದೇವರಿಗಾಗಿ ಇದೆ.

ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ :-

ಬಾದಶಾಹನ ಅಪಾರ ದಯೆ ಮತ್ತು ಇನಾಮುಗಳಿಂದ ದಯಪಾಲಿಸಲ್ಪಟ್ಟ, ಆಯ್ಕೆ ಹಾಗೂ ಪ್ರತಿಷ್ಠೆ ಹೊಂದಿದ, ಪ್ರಸಿದ್ಧ ಮತ್ತು ಉನ್ನತ ಸ್ಥಾನ ಸಂಪನ್ನ, ಸಾಮ್ರಾಜ್ಯದ ಕಾರ್ಯದರ್ಶಿ, ಉತ್ತಮ ಸಂಕಲ್ಪದ ರಾವ್ ಆಜಮ್ ಶ್ರೀಪತ್‌ರಾವ್ ಮಜ್ಲಿಸಿಯು ತಿಳಿದಿದ್ದೇನೆಂದರೆ :-

ಮಹೋನ್ನತ ದರ್ಬಾರಿನ ವಿಧೇಯನಾದ ಸ್ವಾಮಿನಿಷ್ಠ, ಸಂಪೂರ್ಣ ಪ್ರಾಮುಖ್ಯತೆ ಹಾಗೂ ಸತ್ಯವಂತಿಕೆಯಿಂದ ಬಾದಶಾಹನ ಸೇವೆ ಮಾಡುವವ, ಏಕರೂಪದ ಮತ್ತು ಸಂಬಂಧಿಕರ ಕೆನೆಯಾದ ಬಸವಂತ ಪ್ರತಾಪ್‌ರಾವ್‌ನು, ದರೋಡೆಕೋರರ ದಾಳಿಯ ದೆಸೆಯಿಂದ ಚಿಂತಾಗ್ರಸ್ತನಾಗಿ, ಸ್ವದೇಶದಿಂದ ದೂರನಾಗಿ ಅಲೆದಾಡುತ್ತಿದ್ದನು. ಆದುದರಿಂದ, ಶುಭದಾಯಕ ಆಜ್ಞೆಯನ್ನು ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಬಸವಂತ ಪ್ರತಾಪ್‌ರಾವ್‌ನಿಗೆ ಬಂದರ್ ಮೈಮೂನ್ ಮುಸ್ತಫಾಬಾದ್ ಪ್ರದೇಶದಲ್ಲಿ ಹಾಗೂ ಮುಜಫರಾಬಾದ್ ವ್ಯವಹಾರದಲ್ಲಿ; ಹಿಂದಿನ ಆಜ್ಞೆಗೆ ಅನುಸಾರವಾಗಿ, ಹಳೆಯ ಸ್ವದೇಶ, ಇನಾಮು ಮತ್ತು ಮನೆಗಳು ಇತ್ಯಾದಿ ನಿಗದಿಪಡಿಸಿ ಕೊಡಲಾಗಿದೆಯೋ?

ಬಾದಶಾಹನ ಆಜ್ಞೆಯು ತಲುಪುತ್ತಲೇ, ಬಸವಂತ್‌ರಾವ್ ಎಲ್ಲಿಯೇ ಇದ್ದರೂ ಸಹ; ಹಳೆಯ ಹಾಗೂ ಹೊಸ ಪ್ರದೇಶ ಆತನಿಗಾಗಿ ನಿಗದಿಪಡಿಸಲಾಗಿದೆಯೆಂದು ತಿಳಿಯಲಿ. ಹಿಂದಿನ ಆಜ್ಞೆಗೆ ಅನುಸಾರವಾಗಿ ಕೊಡಲ್ಪಟ್ಟ ಸ್ವದೇಶ, ಇನಾಮು ಮತ್ತು ಮನೆಗಳನ್ನು; ಅವನ ಹೆಸರಿನಲ್ಲಿ ಸೇರ್ಪಡೆ ಮಾಡಿ, ಕೊಡಬೇಕು. ಅವನು ತನ್ನ ಸೇವಕರೊಂದಿಗೆ, ಶಾಂತಿ-ನೆಮ್ಮದಿಯಿಂದ ಇರಲಿ. ಶುಭದಾಯಕ ಆಜ್ಞೆಗೆ ಅನುಸಾರವಾಗಿ, ಕಾರ್ಯಾಚರಣೆ ಮಾಡಬೇಕು.

ಹಿಜ್ರಿ ೧೦೭೭ರ ಜಮಾದಿ ಉಲ್ ಅವ್ವಲ್ ತಿಂಗಳಿನ ೨೬ನೇ ತಾರೀಖಿಗೆ ಬರೆಯಲಾಗಿದೆ.

ಹುಜೂರ್ ಖುರ್ಶೀದ್ ಜುಹೂರ್ ಅಶ್ರಫ್ ಅಖ್‌ದಸ್ ಹುಮಾಯೂನೆ ಆಲಾರ ಅನುಮತಿಯ ಮೇರೆಗೆ.

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೧೬೨

ಸಂದಲಾಪುರ (ಸೊಲ್ಲಾಪುರ)

೧೧೮

ಸು.೬೪ ಶಾ. ೧೪೮೫ – ೮೬
ಇ. ೧೫೬೩– ೬೪

ಮೊದಲನೆಯ ಅಲಿ ಆದಿಲಶಾಹ > ಶಮ್ಸುದ್ದೀನ ಘೋಲಾದಖಾನ ನಾಯಬ ಗೈಬತ ಮತ್ತು ಕಾರಕೂನ ಮತ್ತು ಇತರ ರಹವಾಸೀ ಮಾಮಲಾ ಸಂದಲಾಪೂರ

ಪ್ರಸ್ತುತ ನನ್ನ ದೇಸಗತಿ ಮತ್ತೊಬ್ಬರ ವಶವಾಗಿದೆ. ಆದರೆ ಅವನು ಅದರ ಹಕ್ಕುದಾರನಲ್ಲ. ನಿಜವಾಗಿ ಹೇಳಬೇಕೆಂದರೆ ಜಿಲ್ಲೆಯ ಒಂದು ಭಾಗವಾದ, ಮಾರಡಿಯ ಜೋಶಿ ಖಂಡೋಬಾ ವಿಠಲ ಇವರ ಬಂಧು ಯಾಮಾಜಿ ಇವರ ಕಣ್ಣು ಈ ದೇಸಗತಿಯ ಮೇಲಿತ್ತು. ಅದಕ್ಕಾಗಿ ದೇಸಗತಿಯನ್ನು ದೊರಕಿಸುವದಕ್ಕಾಗಿ ಬುರ್ಹಾನ ನಿಜಾಮಶಾಹ ಅವರ ಹತ್ತಿರ ಏನೋ ಸುಳ್ಳು ಹೇಳಿ ದೇಸಗತಿಯನ್ನು ದೊರಕಿಸಿಕೊಂಡರು, ಈಗ ಈ ವಿಭಾಗದ ಮುಖ್ಯಸ್ಥಿಕೆ ಸಾತಪ್ಪನಿಗೆ ಆಗಿದೆ, ಈ ಜಹಗೀರು ಈ ಮೊದಲೂ ಸಾತಪ್ಪನ ಹತ್ತಿರ ಇತ್ತು. ಆಗ ಕೂಡಾ ದೇಸಗತಿ ನಡದೇ ಇತ್ತು. ಮಂದರೂಪದ ಪಾಟೀಲ ಮತ್ತು ಯೆಲಗೊಂಡಾ ಇವರು ಲಾವಣಿದಾರರ ಹತ್ತಿರದಲ್ಲಿಯೇ ಇರುತ್ತಿದ್ದರು. ಯಲಗೊಂಡಾ ಇವರು ಲಾವಣಿದಾರರ ಗುಂಪಿನ ಸಹಾಯದಿಂದ ಈ ದೇಸಗತಿಯನ್ನು ನಡೆಸುತ್ತಿದ್ದರು. ಅಹೀರವಾಡಿ ಕೆಳಭಾಗದಲ್ಲಿ ಕಂಬಾರದ ಕುಲಕರ್ಣಿ ಜಖರಸ ಇವರು ಬಹಾದ್ದೂರುಲ್ಮುಲ್ಕ ಇವರ ಅಧಿಕಾರಾವಧಿಯಲ್ಲಿ ವಿಭಾಗದ ದೇಸಗತಿಯನ್ನು ನಡೆಸಿಕೊಂಡು ಹೋಗುತ್ತಿದ್ದರು. ಮೇಲೆ ಹೇಳಿದ ಪ್ರಕಾರ ಕುಲಕರ್ಣಿ, ಜಖರಸ ಇವರು ದೇಸಗತಿ ನಡೆಸಿಕೊಂಡು ಹೋಗುವದಕ್ಕೆ ಮೇಲಿನ ಕಸಬಾದ ಪಾಟೀಲ ಭರಮಣ್ಣಾ ಅದಕ್ಕೆ ತಡೆ ತಂದರು ಅಲ್ಲದೇ ಯಾರಿಂದಾದರೂ ನಾನು ನಡೆಸ್ತೀನಿ ಎಂದು ತಮ್ಮ ವಶಕ್ಕೆ ತೆಗೆದುಕೊಂಡರು. ವಿಭಾಗದ ದೇಸಗತಿ ಮಾಡುತ್ತಿದ್ದ ಯಾಮಾಜಿ, ಜಖರಸ ಮತ್ತು ಯಲಗೊಂಡಾ

ಇವರೆಲ್ಲರನ್ನೂ ದೂರ ಮಾಡಿಬಿಟ್ಟರು. ದೇಸಾಯಗಿರಿ, ವಿಲಾಯತ ಮತ್ತು ಮೇಲೆ ಹೇಳಿದ ಮುಖ್ಯಸ್ಥಿಕೆ ಈ ತರಹ ಏನೇ ಇದ್ದರೂ ಅವುಗಳು ನರಸಸೇಟಿ, ನರಹರಿ ಮತ್ತು ವಿಠಲ ಇವರಿಗೆ ಗೊತ್ತುಪಡಿಸಲಾಗಿತ್ತು. ಮೇಲೆ ಹೇಳಿದ ನರಸಸೇಟಿ ಮತ್ತು ನರಹರಿ ಇವರನ್ನು ವಿಭಾಗದಲ್ಲಿ ದೇಸಾಯರು ಎಂದು ತಿಳಿಯಲಾಗುತ್ತಿತ್ತು. ಈ ಪ್ರಕಾರ ವಿಭಾಗದ ದೇಸಗತಿಯ ಕೆಲಸಗಳನ್ನು ಮತ್ತು ಆ ಭಾಗದ ಏಳಿಗೆಯನ್ನು ಒಳ್ಳೆಯರೀತಿಯಿಂದ ಮಾಡಬೇಕು ಮತ್ತು ಸರಕಾರದೊಂದಿಗೆ ನಿಷ್ಠೆಯಿಂದ ಇರಬೇಕು. ದೇಸಗತದ ಸಲುವಾಗಿ ಯಾರಾದರೂ ದ್ರೋಹ ಬಗೆದರೆ ಅವರಿಗೆ ತಕ್ಕ ಶಿಕ್ಷೆ ಕೊಡಬೇಕು. ಆಗ ಮತ್ತೆ ಯಾರೂ ದ್ರೋಹ ಬಗೆಯುವದಿಲ್ಲಾ. ಮೇಲೆ ಹೇಳಿದ ಮೂರು ಜನರನ್ನು ಬಂಧಿಸಿ ಅವರಿಂದ ಕೂಡಿಹಾಕಿದ ಹಣವನ್ನು ದರಬಾರಕ್ಕೆ ಕಳಿಸಿಕೊಡಬೇಕು. ಅಥವಾ ಬಂಧಿಸಿದ ಮೂವರಿಂದ ಭೂಮಿಯನ್ನು ತೆಗೆದುಕೊಂಡು ಅವರಿಗೆ ದೇಸಗತಿಯಲ್ಲಿ ಯಾವದೇ ರೀತಿಯ ಅಡತಡೆ ತರಬಾರದು ಅಡತಡೆ ತಂದರೆ ಅವರು ಆರೋಪಿಗಳಾಗುತ್ತಾರೆ ಎಂದು ಸ್ಪಷ್ಟವಾಗಿ ತಿಳಿಹೇಳಬೇಕು.

೧೧೯

ಹಿ. ೯೭೬ ರಖರ ೭ | ಶಾ. ೧೪೯೦ ಭಾದ್ರಪದ ಶುದ್ಧ ೯
ಇ.೧೫೬೮ ಸೆಪ್ಟಂಬರ ೨೮

ಮೊದಲನೆಯ ಅಲಿ ಆದಿಲಶಾಹ > ಆಂಕಸಖಾನ.

ಈ ಸಮಯದಲ್ಲಿ ಮುಖ್ಯ ಕಚೇರಿಯ ಸರನೋಬತ ಸಂಜರಖಾನ ಇವರಿಂದ ಕಚೇರಿಗೆ ಒಂದು ಅರ್ಜಿ ಕಳಿಸಲಾಗಿತ್ತು. ಏನೆಂದರೆ ಇಸ್ತಾದಾಬಾದೇದಲ್ಲಿ ನನ್ನ ಮನೆಯ ಹತ್ತಿರ ಮಿಯಾ ಬಹಾಉದ್ದೀನ ಇವರ ಮನೆ ಇದೆ. ಅವನ ದೇಹಾಂತದ ನಂತರ ಅವನ ಶ್ರೀಮತಿ ಮಕ್ಕಳ ಸಹಿತ ಆ ಮನೆಯಲ್ಲಿ ವಾಸಿಸುತ್ತಾಳೆ. ಆ ಊರಿನಲ್ಲಿ ಇರುವ ಆ (ಆಂಕಸಖಾನ) ಖಾನರ ಅಧಿಕಾರಿ ಮೇಲಿಂದ ಮೇಲೆ ಆ ಮನಿಗೆ ಹೋಗಿ ಈ ಮನೆ ಖಾಲಿ ಮಾಡಿರಿ ಮತ್ತೊಬ್ಬರಿಗೆ ಕೊಡಬೇಕು ಎಂದು ಕಿರಿಕಿರಿ ಕೊಡುತ್ತಾರೆ. ಹೀಗೆ ಅಧಿಕಾರಿ ಅವರಿಗೆ ಹೇಳುವದು ಯೋಗ್ಯವಲ್ಲ. ಇದು ಮುಸಲ್ಮಾನರಿಗೆ ಅನುಚಿತವೆನಿಸುತ್ತದೆ. ಆದ್ದರಿಂದ ತಾವು ಅಧಿಕಾರಿಗೆ ಆ ವಿಧವೆಯ ಮನೆಯ ಹತ್ತಿರ ಕೂಡ ಕಾಣಿಸಿರಬಾರದು ಅವರಿಗೆ ಅಡತಡೆ ತರಬಾರದು ಕಾನೂನಿನ ಪ್ರಕಾರ ನಡೆಯಬೇಕು ಎಂದು ಎಚ್ಚರಿಕೆ ಕೊಡಬೇಕು. ಬಾದಶಹರ ಒಪ್ಪಿಗೆ ಪಡೆದು ಮಂತ್ರಿ ಹುಕುಮತ ಖಾನಖಾನಾನ ಕಿಶವರಖಾನ ಇವರ.ಮಾಹಿತಿಇಂದ

೧೨೦

ಹಿ.೯೮೯ ರಮಜಾನ ೨ ಶಾ. ೧೫೦೩ ಆಶ್ವೀನ ಶುದ್ಧ ३
ಇ. ೧೫೮೧ ಸೆಪ್ಟಂಬರ ೩೦

ಎರಡನೆಯ ಇಬ್ರಾಹಿಮ > ಸಂದಲಾಪುರ ಮಾಮಲಾದ ನಾಯಬ ಗೈಬತ ಜಾಬೀತಖಾನ ಮತ್ತು ಕಾರಕೂನ

ಮೇಲೆ ಹೇಳಿದ ಪ್ರಕಾರ ದೇಸಾಯಿ ನರಸೇಟ ಬಿನ್ನ ಮಂಗಸೇಟ ಇವರಿಂದ ನವಾಬರಿಗೆ ಒಂದು ಅರ್ಜಿ ಕಳಸಲ್ಪಟ್ಟಿತ್ತು. ಅದೇನೆಂದರೆ ಬಲಬದಿ ಮತ್ತು ಎಡಬದಿಯಲ್ಲಿ ಅಂಗಡಿ ಎರಡು ಮನೆಗಳು ನನ್ನ ವಶದಲ್ಲಿದ್ದು ವತನದಾರ ಕಚೇರಿಯನ್ನು ನಡೆಸಲಾಗುತ್ತಿದೆ. ಪ್ರಸ್ತುತ ಆದಸೇಟಿ ಬಲಬದಿಗೆ ಇದ್ದ ಅಂಗಡಿಯ ಮನೆಯನ್ನು ಬಲವಂತದಿಂದ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ನಡೆಸ್ತಾಇದ್ದಾನೆ. ಇಂಥ ಪ್ರಸಂಗದಲ್ಲಿ ತಾವು ನ್ಯಾಯ ಮತ್ತು ಉಚಿತದಿಂದ ಆ ಅಂಗಡಿಯನ್ನು ದೇಸಾಯಿರವರ ಸ್ವಾಧೀನಕ್ಕೆ ಕೊಡಬೇಕೆಂದು ಅದಾಸಸೇಟಿಗೆ ಎಚ್ಚರಿಕೆ ಕೊಡಬೇಕು. ಇದು ವತನದಾರರ ಕೆಲಸ ಇರುವದರಿಂದ ಉದ್ಧಟತನ ಮಾಡುವದು ಸರಿಅಲ್ಲ. ಆ ತರಹ ಯಾರೂ ಮಾಡಬಾರದು. ಬಾದಶಹರ ಪರವಾನಗಿಯಿಂದ; ಸರನೌಬತ ದಿಲಾವರಖಾನ ಇವರ ಮಾಹಿತಿಇಂದ.

ಹಿ ೯೯೦ ಮೊಹರಮ ೧ ಶಾ. ೧೫೦೩ ಮಾಘ ಶು ಧ್ಧ
ಇ.೧೫೮೨ ಜಾನೆವಾರಿ ೨೬

ಎರಡನೆಯ ಇಬ್ರಾಹಿಮ > ಸಂದಲಾಪುರ ಮಾಮಲಾದ ನಾಯಬ ಗೈಬತ ಜಾಬೀತಖಾನ ಮತ್ತು ಕಾರಕೂನ

ಯಾವಾಗಿನಿಂದ ಈಕಸಬಾದ ಬಾಜಾರ ಪ್ರಾರಂಭವಾಗಿದೆಯೋ ಅಂದಿನಿಂದ ಇಂದಿನ ವರೆಗೆ ರಸ್ತಾದ ಎರಡೂ ಬದಿಗೆ ಸರದೇಸಾಯಿ ಇವರ ಅಂಗಡಿಗಳು ಇದ್ದವು. ಈ ವಿಷಯ ನರಸೇಟಿ ಬಿನ್ನ ಮೇಗಸೇಟಿ ದೇಸಾಯಿ ಮಾಮಲಾ ಮಜಕೂರ ಇವರು ದರಬಾರದ ಲಕ್ಷ್ಯಕ್ಕೆ ತಂದುಕೊಟ್ಟರು.ಸಧ್ಯಾ ಈ ಕಸಬಾದ ಶೇಟೆ ಮತ್ತು ಶೇಟೆನ ಬಂಧು ಅದಸೇಟಿ ಇವರು ಬಲ ಬದಿಗೆ ಇದ್ದ ನನ್ನ ಅಂಗಡಿ ತಮ್ಮ ಸ್ವಾಮಿತ್ವಕ್ಕೆ ತೆಗೆದುಕೊಂಡಿದ್ದಾರೆ. ಅವರು ನನಗ ತಿರುಗಿ ಕೊಡುತ್ತಿಲ್ಲ ಇದು ಎಂಥಾ ಧೈರ್ಯ ? ದೇಸಾಯಿ ವಹಿವಾಟಿನಲ್ಲಿದ್ದ ಹಳೆಯ ಮತ್ತು ಪ್ರಸ್ತುತ ವಹಿವಾಟಿನಲ್ಲಿದ್ದ ಅಂಗಡಿಗಳನ್ನು ಅವರು ತಮ್ಮ ವಶಕ್ಕೆ ತೆಗೆದುಕೊಳ್ಳುವುದು ಇದು ಯಾವ ಪ್ರಕಾರದ ನ್ಯಾಯ ಇದೆ? ಇದರ ಸಲುವಾಗಿ ಹುಜೂರ ಸೇಟಿ ಇವನನ್ನು ಕರೆಹೇಳಿ ನ್ಯಾಯದಿಂದ ಮೊದಲಿನ ಮಹಜರ ಪ್ರಕಾರ ಅಂಗಡಿಯನ್ನು ದೇಸಾಯಿ ಅವರ ವಶಕ್ಕೆ ಕೊಡಬೇಕೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಯಾವದೇ ರೀತಿಯಿಂದ ಆ ಶೇಟಿಗೆ ಬೆಂಬಲ ಕೊಡಬಾರದು. ಅವನು ಮತ್ತೆ ಈ ತರಹ ಮಾಡಬಾರದೆಂದು ತಿಳಿಹೇಳಬೇಕು.ಹಿ ೯೯೦ ಮೋಹರಮ ೧ ಹುಜೂರವರ ಪರವಾನಗಿಯಿಂದ: ಅಮೀರೆ ಜುಮಲಾ ಸರೇಸರ ನೌಬತ ದಿಲಾವರಖಾನ ಇವರ ಮಾಹಿತಿಯಿಂದ.

೧೨೨

ಹಿ.೯೯೧ ಶವ್ವಾಲ ೯ ಶಾ. ೧೫೦೫ ಕಾರ್ತೀಕ ಶುದ್ಧ ೧೦
ಇ. ೧೫೮೩ ಅಕ್ಟೋಬರ ೧೬

ಎರಡನೆಯ ಇಬ್ರಾಹಿಮ ಆದಿಲಶಾಹ > ಸಂದಲಾಪೂರ ಮಾಮಲಾದ ನಾಯಬ ಗೈಬತಜಾಬಿತಖಾನ ಮತ್ತು ಕಾರಕೂನ

ನಿಮ್ಮ ಅರ್ಜಿ ಮುಟ್ಟಿದೆ ಅದರಲ್ಲಿ ನೀವು ಬರೆದದ್ದು, 'ಸದರೀ ವಿಭಾಗದ ದೇಸಾಯಿ ನರಸಸೇಟಿ ವಿನಂತಿಸಿರುವುದು ಏನಂದರೆ, ಮೊದಲು ಈ ಪ್ರದೇಶದ ತೆರಿಗೆಯನ್ನು ನೂರು ಹೊನ್ನುಗಳೆಂದು ನಿಶ್ಚಯ ಮಾಡಿ ಮುಖ್ಯಸ್ಥರು ಫರ್ಮಾನ ಮಾಡಿದ್ದರು. ನಂತರ ನಾನು ಹುಜೂರ ಹತ್ತಿರ ನನ್ನ ಪರಿಸ್ಥಿತಿಯನ್ನು ಅವರಿಗೆ ಹೇಳಿದೆ. ಆಗ ಹುಜೂರರು ಕೃಪೆ ಮಾಡಿ ನನಗ ೫೦ ಹೊನ್ನುಗಳನ್ನು ಮಾಫಿ ಮಾಡಿದರು. ಉಳಿದ ೫೦ ಹೊನ್ನುಗಳನ್ನು ನಾನು ಅಂದಿನಿಂದ ಇಂದಿನ ವರೆಗೂ ಖರ್ಚ ಮಾಡುತ್ತಿರುವೆ. ಪ್ರಸ್ತುತ, ಹಳೆಯ ಆದೇಶದ ಪ್ರಕಾರ ನನ್ನ ಮೇಲೆ ೧೦೦ ಹೊನ್ನುಗಳ ಕಂತು ಕೂಡಿಸಿದ್ದಾರೆ. ಮತ್ತು ವಸೂಲಿದಾರರು ೧೦೦ ಹೊನ್ನುಗಳನ್ನು ಕೊಡಲು ನನಗೆ ಸತಾಯಿಸುತ್ತಿದ್ದಾರೆ. ಆದರೆ ಈ ವಿಭಾಗದಲ್ಲಿ ನನಗೆ ಉಂಬಳಿ ಮತ್ತು ಕಾರ್ಯಕಲಾಪಗಳು ಇಲ್ಲ, ಮತ್ತು ಈ ಠಾಣೆಯಲ್ಲಿ ೨೪ ಊರುಗಳು ಇವೆ. ಅವರಿಂದ ಅಷ್ಟು ತೆರಿಗೆ ಸಂಗ್ರಹವಾಗುವುದಿಲ್ಲ. ಆದ್ದರಿಂದ ೫೦ ಹೊನ್ನಗಳಿಗಿಂತ ಹೆಚ್ಚು ಕಂತು ಕೊಡುವುದು ನನಗೆ ತೊಂದರೆಯಾಗುತ್ತದೆ. ಹೀಗೆ ವಿನಂತಿಸಿದ ತಮ್ಮ ಅರ್ಜಿ ಮತ್ತು ದೇಸಾಯಿ ಅವರ ವಿನಂತಿ ನಮ್ಮ ಗಮನಕ್ಕೆ ಬಂದಿದೆ. ಆದರೆ ೧೦೦ ಹೊನ್ನಗಳ ಲೆಕ್ಕವನ್ನು ಹೀಗೆ ಮಾಡಲಾಗಿತ್ತು, ಹಳೆಯ ಕಂತು ೫೦ ಹೊನ್ನು, ಹೆಚ್ಚಿಗೆ ಮಾಡಲಾದ ಹೊನ್ನು ೩೦ ಮತ್ತು ಮಾರ್ಡಿ ವಿಭಾಗದ ಏಳು ಊರುಗಳ ಪ್ರತಿಯಾಗಿ ೨೦ ಹೊನ್ನುಗಳನ್ನು ಕೂಡಿಸಿ ೧೦೦ ಹೊನ್ನುಗಳೆಂದು ಮಾಡಲಾಗಿತ್ತು. ಈಗ ಇದರಲ್ಲಿ ೩೦ ಹೊನ್ನು ಮಾಫ ಮಾಡಿ ೭೦ ಹೊನ್ನುಗಳ ಕಂತನ್ನು ಮಂಜೂರು ಮಾಡಲಾಗಿದೆ. ಪ್ರತಿ ವರ್ಷ ೭೦ ಹೊನ್ನುಗಳನ್ನು ಕೊಡುತ್ತ ಹೋಗಬೇಕು.

ಹಿ. ೯೯೧ ಶವ್ವಾಲ್ ೯. ಹುಜೂರರ ಪರವಾನಗಿಯಿಂದ ಮತ್ತು ಅಮೀರೆ ಜುಮಲಾ ಸರೇ ನೌಬತ ದಿಲಾವರಖಾನ ಇವರ ಮಾಹಿತಿಯಿಂದ

೧೨೩

ಹಿ. ೯೫೪ ಜವಲ ೨೨ ಶಾ. ೧೫೦೮ ವೈಶಾಖ ವದ್ಯ ೮
ಇ. ೧೫೮೬ ಮೇ ೧

ಎರಡನೆಯ ಇಬ್ರಾಹಿಮ ಆದಿಲಶಾಹ > ಸಂದಲಾಪೂರ ವಿಭಾಗದ ನಾಯಬ ಗೈಬತ ಝಾಬಿತಖಾನ ಮತ್ತು ಕಾರಕೂನ

ಮೇಲೆ ಹೇಳಿದ ವಿಭಾಗದ ಪಟೇಲ ಮತ್ತು ದೇಸಾಯಿ ನರಸಸೇಟಿ ಇವರಿಂದ ನವಾಬ ಸುಲೇಮಾನಿ ಇವರಿಗೆ ಅರ್ಜಿ ಕೊಟ್ಟಿದ್ದೇನೆಂದರೆ, 'ಮೇಲೆ ಹೇಳಿದ ಕಸಬಾದ ಸರಪಟೇಲಗಿ ಮತ್ತು ಮೇಲೆ ಹೇಳಿದ ವಿಭಾಗದ ದೇಸಗತಿಯು ನನ್ನ ವಂಶಪರಂಪರೆಯಿಂದ ಬಂದದ್ದಾಗಿದೆ. ಇಲ್ಲಿ ರಹವಸತಿ ಆದಂದಿನಿಂದ ನಮ್ಮ ಪೂರ್ವಜರು ಹಮರಸ್ತೆಯ ಬಲಬದಿಯ ಮತ್ತು ಎಡಬದಿಯ ಅಂಗಡಿಗಳನ್ನು ಹಾಕಿ ಬಾಜಾರನ್ನು ಪ್ರಾರಂಭಿಸಿದರು. ಆ ಪ್ರಕಾರ ಇದು ವಂಶಪರಂಪರೆಯಿಂದ ನಡೆದಿದೆ. ಪ್ರಸ್ತುತ ಈ ಊರಿನ ರಹಿವಾಸಿಗಳಾದ ಆದಸೆಟ್ಟಿ ಮಾಗಸೆಟ್ಟಿ ಮತ್ತು ತುಕಾಸೆಟ್ಟಿ ಇವರು ಅಡ್ಡಿ ಮಾಡಿ ಬಲ ಬದಿಯ ಅಂಗಡಿಗಳನ್ನು ಬಲವಂತದಿಂದ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಈ ವಿಷಯದಲ್ಲಿ ಮೊದಲು ಆದೇಶ ಆಗಿದ್ದೇನಂದರೆ, ಆ ಅಂಗಡಿಗಳನ್ನು ನನಗೆ ಕೊಡಬೇಕು. ಇಲ್ಲವಾದರೆ, ಸದರೀ ಅಂಗಡಿಗಳನ್ನು ನಡೆಸುವದಕ್ಕೆ ವ್ಯಾಪಾರಿಗಳನ್ನು ಹುಜೂರರು ಕಳಿಸಿಕೊಡಬೇಕು. ಮೇಲೆ ಹೇಳಿದ ವ್ಯಾಪಾರಸ್ಥರು ಉದ್ಧಟತನ ಮಾಡಿ ಅಂಗಡಿಗಳನ್ನೂ ಕೊಡಲಿಲ್ಲ. ಹುಜೂರರೂ ಬರಲಿಲ್ಲ. ಆಮೇಲೆ ಹುಜೂರರು ಬಂದಾಗ ಆದಸೆಟ್ಟಿಯೊಂದಿಗೆ ದಿನಗೂಲಿಗಳಿಗೂ ತಾಕೀದು ಮಾಡಿದ್ದೇನೆಂದರೆ, ಮೊದಲನೆಯ ಮಾತು ಅಂಗಡಿಕೊಟ್ಟುಬಿಡಬೇಕು ಇಲ್ಲವೆ ಅಡ್ಡಿ ಪಡಿಸುವುದಿದ್ದರೆ ಕಾಗದ ಪತ್ರಗಳನ್ನು ಕಚೇರಿಗೆ ಕಳಿಸಿ ನ್ಯಾಯವನ್ನು ಪಡೆಯಬೇಕು. ಈ ಮೊದಲು ನ್ಯಾಯ ಆಗಲಾರದೇ ಯಾರೂಅಂಗಡಿಗಳನ್ನು ತೆಗೆಯಬಾರದು ಎಂದು ಅಂಗಡಿಕಾರರಿಗೆ ದೂರು ಕೊಡಲಾಗಿತ್ತು, ಇದನ್ನು ಮೇಲೆ ಹೇಳಿದ ಸೆಟ್ಟಿಗೆ ಓದಿ ಹೇಳಿದ್ದರು. ಆದರೂ ಸೆಟ್ಟಿಗಳು ದೂರನ್ನು ನಿರ್ಲಕ್ಷಿಸಿ ಅಂಗಡಿ ತೆಗೆದರು. ಆದ್ದರಿಂದ ನ್ಯಾಯ ದೊರಕಿಸಿ ಕೊಡಬೇಕು' ಹೀಗಿದ್ದಾಗ ಈ ಆದೇಶ ಮುಟ್ಟುತ್ತಿದ್ದಂತೆ ಮೂವರೂ ವ್ಯಾಪಾರಸ್ಥರನ್ನು ಹುಜೂರರ ಹತ್ತಿರ ಕಳಿಸಬೇಕು. ನರಸಸೆಟ್ಟಿ ಮುಖ್ಯಸ್ಥನಾಗಿದ್ದಾನೆ. ಅವರಲ್ಲಿ ನಿಜವಾಗಿಯೂ ನ್ಯಾಯ ದೊರೆಯುತ್ತದೆ. ಇದರಲ್ಲಿ ಏನೂ ಸಂಶಯ ಬೇಡ. ಇದರಲ್ಲಿಯೇ ಸರಕಾರದ ಸೇವೆ ಇದೆ. ಹಿ. ೯೫೪ ಜವಲ ೨೨ ಹುಪ. ಅಮೀರ ಜುಮಲಾ ದಿಲವರಖಾನ ಇವರ ಮಾಹಿತಿಯಿಂದ

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೧೭೦

೧೨೪

ಜಖರ ೧೧ ಶಾ. ೧೫೧೧. ವೈಶಾಖ ಶುದ್ಧ ೧೨
ಇ.೧೫೮೯ ಎಪ್ರಿಲ ೧೭

ಎರಡನೆಯ ಇಬ್ರಾಹಿಮ ಆದಿಲಶಾಹ > ಸಂದಲಾಪೂರ ಮಾಮಲಾದ ನಾಯಬ ಗೈಬತ ಘೋಲಾದಖಾನ

ಅವನ ಅರ್ಜಿ ಬಂದಿದೆ. ಈ ಸಮಯದಲ್ಲಿ ನರಸು ಬಿನ್ನ ಮಂಗಶೇಟಿ ದೇಸಾಯಿ ಇವನಮೇಲೆ ಸರಕಾರಿ ನೌಕರ ಮಿಯಾ ಅಲ್ಲಾಬಕ್ಷ ಬಿನ್ನ ಜಮಾಲುದ್ದೀನ ಮುಲ್ತಾನಿ ಇವರು ೧೦೦ ಹೊನ್ನದ ಒತ್ತಾಯವನ್ನು ಹೇರಿದ್ದಾನೆ. ಈ ಸುದ್ದಿ ತಿಳಿಯುತ್ತಿದ್ದಂತೆ ಅವನು (ದೇಸಾಯಿ) ದುಃಖಿತನಾಗಿ ಊರು ಬಿಟ್ಟು ಹೊರಗೆ ಹೋಗಿದ್ದಾನೆ. ಮತ್ತು ಇದರಿಂದ ಮೇಲಿನ ಕಸಬಾದಲ್ಲಿಯ ಚಿಕ್ಕಪುಟ್ಟ ವ್ಯಾಪಾರಿಗಳು ಮತ್ತು ಇತರ ಜಾತಿಯ ಜನರು ಊರು ಬಿಟ್ಟು ಹೋಗಿದ್ದಾರೆ ಇತ್ಯಾದಿ ವಿಷಯಗಳು ಗಮನಕ್ಕೆ ಬಂದಿವೆ. ಒಂದು ವೇಳೆ ಇದು ಹೀಗೆಯೇ ಮುಂದುರಿದರೆ, ಆ [೧೦೦ ಹೊನ್ನಿನ] ಒತ್ತಾಯವನ್ನು ರದ್ದು ಮಾಡಲಾಗಿದೆ ಎಂದು ತಿಳಿಯಿರಿ. ಊರಿನ ಉಳಿದ ಜನರಿಗೆ ಇದನ್ನು ತಿಳಿಸಿ ಹೇಳಿ ಊರು ತಿರುಗಿ ತುಂಬುವಂತೆ ಮಾಡಿರಿ. ಈ ವಿಷಯದಲ್ಲಿ ಯೋಗ್ಯವಾದುದನ್ನು ಮಾಡಿರಿ. ಹುಪ. ಹಿ. ೯೯೭ ಜಖರ ೧೧. ಅಮೀರ ಜುಮ್ಲಾ ಮುರಾದಖಾನ ಇವರ ಮಾಹಿತಿಯಿಂದ.

೧೨೫

ಎರಡನೆಯ ಇಬ್ರಾಹಿಮ ಆದಿಲಶಾಹ ?

ಆ ಭಾಗದಲ್ಲಿ ಜನರು ಬಂಡೆದ್ದಿದ್ದಾರೆ, ಅದರಿಂದ ಬಹಳ ತೊಂದರೆ ಆಗುತ್ತಿದೆ. ಆದ್ದರಿಂದ ಅಲ್ಲಿಗೆ ಸಮಾಜದವರನ್ನು ಕಳಿಸಿದ್ದೇವೆ. ಅವರ ಜೊತೆಗೆ ಶಾಹದುರ್ಗ (ನಳದುರ್ಗ) ದಿಂದ... ಇದೇ ಎಚ್ಚರಿಕೆ (ಶಿಕ್ವಾ) ಕೊಡುವದಕ್ಕಾಗಿ ನರಸು ಉಮಾಜಿ ಪಂಡಿತನನ್ನೂ ಕಳಿಸಲಾಗಿದೆ ಆದೇಶದಂತೆ ನಡೆಯಬೇಕು. ಹುಪ. ಮುಸ್ತಫಾಖಾನಾ ಅವರ ಮಧ್ಯಸ್ತಿಕೆಯಿಂದ.

೧೨೬

ಎರಡನೆಯ ಇಬ್ರಾಹಿಮ ಆದಿಲಶಾಹ ?

ಕೋಟೆಯ ರಾಜನಿಷ್ಠೆಯ ಬಗ್ಗೆ ಅವನು ಅರ್ಜಿಯನ್ನು ಕಳಿಸಿದ್ದಾನೆ.. .. .. .. ಆ ರಾಜ್ಯನಿಷ್ಠೆಯೊಂದಿಗೆ ಅವನು ಉತ್ತಮ ಸೇವೆಯನ್ನೂ [ನೌಕರಿಯನ್ನೂ] ಮಾಡಬೇಕು. ಅಂದರೆ ಬಹಳಷ್ಟು ಕೃಪೆ ಆಗತ್ತದೆ. ಕೇವಲ ಪಶ್ಚಾತ್ತಾಪ ಕಳಿಸುವುದರಿಂದ ಕ್ಷಮೆ ದೊರೆತಿದೆ ಎಂದು ತಿಳಿಯಬಾರದು. ಅದರ ಉತ್ಕರ್ಷವಾಗಬೇಕು ಮತ್ತು ಆ ರಾಜ್ಯನಿಷ್ಠೆಯ ಮೇಲೆ ಮೇಲೆ ವಿಶ್ವಾಸ ಇಡಬೇಕು. ಈ ಕುರಿತು ಮನಸ್ಸು ಸ್ವಚ್ಛವಾಗಿಟ್ಟಕೊಂಡು ಬಹಳಷ್ಟು ಪ್ರಯತ್ನ ಮಾಡಬೇಕು. ಹುಪ.

೧೨೭

ಹಿ. ೧೦೩೮ ರವ್ವಲ ೬

ಶಾ. ೧೫೫೦ ಕಾರ್ತೀಕ ಶುದ್ಧ ೭
ಇ. ೧೬೨೮ ಅಕ್ಟೋಬರ ೨೪

ಮಹಮ್ಮದ ಆದಿಲಶಾಹ?

ಈ ಸಮಯದಲ್ಲಿ. ಈ ಭಾಗದಲ್ಲಿ ಬೇಡರು ಮತ್ತು ಬಂಡಕೋರರು ತಮ್ಮ ತಲೆ ಎತ್ತಿ ದಂಗೆಯನ್ನು ಮಾಡುತ್ತಿದ್ದಾರೆ. ಅದಕ್ಕೆ ಹುಜೂರ ಕಡೆಯಿಂದ ಇವರನ್ನು ನೇಮಿಸಲಾಗಿದೆ. ೨೦೦ ಉತ್ತಮ ಕುದುರೆ ಸವಾರರನ್ನು ಅವರ ಹತ್ತಿರ ಕಳಿಸಬೇಕು. ಅವರು ಬಂಡುಕೋರರನ್ನು ಹೀಗೆ ನಿರ್ಮೂಲ ಮಾಡಬೇಕಲ್ಲ, ಅವರಲ್ಲಿಯ ಒಬ್ಬರೇ ಒಬ್ಬ ಬಂಡುಖೋರರು ದೃಷ್ಟಿಗೆ ಬೀಳಬಾರದು. ಈ ವಿಷಯದಲ್ಲಿ ಇದು ಎಚ್ಚರಿಕೆ ಎಂದು ತಿಳಿಯಬೇಕು. ಹಿ. ೧೦೩೮ ರವಲ ೬ ಹುಪ. ಇದನ್ನು ಹಸನ ಬಿನ್ ಇಬ್ರಾಹಿಮ ಮಹಲದಾರ ಇವನಿಗೆ ಕಳಿಸಲಾಗಿದೆ.

೧೨೮

೧೦೩೮ ರಖರ ೧೧.

ಶಾ. ೧೫೫೦ ಮಾರ್ಗಶೀರ್ಷ ಶುದ್ಧ ೧೨
ಇ. ೧೬೨೮ ನವ್ಹೆಂಬರ ೨೮

ಮುಹಮ್ಮದ ಆದಿಲಶಾಹ > ದೇಸಾಯಿ ಮತ್ತು ಮುಕದ್ದಮ ಪರಗಣೆ ಮಹಿಂದರಿ

ಬೀರದಾಸ ಶಾಂಭಾನ ಮುತಾಲಿಕನಿಂದ – ಮೇಲೆ ಹೇಳಿದ ಪರಗಣಾದ ರೈತರ ಮೇಲೆ ಅನ್ಯಾಯವಾಗಿದ್ದರೆ, ದೇಸಾಯಿ, ರೈತರು ಮತ್ತು ಕಾರಕೂನ ಇವರು ದರಬಾರದ ಹತ್ತಿರ ಬರಬೇಕು. ಅಂದರೆ ಹುಜೂರ ರಿಂದ ನಿರ್ಣಯ ಆಗುತ್ತದೆ. ಹಿ. ೧೦೩೮ ರಖರ ೧೧ ಹುಪ. ಮುಸ್ಥಫಾಖಾನರ ಮಧ್ಯಸ್ಥಿಕೆಯಿಂದ.

೧೨೯

ಸು. ೧೦೨೯ ಶಾ. ೧೫೫೦ ಮಾರ್ಗಶೀರ್ಷ ಶುದ್ಧ ೧೪.
ಹಿ. ೧೦೩೮ ರಬಿರ ೧೩ ಇ. ೧೬೨೮ ನೆವ್ಹಂಬರ ೩೦

ಮಹಮ್ಮದ ಆದಿಲಶಾಹ > ಮಹಿಂದರಿ ಪರಗಣಾದ ದೇಸಾಯಿ

ಬೀರದಾಸ ಶಾಂಭಾ ಇವನಿಂದ – ಮೇಲೆ ಹೇಳಿದ ಪರಗಣೆಯನ್ನು ಕಿಶನಗೆ ಕೊಡಲಾಗಿದೆ. ಅದನ್ನು ಅವನ ವಶದಲ್ಲಿ ಕೊಡಬೇಕು. .ಸು ೧೦೨೯ ಹಿ.೧೦೩೮ ರಬಿರ ೧೩ ಹುಪ. ಮುಸ್ಥಫಾಖಾನರ ಮಧ್ಯಸ್ಥಿಕೆಯಿಂದ

೧೩೦

ಹಿ. ೧೦೩೯ ಸಫರ ೨೮ ಶಾ. ೧೫೫೧ ಆಶ್ವೀನ ವದ್ಯ ೩೦
ಇ.೧೬೨೯ ಅಕ್ಟೋಬರ ೬

ಮುಹಮ್ಮದ ಆದಿಲಶಾಹ?

ನಿಮಗೆ... ಈ ಬಗ್ಗೆ ದುಃಖವಾಗುತ್ತಿದೆ. ದಂಗೆಗೆ ಶಿಕ್ಷೆ .... ಮತ್ತೆ ಸಂದರ್ಭ ಬರುತ್ತಿದ್ದಂತೆ ನಮ್ಮ ಕೃಪೆ ನಿಮ್ಮ ಮೇಲೆ ನಿಶ್ಚಿತ ಎಂದು ತಿಳಿದು ಹಿಂದೆ ಆಗಿಹೋದ ಪ್ರಸಂಗಗಳನ್ನು ತುಂಬಿಕೊಳ್ಳುವದಕ್ಕಾಗಿ ಪಾದಶಾಹಿ ಸೈನ್ಯವನ್ನು ಸಂಗ್ರಹಿಸಬೇಕು. ಅದರಲ್ಲಿ ರಾಜ್ಯಹಿತೇಚ್ಛುಗಳ ಕಲ್ಯಾಣವಿದೆ. ಹಿ. ೧೦೩೯ ಸಫರ ೨೮. ಹುಪ. ಮುಸ್ತಫಾಖಾನ ಇವರ ಮಧ್ಯಸ್ಥಿಕೆಯಿಂದ.

೧೩೧

ಸು.೯೦೩೮, ಶಾ. ೧೫೬೦ ಅ. ಶ್ರಾವಣ ವದ್ಯ ೩
ಹಿ. ೧೦೪೮ ರವಲ ೧೭ ಇ. ೧೬೩೮ ಜುಲೈ ೧೯

ಮಹಮ್ಮದ ಆದಿಲಶಹಾ >ಸಂದಲಾಪೂರ ಮಾಮಲಾದ ಹವಾಲದಾರ ಮಲಿಕ ಸಂದಲ ಮತ್ತು ಕಾರಕೂನ .

ಸಧ್ಯ ಮೇಲೆ ಹೇಳಿದ ಮಾಮಲಾದಲ್ಲಿ ಟೇಪ ಬರ್ಗ ಜಕಾತಿಯ ಕೆಲಸ ಮಾಡಲು ಮೇಲಿನ ಖಾತೆಯ ಜನರನ್ನು ಕಳಿಸಲಾಗಿದೆ. ಆದರೂ ಉಪರ್ಯುಕ್ತ ರಾಜ್ಯನಿಷ್ಠ, ಉಪರ್ಯುಕ್ತ ಮಾಮಲಾದಲ್ಲಿ ಕಸಬೆ, ಖೇಡಿ, ಬಾಜಾರ ಇದರಲ್ಲಿಯ ಅಗರಿ [ಒಂದು ಹಿಂದುಳಿದ ಜಾತಿ] ಮತ್ತು ತಾಂಬೋಳಿ ಜಾತಿಯ ಜನರಿಗೆ ಪ್ರತಿ ಎತ್ತಿನ ಹಿಂದೆ ಪಾವ ಹೊನ್ನ ಎಂದು ತಾಕೀತ ಮಾಡಿ, (ಪ್ರತಿ ಗೋರಹ ಜಾತಿಯ) ಆಕಳ ಮೇಲೆ ಪಾವ ಹೊನ್ನದ ತೂಕ ಕೊಡತಾ ಹೋಗಬೇಕು. ವಸೂಲಿ ನಿಯಮಿತದಿಂದ ಆಗುವ ಹಾಗೆ ಮಾಡಬೇಕು ಮತ್ತು ಪಟ್ಟಿಯ ತನಿಖೆಯ ಪಾವತಿ ಮಾಡಬೇಕು. ಸಹಾಯಕ್ಕಾಗಿ ಈ ಖಾತೆಯ ಜನರು ಏನು ಹೇಳುತ್ತಾರೊ ಆ ಪ್ರಕಾರ ವ್ಯವಸ್ಥಾ ಮಾಡಿಕೊಳ್ಳಬೇಕು. ಅಂದರೆ ಅವನ ರಾಜ್ಯನಿಷ್ಠಾ ವ್ಯಕ್ತ ಮಾಡಲಾಗುತ್ತದೆ. ಸು. ೧೦೩೮ ಹಿ. ೧೦೪೮ ರವಲ ೧೭ ಹುಪ.

೧೩೨

ಸು.೧೦೪೦ — ಶಾ.೧೫೬೨ ಭಾದ್ರಪದ ವದ್ಯ ೧೩

ಹಿ.೧೦೫೦ ಜವಲ ೨೬ — ಇ. ೧೬೪೦ ಸೆಪ್ಟೆಂಬರ ೩

ಮಹಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮಲಿಕ ಸರವರ ಮತ್ತು ಕಾರಕೂನ

ಸಧ್ಯಾ ದರಬಾರಕ್ಕೆ ಅರ್ಜಿ ಕೊಟ್ಟದ್ದೇನೆಂದರೆ, ನಾಯಕವಾಡಿಯಿಂದ ಬರುವ ಕಾಣಿಕೆ ಸಂಬಂಧ ನವಾಬ ಖಾನಭಾಯಿ ಇವರ ವರಾತ ಬಂದಿದ್ದರಿಂದ ಅವನ ದುಡ್ಡು ವಸೂಲಿ ಮಾಡುವ ವಿಷಯದ ಬಗ್ಗೆ ನಾಯಕವಾಡಿ ಮತ್ತು ನೀವು ಹರಕತ ಮತ್ತು ಅಲಸ್ಯತನ ಮಾಡತಾ ಇದ್ದೀರಿ. ಇದೆಂಥ ಧಾರ್ಷ್ಟ್ಯ? ನಾಯಕವಾಡಿಯು ಕಾಣಿಕೆ ಕೊಡಲು ಒಪ್ಪಿದ್ದರಿಂದಲೇ ಅವನಿಗೆ ನಾಯಕತನವನ್ನು ಕೊಡಲಾಗಿದೆ. ಈಗ ಕಾಣಿಕೆಯನ್ನು ಕೊಡಲು ತಪ್ಪಿಸುತ್ತಿದ್ದರೆ ಅವನ ಕಡೆಯಿಂದ ನಾಯಕತನವನ್ನು ತೆಗೆದು ಹಾಕಲಾಗುವುದೆಂದು ನಿಶ್ಚಿತವಾಗಿ ತಿಳಿಯಿರಿ ಮತ್ತು ಯಾರು ಕಾಣಿಕೆಯನ್ನು ಕೊಡಲು ಮಾನ್ಯ ಮಾಡುತ್ತಾರೆಯೋ ಅವನಿಗೆ ನಾಯಕತನವನ್ನು ಕೊಡಲಾಗುತ್ತದೆ. ಈಗ ಈ ಫರ್ಮಾನ ಮುಟ್ಟಿದ ತಕ್ಷಣ ಮೇಲೆ ಹೇಳಿದ ಹಣದಲ್ಲಿ ಉಳಿದಿದ್ದ ಎಲ್ಲ ಹಣವನ್ನು ವಸೂಲಿ ಮಾಡಿ ನವಾಬನ ಮುತಾಲಿಕನಿಗೆ ಕೊಡಬೇಕು. ಇದರ ಬಗ್ಗೆ ಆಲಸ್ಯ ಮಾಡಿದರೆ ಪರಿಣಾಮ ಒಳ್ಳೆಯದಾಗುವದಿಲ್ಲ. ಇದಕ್ಕೆ ಯಾರಾದರೂ ಅಡೆತಡೆ ತಂದರೆ ಅವರಿಗೆ ಶಿಕ್ಷೆ ಆಗುತ್ತದೆ. ನಜರಾಣಾದ ಹಪ್ತೆಬಂದಿ ಮಾಡಿ ಸು. ೧೦೪೧ ದ ಹಪ್ತೆಯನ್ನು ಈ ಮೊದಲು ಆದೇಶ ಮಾಡಿದಂತೆ ಖರ್ಚು ಮಾಡಬೇಕು. ಸು.೧೦೪೦, ಹಿ. ೧೦೫೦ ವಜಲ ೨೬ ಹುಪ.

೧೩೩

ಸು.೧೦೪೧ ಶಾ. ೧೫೬೨ ಮಾರ್ಗಶೀರ್ಷ ವದ್ಯ ೧

ಹಿ. ೧೦೫೦ ಶಾಬಾನ ೧೫ ಇ. ೧೬೪೦ ನವ್ಹೆಂಬರ ೧೯

ಮಹಮ್ಮದ ಆದಿಲಶಾಹ > ಸಂದಲಾಪೂರ ವಿಭಾಗದ ಹವಾಲದಾರ ಮಲಿಕ ಸರವರ ಮತ್ತು ಕಾರಕೂನರಿಗೆ.

ಹುಜೂರಕಡೆಯಿಂದ ಶಾಹ ಬಾಬುಲನಿಗೆ ರಾಜ ವಸ್ತ್ರ, ಸಿಕ್ಕಾ, ಹುಮಾಯುನಪಟ್ಟಿ, ಭತ್ತೆ, ಅಧಿಕಾರ ಮತ್ತು ಇತರ ಕಾಣಿಕೆ ಕೊಟ್ಟು, ಅವರ ಹಣದ ಕಾಳಜಿ ತೆಗೆದುಕೊಳ್ಳಬೇಕು. ಉಗ್ರಾಣದ ಹಣ ವಸೂಲಿ, ಈ ಭಾಗದಲ್ಲಿಯ ಭಾಂಡಾರಕ್ಕೆ ಬರಬೇಕಾದ ನಾಯಕವಾಡಿ ಮತ್ತು ಇತರ ಗ್ರಾಮಗಳ ಮುಖ್ಯಸ್ಥರಿಂದ ಬರಬೇಕಾದ ಬಾಕಿ ಹಣ, ಸರದೇಸಾಯಿ, ದೇಸಾಯಿ, ನಾಡಗೌಡ, ದೇಸಕುಲಕರ್ಣಿ, ಸರಮುಕಾದಮ, ಪಟೇಲ, ಚೌಗುಲೆ, ಇವರಿಂದ ಬರಬೇಕಾದ ಬಾಕಿ ಹಣ, ವತನದಾರರ ಇನಾಮದ ಮತ್ತು ಅನಧಿಕೃತವಾಗಿ ತಿನುತ್ತಿದ್ದ ಇನಾಮದ ವಿಚಾರಣೆ' ಸೀಮೆಯ ಜಗಳ ಈ ಭಾಗದಲ್ಲಿಯ ಊರುಗಳ ಇನಾಮದ ಬಿಕರಿಪತ್ರಗಳು, ಈ ಕೆಲಸಕ್ಕಾಗಿ ಕಳಿಸಲಾಗಿದೆ. ಆದ್ದರಿಂದ ಅವನಿಗೆ ಸಹಾಯಮಾಡಿ, ಮೇಲೆ ಹೇಳಿದ ಬಾಬುಗಳಲ್ಲಿಯ ಹಣವನ್ನು ವಸೂಲಿ ಮಾಡಿ ದರಬಾರಕ್ಕೆ ಕಳಿಸಿ ಕೊಡಬೇಕು. ಅನಧಿಕೃತವಾಗಿ ಇನಾಮನ್ನು ತಿನ್ನುವ ವತನದಾರರನ್ನು ವಿಶೇಷವಾಗಿ ವಿಚಾರಿಸಿ ವ್ಯವಸ್ಥೆಯನ್ನು ಮಾಡುವವರಿದ್ದಾರೆ. ನೀವು ಕೂಡ ಇದರ ಸಲುವಾಗಿ ಪ್ರಯತ್ನ ಮಾಡಿದರೆ ನಿಮ್ಮ ನಿಷ್ಠೆ ವ್ಯಕ್ತವಾಗುತ್ತದೆ. ಅವನ ಜೊತೆಗೆ ಹತ್ತು ಪ್ಯಾದೆಗಳು ಮತ್ತು ಕಚೇರಿಯಿಂದ ಇಬ್ಬರನ್ನು ಕೊಡಲಾಗಿದೆ. ನಿಮ್ಮ ಸರಕಾರಿ ಅಧಿಕಾರಿಗಳ ನಿಷ್ಠೆಯಲ್ಲಿ ಯಾರಲ್ಲಿಯಾದರೂ ಅನುಮಾನ ಕಂಡು ಬಂದರೆ ನಿಮ್ಮ ಹುದ್ದೆಯಿಂದ ದೂರ ಮಾಡಿ ಶಿಕ್ಷೆಯನ್ನು ವಿಧಿಸಲಾಗುವದು, ಮತ್ತು ನಿಮ್ಮ ಹತ್ತಿರ ಏನಿದೆ ಎಲ್ಲವನ್ನೂ ಜಡಿದು ತೆಗೆದುಕೊಳ್ಳಲಾಗುವುದು. ಸು. ೧೦೪೧ ಹಿ. ೧೦೫೦ ಶಾಬಾನ ೧೫. ಹುಪ.

೧೩೪

ಸು. ೧೦೪೯,   ಶಾ.೧೫೬೨ ಮಾಘ ವದ್ಯ ೮
ಹಿ.೧೦೫೦ ಶವ್ವಾಲ ೨೨   ಇ. ೧೬೪೧ ಜನವರಿ ೨೪

ಮುಹಮ್ಮದ ಆದಿಲಶಾಹ > ಸಂದಲಾಪೂರ ವಿಭಾಗದ ಹವಾಲದಾರ ಮಲಿಕ ಸರವರ ಮತ್ತು ಕಾರಕೂನ

ಮೇಲೆ ಹೇಳಿದ ವಿಭಾಗದಲ್ಲಿ ಮನೆ ಕಟ್ಟುವ ಕಲ್ಲುಕುಟಿಗರು, ಮದ್ದಿನಖಣಿಯವರು, ಮತ್ತು ಲೋಹಾರ ಇವರನ್ನು ಇಮಾರತ ಖಾತೆಯಿಂದ ಅಧಿಕಾರಿಗಳು ಕರೆದರೂ ಬಂದಿಲ್ಲವೆಂದು ದರಬಾರಕ್ಕೆ ಗೊತ್ತಾಗಿದೆ. ಇದೇನು ಅವರ ಹುಂಬತನ? ಆದ್ದರಿಂದ ಸದ್ಯಕ್ಕೆ ಅವರನ್ನು ದೂರ ಇಟ್ಟು ಬೇರೆ ಜನರನ್ನಿಟ್ಟು ಕೆಲಸ ಕೊಡಬೇಕು. ಮೊದಲಿನ ಜನರಿಗೆ ಖಾತೆಯಿಂದ ಕೊಡುತ್ತಿದುದನ್ನೇ ಇವರಿಗೂ ಕೊಡಬೇಕು. ಇವರಿಂದ ನಡೆಸುತ್ತಿದ್ದ ಊರುಗಳ ಮೇಲೆ ಗಮನವಿಟ್ಟು ಬೇರೆ ಯಾರೂ ಅಲ್ಲಿ ಪ್ರವೇಶ ಮಾಡಲಿಕ್ಕೆ ಕೊಡಬಾರದು. ಸು. ೧೦೪೧, ಹಿ. ೧೦೫೦ ಶವ್ವಾಲ ೨೨ ಹುಪ. ವಝೀರೆ ಹುಕುಮತ ಅಮೀನುಲಮುಲ್ಕ ಇವರ ಮಾಹಿತಿಯಿಂದ

೧೩೫

ಸು, ೧೦೪೧   ಶಾ, ೧೫೬೭ ಮಾಘ ವದ್ಯ ೯
ಹಿ, ೧೦೫೦ ಶವ್ವಾಲ ೨೩   ಇ, ೧೬೪೧ ಜನವರಿ ೨೫

ಮಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮಲಿಕ ಸರವರ ಮತ್ತು ಕಾರಕೂನ

ಆದೇಶವಾದದ್ದು ಏನೆಂದರೆ, ಹರೆಯದ ಹಾಲುಕೊಡುವ ಉತ್ತಮ ಎಮ್ಮೆಗಳು, ಸರಕಾರಿ ಸಾರ್ವಜನಿಕ ಇಲಾಖೆಗೆ ಉಪಯೋಗವಾಗುತ್ತದೆ. ಮೇಲೆ ಹೇಳಿದ ಮಾಮಲಾದಲ್ಲಿ [ದೊರೆಯುವ ಉತ್ತಮ ಎಮ್ಮೆಗಳನ್ನು] ಸರಕಾರದ ಹಣದಿಂದ ಖರೀದಿ ಮಾಡಬೇಕು, ಮತ್ತು [ಅವುಗಳನ್ನು] ಸಾರ್ವಜನಿಕ ಇಲಾಖೆಗೆ ಕಳಿಸಿಕೊಡಬೇಕು. ಇದು ಅತಿ ಜರೂರಾದ ಕೆಲಸವೆಂದು ತಿಳಿಯಬೇಕು. ಸು, ೧೦೪೧ ಹಿ. ೧೦೫೦ ಶವ್ವಾಲ ೨೩ ಹುಪ.

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೧೭೮

೧೩೬

ಸು. ೧೦೪೧, ಶಾ.೧೫೬೨ ಫಾಲ್ಗುಣ ಶುದ್ಧ ೪

ಹಿ. ೧೦೫೦ ಜಿಕ್ಲಾದ ೨ ಇ. ೧೬೪೧ ಫೆಬ್ರುವರಿ ೩

ಮಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮಲಿಕ ಸರವರ ಮತ್ತು ಕಾರಕೂನ

ಮೇಲೆ ಹೇಳಿದ ವಿಭಾಗದಲ್ಲಿಯ ಬೋರಾಮಣಿ ಎಂಬ ಊರಿಗೆ ಮೇಲೆ ಹೇಳಿದ ವಿಭಾಗದ ನ್ಯಾಯಾಧೀಶರು ಶಾ ಕಾಜಿ ಹೈದರ ಬಿನ್ನ ಕಾಜಿ ಸಯೀದ ಇವರನ್ನು ಪ್ರಭಾರ ಅಧಿಕಾರಿಯನ್ನಾಗಿ ನಿಯಮಿಸಿದ್ದಾರೆ. ಈಗ ದರಬಾರಿಗೆ ತೀಳಿದಿದ್ದೇನೆಂದರೆ, ಸದರೀ ಊರಿನ ಹಿರಿಯ ರೈತ ಜೋಲಯಿಯು ತೊಂದರೆಯಿಂದಾಗಿ ಊರು ಬಿಟ್ಟು ಸದರೀ ಉಪರ್ಯುಕ್ತ ಕಸಬಾದಲ್ಲಿ ಬಂದು ಇರುತ್ತಿದ್ದಾನೆ. ಬೋರಾಮಣಿ ಊರಿನ ಪಟೇಲನು ಅವನನ್ನು ತಿರುಗಿ ಊರಿಗೆ ಬರಲು ಕರೆದಿದ್ದಾನೆ. ಆದರೆ ಕಸಬಾದ ಸೇಟ ಮತ್ತು ಮಹಾಜನ ಅವನನ್ನು ಹೋಗಲಿಕ್ಕೆ ಬಿಡುತ್ತಿಲ್ಲ. ಅವರು ಆರೀತಿ ಮಾಡಬಾರದು. ಬೋರಾಮಣಿಯ ಮುಖ್ಯಸ್ಥನು ಅವನನ್ನು ತಮ್ಮ ಊರಿಗೆ ಕರೆಸಿಕೊಳ್ಳುತ್ತಾನೆ. ಅದಕ್ಕೆ ಅಡೆ ತಡೆ ತರಬಾರದು. ಸು ೧೦೪೧, ಹಿ, ೧೦೫೦ ಜಿಕ್ಲಾದ ೨ ಹುಪ.

ಸು, ೧೦೪೨, ಶಾ. ೧೫೬೩ ಪೌಷ್ಯ ವದ್ಯ೧೪
ಹಿ. ೧೦೫೫ ಶವ್ವಾಲ ೨೭ ಇ. ೧೬೪೨ ಜನವರಿ ೧೯

ಮುಹಮ್ಮದ ಆದಿಲಶಾಹ > ಮಿಯಾ ಅಹಮ್ಮದ ಹಸನ ಸಾದತ ಹವಾಲದಾರ ಮತ್ತು ಕಾರಕೂನ ಮಾಮಲೆ ಸಂದಲಾಪೂರ

ಮೇಲೆ ಹೇಳಿದ ಮಾಮಲಾದಲ್ಲಿಯ ಕಸಬೇ, ಪೇಠಾ ಮತ್ತು ಊರುಗಳಲ್ಲಿಯವರು ಸನದುದಾರರು, ಚುಕ್ಕೀದಾರರು ಇವರಿಂದ ಪ್ರತ್ಯೇಕ ನೀರಿನ ತೊಗಲಿನ ಚೀಲಕ್ಕೆ ಹದಿನೆಂಟು ಮತ್ತು ಪ್ರತ್ಯೇಕ ಪಟ್ಟಾದಾರ ರೈತನಿಂದ ಆರು ಜಿತಲ, [ಅಳತೆ–ಪ್ರಮಾಣ] ಬೊರ್ರ‍್ಯಾವಿಕೆ, ಸೋರೊಬುಕ್ತಿ, ಮುದರಿಮಹ, ಭುಕ್ತಿ, ದರಬರಹ, ಲೋರಕಿವಿಕೆ, [ವಿವಿಧ ವ್ಯಾಪಾರಸ್ಥರು] ಇವರಿಂದ ಪ್ರತಿಯೊಂದು ಅಂಗಡಿಯಿಂದ ಒಂದು ಮಣದ ಜೋಳದ ಹಿಂದೆ ಒಂಬತ್ತು ಜಿತಲ, ಅಗಸರಿಂದ ನಿಗದಿ ಪಡಿಸಿದಂತೆ (ದೌಲತನಾಕ್ಕೆ [ಒಂದು ಇಲಾಖೆ] ಕೊಡುವ ವಾರ್ಷಿಕ ವಹಿವಾಟದ ತೆರಿಗೆಯನ್ನು ಸ್ಥಗಿತ ಮಾಡಿದ್ದು] ಸಧ್ಯ ಇರುವ ಪ್ರಮಾಣದಂತೆ ಜಾಮದಾರಖಾನೆಗೆ [ಇನ್ನೊಂದು ಇಲಾಖೆ] ಸಂದಾಯ ಮಾಡಬೇಕು ಎಂದು ಆದೇಶವಾಗಿದೆ. (ಆದರೂ ಮೇಲೆ ಹೇಳಿದ ಉದ್ಯೋಗ ಧಂದೆಗಳನ್ನು ಸ್ಥಗಿತ ಮಾಡಿ) ಮೇಲೆ ಹೇಳಿದ ಖಾತೆಯ ತೆರಿಗೆಯನ್ನು ವಸೂಲ ಮಾಡುವ ಅಧಿಕಾರಿ ಮಹಲದಾರ ಅಲೀಖಾನ ಮತ್ತು. . . .ಖಾನ (ಇವರಿಗೆ ಆ ಕೆಲಸದ ಹವಾಲದಾರಿಯನ್ನು ಕೊಡಲಾಗಿದೆ) ಅವರಿಗೆ ಕೊಡಬೇಕು ಮೇಲೆ ಹೇಳಿದ ಕಿಲ್ಲೆಗಳು [ಕೋಟೆಗಳು], ಊರುಗಳು ಮತ್ತು ಕಸಬೇ ಇವುಗಳ ಸಂಬಂಧವಾಗಿ ಶೇಖಸಿರಾಜ ಮತ್ತು ಸದರೀ ಖಾನ ವಸೂಲೀ ಮಾಡಿ ಅದರ ವರದಿಯನ್ನು ಹುಜೂರರಿಗೆ ಕಳಿಸಿಕೊಡುತ್ತಾರೆ.. ರಾತಿಬ ಖಾತಗೆ ಬೇಕಾಗುವುದನ್ನು ದೊಡ್ಡ ಊರುಗಳಿಂದ ದೊಡ್ಡ ಪ್ರಮಾಣದಲ್ಲಿ ಖರೀದಿಸಿ ರಾತಿಬ ಖಾತೆಗೆ ಕಳಸಿ ಕೊಡಬೇಕು. ಸಣ್ಣ ಊರುಗಳಲ್ಲಿ ಖರೀದಿಯ ತೊಂದರೆ ಆಗಕೂಡದು ಸು. ೧೦೪೨, ಹಿ. ೧೦೫೧ ಶವ್ವಾಲ ೨೭ ಹುಪ.

೧೩೮

ಸು.೧೦೪೩,
ಹಿ. ೧೦೪೨ ರಜಬ ೨೯

ಶಾ.೧೫೪ ಕಾರ್ತೀಕ ಶುದ್ಧ ೧
ಇ. ೧೬೪೨ ಅಕ್ಟೋಬರ ೨೪

ಮುಹಮ್ಮದ ಆದಿಲಶಾಹ > ಸಂದಲಾಪೂರದ ಮಾಮಲಾದ ಹವಾಲದಾರ ಮಿಯಾ ಅಹಮ್ಮದ್ ಹಸನ ಸಾದತ ಮತ್ತು ಕಾರಕೂನ.

ವೇತನ ಎಂದು, ವಿಭಾಗದ ತೆರಿಗೆಯಲ್ಲಿಯ ೨೦೦ ಹೊನ್ನುಗಳನ್ನು ಕೊಡಲಾಗಿದೆ. ಆದ್ದರಿಂದ ಈ ಹಣವನ್ನು ಮೇಲೆ ಹೇಳಿದ ಖಾತೆಗೆ ಕಳಿಸಬೇಕು. ಸು. ೧೦೪೩, ಹಿ. ೧೦೫೨,ರಜಬ ೨೯ ಹುಪ. ಈಗಿನ ಹವಾಲದಾರ ಸಿದ್ಧಿ ಬಿಲಾಲ ಇವರು ಫರ್ಮಾನದ ಅಮಲ ಮಾಡಬೇಕು

೧೩೯

ಸು.೧೦೪೩,
ಹಿ. ೧೦೫೩ ಮೊಹರಮ ೧

ಶಾ.೧೫೬೫ ಚೈತ್ರ ಶುದ್ಧ ೩
ಇ. ೧೬೪೩ ಮಾರ್ಚ ೧೨

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಸರ ಹವಾಲದಾರ ಮಲಿಕ ಸಂದಲ ಮತ್ತು ಹವಾಲದಾರ ಸಿದ್ಧಿ ದಿಲಾವರ ಮತ್ತು ಕಾರಕೂನ

ದರೋಬಸ್ತ ಕೋಠೀ ಖಾತೆಯ ಜನರಿಗೆ ಖಾಸಾ ಖಾತೆಯ ಸಂಬಳದಿಂದ ಕೊಡಲಾಗುತ್ತಿದ್ದು ಅದರಲ್ಲಿ ಆತಂಕ ಸೃಷ್ಟಿಸಿ ಕೋಠೀ ಖಾತೆ ನೌಕರರೊಂದಿಗೆ ಹೊಡೆದಾಟ ಅವರಿಂದ ಹಣವನ್ನು ತೆಗೆದುಕೊಂಡಿದ್ದಾರೆ ಎಂದರೆ ಅದರ ಅರ್ಥ ಏನು? ತಕ್ಷಣ ಅವರಿಂದ ತೆಗೆದುಕೊಂಡ ಎಲ್ಲ ಹಣವನ್ನು ತಿರುಗಿ ಪಡೆಯಬೇಕು. ಈ ರೀತಿ ಮುಂದೆ ಮತ್ತೆ ಆಗದಂತೆ ನೋಡಿಕೊಳ್ಳಬೇಕು. ದೂರು ಬಂದರೆ ನೀವೇ ಉತ್ತರ ಕೊಡಬೇಕಾಗುತ್ತದೆ. ಸು. ೧೦೪೩, ಹಿ. ೧೦೫೩ ಮೊಹರಮ ೧ ಹುಪ.

೧೪೦

ಸು. ೧೦೪೩, ಶಾ. ೧೫೬೫ ಆಷಾಢ ವದ್ಯ ೧೯
ಹಿ. ೧೦೫೩ ರಖರ ೨೪ ಇ. ೧೬೪೩ ಜುಲೈ ೧

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲ ಹವಾಲದಾರ ಸಿದ್ಧಿ ಬಿಲಾಲ ಮತ್ತು ಕಾರಕೂನ

ಮೇಲೆ ಹೇಳಿದ ವಿಭಾಗದಲ್ಲಿಯ ಮಂದರೂಪ ಉಪವಿಭಾಗದಲ್ಲಿಯ ಭಂಡಾರಕವಠೆ ಕಸಬೆಯು ಸಾಹಿಬಿ, ಸಾಹೇಬ ಇವರ ಹತ್ತಿರ ಆ ಊರಿನ ವಾರದ ಬಾಜಾರ (ಸಂತೆ) ಸಲುವಾಗಿ ಬರುವ ವ್ಯಾಪಾರಸ್ಥ ಮತ್ತು ಉದ್ಯಮಿ ಇವರಿಗೆ ಏಳು ವರ್ಷದ ಕರಾರು ಮಾಡಲಾಗಿದೆ. ಅದರಂತೆ ಅವರು ವ್ಯಾಪಾರಕ್ಕೆ ಬರುತ್ತಿರುವಾಗ ನೀವು ಅವರ ಮೇಲೆ ಬಲವಂತದಿಂದ ಅವರನ್ನು ಬಂಧಿಸಿ, ಹೊಡೆದು, ತೆರಿಗೆ ಮತ್ತು ಇತರ ವಿಷಯಗಳಲ್ಲಿ ತೊಂದರೆ ಕೊಟ್ಟು ಅವರಿಂದ ದುಡ್ಡು ತೆಗೆದುಕೊಂಡಿದ್ದೀರಿ. ಇದರಿಂದಾಗಿ ಅವರು ಬಾಜಾರಕ್ಕೆ ಬರುವದನ್ನು ನಿಲ್ಲಿಸಿಬಿಟ್ಟಿದ್ದಾರೆ ಮತ್ತು ಇದರಿಂದ ವ್ಯಾಪಾರದಲ್ಲಿ ಎಷ್ಟು ಹಾನಿ ಆಗುತ್ತದೆ? ಈ ವಿಚಾರ ನಿಮಗೇನಾದರೂ ಇದೆಯಾ? ಎಷ್ಟು ಧೈರ್ಯ ನಿಮಗೆ ? ಈ ಆದೇಶ ಮುಟ್ಟಿದ ತಕ್ಷಣ ಅವರಿಗೆ ತಿಳುವಳಿಕೆ, ಭರವಸೆ ಕೊಟ್ಟು ಅವರಿಂದ ತೆಗೆದುಕೊಂಡ ಎಲ್ಲ ದುಡ್ಡನ್ನು ತಿರುಗಿ ಕೊಡಿರಿ. ಯಾವುದೇ ಥರದ ಅಡ್ಡಿಯನ್ನು ತರಬೇಡಿರಿ. ಪ್ರಯತ್ನಪೂರ್ವಕವಾಗಿ ವ್ಯಾಪಾರದ ಅಭಿವೃದ್ಧಿಯನ್ನು ಮಾಡಿರಿ. ಜಮನಾ ಖೋತಾನ ಬಂಧು ಲುಮಾಜಿ ಇವರು ಹಳೆಯ ವತನದಾರರು. ಅವರು ಕೊಡಬೇಕಾದ ಹಣವನ್ನು ಕೊಡದೆ ಅವರು ಅಲ್ಲಿಯೇ ಸುತ್ತಮುತ್ತ ಹೋಗಿದ್ದಾರೆ. ಅವರಿಗೆ ಎಚ್ಚರಿಕೆ ಕೊಟ್ಟು ಇತರ ರೈತರಂತೆ ಹೊಲ ಮತ್ತು ಹುದ್ದೇದಾರರು ಯಾವ ರೀತಿ ಕೆಲಸ ಮಾಡುವಂತೆ ಮಾಡಿರಿ. ಸು. ೧೦೪೩ ಹಿ.೧೦೫೩ ಆಖರ ೨೪ ಹುಪ.

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೧೮೨

೧೪೧

ಸು. ೧೦೪೪ ಶಾ.೧೫೬೫ ಫಾಲ್ಗುಣ ಶುದ್ಧ ೧
ಹಿ. ೧೦೫೩ ಜಿಲ್ಹಾಜ್ ೨೯ ಇ.೧೬೪೪ ಜಾನೆವಾರಿ ೩೦

ಮುಹಮ್ಮದ ಆದಿಲಶಾಹ > ಶಾಹಬಾಜ ಹವಾಲದಾರ ಮತ್ತು ಕಾರಕೂನ ಮಾಮಲಾ ಸಂದಲಾಪೂರ

ಟೇಪ ಬರ್ಗ [ಮನೆಗಳು, ಮರಗಳು, ಮತ್ತು ದನಗಳ ಮೇಲಿನ ಜಕಾತಿ?] ಜಕಾತಿಯ ಮಹಸೂಲನ್ನು ವಸೂಲ ಮಾಡುವ ವಿಷಯದ ಸಲುವಾಗಿ ಹೊಸ ಫರ್ಮಾನ ಕಳಿಸಲಿಕ್ಕಾಗಿಯೂ, ಆಶ್ಚರ್ಯದಾಯಕ ಕಾರಣ ಹೇಳಿ ಇನ್ನೂ ಕೊಟ್ಟಿಲ್ಲ ಎಂದರೆ ಇದರ ಅರ್ಥ ಏನು? ಈ ಜಕಾತಿಯ ಕಾರ್ಯಗಳನ್ನು ತಂಬಾಕದಂತೆ ಬೇರೆ ಮಾಡಿ ಖಾಸಾ ಖಾತೆಯಲ್ಲಿ ಇಡಬೇಕಾಗಿತ್ತು. ಆದರೆ ಏನೋ ಕಾರಣ ಕೊಟ್ಟು ಅಧಿಕಾರಿಗೆ ಕೆಲಸ ಮಾಡದಂತೆ ಮಾಡುವುದು ಎಷ್ಟು ಧೈರ್ಯ ನಿಮ್ಮದು? ಈಗ ಫರ್ಮಾನು ಮುಟ್ಟಿದ ತಕ್ಷಣ ಟೇಪ ಮತ್ತು ಪತ್ರಕೇಣಿ ಇವರ ವಸೂಲಿಯ ವಿಷಯದಲ್ಲಿ ಏನಾದರೂ ಸೂಚನೆಗಳಿದ್ದರೆ ಅದರಂತೆ ಟೇಪ ಖಾತೆಯ ಹರಕಾರಿಗಳ ಸೂಚನೆಯಂತೆ, ವಸೂಲು ಮಾಡಿ ಅದರಲ್ಲಿ ಠಾಣಾ ಖಾತೆಯ ಸಂಬಳಕ್ಕಾಗಿ ಖರ್ಚು ಮಾಡಿ, ಅದರಲ್ಲಿ ಉಳಿದ ಹಣವನ್ನು ಟೇಪ ಖಾತೆಯ ಹರಕಾರಿಗಳೊಂದಿಗೆ ಕಳಿಸಿ ಕೊಡಬೇಕು. ಅದರಲ್ಲಿ ಒಂದು ದುಡ್ಡಿನ ಅಂತರ ಬಿಳಬಾರದು. ಇನ್ನು ಮುಂದೆ ಯಾವುದೇ ಕಾರಣ ಹೇಳಿ ತಡ ಮಾಡಬಾರದು. ಆ ಕಸಬಾದ ಮತ್ತು ಆ ಪ್ರದೇಶದಲ್ಲಿಯ ಪಟವಾರಿಗಳಿದ್ದರೆ ಅವರ ಮುಢಾರಿಗಳಿಗೆ ಎಚ್ಚರಿಕೆ ಕೊಟ್ಟು ಟೇಪ ವಸೂಲಿಯಲ್ಲಿಯ ತಡ ಮಾಡಿದುದನ್ನು ಹೇಳಿ ನಿರ್ಧರಿತ ವಸೂಲಿ ಮಾಡಿ ಹರಕಾರಿಗಳಿಗೆ ಕೊಡಬೇಕು. ಈ ವಿಷಯದಲ್ಲಿ ಮತ್ತೆ ತಕರಾರು ಬರದಂತೆ ಮಾಡಿರಿ. ಸು.೧೦೪೪ ಹಿ. ೧೦೫೩ ಜಿಕ್ಲಾದ ೨೯ ಹುಪ. ವಝೀರರ ಹುಕುಮಿನಂತೆ ಇಕಲಾಸಖಾನನ ತಿಳುವಳಿಕೆಗೆ ಒಳಪಟ್ಟು ಸೀದೀ ಮೀರಾನನು ಕಳಿಸಿದ ಫರ್ಮಾನು.

ಸು.೧೦೪೫ ಶಾ.೧೫೬ ಕಾರ್ತಿಕ ವದ್ಯ ೧
ಹಿ. ೧೦೫೪ ರಮಜಾನ ೧೪ ಇ. ೧೬೪೪ ನವ್ಹಂಬರ ೫

ಮುಹಮ್ಮದ ಆದಿಲಶಾಹ > ಅಹಮ್ಮದ್ ಹಸನ್ ಸಾದತ್ ಹವಾಲದಾರ ಮತ್ತು ಕಾರಕೂನ ಮಾಮಲೆ ಸಂದಲಾಪೂರ.

ಈಗ ಫರ್ಹಾದಖಾನನ ಗುಮಾಸ್ತನು ಹೇಳಿದ್ದೇನೆಂದರೆ, ಮೇಲೇ ಹೇಳಿದ ಖಾನನ ಅಧಿಕಾರದಲ್ಲಿರುವ ಅಕ್ಕಲಕೋಟ ಪರಗಣೆಯ ಚಿಂಚೋಳಿ ಮತ್ತು ವಳಸಂಗ ಈ ಎರಡು ಗ್ರಾಮಗಳ ಸೀಮೆಯ ಬಗ್ಗೆ ತಂಟೆ ಬಂದಿದೆ. ವಳಸಂಗದ ಜನರಿಂದ ಚಿಂಚೋಳಿ ಜನರ ಸೀಮೆಯನ್ನು ಆಕ್ರಮಣ ಮಾಡಲಾಗಿದೆ. ಅದರಿಂದ ಚಿಂಚೋಳಿ ಊರು ಕೆಟ್ಟಿದೆ. ಸೀಮೆಯು ಪೂರ್ತಿಯಾಗಿ ಪಡ ಬಿದ್ದಿದೆ. ಈ ಊರು ಬಹಳದಿನಗಳಿಂದ ಉಪರ್ಯುಕ್ತ ಖಾನನ ಅಧಿಕಾರದಲ್ಲಿದೆ. ಇಂದಿನವರೆಗೂ ಯಾವದೇ ರೀತಿಯ ಜಗಳ ಆಗಿರಲಿಲ್ಲ. ಈಗ ಈ ತಂಟೆ ಉತ್ಪನ್ನ ಆಗಿದೆ. ಅದಕ್ಕೇನಾದರೂ ವ್ಯವಸ್ಥೆಯನ್ನು ಮಾಡಬೇಕು ಅವರಲ್ಲಿ ಯಾವತ್ತೂ ಜಗಳವಾಗಿರಲಿಲ್ಲ. ಈಗ ವಳಸಂಗದವರೇ ಚಿಂಚೋಳಿ ಸೀಮೆಯಲ್ಲಿ ಆಕ್ರಮಣ ಮಾಡುವುದು ಎಂದರೆ ಅವರಿಗೆ ಎಷ್ಟು ಧೈರ್ಯ? ಈಗ ನೀವು ಈ ಫರ್ಮಾನ ಮುಟ್ಟಿದ ತಕ್ಷಣ ಠಾಣೆಯ ಜನರು ಮತ್ತು ಜವಾನರು ಸೀಮೆಗೆ ಹೋಗಿ ಪೂರ್ವಪರಂಪರೆಯ ಅನುಸಾರವಾಗಿ ಸೀಮಯನ್ನು ಗೊತ್ತು ಪಡಿಸಬೇಕು. ಮತ್ತೆ ಬೇರೆ ರೀತಿಯಲ್ಲಿ ಏನಾದರೂ ಮಾಡದಂತೆ ಅವರಿಗೆ ಎಚ್ಚರಿಕೆ ಕೊಟ್ಟರೆ ಬೇರೆಯವರಿಗೂ ಒಂದು ಪಾಠ ದೊರೆತಂತಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಎಚ್ಚರಿಕೆ ಎಂದು ತಿಳಿದು ತಕ್ಷಣ ಸೀಮೆಗೆ ಹೋಗಿರಿ. ಜಗಳ ಬಿಡಿಸಿರಿ. ಮತ್ತು ಅದರ ವರದಿಯನ್ನು ಹುಜೂರರಿಗೆ ಕಳಿಸಿರಿ. ಒಂದು ಕ್ಷಣವೂ ತಡ ಮಾಡಬಾರದು. ಸು. ೧೦೪೫, ಹಿ. ೧೦೫೪ ರಮಜಾನ ೧೪ ಹುಪ.

೧೪೩

ಸು.೧೦೪೫ ಶಾ.೧೫೫೬ ಕಾರ್ತಿಕ ವದ್ಯ ೧೪

ಹಿ. ೧೦೫೪ ರಮಜಾನ ೨೭ ಇ.೧೬೪೪ ನವ್ಹೆಂಬರ ೧೮

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮಿಯಾ ಅಹಮದ್ ಹಸನ್ ಸಾದತ್ ಮತ್ತು ಕಾರಕೂನ.

ಈ ಮಾಮಲಾದಲ್ಲಿಯ ಕಸಬಾ, ಪೇಠಾ, ಬಾಜಾರ ಮತ್ತು ಊರುಗಳಲ್ಲಿ ಮೀಟಮೇಲಾ, [ಉಪ್ಪು ?] ಸೋರನಮಕ, [ಸೋರುಪ್ಪು ?] ದಾಂಗಮೇಲಾ{?] ಈ ಜೀನಸುಗಳನ್ನು ಜಮಾದಾರಖಾನ ಇವರಿಂದ ಮೊಕಾಸಿ ದರ್ಪರಾವ ಇವರಕಡೆ ಜಮಾದಾರಖಾನಾದಲ್ಲಿಯ ಖಾಸ ಪೋಷಾಕದ ಸಲುವಾಗಿ ಕೊಡಲಾಗಿ ಮೊದಲಿನ ಫರ್ಮಾನದ ಪ್ರಕಾರ ಮುಂದುವರರಿಸಲಾಗಿದೆ. ಮೇಲಿನ ಸ್ಥಳಗಳಲ್ಲಿ ಎಲ್ಲಿ ಈ ಜೀನಸುಗಳು ಇರುತ್ತವೆಯೋ ಅಲ್ಲಿ ಅವುಗಳನ್ನು ಜಪ್ತ ಮಾಡಿ ಯಾರೂ ತೆಗೆದುಕೊಳ್ಳಲಾರದಂತೆ ಮಾಡಿ ಸ್ವತಃ ಖರೀದಿಸಿ ಆಜ್ಞೆ ಪಾಲಿಸುವಂಥ ಜನರಿಂದ ಎರಡು ವಿಭಾಗ ಮಾಡಿ ಸುರಕ್ಷಿತ ಇಡಬೇಕು ಎಂದು ಆದೇಶವಾಗಿತ್ತು. ವರಾತದಾರರಿಗೆ ಯಾವುದೇ ರೀತಿಯ ಅಡಚಣೆ ಮಾಡುವುದು ಅಥವಾ ಅವರ ವಶಕ್ಕೆ ತೆಗೆದುಕೊಳ್ಳಲಿ ಕೊಡಬಾರದು. ಸೋರುಪ್ಪು ಸಿದ್ಧವಾಗುತ್ತಿದಂತೆ ಅದರ ವರದಿ, ಉಪ್ಪಿನವರ ವ್ಯಾಪಾರಿಗಳು ಅವರು ಮೊದಲು ಹೇಗೆ ಮಾರುತ್ತಿದ್ದ, ಮತ್ತು ಈಗಿನ ಬೆಲೆ ಏನು ಇದೆಯೋ ಅದನ್ನೆಲ್ಲ ನೋಡಿ ವರದಿಯನ್ನು ಬರೆದು ದರಬಾರಕ್ಕೆ ಕಳಿಸಿಕೊಡಬೇಕು. ನಂತರ ಯಾವ ರೀತಿ ಆದೇಶವಾಗುತ್ತದೆಯೋ ಆ ರೀತಿ ನಡೆದುಕೊಳ್ಳಬೇಕು. ಜಕಾತ ಮತ್ತು ಇತರ ತೆರಿಗೆಗಳನ್ನು ಮೊಕಾಸಿಯಿಂದ ಪಟ್ಟಿ ಮಾಡಿ ಉಪ್ಪಿನ ಖಾತೆಯ ಮುತಾಲಿಕನಿಗೆ ಕೊಡಲಾಗಿದೆ. ಆತನು ವಸೂಲಿ ಮಾಡಿ ಹುಜೂರ ಅವರಿಗೆ ಕಳಿಸಿಕೊಡಬೇಕು. ಇದರಲ್ಲಿ ಕಿಂಚಿತ್ತೂ ಕೂಡಾ ತಡಾ ಮಾಡಕೂಡದು. ತಡ ಮಾಡಿದರೆ ಅದರ ಪರಿಣಾಮ ಒಳ್ಳೆಯದಾಗುವುದಿಲ್ಲ. ಸು ೧೦೪೫ ಹಿ.೧೦೫೪ ರಮಜಾನ ೨೭ ಹುಪ.

ಸು. ೧೦೪೬ | ಶಾ. ೧೫೬೭ ಕಾರ್ತಿಕ ವದ್ಯ ೨
ಹಿ. ೧೦೫೫ ರಮಜಾನ ೧೫ | ಇ. ೧೬೪೫ ಅಕ್ಟೋಬರ ೨೬

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ
ಸಯ್ಯದ ಅಶ್ರಫ ಮತ್ತು ಕಾರಕೂನ

ಈ ಮಾಮಲಾದ ಠಾಣೆಯ ಆವರಗೌಂಡಿಗಳು, ಮೋಪಕಾರರು [?] ಮತ್ತು ಉಪ್ಪಾರರು ದರಬಾರಕ್ಕೆ ವಿನಂತಿ ಮಾಡಿದ್ದೇನಂದರೆ, ಮುಖ್ಯವಾಗಿ ನಮ್ಮ ಕೈ ಕೆಳಗೆ ಇಬ್ಬರು ಸರಗೌಂಡಿಗಳು, ಎಂಟು ಗೌಂಡಿಗಳು, ಮೂರು ಮೋಪಕಾರರು, ಒಬ್ಬ ಉಪ್ಪಾರ ಸಧ್ಯದಲ್ಲಿ ಇದ್ದಾರೆ. ಅವರನ್ನು ಅವರ ಹೆಸರುಗಳ ಕ್ರಮದಿಂದ ನಿಯಮಿಸಿಕೊಳ್ಳಬೇಕು. ಅದಕ್ಕಾಗಿ ನಾವು ೨೫ ಹೊನ್ನಗಳನ್ನು ಕೊಡಲಾಗುವುದು. ವಿನಂತಿ ಪ್ರಕಾರ ಕೋಂಡಿಗೌಂಡಿ ಬಿನ್ ಸಿದ್ರಾಮಗೌಂಡಿ ಮತ್ತು ಹಲೀಗೌಂಡಿ ಬಿನ್ ನಾಗಣಗೌಂಡಿ ಹೀಗೆ ಇಬ್ಬರು ಸರಗೌಂಡಿಗಳು, ಸಿದ್ದನಗೌಂಡಿ ಬಿನ್ ರೇವನಗೌಂಡಿ, ಹನಮಂತಗೌಂಡಿ ಬಿನ್ ಅಕ್ಕನಗೌಂಡಿ, ಕೋತಿಗೌಂಡಿ ಬಿನ್ ರಾಮನಗೌಂಡಿ, ತಿಕ್ಕನಗೌಂಡಿ ಬಿನ್ ಅಮ್ಮನಗೌಂಡಿ, ವೆಂಕಟಗೌಂಡಿ ಬಿನ್ ಮಂತನಗೌಂಡಿ, ತುಲಜಗೌಂಡಿ ಬಿನ್ ಕೋತಗೌಂಡಿ, ಜಕ್ಕಣಗೌಂಡಿ ಬಿನ್ ಶಿವಗೌಂಡಿ, ಹೀಗೆ ಏಳು ಗೌಂಡಿಗಳು, ಭರಮಾಜಿಗೌಂಡಿ ಬಿನ್ನ ರೇವಣ್ಣಗೌಂಡಿ, ನಾರೋಜಿಗೌಂಡಿ ಬಿನ್ ಚೌಡೋಜಿಗೌಂಡಿ, ಸಂತಾಜೀಗೌಂಡಿ ಬಿನ್ ಸೇನಗೌಂಡಿ ಹೀಗೆ ಮೂರು ಮೋಪಕಾರರು ಮತ್ತು ಸಿದ್ದೂಜಿ ಜಾನಜಿ ಇವನು ಉಪ್ಪಾರ, ಹೀಗೆ ನಿಶ್ಚಯ ಮಾಡಲಾಗಿದೆ. ಅವರು ಚತುರರೆಂದು ತಿಳಿದು ಮಾರ್ಡಿ ಭಾಗದಲ್ಲಿಯ ಆವಳೀ, ಖೇಡೇ ಮತ್ತು ಮಾಲಿಸಗಾವ ಇವರ ವಸೂಲಿ ಮತ್ತು ಇತರೆಗಳನ್ನು ಅವರ ಸ್ವಾಧೀನ ಮಾಡಬೇಕು. ಕಾಣಿಕೆಯೆಂದು ೨೫ ಹೊನ್ನಗಳನ್ನು ಹುಜೂರ ಅವರ ಇಮಾರತಿಖಾತೆಗೆ ಅನುಭವಕ್ಕಾಗಿ ಕೊಡಲಾಗಿದೆ. ಅವರನ್ನು ಈ ಖಾತೆಯ ಸರಖೋತರು ಎಂದು ಮಾನ್ಯತೆ ಕೊಡಲಾಗಿದೆ. ಸು. ೧೦೪೬ ಹಿ.೧೦೫೫ ರಮಜಾನ ೧೫ ಹು. ಪ. ಈಗಿನ ಹವಾಲದಾರ ಹಸನ ರೂಮಿಖಾನನು ಇದರಂತೆ ಕಾರ್ಯಗತಗೊಳಿಸಬೇಕು.

೧೪೫

ಸು ೧೦೪೬, ಶಾ. ೧೫೬೭ ಮಾಘ ಶುದ್ಧ ೧

ಹಿ. ೧೦೫೫ ಜಿಲ್ಹಾಜ್ ೨೯ ಇ. ೧೬೪೬ ಜಾನೆವಾರಿ ೭

ಮುಹಮ್ಮದ ಆದಿಲಶಾಹ > ಮುದ್ದಾಮ ನೇಮಿಸಿರುವ ಹವಾಲದಾರ ಹಸನ ರೂಮಿಖಾನ ಮಹಲದಾರ ಮತ್ತು ಕಾರಕೂನ ಮಾಮಲೆ ಸಂದಲಾಪೂರ.

ಟೀಪ (ಜನ ಜಾನುವಾರ ಜಕಾತಿ) ಮತ್ತು ಪತ್ರಕೇಣಿ (ಎಲೆ ಮಾರುವವರು ?) ಇವರಿಂದ ವಸೂಲಿಯ ಬಗ್ಗೆ ಹೊಸ, ಖಚಿತ ಆದೇಶವಾಗಿದೆ. ಅವರಿಂದ ವಸೂಲಿಯಾದದ್ದರಲ್ಲಿ ಖಾಸಾಪಟ್ಟಿಗೆ (ಇಲಾಖೆಗೆ) ಕೊಡುವುದೆಂದು ತಿಳಿದು ಟೀಪ ಖಾತೆಯಲ್ಲಿಯ ಜನರ ಸೂಚನೆಯಂತೆ ವಸೂಲಿ ಮಾಡಿ ಆ ಜನರ ಮಧ್ಯಸ್ಥಿಕೆಯಿ ಮೇಲೆ ಹೇಳಿದ ಖಾತೆಗೆ ಕಳಿಸಿಕೊಡಬೇಕು. ಈಗ ಮತ್ತೆ ತಿಳಿದು ಬಂದದ್ದೇನೆಂದರೆ ಪತ್ರಕೇಣಿಯವರು ಮೊಬಲಗನ್ನು ಕೊಟ್ಟಿದ್ದರೂ ಅದರಲ್ಲಿಯ ಅರ್ಧ ಭಾಗ ಇನ್ನುವರೆಗೂ ಟೀಪ ಖಾತೆಗೆ ಹೋಗಿಲ್ಲ ಮತ್ತು ಬೇರೆ ಬೇರೆ ಕಾರಣಗಳನ್ನು ಹೇಳುತ್ತ ಅಡ್ಡಿ ಮಾಡಿದ್ದಾರೆ. ಇದು ಸರಿಯೆ ? ಈಗ ಈ ಅದೇಶ ಮುಟ್ಟಿದ ತಕ್ಷಣ ಈ ಕಸಬೆಯಲ್ಲಿಯ ಪತ್ರಕೇಣಿಯ ಮುಖ್ಯಸ್ಥ ಮತ್ತು ಮೊಕಾಶಿಗಳಿಗೂ, ಬಾಜಾರದಲ್ಲಿರುವ ಮತ್ತು ಹಳ್ಳಿಗಳಲ್ಲಿರುವ ವಿಳ್ಯದೆಲೆ ಮಾರುವವರಿಗೂ, ಮೋಕಾಶಿಗಳಿಗೂ ಎಚ್ಚರಿಕೆ ಕೊಟ್ಟು ಪತ್ರಕೇಣಿಗಳಿಂದ ವಸೂಲಾದ ಮೊತ್ತದಲ್ಲಿ ಏನೂ ಅಂತರ ಮಾಡದೆ, ಅದರಲ್ಲಿಯ ಅರ್ಧ ಭಾಗ ಟೀಪಖಾತೆಯವರ ಸಂಬಳಕ್ಕಾಗಿ ಇದೆ ಎಂದು ತಿಳಿದು, ಆ ಅರ್ಧ ಹಣವನ್ನು ಟೀಪಖಾತೆಯ ಜನರಿಗೆ ಕಳಿಸಿ ಕೊಡಬೇಕು. ವಸೂಲಿಯಾದ ಹಣವನ್ನು ಠಾಣೆಯ ಕಡೆಗೆ ಕಳಿಸಿದ್ದರೆ ಅದು ತಪ್ಪು ಎಂದು ತಿಳಿದು ತಕ್ಷಣ ಅದನ್ನು ಇತ್ತ ಕಡೆಗೆ ಕಳಿಸಿ ಕೊಡಬೇಕು. ಈ ವಿಷಯದಲ್ಲಿ ಇದು ಎಚ್ಚರಿಕೆ ಎಂದು ತಿಳಿಯಿರಿ. ಟೀಪ ಖಾತೆಯ ಜನರು ಈ ವಸೂಲಿಯ ವಿಷಯದಲ್ಲಿ ಏನನ್ನು ಸೂಚಿಸುತ್ತಾರೆಯೋ ಅದನ್ನು ಸರಿಯಾಗಿ ಲಕ್ಷದಲ್ಲಿಡಿರಿ. ಅವರಿಗೆ ಗೌರವ ಕೊಟ್ಟು ಠಾಣೆಯ ಸಿಪಾಯಿಗಳನ್ನು ಅವರ ವಸೂಲಿಯ ಸಹಾಯಕ್ಕೆ ಕಳಿಸಿ ಬೇಗ ವಸೂಲಿಯ ವ್ಯವಸ್ಥೆಯನ್ನು ಮಾಡಿರಿ. ಇನ್ನು ಮುಂದೆ ಯಾವುದೇ ತಕರಾರು ಬರದಂತೆ ನೋಡಿಕೊಳ್ಳಿರಿ. ಆದೇಶದಂತೆ ಜಾರಿಯಲ್ಲಿ ತರಬೇಕು. ಸು. ೧೦೪೬, ಹಿ,೧೦೫೫ ಜಿಲ್ಹಾಜ್ ೯ ಹು.ಪ.

ಸು.೧೦೪೬	ಶಾ.೧೫೬೮ ಚೈತ್ರ
ಹಿ ೧೦೫೬ ಸಫರ	ಇ. ೧೬೪೬ ಮಾರ್ಚ

ಮುಹಮ್ಮದ ಆದಿಲಶಾಹ – ಮುದ್ದಾಮ ನೇಮಿಸಿದ ಹವಾಲದಾರ ಹಸನ ರೂಮಿಖಾನ ಮಹಲದಾರ ಮತ್ತು ಕಾರಕೂನ ಮಾಮಲೆ ಸಂದಲಾಪೂರ

ಈ ಸಮಯದಲ್ಲಿ ಆದೇಶವಾದದ್ದೇನಂದರೆ, ಈ ಮಾಮಲಾದ ದಿವಾಣೀ, ಶಿಕ್ಕಾಪಟ್ಟಿ, ವಾಸ್ತುಪಟ್ಟಿ, ಭೇಟಪಟ್ಟಿ ಈ ಇಲಾಖೆಗಳ ಠಾಣಾ ಮತ್ತು ಮುಖ್ಯ ಶರೀಫರ ಸಂಬಳವನ್ನು ಬಿಟ್ಟು, ಉಳಿದ ನೌಕರರು ಮತ್ತು ಜನರ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಚಲಾವಣೆಯಲ್ಲಿದ್ದುದನ್ನು ಖಜಾನೆಯಲ್ಲಿ ಅಮಾನತಿನಲ್ಲಿ ಇಡಲಾಗಿದೆ. ಆ ಹಣ ಖಜಾನೆ ಜನರ ಸಂಬಳಕ್ಕಾಗಿ ಇದೆ ಎಂದು ತಿಳಿದು ಯಾವುದೇ ಕಾರಣಗಳನ್ನು ಹೇಳದೇ ಬೊಕ್ಕಸ ಖಾತೆಗೆ ಶೀಘ್ರದಲ್ಲಿ ಕಳಿಸಿ ಕೊಡಬೇಕು. ಈ ಹಳ್ಳಿಗಳಲ್ಲಿ ಕಿರುಕಳ ಖರ್ಚಿಗೆಂದು ಜಮೆಯನ್ನು ಮಾಡಬಾರದು. ಪ್ರತಿಯಾಗಿ ಒಂದು ಜಿತಲ [ದುಡ್ಡು] ಕಿರುಕಳ ಖರ್ಚಿಗೆಂದು ವಸೂಲಿ ಮಾಡಿದರೆ ಮತ್ತು ಮೋಕಾಶಿಗಳು ತಕರಾರ ಮಾಡಿದರೆ ಆ ಹಣವನ್ನು ನಿಮ್ಮಿಂದ ವಸೂಲ ಮಾಡಲಾಗುವುದು. ಮತ್ತು ಅದರ ಪರಿಣಾಮ ಒಳ್ಳೆಯದಾಗುವುದಿಲ್ಲ. ಒಂದು ದುಡ್ಡನ್ನೂ ಕೂಡ ಕಿರುಕಳ ಖರ್ಚಿ ಎಂದು ಜಮಾ ಮಾಡಕೂಡದು. ಸು, ೧೦೪೬ ಹಿ. ೧೦೫೬ ಸಫರ ಹು. ಪ.

೧೪೭

ಸು, ೧೦೪೭,
ಹಿ, ೧೦೫೬, ರಬ್ಬಿವುಲ್ ಅವ್ವಲ್ ೩೦

ಶಾ.೧೫೬೮ ಜೇಷ್ಟ ಶುದ್ಧ ೩
ಇ. ೧೬೪೬ ಮೇ ೭

ಮುಹಮ್ಮದ ಆದಿಲಶಾಹ–ಮುದ್ದಾಮ ನೇಮಿಸಿದ ಹವಾಲದಾರ ಹಸನ ರೂಮಿಖಾನ ಮಹಲದಾರ ಮತ್ತು ಕಾರಕೂನ ಮಾಮಲೆ ಸಂದಲಾಪೂರ

ಈ ಸಮಯ ಗೋಂದಜಿ ಬಿನ್ನ ನರಸೋಜಿ ಮತ್ತು ಡೋಂಗರೋಜಿಯ ಮಕ್ಕಳು ಪದಮೋಜಿ ಮತ್ತು ತಿಮ್ಮಾಜಿ, ಜಾಮದಾರಖಾನ ಖಾತೆಯಿಂದ ಚೊಂಡಿಗರ (?) ಮತ್ತು ಉಪಯುಕ್ತ ಮಾಮಲಾದಲ್ಲಿಯ ಸಂಗದರಿ ಊರಿನ ಮೊಕಾಶಿಯ ನೌಕರರು ದರಬಾರಕ್ಕೆ ಅರ್ಜಿ ಕೊಟ್ಟಿದ್ದೇನೆಂದರೆ, "ಈ ಊರು ಬಹಳ ದಿನಗಳಿಂದ ಸಂಪೂರ್ಣ ಕೆಟ್ಟುಹೋಗಿದೆ, ಹೊಲಗಳೆಲ್ಲ ಪಡಾ ಬಿದ್ದಿವೆ, ಮೊದಲಿನಿಂದಲೂ ದಿವಾಣೀ ಕಂದಾಯವು ಈ ಊರಿನಮೇಲೆ ಇಲ್ಲ. ಆದರೆ ಠಾಣೆಯವರಿಂದ ಈ ಬಾಬದ ವಿಷಯದಲ್ಲಿ ಈ ಊರಿನಲ್ಲಿ ತುಂಬ ತೊಂದರೆಯಾಗುತ್ತಿದೆ. ಈ ಊರು ನಮಗೆ ದೊರೆತಮೇಲೆ ಸಾವಿರ ರೀತಿಯಿಂದ ಪ್ರಯತ್ನ ಮಾಡಿ ರೈತರೊಂದಿಗೆ ಒಪ್ಪಂದ ಮಾಡಿಕೊಂಡು ಊರಿನ ಅಡಿಗಲ್ಲು ಹಾಕಿದೆವು ಮತ್ತು ದೀಪಗಳನ್ನು ಹಚ್ಚಲಿಕ್ಕೆ ಪ್ರಾರಂಭಿಸಿದೆವು. ಠಾಣೆಯವರ ನಡವಳಿಕೆಯಿಂದ ರೈತರು ಊರಿನಲ್ಲಿ ಇರಲಾರದೆ ಪರಕೀಯರಾಗುತ್ತಿದ್ದಾರೆ ಇದನ್ನು ವಿಚಾರಿಸಬೇಕು." ಈ ಊರಿನ ಮೇಲೆ ದಿವಾಣಿಬಾಬದ ಪಟ್ಟಿ ತೆಗೆದುಕೊಳ್ಳಬಾರದೆಂದು ಠರಾವಿಸಿದಮೇಲೆ ಆ ಬಾಬದ ವಿಷಯಕ್ಕಾಗಿ ಊರಿನವರಿಗೆ ತೊಂದರೆ ಕೊಡುವದು ಎಂದರೆ ಇದರ ಅರ್ಥ ಏನು? ಈ ಊರನ್ನು ಮೊಕಾಶಿಗೆ ಕೊಡಲಾಗಿದೆ ಮತ್ತು ಅದನ್ನು ತಿಳಿದುಕೊಂಡು ಅವರಿಗೆ ಯಾವದೇ ರೀತಿಯ ತೊಂದರೆಯನ್ನು ಕೊಡಬಾರದು. ಠಾಣೆಯ ಜನರನ್ನು ಊರಿಗೆ ಕಳಿಸಬಾರದು. ಬದಲಾಗಿ ರೈತರಿಗೆ ತೀರ್ಮ ಮತ್ತು ಭರವಸೆ ಕೊಡಬೇಕು. ಇದರ ಕುರಿತು ಎಚ್ಚರಿಕೆ ಎಂದು ತಿಳಿದುಕೊಳ್ಳಬೇಕು. ತಕರಾರ ಬರಬಾರದು. ಸು,೧೦೪೭, ಹಿ ೧೦೫೬. ರಬ್ಬಿವುಲ್ ಅವ್ವಲ್ ೩೦.ಹು.ಪ.

ಸು. ೧೦೪೭ ಶಾ. ೧೫೬೯ ವೈಶಾಖ ವದ್ಯ ೧೦
ಹಿ.೧೦೫೭ ರಬ್ಬಿವುಲ್ ಆಖರ್ ೨೩ ಇ. ೧೬೪೭ ಮೇ ೧೯

ಮುಹಮ್ಮದ ಆದಿಲಶಾಹ ಮುದ್ದಾಮ ನೇಮಿಸಿದ ಹವಾಲದಾರ ಹಸನ ರೂಮಿಖಾನ ಮಹಲದಾರ ಮತ್ತು ಕಾರಕೂನ ಮಾಮಲೆ ಸಂದಲಾಪೂರ

ಇಮಾರತಖಾತೆಯಿಂದ ನಿರುದ್ಯೋಗ ಪರಿಹಾರವೆಂದು ಊರಿನ ಗಣ್ಯರಿಂದ ಬರುವ ಹಣ ೩೪೮ ಹೊನ್ನು ಚಲಾವಣೆಯಲ್ಲಿದೆ. ಆದರೆ ಇನ್ನೂ ಆ ಹಣವನ್ನು ವಸೂಲು ಮಾಡಿ ಇಮಾರತಖಾತೆಗೆ ಕಳಿಸಿಕೊಟ್ಟಿಲ್ಲಾ ಅಂದರೆ ಏನು ಅರ್ಥ? ಈಗ ಮೇಲಿನ ಹಣವನ್ನು ಯಾವದೇ ನೆಪ ಹೇಳದೆ ಅಥವಾ ತಡಮಾಡದೆ ಎಲ್ಲವನ್ನೂ ವಸೂಲಿ ಮಾಡಿ ಮೇಲಿನ ಖಾತೆಗೆ ಕಳಿಸಿಕೊಡಬೇಕು. ಈ ರೀತಿಯ ಫರ್ಮಾನ ಕಳಿಸಿಕೊಡಲಾಗಿದೆ. ಆದ್ದರಿಂದ ಆ ಹಣವನ್ನು ವಸೂಲ ಮಾಡಿ ತಕ್ಷಣ ಮೇಲಿನ ಖಾತೆಗೆ ಕಳಿಸಿಕೊಡಬೇಕು. ಅಂದರೆ ಇಮಾರತಿಯ. . . . ? ಈ ಕೆಲಸ ಅತ್ಯಂತ ಜರೂರ ಇದೆ. ತಡ ಮಾಡಬಾರದು. ಹೇಳಿದಂತೆ ಮಾಡದಿದ್ದರೆ ಘೋರ ಪರಿಣಾಮ ಎದುರಿಸಬೇಕಾಗುತ್ತದೆ. ಇದರ ಕುರಿತು ಯಾವದೇ ರೀತಿಯ ತಕರಾರ ಬರದ ಹಾಗೆಮಾಡಬೇಕು. ಸು. ೧೦೪೭ ಹಿ. ೧೦೫೭ ರಖರ ೨೭ ಹು. ಪ..

೧೪೯

ಸು. ೧೦೪೮ ಶಾ. ೧೫೬೯ ಜೇಷ್ಠ ಶುದ್ಧ ೧೪

ಹಿ. ೧೦೫೭ ಜವಲ ೧ ಇ. ೧೬೪೭ ಮೇ ೨೬

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಮುದ್ದಾಮ ನೇಮಿಸಿರುವ ಹವಾಲದಾರ ಮತ್ತು ಹುಜೂರರ ಮಹಲದಾರ ಹಸನ ರೂಮಿಖಾನ ಮತ್ತು ಕಾರಕೂನ.

ಹಿಂದುಗಳ ವಿಷಯದಲ್ಲಿ ಗಣಾಚಾರಿಯ (ಲಿಂಗ ದೀಕ್ಷೆ) ಕಾನೂನು ಸ್ಥಗಿತವಾಗಿದೆ. ಅದನ್ನು ಶಾಶ್ವತವಾಗಿ ರದ್ದು ಮಾಡಲಾಗಿದೆ. ಮೇಲೆ ಹೇಳಿದ ಮಾಮಲಾದಲ್ಲಿಯ ಕಸಬೆ, ಖೇಡಿ, ಪೇಠಾ ಮತ್ತು ಬಾಜಾರಗಳಲ್ಲಿಯ ಸ್ಥಗಿತಗೊಂಡ (ಲಿಂಗದೀಕ್ಷೆಯ) ಹಿಂದುಗಳಿಂದ ವರ್ಷಂಪ್ರತಿ ಮೊದಲನೆಯ ದರ್ಜೆಯ ಮನೆಗಳಿಂದ ಪಾವ ಹೊನ್ನ ಚವಲಿ, ಎರಡನೆಯ ದರ್ಜೆಯ ಮನೆಗಳಿಂದ ಪಾವ ಹೊನ್ನು, ಮೂರನೆಯ ದರ್ಜೆಯ ಮನೆಗಳಿಂದ ಮೂರು ದುವ್ವಲ ಮತ್ತು ನಾಲ್ಕನೆಯ ದರ್ಜೆಯ ಮನೆಗಳಿಂದ ಚವಲದಷ್ಟು ಖಾನಾಖುಶೀ ಕರವನ್ನು ನಿಶ್ಚಯ ಮಾಡಲಾಗಿದೆ. ಅದನ್ನು ವಸೂಲು ಮಾಡಬೇಕು. ಅದು ಜಾಮದಾರಖಾನಾ ಈ ಖಾತೆಯ ಕೆಳಗೆ ಖಾಸಾದವರ ಪೋಷಾಕದಸಲುವಾಗಿ ಕೊಡಲಾಗಿದೆ. ಸಮೀಪ ಮತ್ತು ದೂರದ ನಿಂತು ಹೋದ ಎಲ್ಲ ಹಿಂದೂಗಳಿಂದ ವಸೂಲು ಮಾಡಿ ಜಾಮದಾರಖಾನಾದ ಖಾತೆಗೆ ಕಳಿಸಿಕೊಡಬೇಕು. ಸು. ೧೦೪೮ ಹಿ. ೧೦೫೭ ಜವಲ ೧ ಹು.ಪ.

೧೫೦

ಸು.೧೦೪೮ ,   ಶಾ.೧೫೭೦ ವೈಶಾಖ ಶುದ್ಧ ೧೪
ಹಿ.೧೦೫೮ ರಖರ ೧೨   ಇ. ೧೬೪೮ ಎಪ್ರಿಲ ೨೬

ಮುಹಮ್ಮದ ಆದಿಲಶಾಹ > ಹುಜೂರರ ಮಹಲದಾರ ಮತ್ತು ಮುದ್ದಾಮ ನೇಮಿಸಿರುವ ಸಂದಲಾಪೂರ ಹವಾಲದಾರ ಮತ್ತು ಕಾರಕೂನ.

ಉಪರ್ಯುಕ್ತ ಮಾಮಲಾದ ಊರು (ಅದರ ?) ಇದು ಮುಹಮ್ಮದ್ ಯಾಖೂತಖಾನವರಹತ್ತಿರ ಇದ್ದ ಊರು ಹಸನಖಾನ ಮಿಯಾ ಇವರಿಗೆ ಕೊಡಲಾಗಿದೆ. ನಡೆಸಬೇಕು ಸು, ೧೦೪೮ ಹಿ. ೧೦೫೮ ರಖರ ೧೨ ಹು.ಪ.

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೧೯೨

೧೫೧

ಸು. ೧೦೪೯ ಶಾ. ೧೫೭೦ ಕಾರ್ತಿಕ ವದ್ಯ ೩
ಹಿ. ೧೦೫೮ ಶವ್ವಾಲ ೧೭ ಇ. ೧೬೪೮ ಅಕ್ಟೋಬರ ೨೪

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹೆಸರಾಂತ
ಹವಾಲದಾರ ಹಸನರೂಮಿಖಾನ ಮಹಲದಾರ ಮತ್ತು ಕಾರಕೂನ

ಧಾನ್ಯ, ದ್ವಿದಳಧಾನ್ಯ, ತುಪ್ಪ, ಎಣ್ಣೆ, ಸಕ್ಕರೆ, ಈರುಳ್ಳಿ ಮತ್ತು ಇತರ ವಸ್ತುಗಳ ಮೇಲಿನ ಎಲ್ಲ ತರಹದ ತೆರಿಗೆಯನ್ನು ಮನ್ನಾಮಾಡಿ ಯೆಲಸೆಟ್ಟಿಯನ್ನು ಕಳಿಸಲಾಗಿದೆ. ಆತನು ತೆರಿಗೆಯ ಮನ್ನಾದಿಂದ ಅತ್ಯಂತ ಉತ್ಸಾಹಿತನಾಗಿ ಸಣ್ಣಪುಟ್ಟ ವ್ಯಾಪಾರಿಗಳನ್ನು ಸಮಾಧಾನ ಪಡಿಸಿ ಎಲ್ಲ ತರದ ಧಾನ್ಯಗಳನ್ನು ದರಬಾರಕ್ಕೆ ಕಳಿಸಿಕೊಡಬೇಕು. ಧಾನ್ಯ ಮತ್ತು ಇತರ ವಸ್ತುಗಳ ಬೆಲೆ ಕಡಿಮೆ ಮಾಡಿ ರಾಜ್ಯನಿಷ್ಠೆಯನ್ನು ತೋರಿಸಬೇಕು. ಈಗ ಈ ಆದೇಶ ಮುಟ್ಟಿದ ತಕ್ಷಣ ಮೇಲೆ ಹೇಳಿದ ಶೆಟ್ಟಿಯ ಜೊತೆಗೆ ಹತ್ತು ಸಿಪಾಯಿಗಳನ್ನು ಕೊಡಬೇಕು. ಧಾನ್ಯ ಕಳಿಸುವವರೆಗೆ ಅದರ ಖರ್ಚನ್ನು ಪ್ರತಿ ತಿಂಗಳು ಕಳಿಸಲಾಗುವದು. ಅಂದರೆ ಸೇಟಿ ಶ್ರಮವಹಿಸುತ್ತಾನೆ. ಪ್ರತಿಯೊಂದು ವಿಷಯದಲ್ಲಿ ಅವನಿಗೆ ಸಹಾಯ ಮಾಡಬೇಕು. ಆತನಿಗೆ ಜಕಾತ ಮತ್ತು ಇತರ ಬಾಬಗಳಲ್ಲಿ ಮನ್ನಾ ಆದದ್ದನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಬಡ ವ್ಯಾಪಾರಿ, ಅದೇ ಪ್ರಾರಂಭ ಮಾಡಿದವರು ಮತ್ತು ಉದ್ಯೋಗಿಗಳಿಂದ ಏನೂ ತೆಗೆದುಕೊಳ್ಳಬಾರದು. ಮತ್ತು ಯಾವದೇ ರೀತಿಯ ಅಡತಡೆ ಮಾಡಬಾರದು. ಹುದ್ದೇದಾರ, ಜಾಗಿರದಾರ ಮತ್ತು ಮೊಕಾಶಿ ಇವರು ಕೂಡ ಏನೂ ತೆಗೆದುಕೊಳ್ಳಬಾರದು ಎಂದು ಎಚ್ಚರಿಕೆ ಕೊಡಬೇಕು. ಉಪಯುಕ್ತ ವ್ಯಾಪಾರಿಗಳು ಮೇಲೆ ಹೇಳಿದ ವಸ್ತುಗಳನ್ನು ಮುಹಮ್ಮದಪುರಕ್ಕೆ ತರಬೇಕು. ಮೇಲಿನ ವಿಷಯದಲ್ಲಿ ಅವರಿಗೆ ತೊಂದರೆ ಕೊಡುವುದು, ಹೋಗಿ ಬರಲು ಅಡ್ಡಿ ಮಾಡುವುದು ಮತ್ತು ಅವರು ದೂರು ಕೊಟ್ಟರೆ ಅದರ ಬಗ್ಗೆ ವಿಚಾರಣೆ ಮಾಡಲಾಗುವುದು. ಸು. ೧೦೪೯, ಹಿ. ೧೦೫೮ ಶವ್ವಾಲ ೧ ಹು. ಪ.

ಸು. ೧೦೪೯ ಶಾ. ೧೫೭೧ ಶ್ರಾವಣ ಶುದ್ಧ ೭
ಹಿ. ೧೦೫೯ ಶಾಬಾನ ೫ ಇ. ೧೬೪೯ ಆಗಸ್ಟ ೪

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮುಹಮ್ಮದಕಾಸೀಮ ಮತ್ತು ಕಾರಕೂನ.

ಈಗ ಕಾಜಿ ಹೈದರ ಬಿನ್ ಕಾಜಿ ಸಯ್ಯೀದ ಇವರು ದರಬಾರಕ್ಕೆ ವಿನಂತಿಸಿದ್ದೇನೆಂದರೆ, “ಈ ಮಾಮಲಾದಲ್ಲಿಯ ಬೋರಾಮಣೀ, ಈ ಊರನ್ನು ಎಲ್ಲ ವಿಷಯಗಳಲ್ಲಿಯ ನ್ಯಾಯಾಧೀಶತನದ ನಿರ್ವಹಣೆಗಾಗಿ ಇನಾಮು ಕೊಡಲಾಗಿದೆ ಮತ್ತು ಅದು ಚಲಾವಣೆಯಲ್ಲಿದ್ದಾಗ, ಈ ಮಾಮಲಾದ ಠಾಣೆಯು ಸಿಪಾಯಿ ಮತ್ತು ಕುದುರೆ ದಳ ಕಳಿಸಿಕೊಡಲಾಗಿದೆ. ಅವರು ಪ್ರತಿಯೊಂದು ಬಾಬದ ವಿಷಯಕ್ಕ ಅಡಚಣಿ ಉತ್ಪನ್ನ ಮಾಡಿ ಅಥವಾ ಊರಿನ ರೈತರನ್ನು ಬಂಧಿಸಿ ಠಾಣೆಕ್ಕೆ ಕರೆದೊಯ್ದಿದ್ದಾರೆ. ಅವರಿಗೆ ತೊಂದರೆ ಕೊಟ್ಟು ಅವರಿಂದ ೧೦೦ ಹೊನ್ನು ತೆಗೆದುಕೊಂಡಿದ್ದಾರೆ ಮತ್ತು ಅವರು ಬೇರೆ ತೊಂದರೆಯನ್ನೂ ಕೊಡುತ್ತಿದ್ದಾರೆ. ವ್ಯವಸ್ಥೆ ಮಾಡಬೇಕು” ಈ ಊರು ಮೇಲೆ ಹೇಳಿದಂತೆ ಉಂಬಳಿ ಇದ್ದಾಗ ಅವರು ಹೇಳಿದಂತೆ ತೊಂದರೆ ಕೊಡುವದು ಎಂದರೆ ಎಷ್ಟು ಧಾರ್ಷ್ಟ್ಯ? ಈಗ ಈ ಫರ್ಮಾನ ಮುಟ್ಟಿದ ತಕ್ಷಣ ರೈತರಿಂದ ಏನು ತೆಗೆದುಕೊಂಡಿದ್ದಾರೆ, ಅದನ್ನು ತಕ್ಷಣ ಅವರಿಗೆ ತಿರುಗಿ ಕೊಡಬೇಕು. ಮತ್ತು ರೈತರನ್ನು ಬಿಟ್ಟು ಕೊಡಬೇಕು. ಇನ್ನು ಮುಂದೆ ಈ ರೀತಿ ದುಂಡಾವರ್ತಿ ಮಾಡಬಾರದು. ಆ ಊರಿನ ನಿರ್ದಿಷ್ಟ ಬಾಬಗಳನ್ನು ಕೂಡ ಕಾಜಿಯ ವಶಕ್ಕೆ ಕೊಡಬೇಕು. ಅವರಿಗೆ ಯಾವುದೇ ತರದ ತೊಂದರೆಯನ್ನು ಕೊಡಬಾರದು. ಠಾಣೆಯಿಂದ ಕುದುರೆ ದಳ, ಪೇದೆಗಳನ್ನು ಕಳಸಿಕೊಡಬಾರದು. ಕಾಜಿಗಿರಿ (ನ್ಯಾಯಾಧೀಶತನ) ನಡೆಸುವದಕ್ಕಾಗಿ ಕಾಜಿಯವರು ಸಯ್ಯೀದ ಮುಹಮ್ಮದರನ್ನ ಕಳಿಸಿಕೊಟ್ಟಿದ್ದಾರೆ. ಅವರಿಂದ ಕಾಜಿಯ ಕೆಲಸ ಆ ಬಾಬದ ಕಾನೂನ ಪ್ರಕಾರ ಮಾಡಿಸಿಕೊಳ್ಳಬೇಕು. ಅದರ ಪ್ರತಿಷ್ಠೆಯನ್ನು ಉಳಿಸಿಕೊಳ್ಳಬೇಕು. ಇದು ಎಚ್ಚರಿಕೆ ಎಂದು ತಿಳಿಯಬೇಕು. ಸು. ೧೦೪೯ ಹಿ. ೧೦೫೯ ಶಬಾನ ೫. ಹು. ಪ.

೧೫೩

ಸು, ೧೦೫೦, ಶಾ. ೧೫೭೧ ಪೌಷ್ಯ ವದ್ಯ ೭

ಹಿ, ೧೦೬೦, ಮೋಹರಮ೧ ಇ. ೧೬೫೦ ಜನೆವರಿ ೧೪

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮುಹಮ್ಮದ ಕಾಶೀಮ ಮತ್ತು ಕಾರಕೂನ.

ಜಾನೋ ನಾಗೋಜಿ ಇವರ ಮುಶ್ಯಾಹಿರಾ ಸಲುವಾಗಿ ಈ ಮಾಮಲಾದಲ್ಲಿಯ ಊರಿನ ವಾರಕರಿಯವರಿಗೆ ಕೊಟ್ಟ (ನಿರ್ದಿಷ್ಟ) ಹಣದಲ್ಲಿಯ ೧೫ ಹೊನ್ನನ್ನು ಈ ವರ್ಷಕ್ಕಾಗಿ ಕೊಡಲಾಗಿದೆ. ಕೊಡಬೇಕು. ಪ್ರತಿ ವರ್ಷ ಫರ್ಮಾನದ ನೆಪ ಹೇಳಬಾರದು. ಸು. ೧೦೫೦ ಹಿ. ೧೦೬೦ ಮೊಹರಮ೨೧. ಹು. ಪ. ಈಗಿನ ಹವಾಲದಾರ ಸಯ್ಯೀದ ಅಶ್ರಫ ಇವರು ಈ ಪ್ರಕಾರ ಶಾಸನ ಕೈಕೊಳ್ಳಬೇಕು.

ಸು.೧೦೫೦ ಶಾ.೧೫೭೨ ವೈಶಾಖ ವದ್ಯ ೬
ಹಿ.೧೦೬೦ಜವಲ ೧೯ ಇ. ೧೬೫೦ ಮೇ ೧೧

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಸಯ್ಯೀದ ಅಶ್ರಫ ಮತ್ತು ಕಾರಕೂನ.

ಕಾರಖಾನೆಯ ಸಬನೀಸ, ಚಿಟನೀಸ ಮತ್ತು ಕಾರಕೂನ ಹಾಗೆ ಪಾರಸನೀಸ, ಗುಪ್ತಚಾರರು, ತುಂಬುವವರು, ಖೋತ, ನಾಯಕವಾಡಿ, ಸರಗಿರೋಹ, ಲಷ್ಕರಿ, ಇತರ ಜನ, ಹುದ್ದೇದಾರ, ಕಸಬಾದ ಲೇಖಕ, ಊರುಊರುಗಳ ಗೌಡರು, ರೈತರು ಇವರ ಸಂಬಂಧ ಲೆಕ್ಕಪತ್ರದ ಶೇಷ, ಕಾಣಿಕೆ, ಒಪ್ಪಿದ, ಕಂತು, ಖಿದಮತಿ, ಖಜಾನೆಯ ಸಂಬಳ, ಖಾಸಾಜನರ ದಿನಭತ್ಯ, ಅಂಬಾರಖಾನೆಯಲ್ಲಿಯ ಧಾನ್ಯಗಳಮೇಲಿನ ಸಾಲ ಮತ್ತು ಸಾಮಗ್ರಿಸಂಗ್ರಹ, ಖರೀದಿಯ ಶೇಷ, ಚೀಲಗಳ (ಖಜಿನೆಯ) ಮೊಬದಲು,-- ಠಾಣೆಯ ಕೆಳಗಡೆಯ ಊರುಗಳು ಮತ್ತು ಪರದೇಶದ ಇತರ ಬಾಬುಗಳು, ಸಮೀಪದ ಮತ್ತು ದೂರಿನ ನೌಕರರ (ಇವರ ಹಣ), ದಿವಾಣೀ ಬಾಬದ ಹಣ, ಪೇಶಕಶಿ, ಖಿದಮತಿ, ಸಣ್ಣಪುಟ್ಟ ಖರ್ಚಿನ ಹಣ ಇತ್ಯಾದಿ ಬಾಬುಗಳು, ವರ್ಷಾನುವರ್ಷ ವಸೂಲಿ ಆಗುತ್ತಿಲ್ಲ. ಈಗ ಆದೇಶವೇನೆಂದರೆ, ಪರದೇಶದಲ್ಲಿಯ ಜನರ ಸು. ೧೦೪೯ ದವರೆಗಿನ ಮೇಲೆ ಹೇಳಿದ ಬಾಬುಗಳ ಬಾಕಿ ಇದ್ದ ಹಣದಬಗ್ಗೆ, ಆ ಜನರು ಮತ್ತು ಯಾರು ಜೀವಂತ ಇಲ್ಲವೋ ಅವರ ವಾರಸುದಾರರು, ಅವರ ಪರಿಸ್ಥಿತಿ ನೋಡಿ ಒಂದರಿಂದ ಐದು ವರ್ಷದೊಳಗಾಗಿ ಕೊಡುವ ಕರಾರ ಮಾಡಿ ವಸೂಲಿ ಮಾಡಬೇಕು. ನಗದ ದರಬಾರಕ್ಕೆ ಕಳಿಸಿಕೊಡಬೇಕು. ಧಾನ್ಯಗಳನ್ನು ಮತ್ತು ಇತರ ಜಿನ್ನಸುಗಳನ್ನು ಅಂಬಾರಖಾನಾ ಖಾತೆಗೆ ಕಳಿಸಿಕೊಡಬೇಕು. ಯಾವ ಜನರಿಂದ ವಸೂಲಿ ಮಾಡುವುದು ಅಶಕ್ಯ ಇದೆಯೋ ಅವರನ್ನ ಚೆನ್ನಾಗಿ ವಿಚಾರಿಸಿ ದರಬಾರಕ್ಕೆ ಕಳಿಸಿಕೊಡಬೇಕು. ಆತಂಕ ಮಾಡುವವರಿಗೆ ಎಚ್ಚರಿಕೆಯನ್ನು ಕೊಡಬೇಕು. ಯಾವದರೆ ಕಾರಣ ಹೇಳಿ ತಡ ಮಾಡಬಾರದು. ಕಳೆದ ವರ್ಷದ ವರೆಗಿನ ವರದಿಯನ್ನು ಹವಾಲದಾರರ ಸಿಕ್ಕೇ ಸಹಿತ ವಿವರವಾಗಿ ಬರೆದು ಕಳಿಸಬೇಕು. ಸು.೧೦೪೯ವರೆಗಿನ ವರದಿಯನ್ನು ಹಳೆಯ ಯಾದಿಸಹಿತವಾಗಿ ಲೆಕ್ಕಪತ್ರ ಖಾತೆಗೆ ಕಳಿಸಿಕೊಡಬೇಕು. ಸು. ೧೦೫೦ ಹಿ.೧೦೬೦ ಜವಲ ೧೯ ಹು. ಪ.

ಸು ೧೦೫೧,	ಶಾ. ೧೫೭೩ ವೈಶಾಖ ಶುದ್ಧ ೫
ಹಿ.೧೦೬೧ ಜವಲ ೪	ಇ. ೧೬೫೧ ಏಪ್ರಿಲ ೧೫

ಮುಹಮ್ಮದ ಆದಿಲಶಾಹ > ಹುಜೂರರ ಮಜಲಿಸಿ ಮತ್ತು ಸಂದಲಾಪೂರ ಮಾಮಲಾದ ಮೇಲೆ ಮುದ್ದಾಮ ನಿಯಮಿಸಿರುವ ಹವಾಲದಾರ ಮಿರ್ಜಾ ಯೂಸುಫ್‌ಖಾನ್ ಮತ್ತು ಕಾರಕೂನ.

ಮೌಜೆ ಕಳಭೀಡ, ಸಮತ ಮಾರಡಿ ಈ ಊರು ಎಲ್ಲ ಬಾಬುಗಳ ಮುಖ್ಯಸ್ಥ (ಮೊಕಾಸಾ) ನೆಂದು ಇಮಾರತ್ ಖಾತೆಯಿಂದ ರಂಗಣ್ಣಗೌಡಾ ಬಿನ್ನ ತಮ್ಮಣ್ಣ ಗೌಡಾ ಇವರ ಕಡೆಗೆ ಇತ್ತು. ಈಗ ದರಬಾರದಲ್ಲಿ ತಿಳದುಬಂದದ್ದೇನೆಂದರೆ, "ಅಡ್ಡಿ ಆತಂಕಗಳನ್ನು ಸೃಷ್ಟಿ ಮಾಡಿ ಆ ಊರನ್ನು ಇನ್ನೂವರೆಗೂ ಅವನಿಗೆ ಕೊಟ್ಟಿಲ್ಲ. ಆ ಊರನ್ನು ಆದೇಶದ ಮೂಲಕ ಮುಖ್ಯಸ್ಥನೆಂದು ಅವನಿಗೆ ಕೊಟ್ಟಿದ್ದರೂ ಠಾಣೆಯವರು ಅವನಿಗೆ ಕೊಟ್ಟಿಲ್ಲವೆಂದರೆ ಎಷ್ಟು ಧಾರ್ಷ್ಟ್ಯ ? ಈಗ ಈ ಫರ್ಮಾನ ಮುಟ್ಟಿದ ತಕ್ಷಣ ಆ ಊರನ್ನು ಅವನಿಗೆ ಕೊಡಬೇಕು ಮತ್ತು ಆ ಊರಿನ ಪಟೇಲನ ಗುರೆಂಢೋರ (?) ಠಾಣೆಗೆ ತೆಗೆದುಕೊಂಡು ಹೋದದ್ದು ತಿಳಿದು ಬಂದಿದೆ. ಇದರಿಂದ ಪಟೇಲ ಊರ ಬಿಟ್ಟು ಹೋಗಿದ್ದಾನೆ ಅದರಿಂದಾಗಿ ಊರು ಬಹಳೇ ಕೆಡಲಿಕ್ಕೆ ಹತ್ತಿದೆ. ಠಾಣೇದವರು ಪ್ರಯತ್ನ ಮಾಡಿ ಪಟೇಲನಿಗೆ ಆಶ್ವಾಸನ ಕೊಟ್ಟು ಅವನ ಗುರಂಢೋರ ಅವನಿಗೆ ತಿರುಗಿ ಕೊಡಬೇಕು. ಇದರ ಬಗ್ಗೆ ಇದು ಎಚ್ಚರಿಕೆ ಎಂದು ತಿಳಿಯಿರಿ. ಫರಮಾನ ಪ್ರಕಾರ ಶಾಸನ ಮಾಡಬೇಕು. ಸು. ೧೦೫೧ ಹಿ. ೧೦೬೧ ಜವಲ ೪ ಹು. ಪ.

೧೫೬

ಸು.೧೫೧, ಶಾ. ೧೫೭೩ ಭಾದ್ರಪದ ಶುದ್ಧ ೧೧

ಹಿ. ೧೦೬೧ ರಮಜಾನ ೧೦ ಇ. ೧೬೫೧ ಅಗಸ್ಟ ೧೭

ಮುಹಮ್ಮದ ಆದಿಲಶಾಹ > ಹುಜೂರರ ಮಜಲೀಸಿ ಮತ್ತು ಮುದ್ದಾಮ ನಿಯಮಿಸಿದ ಹವಾಲದಾರ ಮಿರ್ಜಾ ಯೂಸುಫ್‌ಖಾನ್ ಮತ್ತು ಕಾರಕೂನ ಮಾಮಲೇ ಸಂದಲಾಪೂರ.

ಸಧ್ಯ ನಮಗೆ ಯುದ್ಧದ ಕಬ್ಬಿಣ ಅತ್ಯಂತ ಅವಶ್ಯವಿದೆ. ಆದ್ದರಿಂದ ಈ ಆದೇಶವನ್ನು ಮಾಡಲಾಗಿದೆ. " ಯಾವ ವಿಭಾಗದಲ್ಲಿ (ಮಾಮಲಾದಲ್ಲಿ) ಒಳ್ಳೆಯ ಯುದ್ಧದ ಕಬ್ಬಿಣ ಸಿಗುತ್ತಿದ್ದರೆ ಅಥವಾ ಯಾರಾದರೂ ಅದನ್ನು ಪಾಲಿಸಿ ಇಟ್ಟಿದ್ದರೆ ಅದನ್ನ ತೆಗೆದುಕೊಂಡು ತಕ್ಷಣ ಈಕಡೆಗೆ ಕಳಿಸಬೇಕು. (ಆದರೆ) ಕಬ್ಬಿಣದ ಶೋಧಕ್ಕಾಗಿ ಬಹಳಷ್ಟು ಜನರನ್ನು ಹುಡುಕಲು ಕಳಿಸಿಕೊಡಬಾರದು. ಎಷ್ಟು ಕಬ್ಬಿಣ ದೊರೆಯುತ್ತದೆಯೋ ಅಷ್ಟನ್ನು ದರಬಾರಕ್ಕೆ ಕಳಿಸಿಕೊಡಬೇಕು. ಅಂದರೆ ಅವರ ನಿಷ್ಠೆ ಗೊತ್ತಾಗುತ್ತದೆ. ಇದರ ಕುರಿತು ಎಚ್ಚರಿಕೆ ಎಂದು ತಿಳಿದು ಆಚರಣೆ ಮಾಡಬೇಕು. ಸು.೧೦೫೧ ಹಿ. ೧೦೬೧ ರಮಜಾನ ೧೦ಹು.ಪ.

೧೫೭

ಸು ೧೦೫೧, ಶಾ. ೧೫೭೩ ಅಶ್ವಿನ ಶುದ್ಧ ೧೦

ಹಿ. ೧೦೬೧ ಶವ್ವಾಲ ೮ ಇ.೧೬೫೧ ಸೆಪ್ಟೆಂಬರ ೧೪

ಮುಹಮ್ಮದ ಆದಿಲಶಾಹ > ಮಿರ್ಝಾ ಯೂಸುಫ್‌ಖಾನ್ ಹವಾಲದಾರ ಮತ್ತು ಕಾರಕೂನ ಮಾಮಲೆ ಸಂದಲಾಪೂರ

ಆದೇಶವೇನೆಂದರೆ, ಬಾದಶಹರ ಪ್ರವಾಸಕ್ಕಾಗಿ ಎತ್ತುಗಳ ಅವಶ್ಯಕತೆ ಇದೆ. ಆದೇಶ ಮುಟ್ಟಿದ ತಕ್ಷಣ ೨೫ ಎತ್ತುಗಳನ್ನು ಇಮಾರತ ಖಾತೆಗೆ ಕಳಿಸಿಕೊಡಬೇಕು. ಈ ವಿಷಯದಲ್ಲಿ ಕ್ಷಣಮಾತ್ರ ವಿಲಂಬ ಮಾಡಬಾರದು. ಇದು ಎಚ್ಚರಿಕೆ ಎಂದು ತಿಳಕೊಳ್ಳಬೇಕು. ಸು.೧೦೫೧ ಹಿ.೧೦೬೧ ಶಬ್ಬಾಲ ೮ ಹು.ಪ.

೧೫೮

ಸು, ೧೦೫೨, ಶಾ.೧೫೭೩ ಫಾಲ್ಗುಣ ಶುದ್ಧ ೧೦
ಹಿ. ೧೦೬೨ ರವ್ವಲ ೫ ಇ. ೧೬೫೨ ಫೆಬ್ರುವರಿ ೯.

ಮುಹಮ್ಮದ ಆದಿಲಶಾಹ > ಮಜಲಿಸ್ ಮತ್ತು ಮಾಮಲೆ ಸಂದಲಾಪೂರ ಮುದ್ದಾಮ ನೇಮಿಸಿರುವ ಹವಾಲದಾರ ಮಿರ್ಝಾ ಯೂಸುಫ್‌ಖಾನ್ ಮತ್ತು ಕಾರಕೂನ.

ಆದೇಶವೇನೆಂದರೆ, "ಈಗ ಸರಕಾರಕ್ಕೆ ಬೇಕಾಗುವ ಹಾಲಿನ ಸಲುವಾಗಿ, ತರುಣ ಮತ್ತು ಕರುಹಾಕಿದ ೧೮ ಎಮ್ಮೆಗಳನ್ನು ಆದೇಶದಲ್ಲಿ ಹೇಳಿದ ಬಾಬಿನ ಹಣದಿಂದ ಖರೀದಿ ಮಾಡಬೇಕು. ಮತ್ತು ಸರಕಾರೀ ಕೊಟ್ಟಿಗೆಗೆ ಕಳಿಸಬೇಕು. ಈ ವಿಷಯದಲ್ಲಿ ತಡ ಮಾಡಬಾರದು. ತಡ ಮಾಡಿದರೆ ಪರಿಣಾಮ ಒಳ್ಳೆಯದು ಆಗುವದಿಲ್ಲಾ. ಎಚ್ಚರಿಕೆ ಅಂತ ತಿಳಿದುಕೊಳ್ಳಬೇಕು. ಸು ೧೦೫೨ ಹಿ. ೧೦೬೨ ರವ್ವಲ ೫. ಹು. ಪ.

೧೫೯

ಸು ೧೦೫೩ ಶಾ. ೧೫೭೪ ಕಾರ್ತಿಕ ವದ್ಯ ೬
ಹಿ. ೧೦೬೨ ಜಿಲ್ಹೇಜ ೧೯ ಇ. ೧೬೫೨ ನವ್ಹೆಂಬರ ೧೧

ಮುಹಮ್ಮದ ಆದಿಲಶಾಹ > ಮುಹಮ್ಮದಖಾನ್ ಹವಾಲದಾರ ಮತ್ತು ಕಾರಕೂನ ಮಾಮಲಾ ಸಂದಲಾಪೂರ.

ಆದೇಶವೇನೆಂದರೆ, ಮೇಲೆ ಹೇಳಿದ ಮಾಮಲಾದಲ್ಲಿಯ ದೀವಾಣೀ ಖಾತೆಯ ಹಣ ತೆಗೆದುಕೊಂಡು (ಖಾಸಾ ಖಾತೆಯ ದಿನ ಭತ್ತೆ ಮತ್ತು ಸಂಬಳವನ್ನು ಬಿಟ್ಟು) ಮತ್ತು ಅಲ್ಲಲ್ಲಿ ವಿಚಾರಿಸಿ ಸರಕಾರೀ ಖಾತೆಗೆ ಚಿಗರೆಗಳು, ಆಡು, ಯುದ್ಧೋಪಯೋಗಿ ಉತ್ಕೃಷ್ಟ ಕಬ್ಬಿಣ, ಹಾಲು ಕರೆಯುವ ಎಮ್ಮೆಗಳು ಎಲ್ಲಿ ದೊರೆಯುತ್ತವೆಯೋ ಅಲ್ಲಿಂದ ಖರೀದಿಸಿ ದರಬಾರಕ್ಕೆ ಕಳಿಸಿಕೊಡಬೇಕು. ಇದರ ಬಗ್ಗೆ ಎಚ್ಚರಿಕೆ ಎಂದು ತಿಳಿಯಬೇಕು. ಸು, ೧೦೫೩ ಹಿ, ೧೦೬೨ ಜಿಲ್ಹೇಜ, ೧೯ ಹು, ಪ,

ಸು. ೧೦೫೩ ಶಾ. ೧೫೭೪ ಪೌಷ್ಯ ವದ್ಯ ೧೯
ಹಿ. ೧೦೬೩ ಸಫರ ೨೪ ಇ. ೧೬೫೩ ಜನೆವರಿ ೧೫

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮುಹಮ್ಮದಖಾನ್ ಮತ್ತು ಕಾರಕೂನ

ಬಸಾಲಿ ಮಹಾಲಿನಲ್ಲಿಯ ಗ್ರಾಮಗಳು ಪೇಠಾ ಮತ್ತು ಕಸಬಾಗಳ ಸಂಬಂಧವಾಗಿ ಸ್ಪೃಶ್ಯ ಮತು ಅಸ್ಪೃಶ್ಯ ವಾರಕರಿಗಳ ಲಾಭದಲ್ಲಿ ಹನ್ನೆರಡು ತಿಂಗಳ ಹಣ ಎಂದು ವಾರಕರಿಗಳಿಗೆ ಏನು ಬರತ್ತದೆಯೋ ಅದರಲ್ಲಿಯ ಒಂದು ತಿಂಗಳಿನ ಹಣವನ್ನು ತೆಗೆದುಕೊಂಡು ಖಾಸಾ ಜನರ ಸಂಬಳಕ್ಕಾಗಿ ಕೊಡಲಾಗಿತ್ತು. ಮತ್ತು ಈ ಕುರಿತು ಮಹಾಲದವರಿಗೆ ಆದೇಶವನ್ನೂ ಕೊಡಲಾಗಿತ್ತು ಈಗ ಮಂದ್ರೂಪ ಮತ್ತು ಮಾರಡಿ ಹಾಗೂ ಕಸಬಾ ಮತ್ತು ವಜೀರವರ ಹತ್ತಿರ ಇದ್ದ ಊರುಗಳು ಮತ್ತು ಠಾಣೆ ಇವರಿಂದ ೫೦ ಹೊನ್ನಗಳನ್ನು ಇದೇ ನೌಕರರ ಸಂಬಳಕ್ಕೆ ನಿಶ್ಚಯ ಮಾಡಿದೆ. ಆದರೂ ಸಮೀಪದ ಮತ್ತು ದೂರದ ಜನರ ಕಾರಣಗಳನ್ನು ಕೇಳದೆ ಈ ವ್ಯವಸ್ಥೆ ನಡೆಯುವಂತೆ ಮಾಡಬೇಕು. ಠಾಣೆಯವರಿಂದ ಸಂಪಾದನೆ ಮಾಡಿ ಅವರು ಅದನ್ನು ಕಳಿಸಿದ ಧಾನ್ಯ ಸಂಗ್ರಹ, ದಿನಭತ್ತೆ ಖಾತೆಗೆ ಕಳಿಸಿಕೊಡಬೇಕು. ಮತ್ತು ಈ ಹಣದ ವಿಷಯದಲ್ಲಿ ಅಧಿಕ ವಸೂಲಿ ಆದರೆ ಅದನ್ನೂ ರಾತಿಬ ಖಾತೆಗೆ ಕಳಿಸಬೇಕು. ವಾರಕರಿಗಳ ಸಂಬಂಧ ಇಂಥ ಚಿಲ್ಲರೆ ವಿಷಯಗಳು, ಮನುಷ್ಯರು ಮತ್ತು ಠಾಣೆ ಇವರ ಸಂಬಳದ ವಿಷಯದಲ್ಲಿ ಏನಾದರು ಇದ್ದರೆ ಅದನ್ನ ನಾವು ಸರಿಪಡಿಸುತ್ತೇವೆ. ಸರಿ ಮಾಡಿದ್ದೇವೆ ಎಂದೇ ತಿಳಕೊಳ್ಳಬಹುದು. ಠಾಣೆಯ ಕೆಳಗಡೆಯ ವಾರಕರಿಗಳನ್ನು ಬಿಟ್ಟು ಗೈರಮಹಸೂಲ, [ಕಂದಾಯವಲ್ಲದ], ಹುಟ್ಟುಹಬ್ಬದ, ಸಾದಿಕ [?] ಮತ್ತು ಮಿಠಾಯಿ ರೂಪದಲ್ಲಿ ಕೊಟ್ಟಿದ್ದೇವೆ. [ಅದನ್ನು] ಮುಟ್ಟಿಸಬೇಕು. ಎಚ್ಚರಿಕೆ ಎಂದು ತಿಳಿದುಕೊಳ್ಳಬೇಕು. ಜಾರೀ ಮಾಡಬೇಕು. ಸು. ೧೦೫೩, ಹಿ. ೧೦೬೩ ಸಫರ ೨೪ ಹು. ಪ.

೧೬೧

ಸು. ೧೦೫೩. ಶಾ. ೧೫೭೫ ಚೈತ್ರ ಶುದ್ಧ ೬
ಹಿ. ೧೦೬೩ ಜವಲ ೪ ಇ. ೧೬೫೩ ಮಾರ್ಚ ೨೪

ಮುಹಮ್ಮದ ಆದಿಲಶಾಹ > ಮಹಮ್ಮದ ಬಿನ್ನ ಪೀರಮಹಮ್ಮದ ಜಾಬೀತಖಾನ ಹವಾಲದಾರ ಮತ್ತು ಕಾರಕೂನ ಮಾಮಲಾ ಸೋಲಾಪೂರ

ಹುಜೂರರ ಇಮಾರತಖಾತೆಯಿಂದ ೨೫ ಆಕಳುಗಳನ್ನು ಮೇಯುವ ಸಲುವಾಗಿ ಮತ್ತು ಸಂರಕ್ಷಣೆಗಾಗಿ ಮೇಲೆ ಹೇಳಿದ ಮಾಮಲಾಕ್ಕೆ ಕಳಿಸಲಾಗಿದೆ. ಯಾವ ಊರಲ್ಲಿ ನೀರು ಮತ್ತು ಮೇವು ಭರಪೂರ ಇದೆ ಆ ಸ್ಥಳದಲ್ಲಿ ಅವುಗಳನ್ನು ಇಡಬೇಕು ಮತ್ತು ಅವುಗಳನ್ನ ಒಳ್ಳೆಯ ರೀತಿಯಿಂದ ನೋಡಿಕೊಳ್ಳುವ ಹಾಗೆ ಮಾಡಬೇಕು. ಯಾವಾಗ ನಾವು ಆ ಖಾತೆಯಿಂದ ತಿರುಗಿ ಕೇಳುತ್ತೇವೆಯೋ ಆಗ ಒಡನೇ ತಿರುಗಿ ಕಳಿಸಿ ಕೊಡಬೇಕು. ಆಕಳುಗಳನ್ನು ಜೋಪಾನ ಮಾಡುವದಕ್ಕಾಗಿ ನಿರ್ಲಕ್ಷ ಮಾಡಬಾರದು.ಸು. ೧೦೫೩ ಹಿ. ೧೦೬೩ ಜವಲ ೪. ಹು.ಪ.

೧೬೨

ಸು. ೧೦೫೪ ಶಾ. ೧೫೭೫ ಮಾರ್ಗಶೀರ್ಷ ವದ್ಯ ೬
ಹಿ. ೧೦೬೪ ಮೋಹರಮ ೧೯ ಇ. ೧೬೫೩ ನವ್ಹೆಂಬರ ೩೦

ಮುಹಮ್ಮದ ಆದಿಲಶಾಹ > ಸಂದಲಾಪುರ ಮಾಮಲಾದ ಹವಾಲದಾರ ಮುಹಮ್ಮದಖಾನ್ ಮತ್ತು ಕಾರಕೂನ

ಸೋರುಪ್ಪು ಮತ್ತು ಹಿಟ್ಟುಪ್ಪು ಮತ್ತು ಹರಳುಪ್ಪು ಈ ಖಾತೆಗಳ ವಿಷಯದಲ್ಲಿ ಸಮೀಪ ಮತ್ತು ದೂರದ ಜನ ಮತ್ತು ವಜೀರರ ಮುಕಾಸಾ ಮತ್ತು ಠಾಣೆಯ ಸಂಬಳ ಇವುಗಳನ್ನು ಅವರಿಂದ ದೂರಮಾಡಿ ಖಾಸಾಖಾತೆಯ ವಸ್ತ್ರಗಾರರ ಸಂಬಳಕ್ಕಾಗಿ ನಿಯುಕ್ತ ಮಾಡಲಾಗಿದೆ. ಸು ೧೦೫೪, ಹಿ ೧೦೬೪ ಮೋಹರಮ ೧೯. ಹು. ಪ. ಸರಖೈಲೆ ಮಮಾಲಿಕ ಸಯೀದ್‌ನೂರುಲ್ಲಾಹ್ ಇವರ ಮಾಹಿತಿಯಿಂದ.

ಸು. ೧೦೫೪, ಶಾ. ೧೫೭೬ ಜೇಷ್ಠ ವದ್ಯ ೮
ಹಿ ೧೦೬೪ ರಜಬ ೨೨ ಇ. ೧೬೫೪ ಮೇ ೨೯

ಮುಹಮ್ಮದ್ ಆದಿಲಶಾಹ > ಮಾಮಲೆ ಸಂದಲಾಪೂರ ಮಾಮಲಾದ ಮೇಲೆ ಮುದ್ದಾಮ ನೇಮಿಸಿರುವ ಹವಾಲದಾರ ಮತ್ತು ಹುಜೂರರ ಮಹಲದಾರ ಹಸನ್ ರೂಮಿಖಾನ್ ಮತ್ತು ಕಾರಕೂನ

ಈ ಸಮಯದಲ್ಲಿ ದರಬಾರಕ್ಕೆ ತಿಳಿದಿದ್ದೇನಂದರೆ, ನಮ್ಮ ಹೆಸರಿನ ಶಿಕ್ಕಾ ಇರುವ ಮುಹಮ್ಮದಶಾಹಿ ಹೊನ್ನನ್ನು ಮೇಲೆ ಹೇಳಿದ ಮಾಮಲಾದಲ್ಲಿಯ ಕಸಬೇ, ಪೇಠಾ ಮತ್ತು ಊರುಗಳು ಇದರಲ್ಲಿಯ ಸರಾಫರು, ವ್ಯಾಪಾರಿಗಳು, ರೈತರು ಮತ್ತು ಇತರರು ಕೈಯಲ್ಲಿ ಹಿಡಿಯುತ್ತಿಲ್ಲ. ಮಾನ್ಯ ಮಾಡುತ್ತಿಲ್ಲ. ಮತ್ತು ಖರೀದೀ-ವಿಕ್ರೀಗಳಲ್ಲಿ ಚಲಾವಣೆ ಮಾಡುತ್ತಿಲ್ಲ. ಮೇಲೆ ಹೇಳಿದ ಹೊನ್ನಿನ ಮೇಲೆ ನಮ್ಮ ಶಿಕ್ಕಾ ಹೊಡೆದಿದ್ದರೆ ಅದನ್ನು ಚಲಾವಣೆಯಲ್ಲಿ ತರುವುದಿಲ್ಲವೆಂದರೆ ಎಷ್ಟು ಧೈರ್ಯ ನಿಮ್ಮದು? ಈಗ ಆದೇಶ ಮಾಡುವುದೇನೆಂದರೆ, ಮಹಮ್ಮದಶಾಹೀ ಹೊನ್ನು ೪೩ ಕಶಿ (ಕ್ಯಾರೆಟ್?) ಬಂಗಾರದ್ದು ಅದನ್ನು ಖೊಟ್ಟಿ ಎನ್ನುವುದಾಗಲೀ ಅಥವಾ ಅಪೂರ್ಣ ಎಂದು ಸ್ವೀಕಾರ ಮಾಡುವದಿಲ್ಲಾ ಅಥವಾ ಮಾನ್ಯ ಮಾಡುವುದಿಲ್ಲ ಎನ್ನುವವರಿಗೆ ಎಚ್ಚರಿಕೆ ಕೊಟ್ಟು ಅವರ ಮನೆ, ಭೂಮಿ ಮತ್ತು ವಸ್ತುಗಳನ್ನು ಸರಕಾರಕ್ಕೆ ಜಮಾ ಮಾಡಬೇಕು. ಇದು ಇತರರಿಗೆ ಉದಾಹರಣೆಯಾಗಬೇಕು. ಹೀಗೆ ಇದನ್ನು ಚಲಾವಣೆ ಮಾಡುವುದರಲ್ಲಿ ಆಲಸ್ಯವಾದರೆ ಅಥವಾ ಇದರ ವಿರುದ್ಧ ಯಾವುದೇ ರೀತಿಯ ಆಚರಣೆ ಮಾಡಿದರೆ ಅದರ ಪರಿಣಾಮ ಒಳ್ಳೆಯದಾಗುವದಿಲ್ಲ. ೪೩ ಕಶಿಗಿಂತ ಕಡಿಮೆ ಇದ್ದ ಹೊನ್ನು ಹುಜೂರರ ಟಂಕಸಾಲೆಗೆ ಕಳಿಸಿಕೊಡಬೇಕು. ಅಲ್ಲಿ ಅವನು ಅದನ್ನು ಕರಗಿಸಿ ಚೊಕ್ಕತನವನ್ನು ಖಚಿತಪಡಿಸಲಾಗುವುದು. ಆದೇಶದಂತೆ ನಡೆಯಬೇಕು. ಇದರ ಬಗ್ಗೆ ಆಲಸ್ಯವಾದರೆ ಬಾದಶಾಹರ ಕೋಪಕ್ಕೆ ಗುರಿಯಾಗುವರು. ಸು. ೧೦೫೪, ಹಿ ೧೦೬೪ ರಜಬ ೨೨. ಹು. ಪ. ಸರಖೈಲೆ ಮಮಾಲಿಕ ಸಯ್ಯೀದ ನೂರುಲ್ಲಾಹ್ ಇವರ ಮಾಹಿತಿಯಿಂದ.

೧೬೪

ಸು. ೧೦೫೬,	ಶಾ. ೧೫೭೮ ಆಷಾಢ ವದ್ಯ ೮
ಹಿ. ೧೦೬೬ ರಮಜಾನ ೨೨	ಇ. ೧೬೫೬ ಜುಲೈ ೫

ಮುಹಮ್ಮದ ಆದಿಲಶಾಹ > ಸಂದಲಾಪೂರ ಮಾಮಲಾದಮೇಲೆ ಮುದ್ದಾಮ ನೇಮಿಸಿರುವ ಹವಾಲದಾರ ಮತ್ತು ಹುಜೂರರ ಮಹಲದಾರ ಹಸನ್ ರೂಮಿಖಾನ್ ಮತ್ತು ಕಾರಕೂನ.

ಮಿಯಾ ತಾಜ ಮಹಮ್ಮದ ಇವರಕಡೆಯಿಂದ ಉಪಯುಕ್ತ ಮಾಮಲಾದಲ್ಲಿಯ ಬೋರಮಣಿ ಊರನ್ನು (ತಂಬಾಕು ಮತ್ತು ಎಲೆ ಜಕಾತಿಯ ಹೊರತಾಗಿ) ಶಾಹ ಮುಹಮ್ಮದ್ ಜಾಫರ್ ಇವರಿಗೆ ಕೊಡಲಾಗಿದೆ. ನಡೆಸಬೇಕು. ಸು. ೧೦೫೭, ಹಿ. ೧೦೬೬ ರಮಜಾನ ೨೨ ಹು. ಪ

೧೬೫

ಸು.೧೦೫೮,	ಶಾ. ೧೫೭೯ ಪೌಷ್ಯ ಶುದ್ಧ ೬
ಹಿ. ೧೦೬೮, ರಖರ ೪	ಇ. ೧೬೫೭ ಡಿಸೆಂಬರ ೩೦

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದ ಮೇಲೆ ಖಾಸ ನೇಮಿಸಿರುವ ಹವಾಲದಾರ ಮತ್ತು ಹುಜೂರರ ಮಹಲದಾರ ಮುಹಮ್ಮದ ರೂಮಿಖಾನ್ ಮತ್ತು ಕಾರಕೂನ.

ಮೇಲೆ ಹೇಳಿದ ಮಾಮಲಾದಲ್ಲಿಯ ಏರಾವಾರಿ (ಅಹಿರವಾಡಿ) ವಿಭಾಗದಲ್ಲಿಯ ೩೨ ಹಳ್ಳಿಗಳು, ಈ ಮೊದಲು ಮಲಿಕ ರೈಹಾನನ ಅಧೀನದಲ್ಲಿದ್ದವುಗಳನ್ನು ತಂಬಾಕು ಮತ್ತು ಎಲೆಗಳ ಮೇಲಿನ ಜಕಾತಿಯನ್ನು ಹೊರತುಪಡಿಸಿ ಪೀರಖಾನ ಇವರ ಅಧೀನಕ್ಕೆ ಕೊಡಲಾಗಿದೆ. ಅವುಗಳನ್ನು ಅವರ ವಶಕ್ಕೆ ಕೊಡಬೇಕು. ಸು ೧೯೫೮ ಹಿ. ೧೦೬೮ ರಖರ ೪ ಹು.ಪ. ರಮಜಾನ ೨೨ ಹು. ಪ

೧೬೬

ಸು. ೧೦೫೮, ಶಾ. ೧೫೮೦ ಚೈತ್ರ ಶುದ್ಧ ೧
ಹಿ. ೧೦೬೮ ಜಖರ ೨೯ ಇ. ೧೬೫೮ ಮಾರ್ಚ ೨೪

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದ ಮೇಲೆ ಮುದ್ದಾಮ ನೇಮಿಸಿದ ಮತ್ತು ಹುಜೂರರ ಮಹಲದಾರ ಮುಹಮ್ಮದ್ ರೂಮಿಖಾನ್ ಮತ್ತು ಕಾರಕೂನ.

ಮೇಲೆ ಹೇಳಿದ ಮಾಮಲಾದಲ್ಲಿಯ ಮಂದರೂಪ ಭಾಗದಲ್ಲಿಯ ಕರಂಜವಡ, ಕಡಬಚೂರ ಮತ್ತು ರನಾಳಾ ಇವುಗಳನ್ನು ಬಿಟ್ಟು ಅಬ್ದುಲ್ ಅಲಿ ಇವರ ಅಧೀನದಲ್ಲಿದ್ದ ೩೬ ಹಳ್ಳಿಗಳನ್ನು ಐತಬಾರಖಾನ ಅವರ ಅಧೀನಕ್ಕೆ ಕೊಡಲಾಗಿದೆ. ಸು. ೧೦೫೮, ಹಿ ೧೦೬೮ ಜಖರ ೨೯ ಹು.ಪ.

೧೬೭

ಸು. ೧೦೫೯ ಶಾ. ೧೫೮೧ ಭಾದ್ರಪದ ಶುದ್ಧ ೩
ಹಿ. ೧೦೬೯ ಜಿಲ್ಹೇಜ ೨ ಇ. ೧೬೫೯ ಅಗಷ್ಟ ೧೧

ಎರಡನೆಯ ಅಲಿ ಆದಿಲಶಾಹ > ಸರಸರನೌಬತ ಮತ್ತು ಸರಹವಾಲದಾರ ಶಹನವಾಜಖಾನ್ ಮತ್ತು ಹುಜೂರರ ಮಹಲದಾರ ಮತ್ತು ಮುದ್ದಾಮ ನೇಮಿಸಿರುವ ಹವಾಲದಾರ ರೂಮಿಖಾನ್ ಮತ್ತು ಕಾರಕೂನ ಮಾಮಲೆ ಸಂದಲಾಪೂರ

ಮೇಲೆ ಹೇಳಿದ ಮಾಮಲಾದಲ್ಲಿಯ ಕಾರಖಾನೆಗಳ ಸಂಬಳದ ವ್ಯವಸ್ಥೆಗಾಗಿ ಎಂದು ಕೊಟ್ಟ ಆವರ ಗ್ರಾಮವನ್ನು ನೋಡಿಕೊಳ್ಳುವುದು ಮತ್ತು ವ್ಯವಸ್ಥೆಗಾಗಿ ಮಿಂಜಲೆ ಶಾಹನಿಗೆ ತಂಬಾಕು ಮತ್ತು ಎಲೆಗಳ ಮೇಲಿನ ಜಕಾತಿಯ ವ್ಯತಿರಿಕ್ತ ಉಳಿದೆಲ್ಲ ಬಾಬುಗಳ ಸಹಿತವಾಗಿ ಕೊಡಲಾಗಿದೆ. ಅದನ್ನು ಅವನ ಮುತಾಲಿಕನ ವಶಕ್ಕೆ ಕೊಡಬೇಕು. ಮತ್ತು ವ್ಯವಸ್ಥೆಗಾಗಿ ಆ ಶಾಹನು ಬರೆದಂತೆ ಮಾಡಿರಿ. ಸು. ೧೦೫೯, ಹಿ.೧೦೬೯,ಜಿಲ್ಹೇಜ ೨. ಹು.ಪ.

೧೬೮

ಸು. ೧೦೬೦, ಶಾ. ೧೫೮೧ ಮಾಘ ಶುದ್ಧ ೧೦
ಹಿ. ೧೦೭೦ ಜವಲ ೮ ಇ. ೧೬೬೦ ಜಾನೆವಾರಿ ೧೧

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲೆಯ ಮೇಲೆ ಮುದ್ದಾಮ ನೇಮಿಸಿರುವ ಹವಾಲದಾರ ಮತ್ತು ಹುಜೂರರ ಮಹಲದಾರ ಮುಹಮ್ಮದ ರೂಮಿಖಾನ್ ಮತ್ತು ಕಾರಕೂನ

ಫರ್ಹಾದಖಾನ್ ಬಹಾದ್ದೂರರ ಅಧೀನದಲ್ಲಿದ್ದ ಮೇಲೆ ಹೇಳಿದ ಮಾಮಲಾದಲ್ಲಿಯ ವಳಸಂಗ ಈ ಊರನ್ನು ಅವನಿಂದ ತೆಗೆದು ರಿಜಿವಿಖಾನ್ ಇವನಿಗೆ ತಂಬಾಕು ಮತ್ತು ಎಲೆ ಇವುಗಳಮೇಲಿನ ಕರ ಬಿಟ್ಟು ಉಳಿದ ಎಲ್ಲ ಬಾಬುಗಳನ್ನು ಕೊಡಲಾಗಿದೆ. ಸು. ೧೦೬೦, ಹಿ.೧೦೭೦ ಜವಲ ೮. ಹು. ಪ.

೧೬೯

ಸು.೧೦೬೦, ಶಾ. ೧೫೮೨ ಜ್ಯೇಷ್ಠ ಶುದ್ಧ ೫
ಹಿ. ೧೦೭೦ ಶವ್ವಾಲ ೪ ಇ. ೧೬೬೦ ಜೂನ ೩

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಅಫಜಲಖಾನ್.

ಸೀದಿ ಜೌಹರನ ಇವರ ಹಜೀಬನು ಅರ್ಜಿ ಮಾಡಿಕೊಂಡಿದ್ದೇನೆಂದರೆ, ಮೇಲೆ ಹೇಳಿದ ಮಾಮಲಾದಲ್ಲಿಯ ಅಹಿರವಾಡಿ ಭಾಗವು ಮೇಲೆ ಹೇಳಿದ ಸೀದಿ ಜೌಹರನ ಅಧೀನದಲ್ಲಿದೆ. ಆದರೆ ಸೀದಿ ಅಲಿ ಸೀದಿ ಸುಬಹ ಇವರ ಮುತಾಲಿಕನು ತೊಂದರೆ ಕೊಡುತ್ತ ಮೇಲೆ ಹೇಳಿದ ಭಾಗವನ್ನು ಮೇಲೆ ಹೇಳಿದ ಸೀದಿಯ ವಶಕ್ಕೆ ಹೋಗದಂತೆ ಮಾಡುತ್ತಿದ್ದಾನೆ. ಹೀಗೆ ಅವನು ಯಾಕ ಮಾಡಬೇಕು ? ಈಗ ತಕ್ಷಣ ಸೀದಿಯ ಜನರಿಗೆ ತಾಕೀತು ಮಾಡಿ ಮತ್ತು ಅವರನ್ನ ಆ ಪ್ರದೇಶದಿಂದ ಹೊರಗೆ ಹಾಕಿ, ಆ ಪ್ರದೇಶವನ್ನು ಸೀದಿ ಜೌಹಾರನ ಅಧಿಕಾರಿಗಳ ವಶಕ್ಕೆ ಕೊಡಬೇಕು. ಆ ಪ್ರದೇಶದಲ್ಲಿ ಉತ್ತರೋಕ್ತ ಸೀದಿಯ ಜನರು ತೆಗೆದುಕೊಂಡಿದ್ದನ್ನು ಎಲ್ಲವನ್ನು ಪೂರ್ತಿಯಾಗಿ ಪೂರ್ವೋಕ್ತರಿಗೆ ತಿರುಗಿ ಕೊಡಬೇಕು . ಸು.೧೦೬೦, ಹಿ. ೧೦೭೦ಶವ್ವಾಲ ೪ ಹು. ಪ.

ಸು. ೧೦೬೦ ಶಾ.೧೫೮೨ ಜ್ಯೇಷ್ಠ ವದ್ಯ ೧
ಹಿ. ೧೦೭೦, ಶವ್ವಾಲ ೧೫ ಇ. ೧೬೬೦ ಜೂನ ೧೪

ಎರಡನೆಯ ಅಲಿ ಆದಿಲ ಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಅಫಜಲಖಾನ್ ಮತ್ತು ಕಾರಕೂನ.

ಮೇಲೆಹೇಳಿದ ಮಾಮಲಾದಲ್ಲಿ ಬಖೈರುಗಳನ್ನು ಬರೆಯಲು ಮುಲ್ಕೀ ಖಾತೆಯ ಬನಾಜಿ ತಿಮ್ಮಾಜಿ ಹೇಜೀಬ ಇವನನ್ನು ಹುಜೂರರ ಮೊದಲಿನ ಆದೇಶದ ಪ್ರಕಾರ ಮುದ್ದಾಮ ನೇಮಿಸಲಾಗಿದೆ. ಸಧ್ಯ ದರಬಾರಗೆ ತಿಳಿದುಬಂದದ್ದು ಏನೆಂದರೆ, ಮೇಲೆ ಹೇಳಿದ ಖಾತೆಯಲ್ಲಿಯ ಹೇಜೀಬ ಶೇಷೋ ನಾರಾಯಣನು ಆದೇಶವನ್ನು ಪಡೆದಿರುವನು. ಮತ್ತು ಅದು ಮೇಲೆ ಹೇಳಿದ ವಿಭಾಗಕ್ಕೆ ಬಂದಿದೆ. ಆದರೆ ಆದೇಶದಲ್ಲಿ ಹೀಗೆ ಇತ್ತು, " ಶೇಷೊ ನಾರಾಯಣ ಇವನನ್ನ ಕಡಿಮೆ ಮಾಡಿ, ಬನಾಜಿ ತಿಮಾಜಿ ಇವನನ್ನ ಕಾಯಮ ಮಾಡಲಾಗಿದೆ." ಅವನನ್ನೇ ನಿಜ ಎಂದು ತಿಳಿದು ಅವನಿಂದಲೇ ಮೊದಲಿನಂತೆ ಬಖರ ಮತ್ತು ವರದಿಗಳನ್ನು ಬರೆಯಿಸಿಕೊಂಡು ದರಬಾರಕ್ಕೆ ಕಳಿಸುತ್ತ ಹೋಗಬೇಕು. ಮತ್ತು ಶೇಷೋ ನಾರಾಯಣನನ್ನು ಬಂಧಿಸಿ ಕಳಿಸಿ ಕೊಡಬೇಕು. ಮಾಜಿ ಹೇಜೀಬನ ಸಂಬಳ, ಹವಾಲಗಿರಿ ಮತ್ತು ಮನೆ ಇನ್ನೂ ಬನಾಜಿ ತಿಮಾಜಿಯ ವಶಕ್ಕೆ ಕೊಟ್ಟಿಲ್ಲ ಎಂದರೆ ಇದರ ಅರ್ಥ ಏನು? ಈಗ ತಕ್ಷಣ ಅವನ ಸ್ವಾಧೀನ ಮಾಡಬೇಕು. ಸು. ೧೦೬೦ ಹಿ. ೧೦೭೦ ಶವ್ವಾಲ ೧೫. ಹು. ಪ. ಶಾಹ ಅಬ್ದುಲಹಸನ್ ಇವರ ಮಾಹಿತಿಯಿಂದ.

೧೭೧

ಸು. ೧೧೬೨, ಶಾ. ೧೫೮೨ ಕಾರ್ತಿಕ ವದ್ಯ ೬

ಹಿ. ೧೧೭೨ರಬ್ಬಿವುಲ್ ಅವ್ವಲ್ ೧೯ ಇ. ೧೬೬೧, ನವ್ಹೆಂಬರ ೨

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದಮೇಲೆ ಮುದ್ದಾಮ ನೇಮಿಸಿರುವ ಹವಾಲದಾರ ಮತ್ತು ಹುಜೂರರ ಮಹಲದಾರ ಮುಹಮ್ಮದ ರೂಮಿಖಾನ್ ಮತ್ತು ಕಾರಕೂನ.

ಭೀಮಾಜಿ ವಿಠಲ ಇವರು ವಸೂಲಿ ದಫ್ತರದ ಯಾದಿಕುರಿತು ದರಬಾರಕ್ಕೆ ವಿನಂತಿಸಿದ್ದೇನೆಂದರೆ, "ಮೇಲೆ ಹೇಳಿದ ಕಸಬಾದ ವಾಡಿಯಲ್ಲಿಯ ಜಮೀನು, ಆದೇಶದಂತೆ ನನ್ನ ಹತ್ತಿರ ಚಲಾವಣೆಯಲ್ಲಿದೆ. ಆದರೆ ಠಾಣೆಯಿಂದ ಅದರ ವಸೂಲಿ ಕುರಿತು ಕಟ್ಟಡ ಖಾತೆಯ ಬೇಡಿಕೆ ಮತ್ತು ಕೋಟೆ ಕಟ್ಟುವಿಕೆ ಹೆಸರಿನಲ್ಲಿ ಅಡ್ಡಿ ಪಡಿಸುತ್ತಿದ್ದಾರೆ. ಆದ್ದರಿಂದ ಇದರ ನಿರ್ಧಾರವಾಗಬೇಕು." ಆದ್ದರಿಂದ ಈಗ ಆದೇಶ ಮಾಡುವುದೇನೆಂದರೆ, 'ಮೇಲೆ ಹೇಳಿದ ಕಸಬಾದಲ್ಲಿಯ ವಾಡಿಯೊಳಗಿನ ಭೂಮಿ ಮತ್ತು ತೋಟಗಳನ್ನು ಈ ಮೇಲೆ ಹೇಳಿದ ಮನುಷ್ಯನಿಗೆ ಕಾಯಮ ಮಾಡಲಾಗಿದೆ. ಆದ್ದರಿಂದ ಹಾಗೆ ತಿಳಿದು ಜಮೀನ ಮತ್ತು ವಾಡಿ ಇವಗಳಮೇಲಿನ ಹಕ್ಕನ್ನು ಮೇಲೆ ಹೇಳಿದ ಮನುಷ್ಯನ ವಶಕ್ಕೆ ಕೊಡಬೇಕು. ಯಾವದೇ ಕಾರಣಗಳನ್ನು ಹೇಳಕೂಡದು. ಸು. ೧೧೬೨, ಹಿ. ೧೧೭೨ ರಬ್ಬಿವುಲ್ ಅವ್ವಲ್ ೧೯ ಹು. ಪ.

ಸು ೧೦೬೨,   ಶಾ. ೧೫೮೪ ಚೈತ್ರ ಶುದ್ಧ ೭
ಹಿ. ೧೦೭೨ ಶಾಬಾನ ೫   ಇ. ೧೬೬೨ ಮಾರ್ಚ ೧೬

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದ ಹವಾಲದಾರ ಮೀರಾನ ಅಬ್ದುಲ್ ಕಾದಿರ ಮತ್ತು ಕಾರಕೂನ.

ನರಹರಿ ದೇವರಾವ, ಯಮಾಜಿ ರಂಗೋ ಅಲ್ಲದೇ ಅವನ ಪುತ್ರ ಮತ್ತು ಅವಧೂತ ನಾಗೋಜಿ ವಸೂಲಿ ದಪ್ತರದಲ್ಲಿಯ ಯಾದಿ ಮತ್ತು ಉಮುರೇ ಮುಲ್ಕಿ ಖಾತೆಯಲ್ಲಿಯ ಹೆಜೀಬ ನಾಗೋಜಿ ಗಿರಮಾಜಿ ಇವರ ಹತ್ತಿರ ಮೇಲೆ ಹೇಳಿದ ಮಾಮಲಾದಲ್ಲಿಯ ಮಧುರೆ ಊರಿನ ಎರಡು ಚಾವರ ಜಮೀನ ಕಾಣಿಕೆಯ ರೂಪದಲ್ಲಿ ಉಪಭೋಗದಲ್ಲಿ ಇದೆ. ಎರಡು ಚಾವರ ಅವರ ವಶಕ್ಕೆ ಕೊಟ್ಟಿಲ್ಲವೆಂದು ಈಗ ತಿಳಿದು ಬಂದಿದೆ, ಇದರ ಅರ್ಥ ಏನು? ಈಗ ಆ ಎರಡು ಚಾವರ ಮೊದಲಿನ ಫರ್ಮಾನ ಪ್ರಕಾರ ಅವರ ವಶಕ್ಕೆ ಕೊಡಬೇಕು. ಈ ವಿಷಯಕ್ಕೆ ಯಾರು ಅಡ್ಡಿ ಮಾಡುತ್ತಾರೋ ಅವರನ್ನು ಹುಜೂರ ಹತ್ತಿರ ಕಳಿಸಿಕೊಡಬೇಕು. ಮತ್ತೆ ಫಿರ್ಯಾದಿ ಬರಕೂಡದು. ಸು. ೧೦೬೨ ಹಿ. ೧೦೭೨ ಶಾಬಾನ ೫.ಹು. ಪ.

೧೭೩

ಸು. ೧೦೬೨, ಶಾ. ೧೫೮೮ ಭಾದ್ರಪದ ಶುದ್ಧ ೮

ಹಿ ೧೦೭೩ ಮೊಹರಮ ೭ ಇ. ೧೬೬೨ ಅಗಸ್ಟ ೧೨

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದ ಸರಹವಾಲದಾರ ಮತ್ತು ಸರಸರನೌಬತ ಅಝೀಝುಖಾನ, ಹವಾಲದಾರ ಮೀರಾನ ಅಬ್ದುಲ್ ಕಾದಿರ ಮತ್ತು ಕಾರಕೂನ.

ಅಹಿರವಾಡಿ ಸಮತೆ ಪೈಕಿ ತೋಗರಹಳ್ಳಿ, ಸಣ್ಣ ಹಳ್ಳಿ ಮೊದಲನೆಯ ಫರ್ಮಾನದ ಪ್ರಕಾರ ತಾಸಬಾನರಲ್ಲಿಯ [ಪ್ರಾರ್ಥನೆ ಮಾಡುವ ಒಂದು ಸಮಾಜ?] ಹತ್ತು ಜನರ ಅಧಿಕಾರಲ್ಲಿ ಕೊಟ್ಟಿದೆ. ಈಗ ತಿಳಿದದ್ದೇನಂದರೆ, ಠಾಣೆಯಿಂದ ಜನರನ್ನು ಕಳಿಸಿ ಊರಲ್ಲಿ ತೊಂದರೆ ಕೊಡುತ್ತಿದ್ದಾರೆ ಮತ್ತು ಐದು ಹೊನ್ನು ವಸೂಲು ಮಾಡಿದ್ದಾರೆ. ಇದರ ಅರ್ಥ ಏನು? ಈಗ ಈ ಫರ್ಮಾನ ಮುಟ್ಟಿದ ತಕ್ಷಣ ವಸೂಲಿ ಮಾಡಿದ ಹಣವನ್ನು ತಿರುಗಿ ಕೊಡಬೇಕು ಮತ್ತು ಊರಲ್ಲಿ ಯಾವುದೇ ರೀತಿಯ ತೊಂದರೆ ಕೊಡಬಾರದು. ಈ ವಿಷಯದಲ್ಲಿ ಹವಾಲದಾರ ಮತ್ತು ಕಾರಕೂನ ಇವರಿಗೆ ತಾಕೀದು ಎಂದು ತಿಳಿದು ಮತ್ತೆ ದೂರು ಬರದ ಹಾಗೆ ಮಾಡಬೇಕು. ಸು. ೧೦೬೨ ಹಿ. ೧೦೭೩ ಮೊಹರಮ ೭ ಹು. ಪ.

೧೭೪

ಸು. ೧೦೬೩, ಶಾ. ೧೫೮೪ ಫಾಲ್ಗುಣ ವದ್ಯ ೨

ಹಿ. ೧೦೭೩ ರಜಬ ೧೫ ಇ. ೧೬೬೩ ಫೆಬ್ರವಾರಿ ೧೪

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದ
ಸರಹವಾಲದಾರ ಸರೇ ಸರನೌಬತ ಅಝೀಝುಖಾನ ಮತ್ತು ಹವಾಲದಾರ
ಮೀರಾನ ಅಬ್ದುಲ್ ಕಾದೀರ ಮುಹಮ್ಮದಖಾನ್, ಕಾರಕೂನ, ಸರಗಿರೋಹ ,
ನಾಯಕವಾಡಿ, ದೇಸಾಯಿ ಮತ್ತು ಇತರ ಮಹಾಜನ.

ಮೇಲೆ ಹೇಳಿದ ಮಾಮಲಾದ ಹವಾಲದಾರಿ ಇನಾಯತಖಾನ ಇವರಿಗೆ ಎಂದು ಠರಾವ ಮಾಡಿದ್ದರು. ಆದರೆ ಖಚಿತವಾಗಿರಲಿಲ್ಲ. ಈಗ ಆ ಹವಾಲದಾರಿಯನ್ನು ಮೇಲೆ ಹೇಳಿದ ಮೀರಾನ ಅಬ್ದುಲ ಕಾದಿರ ಇವರಿಗೆ ಗೊತ್ತುಮಾಡಲಾಗಿದೆ ಮತ್ತು ಮೇಲೆ ಹೇಳಿದ ಹವಾಲದಾರನ ಏಳಿಗೆ ಸಲುವಾಗಿ ವಸ್ತ್ರಗಳನ್ನು ಕಳಿಸಲಾಗಿದೆ. ಅವುಗಳನ್ನು ತೆಗೆದುಕೊಂಡು ಸನ್ಮಾನಿಸಬೇಕು ಮತ್ತು ಹವಾಲದಾರಿಯು ತನಗೇ ದೊರಕಿದೆ ಎಂದು ತಿಳಿದು ಕೋಟೆಯ ಮಜಬೂತಿ, ಮತ್ತು ಜನರ ಕಲ್ಯಾಣದ ಬಗ್ಗೆ ದೃಢಚಿತ್ತನಾಗಿರಬೇಕು. ಕಾರಕೂನ, ಸರಗಿರೋಹ, ನಾಯಕವಾಡಿ, ದೇಸಾಯಿ ಮತ್ತು ಮಹಾಜನ ಇವರು ಉಪಯುಕ್ತ ಹವಾಲದಾರನ ಅಂಕಿತದಲ್ಲಿರಬೇಕು. ಹವಾಲದಾರನ ಪಗಾರ ಮತ್ತು ಕಾಣಿಕೆ ಈಗ ಚಲಾವಣೆಯಲ್ಲಿದ್ದುದನ್ನೇ ಮುಂದೆಯೂ ಚಲಾವಣೆಯಲ್ಲಿ ಇಡಬೇಕು. ಸು ೧೦೬೩ ಹಿ. ೧೦೭೩ ರಜಬ ೧೫ ಹು. ಪ. ಸರಖೈಲೆ ಮಮಾಲಿಕ ಸೈಯಿದ ನೂರುಲ್ಲಾ ಇವರ ಮಾಹಿತಿಯಿಂದ.

೧೭೫

ಸು.೧೦೬೪, ಶಾ.೧೫೮೫ ಕಾರ್ತಿಕ ಶುದ್ಧ ೧೧

ಹಿ. ೧೦೭೪ ರಬ್ಬಿವುಲ್ ಆಖರ್ ೧೦ ಇ. ೧೬೬೩ ನವ್ಹೆಂಬರ ೧

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಘಾಮಲಾದ ಸರಹವಾಲದಾರ ಸರೇ ಸರನೌಬತ ಅಝೀಝುಖಾನ ಮತ್ತು ಹವಾಲದಾರ ಮೀರಾನ ಅಬ್ದುಲ ಕಾದಿರ ಮತ್ತು ಕಾರಕೂನ

ಈ ಶುಭ ಸಮಯದಲ್ಲಿ ಸುಲ್ತಾನಿ ಝೇಂಡೆ ಮತ್ತು ಸುಲತಾನಿ ಡೇರೆಗಳು ಅನಂತಪುರದ ಮೈದಾನದಲ್ಲಿ ನಿಂತಿವೆ. ಮಲೆನಾಡಿನ ಪ್ರದೇಶವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಶಾಪಿತ ಭದ್ರಾನ ನಾಶ ಮಾಡುವದಕ್ಕಾಗಿ ಮೊದಲಿಗೆಯೇ ಸೈನ್ಯವನ್ನು ಕಳಿಸಲಾಗಿತ್ತು. ಶೂರರ ಪ್ರಯತ್ನದಿಂದ ಶಾಪಿತನ ಅಧಿಕಾರದಲ್ಲಿದ್ದ ಬಿದರೂರು ಕೋಟೆಯನ್ನು ಗೆಲ್ಲುವಂತಾಯಿತು ಮತ್ತು ಎಷ್ಟೋ ಆಶೆಗಳು ಸಫಲವಾದುವು. ಕಾಫಿರರ ಸಮಾಜವು ದುರ್ದೈವದ ಅಡವಿಯಲ್ಲಿ ಓಡಿ ಹೋಯಿತು ಮತ್ತು ಅವರಲ್ಲಿಯ ಬಹುತೇಕರು ನಾಶವಾದರು ಮತ್ತು ಅವರ ದಂಡೂ ಓಡಿ ಹೋಯಿತು. ಈ ಫರಮಾನ ಮುಟ್ಟಿದ ತಕ್ಷಣ ಭಗವಂತನ ಆಭಾರವನ್ನು ಮನ್ನಿಸಿ ತೋಫುಗಳನ್ನು ಹಾರಿಸಬೇಕು. ಸು, ೧೦೬೪, ಹಿ. ೧೦೭೪ ರಬ್ಬಿವುಲ್ ಆಖರ್ ೧೦ ಹು. ಪ.

ಸು ೧೦೬೪, ಶಾ. ೧೫೮೬ ಆಷಾಢ ವದ್ಯ ೧
ಹಿ. ೧೦೭೪ ಜಿಲ್ಹಜ್ ೧೪ ಇ. ೧೬೬೪ ಜೂನ ೨೯

ಎರಡನೆಯ ಅಲಿ ಆದಿಲಶಾಹ > ಸಂದಲಾಪೂರ ಮಾಮಲಾದ
ಸರಹವಾಲದಾರ ಮತ್ತು ಸರೇ ಸರನೌಬತ ಫತಹಖಾನ ಮತ್ತು ಹವಾಲದಾರ
ಮೀರಾನ ಅಬ್ದುಲ ಕಾದೀರ ಮತ್ತು ಕಾರಕೂನ.

ಮೇಲೆ ಹೇಳಿದ ಮಾಮಲಾದಲ್ಲಿಯ ಬೋರಾಮಣಿ ಈ ಊರು ದಿವಂಗತ ಅಜೀಜಖಾನರ ಹತ್ತಿರ ಇತ್ತು. ತಂಬಾಕು, ಟೀಪಬರ್ಗ ಕರಗಳನ್ನು ಮತ್ತು ಇನಾಮಗಳನ್ನು ಬಿಟ್ಟು ಅದನ್ನು ಅಬ್ದುಲ ಕಾದೀರ ಇವರಿಗೆ ಕೊಡಲಾಗಿದೆ. ಸು. ೧೦೬೪ ಹಿ. ೧೦೭೪ ಜಿಲ್ಹಜ್ ೧೪ ಹು. ಪ.

ಆಲಮೇಲ ದೇಸಾಯಿ

೧೭೭

ಎರಡನೆಯ ಇಬ್ರಾಹಿಮ ಆದಿಲಶಾಹ (?)>ಆಲಮೇಲ ಪರಗಣಾದ ದೇಸಾಯಿ

ಮೇಲೆ ಹೇಳಿದ ಪರಗಣಾದಲ್ಲಿಯ -- ಗಾಝೀಯ ವಶದಲ್ಲಿದ್ದ ಗ್ರಾಮಗಳನ್ನು ಅಹಮ್ಮದಖಾನ ಸರೇಸರನೌಬತ ಇವರಿಗೆ ಕೊಡಲಾಗಿದೆ. ಆದ್ದರಿಂದ ಅವುಗಳನ್ನು ಅವರ ವಶಕ್ಕೆ ಕೊಡಬೇಕು. ಹು. ಪ. ರೈಹಾನನ ಮಾಹಿತಿಯಿಂದ.

೧೭೮

ಎರಡನೆಯ ಇಬ್ರಾಹಿಮ ಆದಿಲಶಾಹ (?) > ಗುರುಸಿದ್ದಾ

ಈಗ ನಮ್ಮ ಕಿವಿಗೆ ಬಿದ್ದ ವಿಷಯವೇನೆಂದರೆ, ಈ ರಾಜ್ಯದ ಬಗ್ಗೆ ನಿನ್ನ ಶುಭ ಚಿಂತನೆಯ ಇಚ್ಛೆ ಇದೆ. ಆದ್ದರಿಂದ ಈ ಸಂದೇಶದ ಮುಖಾಂತರ ನಾವು ನಿನ್ನ ಉತ್ಕರ್ಷ ಮಾಡುತ್ತಿದ್ದೇವೆ. ಸ್ವಥದ ಮನಸ್ಸನ್ನು ಸರ್ವ ದೃಷ್ಟಿಯಿಂದ ಶಾಂತವಾಗಿಟ್ಟುಕೊಂಡು, ಸ್ವಥದ ಕುದುರೆಯ ದಳದೊಂದಿಗೆ ದರಬಾರಕ್ಕೆ ಬರಬೇಕು. ಅಂದರೆ ಯೋಗ್ಯತೆ, ಸಂಘಟನೆ ಮತ್ತು ಸಿದ್ಧತೆಯನ್ನು ನೋಡಿ, ಅದಕ್ಕೆ ತಕ್ಕ ಹಾಗೆ ಉತ್ಕರ್ಷ ಮಾಡೋಣ. ದರಬಾರಕ್ಕೆ ಬರಲು ಯಾವುದೇ ರೀತಿಯ ತಡ ಮಾಡಬಾರದು.-- ಹುಜೂರರ ಪರವಾನಗಿಯಿಂದ

೧೭೯

ಸು. ೧೦೧೭.
ಹಿ. ೧೦೨೬ ಜಿಲ್ಬದ್ ೮

ಶಾ. ೧೫೩೯ ಕಾರ್ತಿಕ ಶುದ್ಧ ೯
ಇ. ೧೬೧೭ ಅಕ್ಟೋಬರ ೨೮

ಎರಡನೆಯ ಇಬ್ರಾಹಿಮ ಆದಿಲಶಾಹ > ಆಲಮೇಲ ಪರಗಣೆಯ ಅಧಿಕಾರಿ ಮತ್ತು ನಾಡಗೀರ

ಮೇಲೆ ಹೇಳಿದ ಪರಗಣೆಯ ದೇಸಾಯಿ ಗುರುಸಿದ್ದನು ದರಬಾರಕ್ಕೆ ವಿನಂತಿ ಮಾಡಿಕೊಂಡಿದ್ದೇನಂದರೆ, "ಮೇಲೆ ಹೇಳಿದ ಪರಗಣೆಯ ದೇಸಾಯಿಕಿ ಮತ್ತು ಮೇಲೆ ಹೇಳಿದ ಕಸಬಾದ ಗೌಡಕಿ ಮತ್ತು ಪಟ್ಟಣಸೆಟ್ಟಿ ನನ್ನ ಅಧಿಕಾರದಲ್ಲಿದ್ದಾಗ ಈಗ ಆ ಹರಾಮಖೋರರು ಅದನ್ನು ಚನಮಲ್ಲನಿಗೆ ಕೊಟ್ಟಿದ್ದಾರೆ. ದಯಮಾಡಿ ಅದನ್ನು ನನಗೆ ದೊರಕಿಸಿ ಕೊಡಬೇಕು." ಆದ್ದರಿಂದ ದೇಸಾಯಿಕಿ, ಗೌಡಕಿ ಮತ್ತು ಪಟ್ಟಣಶೆಟ್ಟಿ ಅಧಿಕಾರವನ್ನು ಚನಮಲ್ಲನಿಂದ ಕಿತ್ತಿ ಗುರುಸಿದ್ಧನಿಗೆ ಮೊದಲಿನಂತೆ ಕಾಯಮ ಮಾಡಲಾಗಿದೆ. ಕಾನೂನು ಪ್ರಕಾರ ಅವನ ಹತ್ತಿರವೇ ಅಧಿಕಾರವನ್ನು ಕೊಡಬೇಕು. ಹಕಲಾಜಮೆ, ಪಾಟೀಪಥೋಡಿ ತೈನಾತ, ಬನವಾಲೆ, ವಿಸ್ವಾ, ಪಸಕಿ, ಪಳಗಿ [ವಿವಿಧ ಬಾಬುಗಳು] ಈ ಬಾಬುಗಳನ್ನು ನಿಮ್ಮ ಹತ್ತಿರ ಇಟ್ಟುಕೊಂಡು ಉಳಿದ ಎಲ್ಲ ಬಾಬುಗಳನ್ನು ಮೊದಲಿನಂತೆ ಅವರ ಕಡೆಗೆ ವಂಶಪರಂಪರೆಯಾಗಿ ಮುಂದುವರಿಸಿರಿ. ಸು ೧೦೧೭, ಹಿ ೧೦೨೬ ಜಿಲ್ಕಾದ ೮, ಹುಪ

೧೮೦

ಸು. ೧೦೨೫ ಶಾ. ೧೫೪೭ ಜ್ಯೇಷ್ಠ ವದ್ಯ ३

ಹಿ. ೧೦೩೪ ರಮಜಾನ ೧೭ ಇ. ೧೬೨೫ ಜೂನ ೧೩

ಎರಡನೆಯ ಇಬ್ರಾಹಿಮ ಆದಿಲಶಾಹ > ಗುರುಸಿದ್ದಾ

ನೀನು, ನಿನ್ನ ಪ್ರಯತ್ನ, ಉಪಾಯಗಳು, ಯೋಜನೆಗಳು, ಶೌರ್ಯ, ಕುದುರೆ ಸವಾರರು ಮತ್ತು ಕಾಲಾಳು ಇವುಗಳ ಸಂಗ್ರಹ ಇತ್ಯಾದಿಗಳನ್ನು ಮಾಡಿ ಮತ್ತು ಅದನ್ನು ರಣರಂಗದಲ್ಲಿ ತೋರಿಸಿ ಪ್ರಗತಿಯನ್ನು ಮಾಡಿರುವಿ ಮತ್ತು ಮಾಡುತ್ತಿರುವಿ. ಇದು ದರಬಾರದ ಗಮನಕ್ಕೆ ಬಂದಿದೆ. ಹಾಗೆ ನೀನು ಮಾಡಿದ್ದು ನಿನ್ನ ಉತ್ಕರ್ಷಕ್ಕೆ ಮತ್ತು ದೊಡ್ಡತನಕ್ಕೆ ಅನುರೂಪವಾಗಿದೆ. ಮಿಯಾ ಹುಸೇನನ ಆಲಮೇಲ ಪರಗಣೆಯನ್ನು ನಿನ್ನ ಅಧಿಕಾರದಲ್ಲಿ ಕೊಟ್ಟಿದೆ. ನೀನು ಇನ್ನೂ ಎತ್ತರಕ್ಕೆ ಬೆಳೆಯಬೇಕು. ಕುದುರೆದಳ, ಕಾಲ್ದಳಗಳನ್ನು ಅಧಿಕಗೊಳಿಸಿ ರಣರಂಗದಲ್ಲಿ ಬೆಳಗಬೇಕು. ಆ ಪ್ರಯತ್ನದಲ್ಲಿರು. ಅಂದರೆ ಇನ್ನೂ ಹೆಚ್ಚಿನ ಕೃಪೆಗೆ ಪಾತ್ರನಾಗುವಿ. ಸು. ೧೦೨೫ ಹಿ. ೧೦೩೪ ರಮಜಾನ ೧೦ ಹು.ಪ. ಹುಜೂರರ ಮಜಲಿಸಿ ಮಜಾಲಿಸಖಾನ ಇವರ ಮಾಹಿತಿಯಿಂದ

೧೮೧

ಸು.೧೦೨೫,	ಶಾ.೧೫೪೭ ಮಾರ್ಗಶೀರ್ಷ ವದ್ಯ ೨
ಹಿ. ೧೦೩೫ ರವಲ ೧೫	ಇ.೧೬೨೫ ಡಿಸೆಂಬರ ೫

ಎರಡನೆಯ ಇಬ್ರಾಹಿಮ ಆದಿಲಶಾಹ > ಗುರುಸಿದ್ಧನ ಮುತಾಲಿಕನಿಗೆ

ನೀವು ತಿಳಿದುಕೊಳ್ಳುವುದು ಏನಂದರೆ, ಈ ಸಮಯದಲ್ಲಿ ದರಬಾರಕ್ಕೆ ಏನು ತಿಳಿದುಬಂದಿದೆ ಎಂದರೆ, ರಣಸಿಂಗಾರಖಾನ ಇವನ ಜೊತೆಗೆ ಬೇಕೆಂತಲೇ ಉದ್ದೇಶಪೂರ್ವಕವಾಗಿ ಕಳಿಸಿದ ಮಹಮ್ಮದಖಾನ ಆದರಾತಿಥ್ಯಕ್ಕಾಗಿ ಕರೆಯಿಸಿಕೊಂಡು ಮೋಸದಿಂದ ಅವನನ್ನು ಬಂದಿಯನ್ನಾಗಿ ಮಾಡಲಾಗಿದೆ. ಆದ್ದರಿಂದ ಆದೇಶ ಮಾಡುವುದೇನೆಂದರೆ, ಮೇಲೆ ಹೇಳಿದ ಮನುಷ್ಯ ಮತ್ತು ಇತರ ಯಾರನ್ನು ಬಂಧಿಸಲಾಗಿದೆ, ಅವರಿಗೆ (ಅಂದರೆ ಅವರು) ಮೇಲೆ ಹೇಳಿದ ಖಾನನಹತ್ತಿರ ಹೋಗಿ ಮೇಲೆ ಹೇಳಿದ ಯುದ್ಧದಲ್ಲಿ ಭಾಗವಹಿಸಿದ್ದರೆ ಮತ್ತು ಅವರ ಕುದುರೆಗಳನ್ನು ಹಿಡಿದಿದ್ದರೆ ಅವಗಳೆಲ್ಲವನ್ನು ತಿರುಗಿ ಕೊಡಬೇಕು. ಈ ವಿಷಯವನ್ನು ಎಚ್ಚರಿಕೆ ಅಂತಾ ತಿಳಕೊಳ್ಳಬೇಕು. ಸು. ೧೦೨೫ ಹಿ. ೧೦೩೫ ರವಲ ೧೫. ಹು.ಪ. ಹುಜೂರರ

ಮಜಲಿಸೀಮಜಾಲಿಖಾನ ಇವರ ಮಾಹಿತಿಯಿಂದ.

೧೮೨

ಸು. ೧೦೨೭	ಶಾ.೧೫೪೯ ಅಧಿಕ ಶ್ರಾವಣ ವದ್ಯ ೧೨
ಹಿ. ೧೦೩೬ ಜಿಲ್ಕಾದ್ ೨೬	ಇ. ೧೬೨೭ ಜುಲೈ ೧೯

ಎರಡನೆಯ ಇಬ್ರಾಹಿಮ ಆದಿಲಶಾಹ > ಗುರುಸಿದ್ದಾ

ಸಧ್ಯಾ ಮಿಯಾ ವಫಾಖಾನನ ಅರ್ಜಿಯಿಂದ ನಿನ್ನ ಸೇವೆ ಮತ್ತು ಶುಭೇಚ್ಛೆಯ ವಕಿವಿರಗಳು ದರಬಾರಕ್ಕೆ ತಿಳಿದುಬಂದಿದೆ. ಆದ್ದರಿಂದ ಈ ಸಂದೇಶದ ಮುಖಾಂತರ ನಿನ್ನ ಉತ್ಕರ್ಷವನ್ನು ಮಾಡುತ್ತಿದ್ದೇವೆ. ಈಗ ಸದ್ಯ ಜರೂರ ಇದ್ದದ್ದು ಶಾಹದುರ್ಗ ಕಿಲ್ಲೆಯ ತಯಾರಿ ಸಲುವಾಗಿ ಕಾಣಿಕೆ ಎಂದು ಒಪ್ಪಿದ, ಹದಿನೈದು ಸಾವಿರ ಹೊನ್ನನ್ನು ಮೇಲೆ ಹೇಳಿದ ಕಿಲ್ಲೆಯ ಹವಾಲದಾರಿಯಮೇಲೆ ಮುದ್ದಾಮ ನೇಮಿಸಿದ ಮಹಲದಾರ ಶಾಹ ಅಬ್ದುಲ ಹಸನ ಇವರಿಗೆ ಮುಟ್ಟಿಸಬೇಕು. ಈ ವಿಷಯದಬಗ್ಗೆ ಎಚ್ಚರಿಕೆ ಎಂದುತಿಳಿಯಬೇಕು. ಸು. ೧೦೨೭ ಹಿ.೧೦೩೬ ಜಿಕ್ಲಾದ ೨೬ ಹುಪ.

೧೮೩

ಸುಮಾರೆ ಸು. ೧೦೨೭ ಶಾ. ೧೫೪೪ – ೪೯

ಇ.೧೬೨೬ – ೨೭

ಎರಡನೆಯ ಇಬ್ರಾಹಿಮ ಆದಿಲಶಾಹ (?) ಗುರುಸಿದ್ದಾ

ನೀನು ಶಾಹದುರ್ಗ ಕಿಲ್ಲೆಯ ಉಸ್ತುವಾರಿ ಸಲುವಾಗಿ (ಹದಿನೈದುಸಾವಿರ) ಹೊನ್ನು ಒಪ್ಪಿಕೊಂಡು ಆ ಪ್ರಕಾರ ನೀನು ಅರ್ಜಿ ಕಳಿಸಿಕೊಟ್ಟಿದ್ದಿ. ಆದ್ದರಿಂದ ಆ ಕಿಲ್ಲೆಯ ತಯಾರಿ ಸಲುವಾಗಿ ಮೇಲಿನ ಹಣದಲ್ಲಿ ಜಾಲಗಳನ್ನು [ಗಲಾ–ಹುಕ್] ಮತ್ತು ಇತರ ವಸ್ತುಗಳನ್ನು ತೆಗೆದುಕೊಳ್ಳಲು ಆದೇಶ ಮಾಡಲಾಗಿತ್ತು. ಈಗ ನಮ್ಮ ಕಿವಿಗೆ ಬಿದ್ದದ್ದು ಏನೆಂದರೆ, ಮೇಲೆ ಹೇಳಿದ ಕಾಣಿಕೆಯ ಹಣದಲ್ಲಿ ತುಸುವೇ ಹಣದಿಂದ ಗಲಾ ತೆಗೆದುಕೊಳ್ಳಲಾಗಿದೆ. ಉಳಿದ ಎಲ್ಲ ಹಣವೂ ಇನ್ನುವರೆಗೆ ನಿನ್ನ ಹತ್ತಿರವೇ ಇದೆ. ಯಾವ ಅರ್ಥದಿಂದ ನೀನು ಕಾಣಿಕೆಯನ್ನು ಕೊಡಲು ಒಪ್ಪಿದೆಯೋ ಅದೇ ಅರ್ಥದಿಂದ ಅದನ್ನು ಕೊಡುವದರಲ್ಲಿ ತಡಮಾಡುವದು ಯೋಗ್ಯವಲ್ಲಾ. ಈ ಆದೇಶ ಮುಟ್ಟುತ್ತಿದ್ದಂತೆ, ಮೇಲೆ ಹೇಳಿದ ಹಣದಲ್ಲಿಯ ಸನ್ ೧೦೨೭ ವರ್ಷದ ವರ್ಗಣಿ ಏಳೂವರೆ ಸಾವಿರ ಹೊನ್ನನ್ನು ಈ ಕ್ಷಣದಲ್ಲಿ ಕೊಟ್ಟುಬಿಡಬೇಕು. ಅಂದರೆ ಕಿಲ್ಲೆಯನ್ನು ತೆಗೆದುಕೊಳ್ಳಬಹುದು. ನೀನು ಸ್ವತ: ಈ ಹಣವನ್ನು ಒಪ್ಪಿಕೊಂಡಿದ್ದಿ ಮತ್ತು ಆದ್ದರಿಂದ ಆದೇಶವನ್ನು ಮಾಡಲಾಗಿತ್ತು. ನಿನ್ನ ಜಹಗೀರಿಯ ವಿಷಯದಲ್ಲಿ ಇತರ ಜನರು ಬಹಳಷ್ಟು ಕಾಣಿಕೆ ಕೊಡಲು ಒಪ್ಪಿದ್ದರು. ಆದರೆ ಅವರ ಹೇಳಿಕೆಗಳನ್ನು ಬದಿಗೆ ಸರಿಸಿ ಆ ಜಹಗೀರನ್ನು ನಿನಗೆ ಕೊಡಲಾಯಿತು. ಇದು ನಿನ್ನ ಲಕ್ಷದಲ್ಲಿರಲಿ. ನಿನ್ನ ಒಪ್ಪಿಗೆಯ ವಿರುದ್ಧ ನೀನೇ ಹೋಗುವದು ಒಳ್ಳೆಯದಲ್ಲ. ಹಣವನ್ನು ಒಡನೆ ಒಪ್ಪಿಸಬೇಕು. ಹುಜೂರರ ಪರವಾನಿಗಿಯಿಂದ.

೧೮೪

ಸು. ೧೦೨೭, ಶಾ. ೧೫೪೯ ಭಾದ್ರಪದ ವದ್ಯ ೭
ಹಿ ೧೦೩೭ ಮೋಹರಮ ೨೦ ಇ. ೧೬೨೭ ಸೆಪ್ಟೆಂಬರ ೨೧

ಮಹಮ್ಮದ ಆದಿಲಶಾಹ > ಆಲಮೇಲ ಪರಗಣೆಯ ದೇಸಾಯಿ

ನೀಚ ಕೃಷ್ಣಾಜೀ ಭೋಸಲೆ ಇವನ ವಶದಲ್ಲಿದ್ದ ಮೇಲೆ ಹೇಳಿದ ಪರಗಣಾದಲ್ಲಿಯ ಬಂದಹಾಳ ಈ ಊರನ್ನು ಸ್ಥಗಿತಗೊಳಿಸಲಾಗಿದೆ. ಅದನ್ನು ಸ್ಥಗಿತಗೊಳಿಸಬೇಕು. ಮತ್ತು ಅವನ ಮುತಾಲಿಕನನ್ನು ಬಂಧಿಸಿ ದರಬಾರಕ್ಕೆ ಕಳಿಸಿಕೊಡಬೇಕು. ಈ ವಿಷಯದಲ್ಲಿ ಎಚ್ಚರಿಕೆ ಎಂದು ತಿಳಿದು ಆದೇಶದ ಪ್ರಕಾರ ಆಚರಣೆಯಲ್ಲಿ ತರಬೇಕು. ಸು. ೧೦೨೬ ಹಿ. ೧೦೩೭, ಮೊಹರಮ ೨೦ ಹು. ಪ.

೧೮೫

ಸು. ೧೦೨೯, ಶಾ. ೧೫೫೦ ಕಾರ್ತಿಕ ಶುದ್ಧ ೧
ಹಿ. ೧೦೩೮ ಸಫರ ೨೯ ಇ. ೧೬೨೮ ಅಕ್ಟೋಬರ ೧೮

ಮಹಮ್ಮದ ಆದಿಲಶಾಹ > ಆಲಮೇಲ ಪರಗಣೆಯ ದೇಸಾಯಿ

ಮೇಲೆ ಹೇಳಿದ ಪರಗಣೆಯಲ್ಲಿಯ ದೇವುಳಗಾವ ಮತ್ತು ಬಳಗಾನೂರ ಈ ಊರುಗಳನ್ನು ಖಾಸಾ ಖಾತೆಯ ಖಾಸಾ ಮತ್ತು ಲೇಖಕ ಇವರ ವೇತನಕ್ಕಾಗಿ ಬೇಲೆಕಟಿ, ಪಾಪೋಶಿ, ಮೇಜಬಾನಿ, ನೌಸೆಬೇಲ ಮತ್ತು ಚಂಗಪಟಿ [ನಿರ್ದಿಷ್ಟ ಬಾಬುಗಳು] ಈ ಬಾಬುಗಳನ್ನು ಬಿಟ್ಟು ಉಳಿದ ಎಲ್ಲ ಬಾಬುಗಳ ಸಹಿತ [ನಿನ್ನ] ಅಧಿಕಾರದಲ್ಲಿ ಕೊಡಲಾಗಿದೆ. ಅವುಗಳನ್ನು ವಶಕ್ಕೆ ತೆಗೆದುಕೊಳ್ಳಬೇಕು. ಸು. ೧೦೨೯ ಹಿ. ೧೦೩೮ ಸಫರ ೨೯. ಹು. ಪ.

ಸು. ೧೦೨೯, ಶಾ. ೧೫೫೦ ಮಾರ್ಗಶೀರ್ಷ ಶುದ್ಧ ೩
ಹಿ ೧೦೩೮ ರಖರ ೨ ಇ. ೧೬೨೮ ನವ್ಹೆಂಬರ ೧೯

ಮಹಮ್ಮದ ಆದಿಲಶಾಹ > ಆಲಮೇಲ ಪರಗಣೆಯ ದೇಸಾಯಿ.

ಈ ಸಮಯದಲ್ಲಿ ದರಬಾರಕ್ಕೆ ತಿಳಿದುಬಂದದ್ದು ಏನಂದರೆ, ಸಣ್ಣ ಹಳ್ಳಿ .ಯ ಬಾಜಾರದ ವ್ಯವಹಾರವು .. ಖಾನನ ಮೊಕಾಶಿಗಳು ಸದ್ಯದ ಜಕಾತಿಯ ಖೋತ ಮತ್ತು ಪತಕಿ ಇವರ ತೊಂದರೆಯಿಂದ ಬಾಜಾರದ ವ್ಯವಹಾರವು ಬಹಳಷ್ಟು ಹಾನಿ ಆಗಿದೆ. ಈ ಆದೇಶ ಮುಟ್ಟಿದಾಕ್ಷಣ ಖೋತ ಮತ್ತು ಪತಕಿ ಇವರಿಗೆ ತಾಕೀತ ಮಾಡಿ ವರ್ಷಂಪ್ರತಿಯ ಪ್ರಮಾಣದಂತೆ ಮತ್ತು ಹಳೆಯ ಮೋಕಾಶಿಗಳ ವೇಳೆಯಲ್ಲಿ ಹೇಗಿತ್ತೋ ಆ ರೀತಿ ಬಾಜಾರ ಉತ್ಕರ್ಷ ಮಾಡಬೇಕು ಮತ್ತು ಬಾಜಾರಕ್ಕೆ ಬರುವ, ಹೋಗುವ ಜನರಿಗೆ ಸಹಾಯ ಮಾಡಿ ಬಾಜಾರವು ತುಂಬುವಂತೆ ಮಾಡಬೇಕು. ಈ ವಿಷಯದಲ್ಲಿ ಎಚ್ಚರಿಕೆ ಎಂದು ತಿಳಿದುಕೊಂಡು ಆದೇಶದ ಪ್ರಕಾರ ನಡಯಬೇಕು. ಸು. ೧೦೨೯ ಹಿ. ೧೦೩೮ ರಬಿಲಾಖರ ೨ ಹುಪ. ಮುಸ್ತಫಾಖಾನರ ಮಾಹಿತಿಯಿಂದ. (ಕಾಗದದ ಹಿಂದೆ) ವೋ ಛ ೧೬ ಮಾಹೇ ರಬಿಲಾಖರ ಪ್ರತಿ ವರ್ಷ ಸನ ತೀಸಾ ಅಶರೀನ ಅಲಫ

ಸು.೧೦೧೨, ಶಾ. ೧೫೫೧ ಜೇಷ್ಠ ವದ್ಯ ೧೨
ಹಿ. ೧೦೩೮ ಶವ್ವಾಲ ೨೬ ಇ. ೧೬೨೯ ಜೂನ ೮

ಮಹಮ್ಮದ ಆದಿಲಶಾಹ > ಆಲಮೇಲ ಪರಗಣೆಯ ಕಾರಕೂನ ಮತ್ತು ದೇಸಾಯಿ.

ಐವತ್ತು ದೊಡ್ಡ ಮತ್ತು ಒಳ್ಳೆಯ ಬುಟ್ಟಿಗಳನ್ನು ಬೇಗನೆ ತಯಾರ ಮಾಡಿ, ಭಿವರಾ [ಭೀಮಾ] ನದಿಯ ಹತ್ತಿರ ಫಿರೋಜಾಬಾದ ಶಹರದ ಆಸುಪಾಸಿನಲ್ಲಿ ಸಂಗ್ರಹಿಸಬೇಕು. ಈ ವಿಷಯದಲ್ಲಿ ಎಚ್ಚರಿಕೆ ಎಂದು ತಿಳಿದುಕೊಳ್ಳಬೇಕು. ಈ ವಿಷಯದಲ್ಲಿ ತಿಳುವಳಿಕೆ ನೀಡಲು ಅಬ್ದುಲ ಕಾದೀರ ಮಹಲದಾರ ಇವರನ್ನು ಕಳಿಸಲಾಗಿದೆ. ಕ್ಷಣಮಾತ್ರ ಕೂಡಾ ತಡ ಮಾಡಬಾರದು. ಸು. ೧೦೨೯ ಹಿ. ೧೦೩೮ ಶವ್ವಾಲ ೨೬ ಹುಪ. ಮುಸ್ತಫಾಖಾನರ ಮಧ್ಯಸ್ಥಿಕೆಯಿಂದ.

೧೮೮

ಸು. ೧೦೨೯, ಶಾ. ೧೫೫೧ ಶ್ರಾವಣ ವದ್ಯ ೧೪

ಹಿ. ೧೬೨೯ ಜಿಲ್ಹೇಜ ೨೭ ಇ. ೧೬೨೯ ಆಗಸ್ಟ ೭

ಮಹಮ್ಮದ ಆದಿಶಾಹ > ಆಲಮೇಲ ಪರಗಣಾದ ದೇಸಾಯಿ ಗುರುಸಿದ್ದಾ

ಮೇಲೆ ಹೇಳಿದ ಪರಗಣದಲ್ಲಿಯ ದೇವೂಳಗಾವ ಮತ್ತು ಬಳಗಾನೂರ ಊರಿನ ಮುಖ್ಯಸ್ಥನ ಹೊಟ್ಟೆಯಲ್ಲಿದ್ದುದನ್ನು ಖಾಸಾ ಪಂಗಡದವರು ದರಬಾರಕ್ಕೆ ಅರ್ಜಿ ಕೊಟ್ಟಿದ್ದು ಏನೆಂದರೆ, "ಮೇಲೆ ಹೇಳಿದ (ಸುಹುರ) ಸನ (ಒಂದು ಸಾವಿರದಾ ಇಪ್ಪತ್ತು) ಏಳರಲ್ಲಿ ನಮ್ಮ ಹಕ್ಕಿನ [ಹಣದಲ್ಲಿ] ದೇವಳಗಾವದಿಂದ ಮುನ್ನೂರಾ ಅರವತ್ತೊಂಭತ್ತೂವರಿ ೩೬೯-೧/೨ ಹೊನ್ನು ತೆಗೆದುಕೊಂಡಿದ್ದಾರೆ ಮತ್ತು ಬಳಗಾನೂರದಲ್ಲಿ ಒಪ್ಪಿಗೆ ಪತ್ರವನ್ನು ಬರೆಯಿಸಿಕೊಂಡಿದ್ದಾರೆ. ಅಲ್ಲದೇ ಅಲ್ಲಿಯಿಂದ ಗಲಾ [ಜಾಲಗಳು], ರೋಗಣ ಮತ್ತು ಇತರ ತೆಗೆದುಕೊಂಡು ಹೋಗಿದ್ದಾರೆ ಮತ್ತು ಅವರು ವಿವಿಧ ರೀತಿಯಲ್ಲಿ ತೊಂದರೆಯನ್ನು ಕೊಡತಾ ಇದ್ದಾರೆ". ಇದರ ಅರ್ಥ ಏನು? ಈಗ ಈ ಆದೇಶ ಮುಟ್ಟಿದ ತಕ್ಷಣ ಎರಡೂ ಊರಿನಿಂದ ಏನೇನು ತೆಗೆದುಕೊಂಡಿದ್ದಾರೋ ಆ ಎಲ್ಲವನ್ನೂ ತಿರುಗಿ ಕೊಡಬೇಕು. ತೊಂದರೆ ಕೊಡಬಾರದು. ಆಶ್ವಾಸನ ಮತ್ತು ಭರವಸೆ ಕೊಡಬೇಕು. ಊರುಗಳನ್ನು ಉತ್ಕರ್ಷವನ್ನಾಗಿ ಮಾಡಬೇಕು. ದೂರುಗಳು ಬರದಂತೆ ನೋಡಿಕೊಳ್ಳಬೇಕು.

ಸು.೧೦೨೯, ಹಿ. ೧೦೩೮ ಜಿಲ್ಹೇಜ ೨೭ ಹುಪ

೧೮೯

ಸು.೧೦೩೭, ಶಾ. ೧೫೪೫ ಆಷಾಢ ಶುಧ ೧೫
ಹಿ ೧೦೪೭ ಸಫರ ೧೪ ಇ. ೧೬೩೭ ಜೂನ ೨೭

ಮಹಮ್ಮದ ಆದಿಲಶಾಹ > ಆಲಮೇಲ ಪರಗಣಾದ ದೇಸಾಯಿ.

ಮೇಲೆ ಹೇಳಿದ ಪರಗಣದಲ್ಲಿಯ ಸೀದಿ ಅಹಮ್ಮದ ಖುದಾವಂದಖಾನ ಇವರ ಬಾಬಿನಲ್ಲಿಯ ಬಳಗಾನೂರ ಮತ್ತು ಕುಮಸಿ ಈ ಎರಡು ಊರುಗಳು ಸಂಬಧಿಕರಾದ ಕರೀಮದಾದಖಾನ ಜಮಾಅತದಾರ ಇವರಿಗೆ ಬೇಲೆಕಟಿ, ಪಾಪೋಶಿ, ಮೇಜಬಾನಿ, ನೌಸೆಲಬೆಲ ಮತ್ತು ಜಂಗಪಟಿ [ವಿವಿಧ ಬಾಬುಗಳು] ಈ ಬಾಬುಗಳನ್ನು ಬಿಟ್ಟು ಉಳಿದ ಎಲ್ಲ ಬಾಬುಗಳ ಮುಖ್ಯಸ್ಥ ಎಂದು ತಿಳದು ಕೊಡಲಾಗಿದೆ. ಅವುಗಳನ್ನು ವಶಕ್ಕೆ ತೆಗೆದುಕೊಳ್ಳಬೇಕು. ಸು. ೧೦೩೭, ಹಿ. ೧೦೪೭ ಸಫರ ೧೪ ಹು. ಪ.

ಶಹಾಜಿ ಭೋಸಲೆ

೧೯೦

ಸು, ೧೦೪೨, ಶಾ.೧೫೬೩ ಮಾಘ ಶುದ್ಧ ೧೦

ಹಿ. ೧೦೪೯ ಜಿಕ್ಲಾದ ೯ ಇ. ೧೬೪೨ ಜಾನೆವಾರಿ ೩೦

ಮಹಮ್ಮದ ಆದಿಲಶಾಹ > ಫರ್ಜಂದಿ [ಮಗನ ಸಮಾನನಾದ] ಶಾಹಜಿ ಭೋಸಲಾ

ಸೈನ್ಯದ ಮುಖ್ಯಸ್ಥ ರಣದುಲ್ಲಾಖಾನ ಇವರಿಗೆ ಆದೇಶ ಮಾಡಲಾಗಿದೆ. ನೀವು ಅವನಿಂದ ಮತ್ತು ಅವನ ಧೋರಣದೊಂದಿಗೆ ಏಕರೂಪ ಆಗಿ ಈ ದರಬಾರದ ಸೇವೆ ಮತ್ತು ದಂಡಿನಲ್ಲಿ ಪ್ರಗತಿ ಮಾಡಿ ತೋರಿಸಬೇಕು ಮತ್ತು ಅವರೊಂದಿಗೆ ಹೊಂದಿಕೊಂಡಿರಬೇಕು. ಅದರಲ್ಲಿಯೇ ನಮ್ಮ ಕೃಪೆ ಇದೆ. ರುಸ್ತುಮಜಮಾಹಿ ನಿಮ್ಮ ರಾಜ್ಯನಿಷ್ಠಾದ ಬಗ್ಗೆ ಶಿಫಾರಸು ಮಾಡುವಲ್ಲಿ ಒಂದು ಪ್ರಸಂಗವನ್ನೂ ಬಿಟ್ಟು ಕೊಟ್ಟಿಲ್ಲ. ಸದ್ಯ ರುಸ್ತುಮಜಮಾನನು ರಹಮತಖಾನ, ಖುದಾವಂದಖಾನ, ಗಾಜೀಖಾನ, ಮತ್ತು ಅಫಜಲಖಾನ ಇವರನ್ನ ಆ ಊರಲ್ಲಿ ಕಾಯಂ ನೇಮಿಸಿದ್ದಾರೆ ಮತ್ತು ಕರ್ನಾಟಕದ ಸೈನ್ಯಾಧಿಪತ್ಯವನ್ನು ರುಸ್ತುಮ ಜಮಾನನಿಗೆ ಕೊಡಲಾಗಿದೆ. ಅದರಂತೆಯೇ ಮೇಲೆ ಹೇಳಿದ ಜನರಿಗೆ ಕೊಡಲಾಗಿದೆ. ಆದ್ದರಿಂದ ಅವನು, ಅವರ ಹೇಳಿಕೆಯಲ್ಲಿ ಇದ್ದು ಅವರ ಸಲಹೆಯ ಮೇರೆಗೆ ಸವಾರಿ ಮಾಡಬೇಕು ಮತ್ತು ರಾಜನಿಷ್ಠಾ ತೋರಿಸಬೇಕು ಅಂದರೆ ಸಧ್ಯ ಅವರ ಮೇಲೆ ಕೃಪಾದೃಷ್ಟಿ ಇದೆ ಮತ್ತು ಅದು ದಿವಸಂದಿವಸ ಬೆಳೆಯುತ್ತ ಹೋಗುತ್ತದೆ. ಸು. ೧೦೪೨ ಹಿ. ೧೦೫೧ ಜಿಕ್ಲಾದ ೯ ಹು.ಪ.

ಸು. ೧೦೫೮ ಶಾ. ೧೫೭೯ ಮಾಘ ಶುದ್ಧ ೭
ಹಿ. ೧೦೬೮ ಜವಲ ೬ ಇ.೧೬೫೮ ಜಾನೆವಾರಿ ೩೦

ಎರಡನೆಯ ಅಲಿ ಆದಿಲಶಾಹ > ಮಹಾರಾಜ ಫರ್ಜಂದಿ [ಮಗನ ಸಮಾನರಾದ] ಶಹಾಜಿ ಭೊಸಲೆ.

ಕರ್ನಾಟಕ ಪ್ರದೇಶ ಕೆಟ್ಟುಹೋಗಿದೆ. ಈ ಸಮಯದಲ್ಲಿ ಈ ಭಾಗಕ್ಕೆ ಒಬ್ಬ ಸುಬೇದಾರನನ್ನು ನೇಮಿಸಿದರೆ ಬಹಳ ಉತ್ತಮ ಆಗುತ್ತದೆ. ಇಲ್ಲವಾದರೆ ಆ ಪ್ರದೇಶ ಕೈಬಿಟ್ಟು ಹೋಗಿಬಿಡುತ್ತದೆ, ಎಂಬ ಆಶಯದ ನಿಮ್ಮ ಅರ್ಜಿ ಮುಟ್ಟಿದೆ. ಆ ಪ್ರಕಾರ ಅಫಜಲಖಾನ ಮುಹಮ್ಮದಶಾಹಿ ಇವರಿಗೆ ಕರ್ನಾಟಕದ ಸುಬೇದಾರಿಯನ್ನು ಮುದ್ದಾಮ ಕೊಡಲಾಗಿದೆ. ಆದ್ದರಿಂದ ನೀವು ಅವರೊಂದಿಗೆ ಕೂಡಿ ರಾಜನಿಷ್ಠೆಯನ್ನು ತೋರಿಸಬೇಕು. ನೀವು ಕರ್ತವ್ಯನಿಷ್ಠರು ಮತ್ತು ಜಾಣರಿದ್ದೀರಿ. ಎರಡೂ ಕೂಡಿದರೆ ಕೆಲಸ ಸರಿಯಾಗಿ ಆಗುತ್ತದೆ. ನೀವು ಮನಃಪೂರ್ವಕ ರಾಜನಿಷ್ಠೆಯನ್ನು ತೋರಿಸಬೇಕು. "ನಿಮ್ಮೊಂದಿಗೆ ಕೂಡಿ ನಡೆಯುವದು ಇದು ಅತ್ಯಂತ ಅವಶ್ಯ ಇದೆ ಎಂದು ತಿಳಿದುಕೊಂಡು ನಿಮ್ಮ ಸಲಹೆಗಳು ಯೋಗ್ಯ ಇವೆ ಅಂತ ತಿಳಿಯಬೇಕು" ಎಂದು ನಾವು ಖಾನನಿಗೆ ಆದೇಶ ಮಾಡಿದ್ದೇವೆ. ನೀವು ಎಲ್ಲ ರೀತಿಯಿಂದ ಸಂತುಷ್ಟವಾಗಿದ್ದು ಕರ್ನಾಟಕದ ಕೆಲಸವನ್ನು ಉತ್ತಮ ರೀತಿಯಿಂದ ಪಾರುಗಾಣಿಸಬೇಕು. ಅದರಲ್ಲಿಯ ನಿಮ್ಮ ರಾಜನಿಷ್ಠೆಯಿಂದ ನಮ್ಮ ಮನಸ್ಸು ಸಂತುಷ್ಟ ಆಗುವುದು ಮತ್ತು ನಮ್ಮ ಸಂತೋಷದತ್ತ ಲಕ್ಷ್ಯ ಕೊಟ್ಟು ಆದೇಶದಂತೆ ಆಚರಣೆ ಮಾಡಬೇಕು. ಸು. ೧೦೫೮ ಹಿ.೧೦೬೮ ಜವ್ವಲ ೬ ಹು.ಪ.

ಮದುರೆಯ ನಾಯಕ

೧೯೨

ಸು. ೧೦೬೧, ಶಾ. ೧೫೮೨ ಪೌಷ್ಯ ವದ್ಯ ೯

ಹಿ. ೧೦೭೧ ಜವ್ವಲ ೨೨ ಇ. ೧೬೬೧ ಜಾನೇವಾರಿ ೧೪

ಎರಡನೆಯ ಅಲಿ ಆದಿಲಶಾಹ > ಚೋಕಲಿಂಗಪ್ಪ ನಾಯಕ ಮದುರೇಕಾರ (ಮದುರೆಯ ನಾಯಕ)

ಈ ಮೊದಲು ನಿಮ್ಮ ಹೆಸರುಗಳಿಂದ ಆದೇಶವಾದದ್ದೇನೆಂದರೆ, ಮದುರೆ ಮತ್ತು ತಂಜಾವೂರ ಈ ಭಾಗದ ಎಲ್ಲ ಅಭಿವೃದ್ಧಿ ಕೆಲಸಗಳನ್ನು ಮಹಾರಾಜ ಶಾಹಜಿ ಭೋಸಲೆ ಇವರ ಮೇಲೆ ಹಾಕಲಾಗಿದೆ ಮತ್ತು ಆ ಭಾಗದ ಸೈನ್ಯಾಧಿಪತ್ಯವನ್ನು ಹಸನ ಅಂಬರಖಾನ ಇವರಿಗೆ ಕೊಡಲಾಗಿದೆ. ಇವರಿಬ್ಬರನ್ನ ಬಿಟ್ಟರೆ ಬೇರೆ ಯಾರೂ ಅಲ್ಲಿ ವ್ಯವಹರಿಸುವುದಿಲ್ಲ. ಈಗ ಇದು ನಿಮಗ ಅವಶ್ಯವಿದ್ದದ್ದು ಏನಂದರೆ, ಅವರಿಬ್ಬರು ಹೇಳಿದ್ದೇ ಬಾದಶಹರ ಆದೇಶವೆಂದು ತಿಳಿದು ತಕ್ಷಣ ಕಪ್ಪಕಾಣಿಕೆಯ ಹಣವನ್ನು ದರಬಾರಕ್ಕೆ ಕಳಿಸಿಕೊಡಬೇಕು, ಆದರೆ ಆಶ್ಚರ್ಯವೆಂದರೆ, ಇದರ ಬಗ್ಗೆ ಇನ್ನೂ ನೀವು ನಿರ್ಲಕ್ಷ ಮಾಡುತ್ತಿದ್ದೀರಿ. ಈಗ ಈ ಆದೇಶ ಮುಟ್ಟಿದ ತಕ್ಷಣ ಕಾಣಿಕೆಯ ಹಣವನ್ನು ಆ ಇಬ್ಬರಿಗೂ ಕಳಿಸಿ ರಾಜನಿಷ್ಠೆಯನ್ನು ವ್ಯಕ್ತ ಮಾಡಬೇಕು ಮತ್ತು ಅವರ ಹೇಳಿಕೆಗಳನ್ನು ಅಕ್ಷರಶಃ ಬಾದಶಹರ ಆದೇಶವೆಂದು ತಿಳಿದು ಆಚರಣೆಯಲ್ಲಿ ತರಬೇಕು. ಅವರನ್ನು ಸಮಾಧಾನಪಡಿಸುವುದೆಂದರೆ, ಬಾದಶಹರ ಸಂಪೂರ್ಣ ಸಮಾಧಾನವಿದೆ ಎಂದು ತಿಳಿಯಬೇಕು. ಸು.೧೦೬೧ ಹಿ. ೧೦೭೧ ಜವ್ವಲ ೨೨ ಹು.ಪ.

ಏಕೋಜಿ ಭೋಸಲೆ

೧೯೩

ಸು, ೧೦೬೪, ಶಾ. ೧೫೮೫ ಮಾಘ ಶುದ್ಧ ೧೩

ಹಿ. ೧೦೭೪ ರಜ್ಜಬ ೧೧ ಇ. ೧೬೬೪ ಜಾನೇವಾರಿ ೩೦

ಎರಡನೆಯ ಅಲಿ ಆದಿಲಶಾಹ > ಏಕೋಜಿ ಭೋಸಲೆ

ಇಂಥಾ ಕೆಟ್ಟ ವೇಳೆಯಲ್ಲಿ ನಮಗೆ ಕೇಳಿ ಬಂದದ್ದು ಏನಂದರೆ ಫರ್ಜಾದಿ ಮಹಾರಾಜರು (ಶಹಾಜಿ ಭೋಸಲೆ) ಪರಮೇಶ್ವರಿ ಆದೇಶದಂತೆ ಈ ನಶ್ವರ ಜಗತ್ತನ್ನು ತ್ಯಾಗ ಮಾಡಿ ಆ ಶಾಶ್ವತ ಜಗತ್ತಿಗೆ ಹೊರಟು ಹೋದರು. ಈ ಸುದ್ದಿ ಕೇಳಿ ನಮೆಗೆಲ್ಲ ಅತಿಶಯ ದುಃಖವಾಗಿದೆ. ಅವರು ಪರಮೇಶ್ವರಿ ಆದೇಶವನ್ನು ಒಪ್ಪಿದ್ದು, ಮನಸ್ಸನ್ನು ಸಂತೋಷವಾಗಿರಿಸಬೇಕು. ಮತ್ತು ಅಬ್ದುರಹೀಮ ಬಹಲೋಲಖಾನರನ್ನು ಭೆಟ್ಟಿಯಾಗಿ ಅರಸೊತ್ತಿಗೆಯ ಆಲೋಚನೆಯಲ್ಲಿ ಭಾಗ ವಹಿಸಬೇಕು. ಆಮೇಲೆ ಒಪ್ಪಂದ ಮತ್ತು ಕರಾರ ಪತ್ರಗಳೊಂದಿಗೆ ಆದೇಶವನ್ನು ಕಳಿಸಿ ಕೊಡಲಾಗುತ್ತದೆ. ಸು. ೧೦೬೪ ಹಿ. ೧೦೭೪ ರಜ್ಜಬ ೧೧.

ದಶಾಹಬಾದ ವಿಭಾಗ

೧೯೪

ಸು. ೧೦೬೪ ಶಾ.೧೫೮೬ ಜ್ಯೇಷ್ಠ ವದ್ಯ ೩

ಹಿ. ೧೦೭೪ ಜಿಕ್ಲಾದ ೧೬ ಇ. ೧೬೬೪ ಜೂನ ೧

ಎರಡನೆಯ ಅಲಿ ಆದಿಲಶಾಹ > ಪಾದಶಾಹಬಾದ ವಿಭಾಗದ ಅಧಿಕಾರಿ ಮತ್ತು ದೇಸಾಯಿ

ಕಾದಿರಾಬಾದ ಉರ್ಫ ತ್ರಿಣಾಮಲ ಮತ್ತು ತಲವಾನಸೂರ ಈ ಪರಗಣೆಗಳಲ್ಲಿ ದೇಶಮುಖೀ ಮತ್ತು ದೇಶಕುಲಕರ್ಣಿಕಿ ಮತ್ತು ಕಾದಿರಾಬಾದ ಪರಗಣೆಯ ಪೈಕಿ ಕೋದನೂರ, ಸಪದಲ, ತಾನಕರ ಈ ಊರುಗಳ ಇನಾಮು ಈ ಎಲ್ಲರ ಅಧಿಕಾರವನ್ನು ಕಾದಿರಾಬಾದ ಪರಗಣೆಯ ಅಧಿಕಾರಿಯ ಬದಲು ಏಕೋಜಿ ಭೋಸಲೆ ಮತ್ತು ಶಾಹಜಿ ಭೋಸಲೆಯ ಇತರ ಚಿರಂಜೀವಿಗಳಿಗೆ ಆದೇಶದಂತೆ ಚಲಾವಣೆಯಲ್ಲಿದೆ. ಈಗ ಆದೇಶ ಮಾಡುವುದೇನೆಂದರೆ, ಮೇಲೆ ಹೇಳಿದ ಅಧಿಕಾರವನ್ನು ಏಕೋಜಿ ಭೋಸಲೆಗೆ ಕೊಡಲಾಗಿದೆ. ಅದನ್ನು ಅವರ ವಶಕ್ಕೆ ಕೊಡಬೇಕು. ಅವರ ವಂಶಸ್ಥರೇ ನಡೆಸಬೇಕು. ಸು. ೧೦೬೪ ಹಿ. ೧೦೭೪ ಜಿಕ್ಲಾದ ೧೬ ಹುಪ.

ಕೋಲಾಹಲ ಊರ್ಫ ಮುಹಮ್ಮದಾಬಾದ ವಿಭಾಗ

೧೯೫

ಸು. ೧೦೬೪,
ಹಿ. ೧೦೭೪ ಜಿಕ್ಲಾದ ೧೯

ಶಾ. ೧೫೮೬ ಜ್ಯೇಷ್ಠ ವದ್ಯ ೫
ಇ. ೧೬೬೪ ಜೂನ ೪

ಎರಡನೆಯ ಅಲಿ ಆದಿಲಶಾಹ > ಕೋಲಾಹಾಲ ಉರ್ಫ ಮುಹಮ್ಮದಾಬಾದ ವಿಭಾಗದ ದೇಸಾಯಿ.

ಮೇಲೆ ಹೇಳಿದ ವಿಭಾಗದ ದೇಶಮುಖಿ, ದೇಶಕುಲಕರ್ಣಿಕಿ ಮತ್ತು ನಾಡಗೌಡಕಿ ಇವರ ಅಧಿಕಾರವು ಶಹಾಜಿ ಭೋಸಲೆಯ ಏಕೋಜಿ ಮತ್ತು ಇತರ ಮಕ್ಕಳಿಗೆ, ಆದೇಶದಂತೆ ಚಲಾವಣೆಯಲ್ಲಿದೆ. ಈಗ ಆದೇಶ ಮಾಡಿದ್ದೇನೆಂದರೆ ಮೇಲೆ ಹೇಳಿದ ವಿಭಾಗದ ದೇಸಗತಿ (ಇನಾಮ ಮತ್ತು ಹಕ್ಕು ಲವಾಜಮೇ ಮತ್ತು ಇತರ ಬಾಬುಗಳು ಸಹ) ಮೇಲೆ ಹೇಳಿದ ಎಕೋಜಿ ಭೋಸಲೆ ಇವರಿಗೆ ಕೊಡಲಾಗಿದೆ. ಆದ್ದರಿಂದ ಅದನ್ನು ಅವರ ವಶಕ್ಕೆ ಕೊಡಬೇಕು ಮತ್ತು ಅವರ ವಂಶಿಕರಿಂದ ನಡೆಸಬೇಕು. ಸು. ೧೦೬೪ ಹಿ. ೧೦೭೪ ಜಿಕ್ಲಾದ ೧೯. ಹುಪ.

ಏಕೋಜಿ ಭೋಸಲೆ

೧೯೬

ಸು, ೧೦೭೨,
ಹಿ. ೧೦೮೨ ಜಖರ ೧೮

ಶಾ. ೧೫೯೩ ಅಶ್ವಿನ ವದ್ಯ ೩
ಇ. ೧೬೭೧ ಅಕ್ಟೋಬರ ೧೦

ಎರಡನೆಯ ಅಲಿ ಆದಿಲಶಾಹ > ಮಹಾರಾಜ ಫರ್ಜಂದಿ ಏಕೋಜಿ ಭೋಸಲೆ.

ಕಾವೇರಿಟ್ಟಣ, ತಿರೂಪತ್ತೂರು, ಜಗದೇವಗಡ ಕೋಟೆ, ವಾತಮಬಾರ, ಮಬದೂರ, ಆಂಸಗಿರಿ ಕೋಟೆ, ಗಣಿಯನೆಲೂರ ಊರ್ಫ ಗಮಾಸನಲೂರ, ಮಲಿಯಾಪೇಠ ಕೋಟೆ, ಮಲಿಯಾಬಾರ (ಮಲಬಾರ), ಮೋರಬೂರ ಕೋಟೆ ಮತ್ತು ಸುರಜಗಿರಿಪೇಠ (ಜಗದೇವನ ಪ್ರದೇಶದಲ್ಲಿಯ) ಈ ಎಲ್ಲ ಸ್ಥಳಗಳು ಆತಮಾದರಾವರ ಬಂಧು ಕೇಶವರಾವ, ನಾರೋ ಪಂಡಿತ, ಶ್ರೀನಿವಾಸರಾವ, ಪುರುಷೋತ್ತಮರಾವ ಇವರ ಅಧಿಕಾರದಲ್ಲಿದ್ದು ಮುಖ್ಯಮಂತ್ರಿ ಖವಾಸಖಾನ ಇವರ ನಿಯಂತ್ರಣದಲ್ಲಿವೆ. ಈಗ ಈ ಸ್ಥಳಗಳನ್ನು ಅವರಿಂದ ಕಡಿಮೆ ಮಾಡಲಾಗಿದೆ. ಜಗದೇವನ ಸದರೀ ಪ್ರದೇಶವನ್ನು (ತಂಬಾಕು, ಟೀಪಬರ್ಗ ಜಕಾತ ಮತ್ತು ಇನಾಮುಗಳನ್ನು ಹೊರತು ಪಡಿಸಿ) ದಿಲಶಾದಬಾದ ಭಾಗದಲ್ಲಿಯ ಊರುಗಳನ್ನು ಮತ್ತು ಸಣ್ಣ ಹಳ್ಳಿ ಕಂದಕೂರ ಇವುಗಳ ಬದಲಾಗಿ ನಿನಗೆ ಕೊಡಲಾಗಿದೆ. ಅಲ್ಲದೆ ಇಬ್ರಾಹಿಮಗಡ ಕೋಟೆ, ಕರಂಚೂರ ಮಾಮಲಾದಲ್ಲಿಯ ಊರುಗಳು ಮತ್ತು ಹಳ್ಳಿಗಳು, ಕಸಬೆ ಮಲೆಖೇಡ ಪೇಠೆ ಸಹಿತವಾಗಿ, ಮಲೆಖೇಡ ಪರಗಣಾದಲ್ಲಿಯ ಹಳ್ಳಿಗಳು, ಮುಲಕೂರ, ಸಣ್ಣಹಳ್ಳಿ ಹಥಗಲ ಹಾರದನಿ, ಸಣ್ಣಹಳ್ಳಿ ರೇವಾಡಿ ಸಮತ, ಹವೇಲಿ, ಶಹರ ಅಹಸನಾಬಾದ, ಸಣ್ಣಹಳ್ಳಿ ಸರದಸಾ ಕರ್ಯಾತ, ಠಾಣೆ, ಸಣ್ಣಹಳ್ಳಿ ಬಾಮಣೀ ಕರ್ಯಾತು, ಬಾಲಾಘಾಟ, ಪನ್ಹಾಳ ಕೋಟೆಯ ಕೆಳಗಿನ ಇತರ ಊರುಗಳು, ಮಸವರಿ ತಪ್ಪಲಿನ ಹಳ್ಳಿಗಳು, ಜವಲೀ ಭಾಗದಲ್ಲಿಯ ಹಳ್ಳಿಗಳು, ಮ್ಹಸವೇ ಭಾಗದ ಸಣ್ಣಹಳ್ಳಿ ಮತ್ರೂ, ಕಬರಕಲದರ, ಸಣ್ಣಹಳ್ಳಿ ಗೋವರಕೋಪ ಭಾಗದ ಕೋಣಕೋಪ ಮಾಮಲಾ ತೋರಗಳ ಮತ್ತು ಬಾದಾವಿ ಕೆಳಗಿನ ಊರುಗಳು ಮತ್ತು ಸಣ್ಣಹಳ್ಳಿ ತದಲಬಾಗೀ, ಠಾಣೆ ಬೀದರೀ ರಾಜಧಾನಿ ಭಾಗದ ಪುರನೂರ ಮುಹಮ್ಮದಪೂರ ಮತ್ತು ಇತರ, ಕಲಹರ ಪರಗಣೆಯ ದೇಸಗತಿಯ ವತನ (ಊರಗಳು ,ವರ್ತನಾ ಮತ್ತು ಚಾವರ ಇವರ ಇನಾಮ ಸಹಿತ) ಮತ್ತು ದೇಶಮುಖೀ, ಮೌಜೆ ಔಂಧ, ಬಾಲಾಘಾಟ ಪರಗಣೆ, ಕಲಹರ(ಇನಾಮ ಮತ್ತು ವರ್ತನಾ ಸಹಿತವಾಗಿ) ಮತ್ತು ಇತರ ಮಹಾಲಗಳ ಅಧಿಕಾರ, ಈ ಎಲ್ಲವುಗಳನ್ನು ನಿಮ್ಮಮೇಲೆ ಕೃಪೆ ಮಾಡಿದ್ದೇವೆ. ಆದ್ದರಿಂದ ಬರೆದು ತಿಳಿಸಿದಂತೆ

ಜಗದೇವನ ಪ್ರದೇಶವನ್ನು ವಶಕ್ಕೆ ತೆಗೆದುಕೊಳ್ಳಬೇಕು ಮತ್ತು ಆ ಪ್ರದೇಶದ ವಸೂಲಿ ಮೊದಲಿನಕ್ಕಿಂತಲೂ ಅಧಿಕ ಮಾಡಿ ತೋರಿಸಬೇಕು. ಮತ್ತು ಅದು ಎಷ್ಟು ಅಧಿಕ ವಸೂಲಿ ಆಗತ್ತದೆಯೋ ಅದನ್ನು ಆದೇಶದಂತೆ ಆಚರಣೆಯಲ್ಲಿ ತರಬೇಕು. ಸು. ೧೦೭೧ ಹಿ. ೧೦೮೨ ಜಖರ ೧೬ ಹುಪ.

೧೯೭

ಸು. ೧೦೫೮, ಶಾ.೧೫೮೦ ವೈಶಾಖ ವದ್ಯ ೧೦

ಹಿ. ೧೦೬೮ ಶಾಬಾನ ೨೨ ಇ.೧೬೫೮ ಮೇ ೧೬

ಎರಡನೆಯ ಅಲಿ ಆದಿಲಶಾಹ > ಮಿರ್ಝಾ ಮುರಾದ ಅಲಿ ಬೇಗ

ಮಹಾರಾಜ ಫರ್ಜಂದಿ ಶಾಹಜೀ ಭೋಸಲೆ, ಈ ದರಬಾರದ ಕಲ್ಯಾಣವನ್ನು ಇಚ್ಛಿಸುವವರಲ್ಲಿ ಒಬ್ಬರಾಗಿದ್ದಾರೆ. ಮತ್ತು ನೀವೂ ಕೂಡ ಅದರ [ಕಲ್ಯಾಣ ಇಚ್ಛಿಸುವುದರ] ಹತ್ತಿರವೇ ಇದ್ದೀರಿ. ನೀವಿಬ್ಬರೂ ಅದರಿಂದ ದೂರ ಹೋಗಬೇಡಿರಿ. ಕಲ್ಯಾಣೇಚ್ಛೆಯನ್ನು ಮಾಡಿರಿ. ಈಗ ಆದೇಶ ಮಾಡುವುದೇನೆಂದರೆ, ರಾಜಾ ಮತ್ತು ನೀವು ಒಂದಾಗಿ ಈ ದರಬಾರದ ಕಲ್ಯಾಣೇಚ್ಛೆಯ ಶರ್ತನ್ನು ಪೂರ್ಣ ಮಾಡಬೇಕು. ಅದರಲ್ಲಿ ಈ ದರಬಾರದ ಗೌರವ [ಮರ್ಜಿ] ಇದೆ. ಯಾವುದೇ ರೀತಿಯಿಂದ ಅಲಕ್ಷ ತೋರಿಸಬಾರದು. ಆದೇಶದ ಪ್ರಕಾರ ನಡೆಯಬೇಕು.

ಸು. ೧೦೫೮ ಹಿ, ೧೦೬೮ ಶಾಬಾನ (೨)೨ ಹುಪ.

ಕೋನೇಟಿ ನಾಯಕ

೧೯೮

ಸು.೧೦೫೮ ಶಾ.೧೫೮೦ ವೈಶಾಖ ವದ್ಯ ೧೦

ಹಿ. ೧೦೬೮ ಶಾಬಾನ ೨೨ ಇ. ೧೬೫೮ ಮೇ ೧೬

ಎರಡನೆಯ ಅಲಿ ಆದಿಲಶಾಹ > ಕೊನೇಟಿ ನಾಯಿಕ.

ಸಾಂಪ್ರತ ಹುಜೂರರಿಂದ ಅಫಜಲಖಾನ ಮೊಹಮ್ಮದಶಾಹೀ ಇವರನ್ನು ಸೈನ್ಯ ಸಹಿತವಾಗಿ ಆ ಭಾಗಕ್ಕೆ ನೇಮಿಸಲಾಗಿದೆ. ಅಲ್ಲದೇ ಮಹಾರಾಜ ಫರ್ಜಂದಿ ಶಾಹಜೀ ಭೋಸಲೆ ಆ ಕಡೆಗೆಯೇ ಇದ್ದಾರೆ. ಆದ್ದರಿಂದ ನೀವು ಮೇಲೆ ಹೇಳಿದ ಖಾನ ಮತ್ತು ರಾಜಾ ಇವರ ಆಜ್ಞೆಯಲ್ಲಿ ಇದ್ದು ರಾಜ್ಯದ ಕಲ್ಯಾಣದ ಇಚ್ಛೆಯನ್ನು ಉಳಿಸಿಕೊಳ್ಳಬೇಕು. ಬೇರೆ ಜನರ ಮಾತುಗಳಿಗೆ ಎಳ್ಳಷ್ಟೂ ಕಿವಿಗೊಡಬಾರದು. ಕಿವಿಕೊಡುವದರಲ್ಲಿ ನಿಮ್ಮ ಲಾಭ ಏನೂ ಇಲ್ಲಾ ಎಂದು ತಿಳಿದುಕೊಂಡು ಆದೇಶದ ಪ್ರಕಾರ ನಡೆಯಬೇಕು. ಸು. ೧೦೫೮, ಹಿ. ೧೦೬೮ ಶಾಬಾನ ೨೨ ಹುಪ.

ಮೈಸೂರು ಅರಸರು

೧೯೯

ಸು,೧೦೫೮ , ಶಾ.೧೫೮೦ ವೈಶಾಖ ವದ್ಯ ೧೦

ಹಿ, ೧೦೬೮ ಶಾಬಾನ ೨೨ ಇ. ೧೬೫೮ ಮೇ ೧೬

ಎರಡನೆಯ ಅಲಿ ಆದಿಲಶಾಹ > ನರಸರಾಜ ಮೈಸೂರಕರ

ಸಾಂಪ್ರತ ಹುಜೂರರಿಂದ ಅಫಜಲಖಾನ ಮೊಹಮ್ಮದಶಾಹಿ ಇವರನ್ನು ಸೈನ್ಯ ಸಹಿತವಾಗಿ ಕರ್ನಾಟಕದ ಭಾಗಕ್ಕೆ ನೇಮಿಸಲಾಗಿದೆ. ಮತ್ತು ಮಹಾರಾಜ ಫರ್ಜಂದಿ ಶಾಹಜಿ ಭೋಸಲೆ ಇವರು ಆ ಭಾಗದಲ್ಲಿಯೇ ಇದ್ದಾರೆ. ಅವರು ಬಹಳ ಮೊದಲಿನಿಂದಲೂ ದರಬಾರದ ಕಲ್ಯಾಣದ ಇಚ್ಛೆಯನ್ನು ಬಯಸುತ್ತಾರೆ. ಆದ್ದರಿಂದ ನೀವು ಮೇಲೆ ಹೇಳಿದ ಖಾನ ಮತ್ತು ಮಹಾರಾಜ ಇವರೊಂದಿಗೆ ಕೂಡಿ ಅವರ ಸಮ್ಮತಿಯಿಂದ ರಾಜ್ಯ ಕಲ್ಯಾಣೇಚ್ಛೆಯ ಶರ್ಯತ್ತನ್ನು ಕಾರ್ಯಗತಗೊಳಿಸುವದು, ಇದು ನಿಮ್ಮ ಉತ್ಕರ್ಷಕ್ಕೂ ಕಾರಣವಾಗುತ್ತದೆ. ಸು. ೧೦೫೮ ಹಿ. ೧೦೬೮ ಶಾಬಾನ ೨೨, ಹುಪ.

ದೊಡ್ಡ ಜಂಬಗಿ ಪರಗಣೆ

೨೦೦

ಸು, ೧೦೪೪ ಶಾ. ೧೫೬೬ ಶುದ್ಧ ೪
ಹಿ. ೧೦೫೪ ಸಪರ ೨ (೧೨ ?) ಇ. ೧೬೪೪ ಮಾರ್ಚ ೩೧ (ಎಪ್ರಿಲ೧೦)

ಮುಹಮ್ಮದ ಆದಿಲಶಾಹ > ವರ್ತಮಾನ ಮತ್ತು ಭಾವಿ ಅಧಿಕಾರಿಗಳು ಮತ್ತು ದೇಸಾಯಿ ಪರಗಣೆ ದೊಡ್ಡ ಜಂಬಗಿ.

ಮೇಲೆ ಹೇಳಿದ ಪರಗಣಾದ ದೇಸಾಯಿ ಹನುಮಂತ ಇವನು ಮುಹಮ್ಮದನಗರದ ಮಸಲತ್ತಿನಲ್ಲಿ ಶೌರ್ಯ ತೋರಸಿ ಸೇವೆಯಲ್ಲಿ ಪ್ರಗತಿ ಮಾಡಿದ್ದಾನೆ. ಅದಕ್ಕಾಗಿ ಅವನಿಗೆ ಶಾಹೀ ವಸ್ತ್ರಗಳನ್ನು ಕೊಟ್ಟು ಸನ್ಮಾನ ಮಾಡಲಾಗಿದೆ. ಈಗ ಅವನಿಗೆ ಎರಡು ಊರುಗಳು ಮತ್ತು ಜಮೀನ ಅವುಗಳ ಮೇಲೆ ಕೆಲವೊಂದು ಹಕ್ಕುಗಳನ್ನೂ ಅವನಿಗೆ ಕೊಡಲಾಗಿದೆ. ಮೊದಲಿನ ಅನುಭವದಪ್ರಕಾರನೇ ನಡೆಸಬೇಕು. ಯಾರಿಂದನೂ ಅಡತಡೆ ಬರದಂತೆ ನೋಡಿಕೊಳ್ಳಬೇಕು. ಅಡತಡೆ ತರುವವರಿಗೆ ಎಚ್ಚರಿಕೆ ಕೊಡಬೇಕು ವಂಶಪರಂಪರೆಯಾಗಿ ಈ ಇನಾಮನ್ನು ನಡೆಸಬೇಕು. ಸು, ೧೦೪೪, ಹಿ.೧೦೫೪ ಸಪರ ೨ (೧೨?) ಹುಪ. ಶಬ್ಬಾಸಖಾನ ಮಂತ್ರಿಗಳ ಮಾಹಿತಿಯಿಂದ.

೨೦೧

ಸು, ೧೦೬೬, ಶಾ. ೧೫೮೭ ಮಾಘ ವದ್ಯ ೨
ಹಿ, ೧೦೭೬ ಶಾಬಾನ ೧೬ ಇ. ೧೬೬೬ ಫೆಬ್ರವಾರಿ ೧೧

ಎರಡನೆಯ ಅಲಿ ಆದಿಲಶಾಹ > ವರ್ತಮಾನ ಮತ್ತು ಭಾವಿ ಅಧಿಕಾರಿ ಮತ್ತು ದೇಸಾಯಿ ದೊಡ್ಡ ಜಂಬಗಿ

ಪರಗಣೆ ಮಜಕೂರದ ದೇಸಾಯಿ ಹಣಮಂತ ಇವರು ಐದನೂರು ಕಾಲ್ದಳ ಮತ್ತು ನೂರು ಕುದುರೆಯ ಸವಾರರೊಂದಿಗೆ ಬಂದು ಬಾದಶಾಹೀ ಸೇವೆಯಲ್ಲಿ ಪ್ರಗತಿ ತೋರಿಸಿದ್ದಾನೆ. ಆದ್ದರಿಂದ ಭಾಯೀಖಾನ ತರೀನನ ವಶದಲ್ಲಿದ್ದ ಬರಗಿ ಗ್ರಾಮವನ್ನು ಹಣಮಂತ ದೇಸಾಯಿಗೆ ಇನಾಮು ಹಾಕಿ ಕೊಡಲಾಗಿದೆ. ಆದ್ದರಿಂದ ಮೇಲಿನ ಊರನ್ನು ತಂಬಾಕು ಟೀಪಬರ್ಗ ಜಕಾತ ಮತ್ತು (ಮೊದಲಿನ) ಕಾಣಿಕೆಗಳನ್ನು ಬಿಟ್ಟು ಸರ್ವ ಬಾಬಗಳನ್ನು ಅವನ ವಶಕ್ಕೆ ಕೊಡಬೆಕು ಮತ್ತು ಚಲಾವಣೆಯಲ್ಲಿಡಬೇಕು. ಸು, ೧೦೬೬ ಹಿ, ೧೦೭೬ ಶಾಬಾನ ೧೬, ಹುಪ.

೨೦೨

ಸು, ೧೦೮೪,   ಶಾ. ೧೬೦೬ ವೈಶಾಖ ವದ್ಯ ೬
ಹಿ, ೧೧೯೫ ಜವಲ ೧೯   ಇ. ೧೬೮೪ ಎಪ್ರಿಲ ೨೪

ಸಿಕಂದರ ಆದಿಲಶಾಹ > ದೇಸಾಯಿ ಪರಗಣೆ ದೊಡ್ಡ ಜಂಬಗಿ

ಈ ಸಮಯದಲ್ಲಿ ಮೊಘಲರು ಮುಹಮ್ಮದಪೂರ ಭಾಗದ ಹತ್ತಿರ ಬಂದಿದ್ದಾರೆ. ಆದ್ದರಿಂದ ಆದೇಶವೇನೆಂದರೆ, ಅವರು ಕುದುರೆ ಸವಾರರು, ಕಾಲ್ದಳ, ಮದ್ದು ಗುಂಡುಗಳು, ಬಾಣ ಮತ್ತು ಇತರ ಸಾಮಾನಗಳೊಂದಿಗೆ ಶಾಹೀಸೇವೆಗಾಗಿ ದರಬಾರಕ್ಕೆ ಬಂದು ಸೇವೆಯ ಬುನಾದಿಯ ಪ್ರಗತಿ ಮಾಡಬೇಕು. ತಿಲ ಮಾತ್ರ ಆಲಸ್ಯ ಮಾಡಬಾರದು. ಅದರಲ್ಲಿಯೇ ಅವರ ಸೇವೆಯ ಉತ್ಕರ್ಷ ಇದೆ. ಇದರಬಗ್ಗೆ ಅಹಮ್ಮದ ತಾನಹ ಖವಾಸ ಇವರನ್ನು ಕಳಿಸಿಕೊಡಲಾಗಿದೆ. ಸು, ೧೦೮೪, ಹಿ, ೧೧೯೫, ಜವಲ ೧೯ ಹುಪ.

ಮಾಣ ಪರಗಣೆ

೨೦೩

ಸು, ೧೦೩೫   ಶಾ.೧೫೫೬ ಮಾರ್ಗಶೀರ್ಷ ಶುದ್ಧ೧೨
ಹಿ, ೧೦೪೪ ಜಖರ ೯   ಇ. ೧೬೩೪ ನವ್ಹೆಂಬರ ೨೧

ಮಹಮ್ಮದ ಆದಿಲಶಾಹ > ಮಾಣ ಪರಗಣೆಯ ದೇಸಾಯಿ

ಈ ಪರಗಣೆಯಲ್ಲಿಯ ಕಾಸೇಗಾವ ಭಾಗ ಬಾಬಾಜಿ ಭೋಸಲೆನ ವಶದಲ್ಲಿತ್ತು. ಅದನ್ನು ಬಿಡಿಸಿ ಎಲ್ಲ ಬಾಬಗಳ ಸಹಿತವಾಗಿ ಲಷ್ಕರಖಾನನಿಗೆ (ಇನಾಮು) ಕೊಡಲಾಗಿದೆ. ಅವನ ವಶಕ್ಕೆ ಕೊಡಬೇಕು. ಸು, ೧೦೩೫ ಹಿ,೧೦೪೪ ಜಖರ ೯ ಹುಪ. ದೌಲತಖಾವಾಸಖಾನನ ಮಾಹಿತಿಯಿಂದ.

೨೦೪

ಹಿ, ೯೭೨ ರವಲ ೨೩ ಶಾ. ೧೪೮೬ ಕಾರ್ತಿಕ ವದ್ಯ ೧೦

ಇ. ೧೫೬೪ ಅಕ್ಟೋಬರ ೨೯

ಒಪ್ಪಂದ ಪತ್ರ [ಕೌಲನಾಮು]

ಇಂದು ಅಲಿ ಆದಿಲಶಾಹ ಮತ್ತು ಬೇಸ್ಮಿ ಮುದಗಲ ಬಾಬೂಜಿ ದಿಘಲೆಯೊಂದಿಗಿನ ಒಪ್ಪಂದಪತ್ರ.

ಕೋಟೆ ಶಾಹದುರ್ಗದ ದೇಸಗತಿ ಮತ್ತು ಚೌಧರಿಗಿ ಮತ್ತು ದೇಸಕುಲಕರ್ಣಿಕಿ ಹಾಕಿಕೊಟ್ಟಿದೆ. ಇದು ನಿನ್ನ ಮಕ್ಕಳು ಮತ್ತು ವಂಶಪರಂಪರೆಯಾಗಿ ಹಾಕಿ ಕೊಟ್ಟಿದೆ. ಹೊಸದಾಗಿ ಕಟ್ಟಿದ ಕೋಟೆಯ ಕೆಳಗೆ ಇನ್ನಾರದೂ ಹಕ್ಕು ಇಲ್ಲ ಅದನ್ನು ನೀನು ನಡೆಸಿಕೊಂಡು ಹೋಗಬೇಕು.

ಕೋಟೆಯ ವಿವರಗಳು.

೧ ಕಸಬೇ ಕೋಟೆ ೨ ಸಣ್ಣ ಹಳ್ಳಿ ಅಚಲೇರ ೩ ಸಣ್ಣ ಹಳ್ಳಿ ಜೋಲದ ಆಷ್ಟಾ ೪ ಕಸಬೆ ಆಣದೂರು ೫ ಸಣ್ಣ ಹಳ್ಳಿ ಆಲೂರು ೬ ಸಣ್ಣ ಹಳ್ಳಿ [ಮೌಜೆ] ಗಕಥೇರ ೭ ಕಸಬೆ ಮೋರಂಬ ೮ ಮೌಜೆ ಅವಲಕೋಟ ೯ ಸಣ್ಣ ಹಳ್ಳಿ ಹೂವಿನಸಲಗರಾ ೧೦ ಅಕ್ಕಲಕೋಟ ಪರಗಣೆ ೧೧ ಗುಂಜೋಟಿ ಪರಗಣೆ ೧೨ ತಪೆ ಥೋಂಕೀ ೧೩ ಪಾ. ಆಲಂದ ೧೪ ಮೌಜೆ ಅರಲಕರಂಜೀ ೧೫ ಕಸಬೇ ತೇರ ೧೬ ಕಸಬೇ ಮಣೂರ ೧೭ ಮಹಿಂದಿರೀ ಪರಗಣೆ ೧೮ ತಪೆ ಪಾಂಗರಿ ೧೯ ಧಾರಾಶಿವ ೨೦ ಕಸಬೆ ಅಪಸಿಂಗ ೨೧ಕಸಬೆ ಮಾಹೇವಾಲ

ಆದ್ದರಿಂದ ನೀವು ದೇಸಾಯಿ ಚೌಧರಿ ಮತ್ತು ದೇಸ ಕುಲಕರ್ಣಿ ವಿಷಯಗಳನ್ನು ತಿಳಿದುಕೊಂಡು ವಂಶ ಪಾರಂಪರ್ಯವಾಗಿ ಕೆಲಸ ಮಾಡುತ್ತಾ ಹೋಗಬೇಕೆಂದು ಈ ಒಪ್ಪಂದ ಪತ್ರವಿದೆ. ಇದರಲ್ಲಿ ಯಾರೂ ಅಡ್ಡ ಬರುವುದಿಲ್ಲ. ಒಂದು ವೇಳೆ ಬಂದರೆ ಅವರನ್ನು ಕರೆಯಿಸಿ ಹೇಳಲಾಗುತ್ತದೆ. ಈ ಜಗತ್ತು ಇರುವವರೆಗೆ ನಿನಗೆಯೇ ಈ ಆಸ್ತಿ [ವತನ] ಇದೆ. ಇನ್ನೊಬ್ಬರ ದಾಖಲಾತಿ ಇದರಲ್ಲಿ ಇಲ್ಲ. ಎಲ್ಲ ಬಾಬುಗಳನ್ನು ಪ್ರಾಮಾಣಿಕವಾಗಿ ನಡೆಸುತ್ತ ಹೋಗಬೇಕು. ಇನ್ನೊಬ್ಬರ ಬಗ್ಗೆ ವಿಚಾರ ಮಾಡಬಾರದು. ಎಂದು ಈ ಒಪ್ಪಂದ ಪತ್ರ.

ಛ ೨೩ ಮಾಹೇ ರಬಿಲವಲ ಇಸನೇ ಸಬೈನ ಬಸೀಕೇಖಾನ ಆಲಿಶಾನ ಕಿಶ್ವರಖಾನ ವಜೀರ ಹುಕುಮತ ಮತ್ತು ಮಲಿಕ ಅಬದುಲ ಹುಸ್ಯೆನ ಮಜಮೂರ ಮಮಾಲಿಕ

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೨೪೦

ಶಾಹದುರ್ಗ ಕೋಟೆ

೨೦೫

ಸು. ೯೮೧, ಶಾ. ೧೫೦೩ ಚೈತ್ರ ಶುದ್ಧ ೧೨

ಹಿ, ೯೮೯ ಸಫರ ೧೧ ಇ. ೧೫೮೧ ಮಾರ್ಚ ೧೭

ಎರಡನೆಯ ಇಬ್ರಾಹಿಮ ಆದಿಲಶಾಹ > ಶಾಹದುರ್ಗ ಕೋಟೆಯ ಪ್ರಧಾನ ಮಂತ್ರಿ, ಅಧಿಕಾರಿಗಳು ಮತ್ತು ಕಾರಕೂನ.

ದೇಸಾಯಿ ಮತ್ತು ದೇಶಕುಲಕರ್ಣಿ ಇವರು ಈ ಕಿಲ್ಲೆ ಮತ್ತು ಇನ್ನೂ ಕೆಲವು ಭಾಗಗಳ ಬಗ್ಗೆ ಮುಧೋ ಬಾಬಜಿ ಇವರು ದರಬಾರಕ್ಕೆ ಬಂದು ಅರ್ಜಿ ಕೊಟ್ಟದ್ದೇನಂದರೆ, ಸನ ೯೭೬ ರಲ್ಲಿ ವಿಸೋ ಸುರೊ ತಂಕಲ ಇವರು ದೇಸಾಯಿಕಿ ಮತ್ತು ದೇಶಕುಲಕರ್ಣಿಕಿಗೆ ಅಡ್ಡಿ ಮಾಡಿ ಸ್ವಾಧೀನ ಮಾಡಿಕೊಂಡಿದ್ದಾರೆ. ಆದರೆ ಈ ವತನ ನನ್ನದೇ ಇರುವದರಿಂದ ಇದು ನನ್ನ ಹಕ್ಕಿನಲ್ಲಿಯೇ ಇರುವಂತೆ ಆದೇಶ ನೀಡಬೇಕು. ಒಂದು ವರ್ಷಕ್ಕೆ ಮೂರುನೂರು ಹೊನ್ನು ಮತ್ತು ಲವಾಜಿಮಾದ [ಪರಿವಾರ] ನಾಲ್ಕುಭಾಗ ಕಂತು ಒಪ್ಪಿಕೊಳ್ಳುತ್ತೇನೆ.

ಮೇಲೆ ಹೇಳಿದ ವಿಸೊ ಅವರು ಮಾಡಿದ ಒಪ್ಪಿಗೆಯನ್ನು ರದ್ದು ಮಾಡಬೇಕು ಅಂದರೆ ನಾವು ನಮ್ಮ ಕಂತು ಮುಟ್ಟಿಸುತ್ತೇವೆ. ಅರ್ಜಿ ಪ್ರಕಾರ ಮುಧೊ ಬಾಬಜೀಗೆ ಮೇಲೆ ಹೇಳಿದ ದೇಸಾಯಿಗಿರಿ ಮತ್ತು ದೇಶಕುಲಕರ್ಣಿಕಿ ಕೊಡುವುದನ್ನು ನಿರ್ಧರಿಸಲಾಗಿದೆ. ಮೇಲೆ ಹೇಳಿದ ವಿಸೋ ಅವರ ಒಪ್ಪಂದವನ್ನು ರದ್ದು ಮಾಡಿ ನೂರಾ ಐವತ್ತು ಹೊನ್ನುಗಳ ಗುತ್ತಿಗೆ ಮಾಡಲಾಗಿದೆ. ಪ್ರತಿವರ್ಷ ಈ ಹಣವನ್ನು ತೆಗೆದುಕೊಳ್ಳಬೇಕು. ಕಂತಿನ ಹಣವನ್ನು ಸರಕಾರದ ಕಾರಖಾನೆಯ ಉಪಯೋಗಕ್ಕಾಗಿ ನೇಮಿಸಲಾಗಿದೆ. ಅದನ್ನು ಸರಕಾರದ ಬೊಕ್ಕಸಕ್ಕೆ ದಾಖಲ ಮಾಡಬೇಕು. ಮುಧೋ ಬಾಬಜಿ ಇವರಿಗೆ ದೇಸಾಯಿ ಮತ್ತು ದೇಸ ಕುಲಕರ್ಣಿ ತಿಳಿಹೇಳಬೇಕು. ಸರಕಾರದ

ಕೆಲಸಗಳನ್ನು ಅವರಲ್ಲಿಯೇ ಆರಂಭಿಸಬೇಕು. ಸಲಹೆ ಕೇಳಬೇಕು. ತುಳಜಾಪೂರ ಸಹಿತ ಇತರ ವರ್ಷಾನುವರ್ಷ ಲವಾಜಮೆ ಚಾಲೂ ಇದ್ದ ಪುರಾವೆ ಇದೆ. ಆದರೂ ಯಾವದೇರೀತಿಯ ಅಡಚಣಿ ತರಬಾರದು. ಎಲ್ಲ ಬಾಬುಗಳ ವಿಷಯಕ್ಕೆ ಯೋಗ್ಯ ವ್ಯವಸ್ಥೆ ಮಾಡಬೇಕು. ಆದೇಶದಂತೆ ನಡೆದುಕೊಳ್ಳಬೇಕು. ಸು. ೯೮೧ ಹಿ.೯೮೯ ಸಫರ ೧೧. ಹುಪ.

೨೦೬

ಹಿ. ೯೯೧ ಶಾ. ೧೫೦೪ ಮಾಘ ವದ್ಯ ೧೦ (೧೧)
ಮೋಹರಮ ೨೪(೨೫) ಇ. ೧೫೮೩ ಫೆಬ್ರವಾರಿ ೭(೮)

ಎರಡನೆಯ ಇಬ್ರಾಹಿಮ ಆದಿಲಶಾಹ > ಶಹಾದುರ್ಗ ಕೋಟೆಯ ಅಧಿಕಾರಿ
ಗೈಬತ ಮಲಿಕ ಪ್ರದೇಶದ ಮಂತ್ರಿ ಮತ್ತು ಕಾರಕೂನ

ಈ ಸಮಯದಲ್ಲಿ ಈ ಕೋಟೆಯ ಕಿಲ್ಲೆಯ ದೇಸಾಯಿ ಮತ್ತು ದೇಶಕುಲಕರ್ಣಿ ಮುಧೋ ಬಾಬಜಿ ಇವರು ಅರ್ಜಿ ಮಾಡಿದ್ದೇನಂದರೆ, ಹಿರಿಯ ದಿವಾಣರ ಕಾಲದಲ್ಲಿ ಕೋಟೆಗೆ ಪಾಯಾ ಹಾಕಿ ಅದನ್ನು ಕಟ್ಟಿಸಲಾಗಿತ್ತು. ಆಗಿನಿಂದ ಈ ಕೋಟೆಯು ಮತ್ತು ಅದಕ್ಕೆ ಹೊಂದಿದ ಭಾಗ ಮತ್ತು ಭೋನಗಾವ ಇವೆಲ್ಲವುಗಳ ದೇಸಾಯಿಕಿ ಮತ್ತು ದೇಸಕುಲಕರ್ಣಿಕಿ ವಂಶಪರಂಪರೆಯಿಂದ ನನಗೆ ವತನ ಇತ್ತು ಅದು ಈಗಲೂ ನಡೆದುಕೊಂಡು ಬಂದಿದೆ. ಶತ್ರುಗಳು ಈ ಕೋಟೆಯ ಮೇಲೆ ಮುತ್ತಿಗೆ ಹಾಕಿದ್ದಾಗ ನಾನು ನಾನಾವಿಧದ ಕಷ್ಟಗಳನ್ನು ಮತ್ತು ಜೀವದೊಂದಿಗೆ ಆಟ ಆಡಿ ಏಕನಿಷ್ಠೆಯನ್ನು ತೋರಿಸಿದ್ದೇನೆ. ಹೀಗೆ ಇದ್ದಾಗಲೂ ಸಧ್ಯಾ ವಿಸೋ ಸುರೋ ತಂಗೋಲ ಇವರು ಅಡ್ಡಿ ಮಾಡಿ ಕಂತು ಒಪ್ಪಿಕೊಂಡು ಈ ಕಿಲ್ಲೆಯ ದೇಸಾಯಿಕಿ ತಮ್ಮಕಡೆ ಮಾಡಿಕೊಂಡಿದ್ದಾರೆ. ಮುಧೋ ಬಾಬಜಿ ದೇಸಾಯಿ ವಿಶ್ವಾಸು ಮತ್ತು ನಿಷ್ಠಾವಂತನಿದ್ದಾನೆ. ಆದ್ದರಿಂದ ಮೇಲೆ ಹೇಳಿದ ಎರಡೂ ಕೆಲಸಗಳನ್ನು ಅವರಿಗೆ ಒಪ್ಪಿಸಲಾಗಿದೆ. ಮುತ್ತಿಗೆಯಲ್ಲಿ ಅವರು ಉತ್ತಮ ಕೆಲಸ ಮಾಡಿದ್ದಕ್ಕಾಗಿ ಹಳೆಯ ಒಪ್ಪಂದವನ್ನು ರದ್ದು ಮಾಡಲಾಗಿದೆ. ಅವರು ಸ್ವಖುಶಿಯಿಂದ ಎರಡನೂರು ಹೊನ್ನುಗಳನ್ನು ಕಂತು ಒಪ್ಪಿಕೊಂಡು ಒಂದು ವರ್ಷದ ನಾಲ್ಕನೆಯ ಭಾಗ ಮತ್ತು ಕರಾರು ಪತ್ರಗಳನ್ನು ಹಾಜರ ಮಾಡಿದ್ದಾರೆ. ಆದ್ದರಿಂದ ಉಪಯುಕ್ತ ತಂಗೋಲ ಇವರನ್ನು ರದ್ದು ಮಾಡಿದೆ. ಶುಹೂರ ೯೮೩ ರಿಂದ ಎರಡೂ ಕೆಲಸಗಳು ಮುಧೋ ಬಾಬಜಿ ಅವರ ಹತ್ತಿರ ಕಾಯಮ ಅಂತ ತಿಳಿದು ಆ ಕೆಲಸಗಳನ್ನು ಅವರಿಂದ ಮಾಡಿಸಿಕೊಳ್ಳಬೇಕು. ದೇಸಾಯರು ಬರೆದ ಕಾಯದೇ ಕಾನೂನ ಇದ್ದರೆ ಅದನ್ನು ಅವರಿಗೆ ಕೊಡಬೇಕು. ಆ ಕೆಲಸಕ್ಕಾಗಿ ಊಳಿಗವೇ ಮೊದಲಾದವುಗಳನ್ನು ವರ್ಷದ ನಂತರ ಇನ್ನೂ ಇದ್ದರೆ ಅದನ್ನು ಅವರಿಗೆ ಕೊಡಬೇಕು. ಮೇಲೆ ಹೇಳಿದ ಎರಡುನೂರು ಹೊನ್ನಿನ ಕಂತು ಈ ಕೋಟೆಯ ಕಟ್ಟಡಗಳ ಸಾಮಗ್ರಿಗಾಗಿ ಮಂಜೂರು ಮಾಡಲಾಗಿದೆ. ಆ ಹಣವನ್ನು ವಸೂಲಿ ಮಾಡಿ ಕೋಟೆಯ ಕಟ್ಟಡಕ್ಕಾಗಿ ಖರ್ಚುಮಾಡಬೇಕು. ಈ ದೇಸಾಯಿ ಅವರು ಹಳಬರು ಅಂತಾ ತಿಳಿದು ಜಮೀನದ ಅಡ್ಡಿ ಮಾಡಬಾರದು.

ಹಿ ೯೯೧ ಮೋಹರಮ ೨೪ ಹುಪ. ಅಮೀರ ಜುಮಲಾ ಮತ್ತು ಸರೇ ಸರ ನೌಬತ ದಿಲಾವರಖಾನ ಇವರ ಮಾಹಿತಿಯಿಂದ.

ಹಿ ೧೦ ೧೪ ೧೬ ಜವಲ   ಶಾ. ೧೫೨೭ ಆಶ್ವಿನ ವದ್ಯ ೨
ಇ. ೧೬೦೫ ಸಪ್ಟಂಬರ ೧೯

ಎರಡನೆಯ ಇಬ್ರಾಹಿಮ ಆದಿಲಶಾಹ > ಶಾಹದುರ್ಗ ಕೋಟೆಯ ಅಧಿಕಾರಿ
ಗೈಬತ ಮಲಿಕ ಫಕ್ರುದ್ದೀನ ಮತ್ತು ಕಾರಕೂನ

ಶಾಹದುರ್ಗ ಕಿಲ್ಲೆಯ ದೇಸಾಯಿ ಮತ್ತು ದೇಶಕುಲಕರ್ಣೀ ಮುಧೋ ಬಾಬಜಿ ಇವರು ಅರ್ಜಿ ಮಾಡಿದ್ದಾರೆ,

ನವದುರ್ಗ ಕಿಲ್ಲೆಯ ಪಾಯಾ ಹಾಕಿದಾಗಿನಿಂದ ಈ ಕಿಲ್ಲೆ ಮತ್ತು ಅದಕ್ಕೆ ಹೊಂದಿದ ಭಾಗ ಇವುಗಳ ದೇಸಾಯಿಕಿ ಮತ್ತು ದೇಸಕುಲಕರ್ಣಿಕಿ ವತನ ಅಂತಾ ವಂಶಪಾರಂಪರೆಯಿಂದ ನನಗೆ ಕೊಡಲಾಗಿದೆ. ಅದು ಆಗಿನಿಂದಲೂ ನನ್ನ ಹತ್ತಿರವೇ ಇದೆ. ಶತ್ರುಗಳು ಈ ಕಿಲ್ಲೆಯ ಮೇಲೆ ದಾಳಿ ಮಾಡಿದಾಗೆ ಮತ್ತು ಅಂಥ ಪ್ರಸಂಗದಲ್ಲಿ ನಾನಾರೀತಿಯ ಕಷ್ಟಗಳನ್ನು ತೆಗೆದುಕೊಂಡು ನಾನು ಏಕನಿಷ್ಠೆಯನ್ನು ತೋರಿಸಿದೀನಿ. ನಂತರ ವಿಸೋ ಸುರೋ ಇವರು ಕೆಲವು ರೀತಿಯ ಅಡೆತಡೆ ತಂದು ಕಂತ ಕಬೂಲ ಮಾಡಿಕೊಂಡು ಈ ಕಿಲ್ಲೆಯ ದೇಸಾಯಿಕಿ ತಮ್ಮದಾಗಿ ಮಾಡಿಕೊಂಡರು. ಆದರೆ ನನ್ನನಿಷ್ಠೆ ಮತ್ತು ಪ್ರಾಮಾಣಿಕ ಇವುಗಳಿಂದ ನನಗೆ ಕೊಟ್ಟ ವತನ ದೇಸಾಯಿಕಿ ಮತ್ತು ದೇಶಕುಲಕರ್ಣಿಕಿ ಇವು ನನಗೇ ಕೊಟ್ಟು ವಿಸೋ ಸುರೋ ಇವರು ಕೊಟ್ಟ ಒಪ್ಪಂದವನ್ನು ರದ್ದು ಮಾಡಿದರು. ಈ ವಿಷಯದ ಬಗ್ಗೆ ಕೊಟ್ಟ ಆದೇಶ ನನ್ನ ಹತ್ತಿರ ಇದೆ. ಹೀಗೆ ಇದ್ದಾಗ್ಯೂ ಸಧ್ಯಾ ಈ ವರ್ಷ ಅಲಿಶಾಹ ಸಖಾವತಖಾನ ಖವ್ವಾಸ ಮತ್ತು ನಾಮಾಜಿ ಮುಧೋ ಇವರ ಹುಂಡಿ ಒಪ್ಪಿಕೊಂಡು ಮೇಲಿನ ಕೆಲಸಗಳನ್ನು ವಿಸೋ ಸುರಾ ತಮ್ಮಂತೆ ಮಾಡಿಕೊಂಡರು. ಈ ವಿಷಯದಲ್ಲಿ ಮುಂದಿನ ವ್ಯವಸ್ಥೆಯನ್ನು ಮಾಡಬೇಕು. ಎಲ್ಲದರ ಬಗ್ಗೆ ವಿಚಾರಮಾಡಿ ಮೇಲೆ ಹೇಳಿದ ಹುಂಡಿಯನ್ನು ರದ್ದು ಮಾಡಲಾಗಿದೆ. ಮುಧೋ ಬಾಬಜಿ ಇವರ ಒಪ್ಪಂದವನ್ನೂ ಮಾಫ ಮಾಡಲಾಗಿದೆ. ಅವರಿಂದ ದೇಸಾಯಿಕಿ ಮತ್ತು ದೇಸಕುಲಕರ್ಣಿಕಿ ಇತ್ಯಾದಿ ಕೆಲಸಗಳನ್ನು ತೆಗೆದುಕೊಳ್ಳಬೇಕು, ಮತ್ತು ಅದರ ಎಲ್ಲ ಹಕ್ಕುಗಳನ್ನೂ ವರ್ಷಾನುವರ್ಷ ಇದ್ದದ್ದು ಅದನ್ನು ಅವನಹತ್ತಿರ ನಡೆಸಬೇಕು. ಸು ೧೦೦೫, ಹಿ.೧೦೧೪ ಜಮಾದಿಲಾವಲ ೧.

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೨೪೬

ಸು, ೧೦೦೯ ಶಾ.೧೫೩೦ ಮಾಘ ಶುದ್ಧ ३
ಹಿ.೧೦೧೭ ಜಿಲ್ಕದಾ ೨ ಇ. ೧೬೦೯ ಜಾನೆವಾರಿ ೨೮

ಎರಡನೆಯ ಇಬ್ರಾಹಿಮ > ಶಾಹದುರ್ಗ ಕೊಟೆಯ ಅಧಿಕಾರಿ ಗೈಬತ ಶಾಹಾ ವಲಿ ಮತ್ತು ಕಾರಕೂನ

ರಾಜ್ಯದ ಲೆಕ್ಕ ತಪಾಸಣೆ ಯಲ್ಲಿ ೨೦ ಪಂಡಿತರನ್ನು ಇವರ ಸಂಬಳ ಎಂದು (ಈ ಕಿಲ್ಲೆಯ ದೇಸಾಯಿ ಮುಧೋ ಬಾಬಜಿ ಯವರ ಪುತ್ರ ತಾನಾಜಿ ಮುದಗಲ ದೇಸಾಯಿಕಿ ಮಾಡತಾ ಇದ್ದಾರೆ.) ಎರಡನೂರಾ ಐವತ್ತು ಹೊನ್ನಗಳು = ಇಪ್ಪತ್ತೇಳು ನೌರಸ ಏಳು ಹೊನ್ನಗಳನ್ನು ಕೊಡಲಾಗಿದೆ. ಅದರ ವಿವರಗಳು ಈ ಕೆಳಗಿನಂತಿವೆ.

ಮಾಮಲಾ ರಾಯಚೂರದ ಸು. ೧೦೦೮ ರ ವರುಷದ ಲೆಕ್ಕದಲ್ಲಿಯ ೧೭೫ ಹೊನ್ನ =೧೯ ನೌರಸ, ೪ ಹೊನ್ನ.

ಮುಸ್ತಫಾದ ಹಿಸಾರದ ಸು.೧೦೦೬ದ್ದು ೨೯ ಹೊನ್ನ = ೨ ನೌರಸ, ३ ಹೊನ್ನ. ಚಂದನ ಕೋಟೆಯ ಸು. ೧೦೦೮ ರದ್ದು ೨೫ ಹೊನ್ನ = ನೌರಸ, ೭ ಹೊನ್ನ, ಆಲಮೇಲ ಪರಗಣೆಯ ಪೈಕಿ ಬೇತನೂರ ಊರಿನದ್ದು ೨೯ ಹೊನ್ನ =३ನೌರಸ,

ಹೊನ್ನ. (ಇದರ ವಿವರ)

ಸು. ೧೦೦೪ ರ ಪೈಕಿ ೧೪.೫ ಹೊನ್ನ = ೧ ನೌರಸ, ೫,೫ ಹೊನ್ನ.

ಸು.೧೦೦೬ ರ ಪೈಕಿ ೧೪.೫ ಹೊನ್ನ = ೧ ನೌರಸ, ೫.೫ ಹೊನ್ನ .

ಆದ್ದರಿಂದ ಮೇಲಿನ ಪ್ರಕಾರ ಹಣವನ್ನು ಖರ್ಚು ಮಾಡಬೇಕು. ಆದೇಶದ ಪ್ರಕಾರ ನಡೆಯಬೇಕು. ಸು, ೧೦೦೯, ಹಿ,೧೦೧೭

೨೦೯

ಎರಡನೆಯ ಇಬ್ರಾಹಿಮ ಆದಿಲಶಾಹ > ಶಾಹದುರ್ಗ ಕೋಟೆಯವರು.

ಸಂದಲಾಪೂರ ಮಾಮಲಾದಲ್ಲಿಯ ಶಾಹಾದುರ್ಗ ಠಾಣೆಯ ತನಿಖೆಗಾಗಿ ಇದ್ದದ್ದು ಮತ್ತು ಅದೇ ಠಾಣೆಯಲ್ಲಿಯ ಐವತ್ತೊಂದು ಊರುಗಳನ್ನು ಅದೇ ಠಾಣೆಯಲ್ಲಿ ತನಿಖೆಗೆ ಕೊಡಲಾಗಿದೆ. ಅದರ ವಿವರ ಈ ರೀತಿಯಲ್ಲಿ ಇದೆ. (ಇಲ್ಲಿ ಐವತ್ತು ಊರುಗಳ ಹೆಸರು ಕೊಡಲಾಗಿದೆ) ಆದರೆ ಈ ಊರುಗಳನ್ನು ಮೊದಲಿನಹಾಗೆ ಉಪರ್ಯುಕ್ತ ಕಿಲ್ಲೆಯ ಸ್ವಾಧೀನ ಮಾಡಬೇಕು. ತಾ –ಹುಪ. ದಿಯಾನತುಮ್ಲುಲ್ಕ ಸರ ಮಜಲೀಸೀ ಇವರ ಮಾಹಿತಿಯಿಂದ.

೨೧೦

ಸು. ೧೦೩೭,	ಶಾ.೧೫೫೮ ಕಾರ್ತಿಕ ಶುದ್ಧ ೩
ಹಿ. ೧೦೪೬ ಜಖರ ೨	ಇ. ೧೬೩೬ ಅಕ್ಟೋಬರ ೨೨

ಮಹಮ್ಮದ ಆದಿಲಶಾಹ > ಶಾಹದುರ್ಗ ಕೋಟೆಗಾಗಿ ಎಂದೇ ನೇಮಿಸಲಾದ ಹವಾಲದಾರ ಮತ್ತು ಕಾರಕೂನ.

ಈ ಪ್ರದೇಶದಲ್ಲಿಯ ದೇಸಾಯಿ, ದೇಶಕುಲಕರ್ಣಿ ಮತ್ತು ನಾಡಗೌಡ ಇವರ ಮೇಲೆ ಒಂದು ವರ್ಷ ಕರ ಕೂಡಿಸಲಾಗಿದೆ. ಆ ಪ್ರಕಾರ ಈ ಕಿಲ್ಲೆಯ ಸರದೇಸಾಯಿ, ದೇಶಕುಲಕರ್ಣಿ ಮತ್ತು ನಾಡಗೌಡ ಹಣಮಜೀ ತಾನಾಜೀ ಇವರಿಗೆ ಒಂದು ವರ್ಷ ಕರ ಕಾಯಮ ಮಾಡಲಾಗಿದೆ. ಅದನ್ನು ವಸೂಲ ಮಾಡಿ ದರಬಾರಕ್ಕೆ ಕಳಿಸಬೇಕು. ಅಂತೋ ಖಂಡೇರಾವ ಇವರು ಈ ಭಾಗದ ನಾಡಗೌಡಕೀ ಸಲುವಾಗಿ ಕರಾರು ಒಪ್ಪಿಕೊಂಡು ಆದೇಶ ಪಡೆದಿದ್ದಾರೆ. ಆದರೆ ಅದರದು ಈ ಕೋಟೆಯ ನಾಡಗೌಡಕಿಯ ವತನದಾರಕ್ಕೆ ಯಾವದೇ ಸಂಬಂಧ ಇಲ್ಲ. ಅವರ ಕರದ ಬದಲಾಗಿ ಈ ಕೋಟೆಯ ನಾಡಗೌಡಕೀಯನ್ನು ಯಾರು ಒಪ್ಪಿದ್ದಾರೋ ಅದನ್ನಷ್ಟೇ ಚಾಲತಿಯಲ್ಲಿ ಇಡಬೇಕು. ಉಳಿದ ಹಕಲಾಜಿಮೆ, ವತನ ಇತ್ಯಾದಿ ಯಾರದು ಇದೆಯೋ ಅವರಿಗೆ ವಂಶಪರಂಪರೆಯಿಂದ ಬಂದದ್ದು ಮುಂದುವರಿಸಬೇಕು.

ಸು, ೧೦೩೭ ಹಿ. ೧೦೪೯ ಜಖರ ೨

೨೧೧

ಸು.೧೦೪೨ ಶಾ. ೧೫೬೩ ಕಾರ್ತಿಕ
ಹಿ ೧೦೫೧ ಶಾಬಾನ ಇ. ೧೬೪೧ ಅಕ್ಟೋಬರ ನವ್ಹೆಂಬರ

ಮಹಮ್ಮದ ಆದಿಲಶಾಹ> ಶಾಹದುರ್ಗ ಕೋಟೆಯ ದೇಸಾಯಿ, ಕುಲಕರ್ಣಿ ಮತ್ತು ಸರಮುಕಾದಮ.

ಈ ಕೋಟೆಯ ಅಧೀನದಲ್ಲಿ ಕೆಳಗಡೆ ಬರುವ ಬಹುತೇಕ ಊರುಗಳು ಠಾಣಾದವರಿಂದ ಮತ್ತು ಇತರರಿಂದ ಆಗುವ ತೋಂದರೆಗೆ ಬೇಸತ್ತು ಊರುಗಳನ್ನು ಬಿಟ್ಟು ಹೋಗಿದ್ದಾರೆ. ಪ್ರಜೆಗಳೆಲ್ಲಾ ಅನಾಥರಾಗಿದ್ದಾರೆ. ಅದರಿಂದ ಬಹಳಷ್ಟು ಜಮೀನುಗಳು ಬಿತ್ತದೆ ಉಳಿದುಬಿಟ್ಟವೆ. ಅದರಿಂದ ಅವರು ನಿರುದ್ಯೋಗಿಗಳಾಗಿ ತಿನ್ನುಣ್ಣಲು ಏನು ಮಾಡುತ್ತಾರೆ, ಮತ್ತು ಅವರ ಕಲ್ಯಾಣ ಹೇಗೆ ಆಗಬೇಕು? ಈಗ ಸುತ್ತಮುತ್ತ ಇದ್ದ ರೈತರಿಗೆ ಆಶ್ವಾಸನ, ಭರವಸೆ ಕೊಟ್ಟು ಕರೆ ತರಬೇಕು, ಠಾಣೆಯ ತಪ್ಪು ತಡೆಗಳನ್ನು ದೂರ ಮಾಡಿ ಜಮೀನದ ಒಂದು ತುಂಡು ಕೂಡ ಪಡಾ ಬೀಳಗೊಡಬಾರದು. ಮತ್ತು ಎಲ್ಲ ಊರುಗಳನ್ನು ಉತ್ಕರ್ಷ ಮಾಡಬೇಕು. ಇದನ್ನೆಲ್ಲವನ್ನೂ ಚರ್ಚಿಸಿ ಒಳ್ಳೆಯ ವ್ಯವಸ್ಥೆಯನ್ನು ಮಾಡಲಾಗುವದು. ಆದೇಶದಂತೆ ನಡೆದುಕೊಳ್ಳಬೇಕು. ಸು, ೧೦೪೨ ಹಿ. ೧೦೫೧ ಶಾಬಾನ. ಹುಪ. ವಝೀರೆ ಹುಕುಮತ ಇಕಲಾಸಖಾನ ಇವರ ಮಾಹಿತಿಯಿಂದ.

೨೧೨

ಸು, ೧೦೬೬ ಶಾ. ೧೫೮೭ ಅ. ಶ್ರಾವಣ ಶುದ್ಧ ೪
ಹಿ, ೧೦೭೬ ಮೋಹರಮ ೨ ಇ.೧೬೬೫ ಜುಲೈ ೬

ಖನೆಯ ಅಲಿ ಆದಿಲಶಾಹ > ರತಾಜಿ ದೇಸಾಯಿ ಮ್ಹಸವಾಡ ಸಣ್ಣಗ್ರಾಮ, ಪರಗಣೆ ಮಾಣ

ಮೇಲೆ ಹೇಳಿದ ಪರಗಣೆಯಲ್ಲಿಯ ಕಾಸೇಗಾವ ಸಣ್ಣಗ್ರಾಮದ ವಖಾರಗಳು ಮತ್ತು ವಹಲೀ ಈ ಖಾತೆಯಲ್ಲಿಯ ಜನರಿಗೆ ಜಮಾಬಂದಿಯ ಹಿಸ್ಸೆ ಎಂಬುದು ಚಾಲತಿಯಲ್ಲಿದೆ. ಸಧ್ಯ ದರಬಾರದ ಲಕ್ಷಕ್ಕೆ ಬಂದದ್ದೇನಂದರೆ ನಾಯಕಜಿ ಪಂಢ್ಯಾ ಪಂಗಡದ ಪುಂಜಜಿ ಇವರು ನೀಚತನಾ ಮಾಡಿ ಮತ್ತು ಮೇಲೆ ಹೇಳಿದ ಖಾತೆಯಲ್ಲಿಯ ಜನರ ಲೋಕಾಧಿಕಾರವನ್ನು ಧಿಕ್ಕರಿಸಿ ಆ ಸಣ್ಣ ಗ್ರಾಮವನ್ನು ಅನ್ಯಾಯದಿಂದ ತಾನೇ ವಶಪಡಿಸಿಕೊಂಡಿದ್ದಾನೆ. ಈ ವಿಷಯದಲ್ಲಿ ಎರಡು ಮೂರು ಸಲ ಆದೇಶ ನೀಡಲಾಗಿದ್ದರೂ ಕೂಡ ಅವನು ವ್ಯವಸ್ಥೆಯನ್ನು ಮಾಡಿಲ್ಲ ಮತ್ತು ಪಂಗಡದವರಿಗೆ ಎಚ್ಚರಿಕೆಯನ್ನೂ ಕೊಡುತ್ತಿಲ್ಲ. ಪಂಗಡದವರದ್ದು ಎಷ್ಟು ಧೈರ್ಯ? ಈಗ ಈ ಆದೇಶ ಮುಟ್ಟಿದ ತಕ್ಷಣ ಮೇಲಿನ ಹಳ್ಳಿಯಲ್ಲಿಯ ಮೇಲೆ ಹೇಳಿದ ಖಾತೆಯ ಜನರಿಗೆ ಜಮಾಬಂದಿಯ ಹಿಸ್ಸೆ ಇದೆ ಎಂದು ಹೇಳಿ ಪಂಗಡದವರನ್ನು ತಕ್ಷಣ ಅಲ್ಲಿಂದ ಓಡಿಸಬೇಕು. ಮೇಲೆ ಹೇಳಿದ ಜನರ ಲೋಕಾಧಿಕಾರಿಯ ಸ್ವಾಧೀನ ಪಡಿಸಬೇಕು. ಮತ್ತು ಈ ರೀತಿಯ ಅರ್ಜಿ ಕಳಿಸಿಕೊಡಬೇಕು. ಇದರಲ್ಲಿ ಅವನ ಉತ್ಕರ್ಷ ಇದೆ. ಸು ೧೦೬೬, ಹಿ, ೧೦೭೬ ಮೋಹರಮ ೨ ಹುಪ.

ಸು, ೧೦೬೬,
ಹಿ, ೧೦೭೬ ಶವ್ವಾಲ ೨೫

ಶಾ. ೧೫೮೮ ಚೈತ್ರ ವದ್ಯ ೧೨
ಇ. ೧೬೬೭ ಎಪ್ರಿಲ ೨೧

೨ ನೆಯ ಅಲಿ ಆದಿಲಶಾಹ > ರತಾಜಿ ದೇಸಾಯಿ ಕರ್ಯಾತ ಮ್ಹಸವಡ ಪರಗಣೆ

ಕಾಸೇಗಾವ ಪ್ರದೇಶದಲ್ಲಿಯ ಊರುಗಳು ವಖಾರಗಳು ಮತ್ತು ವಹೇಲಿ ಈ ಎರಡು ಖಾತೆಯಲ್ಲಿಯ ಜನರಿಗೆ ಜಮಾಬಂದಿಯ ಹಿಸೆ ಇದೆ. ಸಧ್ಯ ದರಬಾರದ ಲಕ್ಷಕ್ಕೆ ಬಂದದ್ದು ಏನಂದರೆ, ಮೇಲಿನ ಜಾತಿಯ ಪಂಗಡಗಳ ಮುಖಂಡ ಒಂದು ಗುಂಪನ್ನು ಅನುಚಿತ ರೀತಿಯಿಂದ ಪಡೆದುಕೊಂಡಿದ್ದಾರೆ. ಈ ಪ್ರದೇಶದ ನಾಯಕನಿಗೆ ಜಮಾಬಂದಿಯ ಹಿಸ್ಸೆ ದೊರೆತಾಗಿದೆ. ಆದ್ದರಿಂದ ಅವಿರೋಧವಾಗಿಯೇ ಅವನು ಅದನ್ನು ತನ್ನ ಸ್ವಾಧೀನದಲ್ಲಿ ತೆಗೆದುಕೊಂಡಿದ್ದಾನೆ. ಮತ್ತು ಅದರ ಉತ್ಪನ್ನವನ್ನು ತೆಗೆದುಕೊಳ್ಳುತ್ತಿದ್ದಾನೆ. ಆದರೆ ಈ ಆದೇಶ ದೊರೆತ ತಕ್ಷಣ ಅವರು, (ರತಾಜಿ) ತಮ್ಮ ಕಾಲ್ದಳ ಮತ್ತು ಕುದುರೆಯ ದಳ ತೆಗೆದುಕೊಂಡು ಹೋಗಬೇಕು, ಪಂಗಡಗಳಿಗೆ ಶಿಕ್ಷೆಯನ್ನು ಕೊಟ್ಟು ಅವುಗಳನ್ನು ಮೇಲೆ ಹೇಳಿದ ಪ್ರದೇಶದಿಂದ ಹೊರ ಹಾಕಬೇಕು. ಆ ಪ್ರದೇಶದ, ಮೇಲೆಹೇಳಿದ ಎರಡು ಖಾತೆಗಳಲ್ಲಿಯ ಜನರ ವಶಕ್ಕೆ ಕೊಡಬೇಕು. ಮತ್ತು ಹೀಗೆ ಮಾಡಿದ ಅರ್ಜಿಯನ್ನು ದರಬಾರಕ್ಕೆ ರವಾನಿಸಬೇಕು. ಅದರಂತೆ ಅಲ್ಲಿಯ ವ್ಯವಸ್ಥೆಯ ಸಲುವಾಗಿ ಅಲ್ಲಿಯ ಹವಾಲದಾರ ಏನು ಹೇಳುತ್ತಾರೆಯೋ ಅದನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು. ಸು. ೧೦೬೬, ಹಿ. ೧೦೭೬ ಜಿಲ್ಹೇಜ ೮. ಹುಪ.

೨೧೪

ಸು.೧೦೬೭,   ಶಾ.೧೫೮೮ ಜ್ಯೇಷ್ಠ ಶುದ್ಧ ೧೦
ಹಿ. ೧೦೭೬ ಜಿಲ್ಹಜ್ಜಾ ೮   ಇ. ೧೬೬೬ ಜೂನ ೨

೨ ನೆಯ ಅಲಿ ಆದಿಲಶಾಹ > ಪ್ರದೇಶ ಮ್ಹಸವಡ ಪರಗಣೆ ಮಾಣದ ದೇಸಾಯಿ ರತಾಜಿ

ಕಾಸೆಗಾವ ಕರ್ಯಾತ ವಖಾರಗಳು ಮತ್ತು ಇತರೇಗಳು ಈ ಖಾತೆಯ ಜನರಿಗೆ ಜಮಾಬಂಧಿಯ ಹಕ್ಕು ಇದೆ. ಈ ವಿಷಯದಲ್ಲಿ ಆದೇಶ ಏನೆಂದರೆ, ಮೇಲಿನ ಪ್ರದೇಶವನ್ನು ವಶಪಡಿಸಿಕೊಂಡು ಅಲ್ಲಿಯ ಜನರ ಮುಖ್ಯಸ್ಥನನ್ನು ವಶಕ್ಕೆ ತೆಗೆದುಕೊಂಡು ಮುಖ್ಯಸ್ಥನಿಗೆ ಕೊಟ್ಟರು. ಶಾಬಾಶ, ಶಾಬಾಶ, ಅವರು ರಾಜನಿಷ್ಠೆಯಲ್ಲಿ ಯಾವದೇ ರೀತಿಯ ದುರ್ಲಕ್ಷ್ಯ ಮಾಡಲಿಲ್ಲ. ಈಗ ಅದರ ಬೆಳವಣಿಗೆಗಾಗಿ ಸನ್ಮಾನದ ಉಡುಪುಗಳನ್ನು ಕಳಿಸುತ್ತಿದ್ದೇವೆ. ಅದನ್ನು ತೆಗೆದುಕೊಂಡು ನಿಮ್ಮಷ್ಟಕ್ಕೆ ನೀವೇ ಸನ್ಮಾನಿತರೆಂದು ತಿಳಿಯಬೇಕು. ಪ್ರದೇಶದ ವಿಷಯದಲ್ಲಿ ಬಂಡಖೋರರಿಂದ ಯಾವದೇ ರೀತಿಯ ತೊಂದರೆ ಆಗ ಗೊಡಬಾರದು. ತಪ್ಪಿ ಸಹಿತ ಮೇಲೆ ಹೇಳಿದ ಪ್ರದೇಶದ ಮುಖಂಡರು ಪಂಗಡದ ಜಮಾಬಂಧಿಯನ್ನು ಪ್ರಾರಂಭಿಸಬೇಕು. ಆದರೆ ಅದು ಮತ್ತೆ ಬಂಡುಖೋರರ ವಶಕ್ಕೆ ಹೋಗಲಾರದ ಹಾಗೆ ಮಾಡಬೇಕು. ಅವರಿಗೆ ಯೋಗ್ಯವಾದ ಶಿಕ್ಷೆಯನ್ನು ಕೊಟ್ಟು ಓಡಿಸಿಬಿಡಬೇಕು. ಯಾಕಂದರೆ ಮೇಲೆ ಹೇಳಿದ ಪ್ರದೇಶದ ಮೇಲೆ ಹೇಳಿದ ಮುಖ್ಯಸ್ಥನನ್ನು ನಿಶ್ಚಿತಗೊಳಿಸಲಾಗಿದೆ. ಪಾಂಡ್ಯಾನ ಸಲುವಾಗಿ ಸಣ್ಣ ಗುಂಪು ಪ್ರದೇಶದ ವಿಷಯದಲ್ಲಿ ಅನುಚಿತವಾಗಿ ವರ್ತಿಸುತ್ತಿದ್ದಾರೆ. ಅವರಿಗೆ ಎಚ್ಚರಿಕೆಯನ್ನು ಹೀಗೆ ಕೊಡಬೇಕಲ್ಲ, ಮತ್ತೊಮ್ಮೆ ಈ ಬದಿಗೆ ತಿರುಗಿ ನೋಡಿರಬಾರದು. ಯಾವತ್ತಿಗೂ ಈ ಪ್ರದೇಶದಲ್ಲಿ ಹಸ್ತಕ್ಷೇಪ ಮಾಡದೆ ಒಂದು ಕಡೆಗೆ ಇರಬೇಕು. ಇದರಲ್ಲಿ ಅವರ ಉತ್ಕರ್ಷ ಇದೆ.

ಸು.೧೦೬೬, ಹಿ,೧೦೭೬ ಜಿಲ್ಹೇಜ ೮

ಸು. ೧೦೬೬,　　　　　　　　　ಶಾ. ೧೫೮೮ ಶ್ರಾವಣ ಶುದ್ಧ ೧
ಹಿ. ೧೦೭೭, ಮೊಹರಮ್ ೨೯　　　ಇ. ೧೬೬೬ ಜುಲೈ ೬

೨ನೆಯ ಅಲಿ ಆದಿಲಶಾಹ > ಪರಗಣೆ ಮಾಣದ ಮ್ಹಸವಡ ಪ್ರದೇಶದ ದೇಸಾಯಿ ರತಾಜಿ

ಮೇಲೆ ಹೇಳಿದ ಪರಗಣಾದಲ್ಲಿಯ ಕಾಸೆಗಾವ ಪ್ರದೇಶದಲ್ಲಿಯ ಊರುಗಳು, ವಖಾರಗಳು ಮತ್ತು ಬೇರೆಯವುಗಳು ಈ ಖಾತೆಯಲ್ಲಿಯ ಜನರನ್ನು ಮುಖ್ಯಸ್ಥರು ಎಂದು ಆದೇಶ ಮಾಡಿದಂತೆ ಚಾಲತಿಯಲ್ಲಿದೆ. ಮೇಲೆ ಹೇಳಿದ ಪ್ರದೇಶದ ಮುಖಂಡ ಮತ್ತು ಒಂದು ಸಣ್ಣ ಗುಂಪು ಒಪ್ಪಂದಕ್ಕೆ ಸಂಭದಿಸಿದ್ದನ್ನು ಅನುಚಿತವಾಗಿ ಮತ್ತು ಆಜ್ಞೆಯನ್ನು ಉಲ್ಲಂಘಿಸಿ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಹಣವನ್ನು ವಸೂಲ ಮಾಡುವದು ದರಬಾರದ ಲಕ್ಷಕ್ಕೆ ಬಂದಿದೆ. ಈ ವಿಷಯದ ಬಗ್ಗೆ ಆದೇಶವನ್ನೂ ಕೊಡಲಾಗಿತ್ತು, ಏನಂದರೆ, ಪುಂಜಾಜೀ ಅವನನ್ನು ಮೇಲೆ ಹೇಳಿದ ಪ್ರದೇಶದಿಂದ ಹೊರಗೆ ಹಾಕಿ ಆ ಉಪರ್ಯುಕ್ತ ಖಾತೆಯನ್ನು ಜನರ ನಿಯಂತ್ರಣಕ್ಕೆ ಕೊಡಬೇಕು ಆ ಪ್ರಕಾರ ನೀನು ನಿನ್ನ ಗುಂಪುಗಳೊಂದಿಗೆ ಹೋಗಿ ಅವರಿಗೆ ಶಿಕ್ಷಾ ಕೊಟ್ಟು ಆ ಪ್ರದೇಶವನ್ನು ಅವರ ವಶಕ್ಕೆ ಕೊಟ್ಟಿರುವಿ. ಈಗ ನಿನ್ನ ಉತ್ಕರ್ಷದ ಸಲುವಾಗಿ ಸನ್ಮಾನದ ಉಡುಗೆಯನ್ನು ಕಳಿಸಲಾಗಿದೆ. ಅದನ್ನ ತೆಗೆದುಕೊಂಡು ಕೃತಾರ್ಥ ಭಾವನೆಯಿಂದ ಮುಂದೆಯೂ ಸಹಾಯದ ಹೊಸ ಪ್ರಯತ್ನವನ್ನು ಮಾಡಬೇಕು ಮತ್ತು ಉಪರ್ಯುಕ್ತ ಕರ್ಯಾತಿಯಲ್ಲಿಯ ಊರುಗಳ ವ್ಯವಸ್ಥೆಯನ್ನು ಮಾಡಬೇಕು. ಗುಂಪುಗಳಿದ್ದರೆ ಅವುಗಳಿಗೆ ಶಿಕ್ಷೆಯನ್ನು ಕೊಟ್ಟು ಹೊರಗೆ ಹಾಕಬೇಕು ಮತ್ತು ಮತ್ತೊಮ್ಮೆ ಈ ಕಡೆಗೆ ಬರಗೊಡಬಾರದು. ದೂರು ಬರದ ಹಾಗೆ ನೋಡಿಕೊಳ್ಳಬೇಕು. ಇದರಲ್ಲಿಯೇ ಅಭಿವೃಧ್ಧಿ ಇದೆ.

ಸು. ೧೦೬೬, ಹಿ. ೧೦೭೭. ಮೋಹರಮ ೨೯ ಹುಪ.

ಸು, ೧೦೬೬, ಶಾ. ೧೫೮೭ ಮಾರ್ಗಶೀರ್ಷ ಶುದ್ಧ ೨
ಹಿ, ೧೦೭೬ ಜವಲ ೩೦ ಇ. ೧೬೬೫ ನವ್ಹೆಂಬರ ೨೮

೨ನೆಯ ಅಲಿ ಆದಿಲಶಾಹ > ಪರಗಣೆ ಮಾಣದಲ್ಲಿಯ ಕರ್ಯಾತಿಯ ದೇಸಾಯಿ ರತಾಜಿ

ಅವರು ಕಳಿಸಿದ ಅರ್ಜಿ ದರಬಾರಕ್ಕೆ ತಲುಪಿದೆ. ಅವರು ಎಲ್ಲ ರೀತಿಯಿಂದ ತಮ್ಮ ಮನಸ್ಸನ್ನು ಶಾಂತವಾಗಿಟ್ಟುಕೊಂಡು ತಮ್ಮ ಪಂಗಡದೊಂದಿಗೆ ದರಬಾರಕ್ಕೆ ಬರಬೇಕು. ಹುಜೂರ ಬಂದಮೇಲೆ ಅದರ ನಿಷ್ಕರ್ಷ ಆಗಬಹುದು. ಈ ವಿಷಯದಲ್ಲಿ ವ್ಯವಸ್ಥೆಯ ಬಗ್ಗೆ ಸೋಮಾರಿತನ ತೋರಿಸಬಾರದು. ಸು, ೧೦೬೬ ಹಿ.೧೦೭೬ ಜವಲ ೩೦ ಹುಪ.

೨೧೭

ಸು. ೧೦೬೬,   ಶಾ.೧೫೮೮ ಆಷಾಢ ಶುದ್ಧ ೪

ಹಿ. ೧೦೭೬ ಮೋಹರಮ್ ೨   ಇ. ೧೬೬೫ ಜುಲೈ ೬

೨ನೆಯ ಅಲಿ ಆದಿಲಶಾಹ > ಪರಗಣಿ ಮಾಣದ ದೇಸಾಯಿ ರತಾಜಿ

ಸದ್ಯ ದರಬಾರದ ಗಮನಕ್ಕೆ ಬಂದದ್ದೇನೆಂದರೆ, ನರಸೋಜಿ ಎಂಬ ರೈತನು ಊಟೋಪಚಾರಿಯ ಅಧಿಕಾರಿಯ ಖಾತೆಯಲ್ಲಿ ಮಕ್ಕಳಿಗೆ ಮುಖ್ಯಸ್ಥ ಇದ್ದು ಕಾಸೋಳಿ ಜಿಲ್ಹೆಯ ಪೈಕಿ ಮಾಲಗಾವ ಈ ಊರಿನ ಮೇಲೆ ಚುಂಗಿಯ ದಾವೆ ಮಾಡಿ ಸಣ್ಣ ಹಳ್ಳಿಯಾದ ಬೇನೂರದ ಪಾಟೀಲ ಯಶವಂತರಾವ ಮಾಣಕೇಜಿ ಇವರ ಆಶ್ರಯದಿಂದ ಅವನ ಸೈನಿಕರು ಮತ್ತು ಸಿಪಾಯಿಗಳನ್ನು ತೆಗೆದುಕೊಂಡು ಉಪಯುಕ್ತ ಹಳ್ಳಿಗೆ ಹೋಗಿ ೨೯೯ ದನಗಳು ಮತ್ತು ರೈತನ ವಸ್ತುಗಳನ್ನು ತೆಗೆದುಕೊಂಡು ಹೋಗಿ ಹಳ್ಳಿಯನ್ನು ಹಾಳು ಮಾಡಿಬಿಟ್ಟಿದ್ದಾರೆ. ಉಪಯುಕ್ತ ಹಳ್ಳಿಗಳು ಉಪಯುಕ್ತ ಹುಡುಗರಿಗೆ ಮುಖ್ಯಸ್ಥ ಇದ್ದಾಗ್ಯೂ ಯಶವಂತರಾವ ಮಾಣಕೇಜಿ ಮತ್ತು ನರಸೋಜಿ ಇವನು ಹೀಗೆ ಮಾಡುತ್ತಾನೆಂದರೆ ಅವನಿಗೆ ಎಷ್ಟು ಧೈರ್ಯ? ಈಗ ಈ ಆದೇಶ ಮುಟ್ಟಿದ ತಕ್ಷಣ ನರಸೋಜಿಯು ಓಡಿಸಿಕೊಂಡು ಹೋದ ದನಗಳನ್ನು ಮತ್ತು ಮಾಲನ್ನು ಪ್ರತಿಯೊಂದನ್ನು ತಂದು ಉಪಯುಕ್ತ ಹಳ್ಳಿಯ ಅಧಿಕಾರಿಗೆ ಅಥವಾ ಹುದ್ದೆದಾರರಿಗೆ ಒಪ್ಪಿಸಬೇಕೆಂದು ಅವನಿಗೆ ನ್ಯಾಯಸಮ್ಮತವಾದ ಎಚ್ಚರಿಕೆಯನ್ನು ಕೊಡಬೇಕು ಮತ್ತು ನಿಮ್ಮ ಮತ್ತು ಹುದ್ದೇದಾರರ ಅರ್ಜಿಯನ್ನು ಕಳಿಸಿಕೊಡಬೇಕು. ಹಾಗೆ ಹಳ್ಳಿಯ ರೈತರಿಗೆ ಧೈರ್ಯ ಮತ್ತು ಆಶ್ವಾಸನ ಕೊಟ್ಟು ಅವರ ಏಳ್ಗೆಗೆ ಲಕ್ಷ ಕೊಡಬೇಕು ಅಂದರೆ ಆ ಹಳ್ಳಿಗಳು ಮೊದಲಿನಕಿಂತ ಹೆಚ್ಚು ಉತ್ಕರ್ಷ ಆಗುತ್ತವೆ. ನರಸೋಜಿ ಮತ್ತು ಯಶವಂತರಾವ ಇವರನ್ನು ತತ್ಕಾಲ ಈ ಕ್ಷಣ ಬಂಧಿಸಿ ಸಿಪಾಯಿಗಳ ಜೊತೆ ಹುಜೂರ ಹತ್ತಿರ ಕಳಿಸಿಕೊಡಬೇಕು. ಇದರಲ್ಲಿಯೇ ನಿನ್ನ ಅಭಿವೃದ್ಧಿ ಇದೆ. ಈ ವಿಷಯದ ಬಗ್ಗೆ ತಕರಾರ ಬರಬಾರದು. ಸು. ೧೦೬೬, ಹಿ.೧೦೭೭ ಮೋಹರಮ ೩. ಹಾಜಿ ಖುರ್ರಮೀನುಲ ಶರೀಫೈನ ಹಾಜಿ ಶೇಖ ಅಬ್ದುಲ ಅಲಿ ಸರಖೈಲೆ ಮಮಾಲಿಕ ಇವರ ಮಾಹಿತಿಯಿಂದ ಈ ವಿಷಯವನ್ನು ಪ್ರೀತಿಯ ಅಲ್ಲಾಉದ್ದೀನ ಖವಾಸ ಇವರಿಗೆ ಕಳಿಸಿಕೊಡಲಾಗಿದೆ.

೨೧೮

ಸು.೧೦೬೭ ಶಾ. ೧೫೮೮ ಫಾಲ್ಗುಣ ವದ್ಯ ೪

ಹಿ. ೧೦೭೭ ರಮಜಾನ ೧೮ ಇ. ೧೬೬೭ ಮಾರ್ಚ ೪

ರತಾಜಿ (ಮಾನೆ)

ಸೀವಾನ [ಶಿವಾಜಿಯ] ಸವಾರರು ಶಹರ ಅಹಸನಾಬಾದ ಪೈಕಿ ಹೀರಾಪೂರ ಸಮತಾದಲ್ಲಿ ಬರತಾ ಇದೆ ಎಂದು ದರಬಾರಕ್ಕೆ ತಿಳಿದು ಬಂದಿದೆ. ಈ ಆದೇಶ ಮುಟ್ಟಿದ ತಕ್ಷಣ ಇದನ್ನು ಜಮಾತದಾರ ಖಾಸಖೈಲ ಮತ್ತು ಬಜಾಜಿ ಮತ್ತು ಮಹದಾಯಿ ಇವರ ಹತ್ತಿರ ಹೋಗಿ, ಸೀವಾನ ಜನರಿಗೆ ಯೋಗ್ಯವಾದ ಎಚ್ಚರಿಕೆ ಕೊಡಬೇಕು ಮತ್ತು ವೈಯಕ್ತಿಕವಾಗಿ ರಾಜನಿಷ್ಠಾ ವ್ಯಕ್ತಪಡಿಸಬೇಕು. ಈ ವಿಷಯದಬಗ್ಗೆ ಉಪರ್ಯುಕ್ತ ಜಮಾತದಾರ, ಬಜಾಜಿ ಮತ್ತು ಮಹದಾಜಿ ಇವರಿಗೆ ಆದೇಶ ಕಳಿಸಲಾಗಿದೆ. ಸು. ೧೦೬೭,ಹಿ, ೧೦೭೭ ರಮಜಾನ ೧೮ ಹುಪ.

೨೧೯

ಹಿ. ೧೦೮೪ ಶಾಬಾನ ೧೫ ಶಾ.೧೫೯೫ ಕಾರ್ತೀಕ ವದ್ಯ ೧
ಇ. ೧೬೭೩ ನವ್ಹೆಂಬರ ೧೫

ಸಿಕಂದರ ಆದಿಲಶಾಹ > ಸಿಧ್ಧೋಜಿ ಬಿನ ರತೋಜಿ ಮಾನೆ ನಾಮಜಾದ
ಪರಗಣೆ ಖಟಾವ

ಅಭಯದ ಪತ್ರಾನುಸಾರ ನೀನು ಉಪಯುಕ್ತ ಪರಗಣೆಗೆ ಬಂದು ಇರತಾಇದ್ದೀಯಾ. ಉಪಯುಕ್ತ ಪರಗಣಾ ಮತ್ತು ಅದರ ಪಕ್ಷದಲ್ಲಿದ್ದವರಿಗೆ ಶತ್ರುಗಳ ಜನರು ಬಂದು ತೊಂದರೆ ಕೊಡುತ್ತಿದ್ದಾಗ ನೀನು ನಿನ್ನ ಸಮಾಜಕ್ಕಾಗಿ ಶ್ರಮ ಮತ್ತು ಹರ ಸಾಹಸ ಮಾಡಿ ಶತ್ರುಗಳ ಜನರಿಗೆ ಶಿಕ್ಷಾ ಮಾಡಿದಿ. ಈ ಸಮಾಚಾರ ಹುಜೂರರಿಗೆ ಮುಟ್ಟಿ ಅವರಿಂದ ಪ್ರಶಂಸೆಯೂ ಬಂದಿದೆ. ಈಗ ಅತೀ ಆನಂದದಿಂದ ಮತ್ತು ಉತ್ಕರ್ಷ ರೂಪದಲ್ಲಿ ಸನ್ಮಾನ ಕಾಣಿಕೆಯನ್ನು ನಿನಗೆ ರವಾನಿಸಲಾಗಿದೆ. ನೀನು ಎಲ್ಲ ರೀತಿಯಿಂದ ಮನಸ್ಸನ್ನು ಸಂತುಷ್ಟದಲ್ಲಿಟ್ಟುಕೊಂಡು ವಝೀರೆ ಹುಕುಮತ ಖವ್ವಾಸಖಾನ ಇವರು ಆ ವತಿಯಿಂದ ಅಂತಃಪುರದ ಮೇಲೆ ನೇಮಿಸಿರುವ ಸುಬೇದಾರ ನಾಗೋಜಿ ಮತ್ತು ಏಸು ಪಂಡಿತ ಇವರಲ್ಲಿ ಕೂಡಿಕೊಂಡು ಸ್ವಂತ ಭೂಮಿ ಸಹ ಶ್ರಮ ಸಾಹಸ ಮಾಡಿ ಶತ್ರುಗಳ ಜನರಿಗೆ ಶಿಕ್ಷಾ ಕೊಡಿಸಬೇಕು. ಖಟಾವ ಪರಗಣಾ ಮತ್ತು ಈ ಪ್ರದೇಶಕ್ಕೆ ತೊಂದರೆ ಆಗಲಾರದ ಹಾಗೆ ಮಾಡಬೇಕು. ಅಂದರೆ ಆ ಕಡೆಗೆ ಭಯ ಇಲ್ಲದಾಗುವದು. ಇದರಲ್ಲಿ ನಿನ್ನ ಉತ್ಕರ್ಷ ಇದೆ. ಹಿ. ೧೦೮೪ ಶಾಬಾನ ೧೫. ಹುಪ.

೨೨೦

(ಆಲಮಗಿರಿ)ಜು. ೪೧ ಶಾ. ೧೬೭೯ ಫಾಲ್ಗುಣ ವದ್ಯ ೮
ಶಾಬಾನ ೨೧ ಇ. ೧೬೯೮ ಫೆಬ್ರವಾರಿ ೨೩

ಔರಂಗಜೇಬ > ನಾಗು ಮಾನೆ

ತರ್ಬಿಯತಖಾನರು ದರಬಾರಕ್ಕೆ ಕಳಿಸಿದ ಅರ್ಜಿಯಲ್ಲಿ ಈ ಕೆಳಗಿನ ಪ್ರಕಾರ ನಮೂದಿಸಿದ್ದಾರೆ, ನಿನಗೆ ಸುದೈವದಿಂದ ನಿನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಡುತ್ತಿರುವಿ, ಮತ್ತು ನೀನು ಬಾದಶಾಹಿ ಜವಾಬದಾರಿಯನ್ನು ವಹಿಸಿ ಮತ್ತು ಪ್ರಾಣಾರ್ಪಣದ ಸೇವೆಯನ್ನು ಸಲ್ಲಿಸಿ ಸ್ವಂತದ ಉತ್ಕರ್ಷವನ್ನು ಇಚ್ಛಿಸುತ್ತಿರುವಿ. ಆದ್ದರಿಂದ ಬಾದಶಾಹಿಯವರ ಕೃಪೆಯಿಂದ ನಿನ್ನ ಅಪರಾಧದ ಮೇಲೆ ಕ್ಷಮೆಯ ಹೊದಿಕೆಯನ್ನು ಹೊದಿಸಲಾಗಿದೆ ಮತ್ತು ಅಮೂಲ್ಯವಾದ ಐಶ್ವರ್ಯವನ್ನು ಕೊಡುತ್ತಿದ್ದಾರೆ. ಈ ರೀತಿಯ ಮಾಡಿದ ಕೃಪೆಗಾಗಿ ಧನ್ಯವಾದ ಮತ್ತು ಸಲಾಮ ಮಾಡುವದಕ್ಕೆ ಓಡಿ ಬರಬೇಕು. ಜು.೪೧ ಶಾಬಾನ ೨೧. ಅಸದಖಾನರ ಮಧ್ಯಸ್ತಿಕೆಯಿಂದ.

೨೨೧

(ಶಾಹ ಆಲಮಿ) ಜು. ೧ ಶಾ. ೧೬೨೯ ವೈಶಾಖ ವದ್ಯ ೪
ಸಫರ ೧೭ ಇ. ೧೭೦೭ ಮೇ ೯

ನಿನ್ನನ್ನು ನಿಲ್ಲಿಸಿಕೊಳ್ಳುವಸಲುವಾಗಿ ಮಾಡಿದ ಅರ್ಜಿ ದೃಷ್ಟಿ ತಪ್ಪಿ ಆಗಿಹೋಯಿತು. ಇದು ನಾಗೂ ಮಾನ್ಯಾ ಇವನಿಗೆ ತಿಳಿಸಬೇಕು. ನಿನ್ನ ಬೇಡಿಕೆಯನ್ನು ಬರೆದು ವಕೀಲರ ಜೊತೆ ಕಳಿಸಿಕೊಡು, ಅಂದರೆ ಹುಜೂರರಿಂದ ಅದರ ವಿಚಾರ ಮಾಡಲಾಗುತ್ತದೆ. ನಿನ್ನ ಪ್ರಕೃತಿ ಸುಧಾರಿಸಿದ್ದರೆ ನಿನ್ನ ಠಾಣೆಯಲ್ಲಿ ನಿನ್ನದೇ ನಾಯಕನನ್ನು ನೇಮಿಸಿ ಯೋಗ್ಯವಾದ ಸರದಾರನ ಜೊತೆ ದರಬಾರದ ಹೊಸ್ತಿಲದಮೇಲೆ ಬಂದು ಅದರ ಚುಂಬನ ತೆಗೆದುಕೊ. ಅಂದರೆ ಒಳ್ಳೆಯದಾಗುವದು. ಜು.೧ ಸಫರ ೧೭

೨೨೨

(ಫರ್ರೂಕಸಿಯರ)

ಶಾ.೧೬೩೫-೪೧

ಇ. ೧೭೧೩ -೧೯

ನಾಗೂ ಮಾನ್ಯಾ ಇವನ ಶ್ರೀಮತಿ ರಾಧಾ

ನಿನ್ನ ಅರ್ಜಿ ಕೈ ಸೇರಿತು ಮತ್ತು ತಿಳಿಯಿತು. ನೀನು ನಿನ್ನ ಮನಸ್ಸನ್ನು ಎಲ್ಲ ರೀತಿಯಿಂದ ಸಂತುಷ್ಟವಾಗಿಟ್ಟುಕೊಂಡು ತಕ್ಷಣ ನೀನು ನಿನ್ನ ಮಗನೊಂದಿಗೆ ಇಲ್ಲಿಗೆ ಬರಬೇಕು ಅಂದರೆ ನಿನ್ನ ಬೇಡಿಕೆ ಪೂರ್ಣವಾಗುತ್ತದೆ.

೨೨೩

ಆಲಮಗಿರೀ ಜು.೪೭

ಶಾ. ೧೬೨೫ ಅಶ್ವಿನ ವದ್ಯ ೧೦

ಜಖರ ೨೩ ಆಖರ್

ಇ. ೧೭೦೩ ಅಕ್ಟೋಬರ ಶಾ.೧೬೨೯ ಔರಂಗಾಬಾದ ಸುಭೆಯಲ್ಲಿಯ ಪರಗಣೆ ನಳದುರ್ಗದ ರೈತರು ಸಮಕ್ಷಮ ತಕರಾರ ಮಾಡಿದ್ದಾರೆ, ಸಜಾವಾರಖಾನರ ಜಾಗೀರಿ ಪೈಕಿ ಗುಂಜೋಟಿ ಮಹಾಲದ ಅಧಿಕಾರಿ ಇವರು ತಮ್ಮ ಕುದುರೆಯದಳ ಮತ್ತು ಪ್ಯಾದೆ ಇವಗಳಲ್ಲಿ ಬಹಳಷ್ಟು ಕಳ್ಳರಿಗೆ ಕೊಟ್ಟು ಹದಿನೈದುನೂರು ರೂಪಾಯಿಗಳ ಮಾಲ ಮತ್ತು ಧಾನ್ಯ ಕಳವು ಮಾಡಿದರು. ಇದರಿಂದ ರೈತರು ತೊಂದರೆಯಲ್ಲಿದ್ದಾರೆ. ಅವರನ್ನು ಉಳಿಸಲು ವಿಚಾರಣೆ ಮಾಡಿ ನ್ಯಾಯ ಮತ್ತು ಅನ್ಯಾಯದ ಪರಾಮರ್ಶ ಆಗುವ ಹಾಗೆ ಮಾಡಬೇಕು. ಅಂದರೆ ಮತ್ತೆ ಫಿರ್ಯಾದಿ ಬರುವುದಿಲ್ಲ. ಇದರಲ್ಲಿ ಏನಾದರೂ ಬೇರೆ ಘಟಿಸಿದರೆ ಹುಜೂರರಿಗೆ ಬರೆಯಬೇಕು. ಜು.೪೭ ಜಖರ ೨೩.

೨೨೪

(ಶಾಹ ಆಲಮಿ) ಶಾ.೧೬೬೯ ಚೈತ್ರ ಶುದ್ಧ ೭
ಜು. ೧ಮೋಹರಮ ೫ ಇ. ೧೭೦೭ ಮಾರ್ಚ ೨೯

ನಳದುರ್ಗ ಕಿಲ್ಲೆಯ ಜಮೀನದಾರ ನರಸಿಂಗ

ಇವರು ದರಬಾರಕ್ಕೆ ಬರೆದ ಅರ್ಜಿ ದೃಷ್ಟಿಗೆ ಬಂದಿದೆ. ಮತ್ತು ಕಾಮೀಲಖಾನರ ಮಧ್ಯಸ್ತಿಕೆಯಿಂದ ಬೇಡಿಕೆಯ ವಿಚಾರ ಮಾಡಿದ್ದಾರೆ. ಅವರು ಬಾದಶಾಹರ ಕೃಪೆಯಿಂದ ಒಳ್ಳೆಯದಾಗಿದೆ ಅಂತಾ ತಿಳಿದು ತಮ್ಮ ಸೇವೆಯಲ್ಲಿ ಒಳ್ಳೆಯದನ್ನು ಮಾಡುತ್ತ ಹೋಗಬೇಕು. ಜು.೧ ಮೋಹರಮ ೫

೨೨೫

(ಶಾಹಾ ಆಲಮಿ) ಜು.೨ (೫ ?) ಶಾ.೧೬೩೦ ಜೇಷ್ಠ ಶುಧ್ಧ ೧೪
ರಬ್ಬಿವುಲ್ ಅವ್ವಲ್ ೧೨ ಇ. ೧೭೦೮ ಮೇ ೨೨

ಖಾನೇ ಖಾನಾನ ಜಫರಜಂಗ > ನರಸಿಂಗ

ನಿನ್ನ ಪತ್ರವನ್ನು ನೋಡಿದೆ, ಸೇವೈಕನಿಷ್ಠಾ, ಸದ್ಭಾವ ಮತ್ತು ಸದುಪಯೋಗತನಾ ಇವುಗಳು ವ್ಯಕ್ತವಾಗಿವೆ. ನಮ್ಮ (ಸೇನೆ) ಧ್ವಜ ಯಶಸ್ವಿ ರೀತಿಯಿಂದ ನರ್ಮದಾ ದಾಟಿದೆ. ಇಷ್ಟರಲ್ಲಿ ನಮ್ಮ ಡೇರೆಯನ್ನು ದಕ್ಷಿಣಕ್ಕೆ ರವಾನಿಸಲಾಗುವದು ಮತ್ತು ಬಂಡಖೋರರಿಗೆ ಒಳ್ಳೆಯ ಶಿಕ್ಷೆ ಆಗುವದು. ನೀನು ಕಿಲ್ಲೆಯ ರಕ್ಷಣೆ ಮತ್ತು ಸೇವೆಯ ಕೆಲಸ ಇದರಲ್ಲಿ ತೊಡಗಿಕೊಂಡಿರಬೇಕು. ಸೈನ್ಯವು ಅತ್ತ ಕಡೆಗೆ ಬಂದಮೇಲೆ ನಿನ್ನ ಆಚರಣೆ ಮತ್ತು ನಿನ್ನ ಸದ್ಭಾವನೆ ಇದರ ಫಲ ಅನುರೂಪವಾಗಿ ನಿನಗೆ ಸಿಗಲಿದೆ. ಜುಲುಸ ೨೨ ರವಲ ೧.

೨೨೬

(ಶಾಹ ಆಲಮಿ) ಜು. ೨ ಶಾ.೧೬೩೦ ಆಶ್ವಿನ ವದ್ಯ ೨
ರಜಬ ೧೬ ಇ. ೧೭೦೮ ಸಪ್ಟಂಬರ ೨೦

ನರಸಿಂಗರಾವ

ಕಾರ್ಯಕ್ಕಾಗಿ ತಂಡಗಳನ್ನು ತಯಾರ ಮಾಡುವದು ಮತ್ತು ಬಾದಶಾಹರ ಹೆಸರು ತಿಳಿಸುವ ಏರ್ಪಾಡು ಈ ವಿಷಯದ ಪತ್ರವನ್ನು ನೋಡಿದೆ ಮತ್ತು ಇಚ್ಛೆ ತಿಳಿಯಿತು. ಆಜ್ಞೆ ಏನಿತ್ತಂದರೆ, ಸಧ್ಯ ನಮ್ಮ ಮುಕ್ಕಾಮ ನಾಂದೇಡದಲ್ಲಿ ಇದೆ. ಸ್ವಲ್ಪ ದಿನದಲ್ಲಿಯೇ ನಮ್ಮ ಧ್ವಜ ಹೈದ್ರಾಬಾದಕ್ಕೆ ತಿರುಗಲಿದೆ. ಅವರು ಶಾಂತ ರೀತಿಯಿಂದ ತಮ್ಮ ಯೋಗ್ಯ ತಂಡದೊಂದಿಗೆ ಹುಜೂರ ಹತ್ತಿರ ಬರಬೇಕು. ಪರಿಸ್ಥಿತಿ ಮತ್ತು ಸ್ವೀಕೃತಿ ಇವುಗಳ ಅನುರೂಪ ಹೊಂದಾಣಿಕೆ ಆಗಲಿವೆ. ಆದೇಶದಂತೆ ಜಾರಿಯಲ್ಲಿ ತರಬೇಕು. ಜು.೨ ರಜಬ ೧೬ ದಿನದಂದು ಬರೆಯಲಾಗಿದೆ.

೨೨೭

(ಶಾಹ ಆಲಮಿ) ಜು. ೨ ಶಾ.೧೬೩೦ ಕಾರ್ತಿಕ ವದ್ಯ ೧೧
ಶಾಬಾನ ೨೪ ಇ. ೧೭೦೮ ಅಕ್ಟೋಬರ ೨೮

ಅಮೀರುಲಉಮರಾ ನುಸ್ರತಜಂಗ > ನರಸಿಂಗರಾವ

ಕಾಮಬಕ್ಷನ ಜನರಿಂದ ತುಳಜಾಪೂರ ಮತ್ತು ಇತರ ಸ್ಥಳ ವಶಪಡಿಸಿಕೊಂಡ ಪತ್ರವನ್ನು ನೋಡಿದೆ ಮತ್ತು ಮೆಚ್ಚಿಕೆಯೂ ಆಯಿತು. ಇತರ ಸ್ಥಳಗಳನ್ನೂ ವಶಕ್ಕೆ ತೆಗೆದುಕೊಳ್ಳಬೇಕು. ಅದು ಕೂಡಾ ಬಹಳ ಸಂತೋಷವಾಗುತ್ತದೆ. ಅದರಿಂದ ರಾಜ್ಯನಿಷ್ಠಾ ವ್ಯಕ್ತವಾಗುವದು. ಜುಲುಸ ೨. ಶಾಬಾನ ದಿವಸ ಬರೆಯಲಾಗಿದೆ.

೨೨೮

(ಶಾಹಾ ಆಲಮಿ)ಜು. ૩ ಮೋಹರಮ ૩೦ | ಶಾ. ೧೬೩೧ ಅಧಿಕ ವೈಶಾಖ ಶುದ್ಧ ೧ ಇ. ೧೭೦೯ ಮಾರ್ಚ ૩೧

ಮೊದಲನೆಯ ಶಾಹ ಆಲಮ > ನರಸಿಂಗ

ಅಮೀರುಲ್ ಉಮಮರಾ ನುಸ್ರತಜಂಗ ಇವರ ಹತ್ತಿರ ಗುನ್ಹಾ ಮಾಫಿಬಗ್ಗೆ ವಿನಂತಿಸುವ ಪತ್ರ ಕಳಿಸಿರುವಿರಲ್ಲಾ ಅದರ ವಿಷಯ ತಿಳಿಯಿತು. ವಿನಂತಿಯ ಮೇಲೆ ಅವರ ಕೃಪೆ ಆಗಿದೆ. ಅವನ ಏಳ್ಗೆಗಾಗಿ ಮೋಹರಮದ ಪಂಜಾದ ಆದೇಶ ಕಳಿಸಲಾಗಿದೆ. ಸದ್ಯ ಔರಂಗಬೇಗಖಾನ ಇವನಿಗೆ (ನಳದುರ್ಗದ) ಕಿಲ್ಲೇದಾರನೆಂದು ನಿಶ್ಚಯಗೊಳಿಸಲಾಗಿದೆ. ಅವನನ್ನು ಒಪ್ಪಿಸಬೇಕು. ಆದರೆ ಅಭಿಪ್ರಾಯ ಹೊರಗೆ ಹೋಗಬಾರದು. ಮರಾಠರಿಗೆ ಕೋಟೆ ಮತ್ತು ಪೇಟೆ ಇವುಗಳ ಸುತ್ತಮುತ್ತ ಆಶ್ರಯ ಕೊಡಬಾರದು. ಹವಾಲದಾರರು ಕೋಟೆಯಲ್ಲಿ ಪ್ರವೇಶಿಸಿದ ಪತ್ರ ಬಂದಮೇಲೆ ಮೊದಲಿನಂತೆ ಅವರಿಗೆ ಜಮೀನದಾರದ, ಏಳು ನೂರ ಜಾತ ಮತ್ತು ಎರಡು ನೂರು ಕುದುರೆ ಸವಾರರು ಇಷ್ಟನ್ನು, ಮತ್ತು ಅವರ ತಂದೆ ಹನಮಂತರಾವ ಇವರಿಗೆ ಒಂದು ನೂರು ಜಾತ ಮತ್ತು ಒಂದು ನೂರು ಕುದುರೆ ಸವಾರರು ಈ ಕೃಪೆ ಆಗಬಹುದು. ಜೂನ ૩ ಮೋಹರಮ ૩೦, ಆಸಫುದೌಲಾ ನಿಜಾಮುಲ್ಲಮುಲ್ಕ ಇವರ ವತಿಯಿಂದ.

(ಫರುಕಸಿಯರ)

ಶಾ.೧೬೩೫ – ೪೧
ಇ. ೧೭೧೩ – ೧೯

> ಕಾಕರಂಬ್ಯಾದ ಠಾಣೆದಾರ ನರಸಿಂಗರಾವ

ನಿಮ್ಮ ಇಚ್ಛೆ ಏನು ಇದೆ ಎಂಬುದು ನಿಮ್ಮ ಅರ್ಜಿಯಿಂದ ತಿಳಿಯಿತು. ಶತ್ರುಗಳ ವಿಜಯ ,ಸೈನ್ಯದಳದ ಕಷ್ಟವನ್ನು ಸಹಿಸಲಾರದ್ದಕ್ಕೆ ಸಮತ ಮತ್ತು ವರ್ಹಾಡ ಹತ್ತಿರ ಸಂಚರಿಸ್ತಾ ಇದ್ದೀರಿ. ಅಕ್ಕಲಕೋಟೆಯ ಪರವಾಗಿ ನೆಲೆ ಇದೆ. ಇವತ್ತು ಇದರ ಮುಕ್ಕಾಮ ಹಳ್ಳಿಖೇಡ ಪರಗಣೆ ನಿಲಂಗಾ ಇವುಗಳ ಹತ್ತಿರ ಇದೆ. ಅಲ್ಲಿಯೇ ಸೈನ್ಯಗಳು ನೆಲೆಸಬಹುದು. ಅವರು ಶಾಂತ ರೀತೀಯಿಂದ ನಿಮ್ಮ ಪ್ರದೇಶದಲ್ಲಿ ಎಚ್ಚರಿಕೆಯಿಂದ ಇರಬೇಕು. ಯಶಸ್ವಿ ಸೈನ್ಯದಳ ಯಾವಾಗೆ ಹತ್ತಿರ ಬರುತ್ತದೆಯೋ ಆಗ ಸೇವೆಯನ್ನು ಸಲ್ಲಿಸಲಾಗುವದು. ಅದರ ವ್ಯವಸ್ಥೆಯಿಂದ ಆ ಪ್ರದೇಶದಲ್ಲಿಯ ಬಂಡಖೋರರಿಗೆ ಒಳ್ಳೆಯ ಎಚ್ಚರಿಕೆ ಕೊಡೋಣ.

ಆಲಮೇಲ ದೇಸಾಯಿ

೨೩೦

(ಆಲಮಗಿರಿ) ಜು.೨೮ ರಜಬ೬ ಶಾ. ೧೬೦೭ ಜೇಷ್ಠ ಶುದ್ಧ ೭
ಇ. ೧೬೮೫ ಮೇ ೩೦

ರಾಹೂಲ್ಲಾಖಾನ > ಆಲಮೇಲ ಪರಗಣಾದ ದೇಶಮುಖ ಜಗದೇವ ಇವನ ತಾಯಿ ನೀಲವ್ವಾ

ರಾಜ್ಯಭಾರಕ್ಕೆ ಸಂಬಂಧಿಸಿದ ಸೇವೆಯನ್ನು ಸಲ್ಲಿಸುವ ಷರತ್ತಿನ ಮೇಲೆ ನವಾಬ ಉಮ್ದತುಲ್ಮುಲ್ಕ ಇವರು ರೈತರ ಏಳ್ಗೆಯ ವಿಷಯವಾಗಿ ಕೊಟ್ಟ ಆಶ್ವಾಸನ ಇದು ನನ್ನಿಂದನು ಕೊಟ್ಟಾಗಿದೆ ಎಂದು ತಿಳಿಯಬೇಕು. ಎಲ್ಲ ಅಂತಃಪುರದ ಏಳ್ಗೆಗಾಗಿ ಸಮಾಧಾನ ರೀತಿಯಿಂದ ಪ್ರಯತ್ನ ಮಾಡಬೇಕು. ರಾಜ್ಯ ಭಾರಕ್ಕೆ ಸಬಂದಿಸಿದ ಸೇವೆಯಲ್ಲಿ ಸಮಚಿತ್ತದಿಂದ ಪ್ರಗತಿ ಮಾಡಬೇಕು. ಎಲ್ಲ ರೀತಿಯಿಂದ ಸಿಪಾಯಿಗಳನ್ನು ಜಮಾಯಿಸಬೇಕು. ನಸಕಚಿಯ ಪ್ಯಾಘಚಾವೂ ಮುಖಂಡನಿಗೆ ಐದು ರೂಪಾಯಿ ಕೊಡಬೇಕು, ಮಿರಘ್ಯಾನಿಗೆ (ಮೀರದಹ) ಆರು ಮತ್ತು ನೂರು, ಮಖ್ಯಾನಿಗೆ ಹತ್ತು ರೂಪಾಯಿ ಠರಾವಿಸಿದ್ದಾರೆ. ಸಿಪಾಯಿಗಳನ್ನು ಸಿದ್ಧಗೊಳಿಸಿ, ನಾರೋಜಿ ರಾಘೋ ಇವರ ಹತ್ತಿರ ಕಳಿಸಿಕೊಡಬೇಕು. ಅವನು ಅವರನ್ನು ನೋಡಿಕೊಂಡು ಮತ್ತು ಸತ್ಯವನ್ನು ಪರೀಕ್ಷಿಸಿ ನಮ್ಮ ಹತ್ತಿರ ಕಳಿಸಿಕೊಡಬಹುದು. ಜು. ೨೮ ರಜಬ ೬

೨೩೧

(ಆಲಮಗಿರಿ) ಜೂನ ೩೦ ಶಾ. ೧೬೦೮ ಮಾರ್ಗಶೀರ್ಷ ವದ್ಯ ೧
ಮೋಹರಮ ೧೩ ಇ. ೧೬೮೬ ನವ್ಹೆಂಬರ ೨೦

➤ ಬಕ್ಷಿ ಉಲ್‌ಮುಲ್ಕ

ಈ ಸಮಯದಲ್ಲಿ ಜಗದೇವಿಯ ತಾಯಿ ನೀಲವ್ವಾ ಅರ್ಜಿ ಕೊಟ್ಟಿದ್ದಾಳೆ. ಏನೆಂದರೆ, ಆಲಮೇಲ ಲಿಲ್ಹೆಯಲ್ಲಿಯ ದೇವಗಾವದ ಮೊಕಾದಮ ಗೋವಿಂದ ಇವರು ಜಗದೇವನ ಜಮೀನದಾರಿಯಲ್ಲಿಯ ಮೂರು ಊರುಗಳು, ಫೌಜದಾರ ಮತ್ತು ಜಾಗಿರದಾರ ಇವರ ಜೊತೆ ಕೂಡಿ ಜೀನಸುಗಳನ್ನು ಮತ್ತು ದನ ಕರುಗಳನ್ನು ಸುಲಿಗೆ ಮಾಡಿ ಕೊಂಡೊಯಿದಿದ್ದಾರೆ. ಈ ವಿಷಯಕ್ಕಾಗಿ ವಿಚಾರಣೆ ಮಾಡಿ ಕಾಯದೇಪ್ರಕಾರ ಹಕ್ಕದಾರರ ಹಕ್ಕು ಅವರವರಿಗೆ ಕೊಡಿಸಬೇಕು. ಅಂದರೆ ಆ ದೂರು ಬರುವದಿಲ್ಲಾ. ಜೂನ ೩೦ ಮೋಹರಮ ೧೩

೨೩೨

(ಆಲಮಗಿರಿ) ಜೂನ ೩೦ ಶಾ. ೧೬೦೮ ಮಾರ್ಗಶೀರ್ಷ ವದ್ಯ ೧
ಮೋಹರಮ ೧೩ ಇ. ೧೬೮೬ ನವ್ಹೆಂಬರ ೨೦

ವಿಜಾಪೂರ ಸರಕಾರದಲ್ಲಿಯ ಆಲಮೇಲ ಜಿಲ್ಹೆಯ ದೇಶಮುಖ ಜಗದೇವ ಇವನ ತಾಯಿ ನೀಲವ್ವಾ ಇವರು ವಿನಂತಿ ಮಾಡಿದ್ದೇನಂದರೆ, ಮೇಲೆಹೇಳಿದ ಜಿಲ್ಹೆಯಲ್ಲಿಯ ದೇವಳಗಾವದ ಮೊಕಾದಮ್ ಪರಗೊಂಡ ಇವನು ಜಿಲ್ಹೆಯ ಸರಮೊಕಾದ್ದಮಿಯಲ್ಲಿ ಗೊಂದಲ ಸೃಷ್ಟಿಸಿ ರೈತರಿಗೆ ತೊಂದರೆಯನ್ನು ಕೊಡುತ್ತಿದ್ದಾನೆ. ಅವನ ಮೂರು ಜನರ ಲೆಕ್ಕವನ್ನು ಇಡಗೊಡುತ್ತಿಲ್ಲ. ಮತ್ತು ಕೆಲವೊಂದು ಬಂಡಖೋರರು ಸಹಿತಾ ಈ ಊರಿಗೆ ಬಂದು ಜನರ ಮನೆಯಲ್ಲಿಯ ನಗದು ಹಣ, ವಸ್ತುಗಳು ಮತ್ತು ದನಕರು ಸೇರಿ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ, ಕಿಫಾಯತಖಾನರಿಗೆ ಆದೇಶವಾಗಬೇಕು ಏನೆಂದರೆ, ವಿಚರಣೆ ಮಾಡಿ ಹಕ್ಕುದಾರರ ಹಕ್ಕುಗಳನ್ನು ಅವರಿಗೆ ಕೊಡಿಸಬೇಕು. ಆದೇಶವನ್ನು ಕಿಫಾಯತಖಾನರಿಗೆ ಕಳಿಸಬೇಕು. ಜು. ೩೦ ಮೋಹರಮ ೧೩

೨೩೩

(ಆಲಮಗಿರಿ) ಜು.೩೦ ಜವ್ವಲ೧೧ ಶಾ. ೧೬೨೯ ಚೈತ್ರ ಶುದ್ಧ ೧೩
ಇ. ೧೬೮೭ ಮಾರ್ಚ ೧೬

ರುಹುಲ್ಲಾಹಖಾನ > ಆಲಮೇಲ ಜಿಲ್ಹೆಯ ದೇಶಮುಖ ನೀಲಾ ಮತ್ತು ಜಗದೇವ

ನಿನ್ನ ವಿನಂತಿಯಿಂದ ತಿಳಿದು ಬಂದದ್ದೇನೆಂದರೆ, ಮನಸ್ಸನ್ನು ಶಾಂತವಾಗಿಟ್ಟುಕೊಂಡು ವಿಜಾಪೂರಕ್ಕೆ ಬರಬೇಕು. ಅಲ್ಲಿಗೆ ಬಂದ ನಂತರ ನಿನ್ನ ಎಲ್ಲ ಬೇಡಿಕೆಗಳ ನಿರ್ಧಾರ ಆಗಬಹುದು. ಈ ಪತ್ರವನ್ನು ತೀರ್ಪು ಎಂದು ತಿಳಿದು ಸ್ವಥಹ ಹುಜೂರರ ಹತ್ತಿರ ಬರಬೇಕು. ಬಹಳಷ್ಟು ಬರೆಯಬೇಕು. ಜೂನ ೩೦ ಜಮಾದಿಲಾವಲ ೧೧.

೨೩೪

(ಆಲಮಗಿರಿ) ಜು. ೩೯ ಶಾಬಾನ ೧ ಶಾ. ೧೬೧೭ ಫಾಲ್ಗುಣ ಶುದ್ಧ ೨
ಇ. ೧೬೯೬ ಫೆಬ್ರವರಿ ೨೪

ಹಾದಿಖಾನ > (ವಿಜಾಪೂರ) ಸರಕಾರ ಮತ್ತು ಪ್ರಾಂತದಲ್ಲಿಯ ಆಲಮೇಲ ಜಿಲ್ಹೆಯ ದೇಶಮುಖ ಜಗದೇವ

ನಿನ್ನ ಅಧಿಕಾರಿಗಳೊಂದಿಗಿನ ಕೆಟ್ಟರೀತಿಯ ನಡತೆ ಮತ್ತು ಕೆಟ್ಟರೀತಿಯ ವ್ಯವಹಾರ ಇವುಗಳ ಹೆದರಿಕೆ ನಿನಗೆ ಆಗಿದೆ. ಆದ್ದರಿಂದ ಈ ಆಶ್ವಾಸನದ ಪತ್ರವನ್ನು ಕೊಡುತ್ತಿದ್ದೇವೆ. ನೀನು ಮನಸ್ಸನ್ನು ಸಮಾಧಾನವಾಗಿಟ್ಟುಕೊಂಡು ದಿವಾನರ ಕಚೇರಿಯಲ್ಲಿ ಹಾಜರಾಗು. ನಿನ್ನನ್ನು ಮಗನೆಂದು[ಫರ್ಜಂದ] ತಿಳಿದು ಸಾಮ್ರಾಜ್ಯದ ಪ್ರದೇಶದ ಏಳಿಗೆ ಯಾವುದರಲ್ಲಿ ಇದೆಯೋ ಅದನ್ನು ಅಧಿಕಾರದಲ್ಲಿ ತರಬೇಕು. ಜು. ೩೯ ಶಾಬಾನ ೧

೨೩೫

(ಆಲಮಗೀರ) ಜು. ೯ ಶಾ. ೧೫೮೮ ಅಶ್ವಿನ ಶುದ್ಧ ೧೩
ಹಿ, ೧೦೭೭ ರಖರ ೧೧ ಇ. ೧೬೬೬ ಸೆಪ್ಟಂಬರ ೩೦

ಮೀರ ಮಹಮ್ಮದ ಶಫಿ, ಬನಸಾಳೆ ಇತ್ಯಾದಿಗಳ ಠಾಣೇದಾರ ಇವರ ಗುಮಾಸ್ತೆ ಇವರ ಪರವಾನಗಿ ಪತ್ರದಲ್ಲಿ ಏನಿದೆ ಎಂದರೆ ಸೀವಾ [ಶಿವಾಜಿ] ತನ್ನ ಮಕ್ಕಳ ಸಹಿತ ಹುಜೂರರಿಂದ ಓಡಿಸಿಕೊಂಡು ಹೋಗಿದ್ದಾಗಿದೆ. ಈ ವಿಷಯದಲ್ಲಿ ಅವನು ಮತ್ತು ಅವನ ಮಗ ಇವರನ್ನು ಬಂಧಿಸುವದಕ್ಕಾಗಿ ಆದೇಶ ನೀಡಲಾಗಿದೆ. ಮತ್ತು ಇಲ್ಲಿಂದ ಅಹದಿ ಜನರನ್ನು ನಿಯಮಿಸಲಾಗಿದೆ. ಆದರೂ ಈ ಅನುಮತಿ ಪತ್ರ ಮುಟ್ಟಿದ ತಕ್ಷಣ ತಮ್ಮ ಗುಮಾಸ್ತನಿಗೆ ಎಚ್ಚರಿಕೆ ಕೊಡಬೇಕು, ಏನೆಂದರೆ, ಒಬ್ಬರನ್ನೊಬ್ಬರ ಜೊತೆ ಮಾಡಿ ಬನಸಾಳದ ವಿಷಯದ ಬಗ್ಗೆ ಎಚ್ಚರಿಕೆ ಇರಬೇಕು. ಈ ವಿಷಯದಬಗ್ಗೆ ಎಚ್ಚರಿಕೆಯಿಂದ ತಿಳಿದುಕೊಳ್ಳಬೇಕು. ಜು. ೯ ಹಿ ೧೦೭೭ ರಖರ ೧೧

೨೩೬

(ಆಲಮಗಿರಿ)ಜು. ೧ ೨ ಜವಲ ೧೪ ಶಾ. ೧೫೯೧ ಅಶ್ವಿನ ವದ್ಯ ೧
ಇ. ೧೬೬೯ ಸೆಪ್ಟಂಬರ ೩೦

ಔರಂಗಜೇಬ > ಬಾಳಾಪೂರದ ಜಾಹಗಿರದಾರ ಅಮ್ಜದ ಕಾದೀರ ಸಾಹೇಬ.

ಸಯ್ಯಿದ ಮನ್ಸೂರಖಾನರು ವಿನಂತಿ ಮಾಡಿಕೊಂಡಿದ್ದಾರೆ, ಏನೆಂದರೆ, ಯಾರಾದರೂ ಜಮೀನದಾರ ರಾಜಾ ಶಿವಾಜಿ ಜೊತೆ ಗುಪ್ತಾಲೋಚನೆ ಮಾಡಿ ಅವರ ಮಧ್ಯಸ್ಥಿಕೆಯಿಂದ ಬಾದಶಾಹಾರ ಭೇಟಿಗಾಗಿ ಇಚ್ಛಿಸುತ್ತಿದ್ದರೆ, ನಾನು ಮತ್ತು ಹಿಲಾಲಖಾನ ಇವರ ಮಧ್ಯಸ್ಥಿಕೆಯಿಂದ ಆ ಜಮೀನದಾರರು ಬಾದಶಾಹಾರ ಭೇಟಿ ಮಾಡುವುದಕ್ಕಾಗಿ ವ್ಯವಸ್ಥೆ ಮಾಡುತ್ತೇವೆ, ಆದರೂ ಆದೇಶ ಏನಿತ್ತೆಂದರೆ, ಮಹಾರಾಜ ಜಶವಂತಸಿಂಗ ಇವರು ಸ್ವತಃ ಮಧ್ಯಸ್ಥಿಕೆ ವಹಿಸಿ ತಮ್ಮ ಒಬ್ಬ ನೌಕರನನ್ನು ಆ ಜಮೀನದಾರರ ಹತ್ತಿರ ಕಳಿಸುತ್ತಿದ್ದಾರೆ. ಆಗ ಜಶವಂತಸಿಂಗರು ಕಳಿಸಿದ ಮನುಷ್ಯನಿಗೆ ಆದೇಶವನ್ನು ಸಾದರ ಮಾಡಲಾಗಿ ಅವನು ಮನ್ಸೂರಖಾನ ಮತ್ತು ಹಿಲಾಲಖಾನ ಇವರೊಂದಿಗೆ ಆ ಜಮೀನದಾರನನ್ನೂ ಕರೆದುಕೊಂಡು ಬರಬೇಕು. ಜು. ೧೨ ಜವಲ ೧೪.

೨೩೭

(ಆಲಮಗಿರಿ) ಜು. ೪೭ ಶಾ. ೧೬೨೫ ಜೇಷ್ಠ ಶುದ್ಧ ೩
ಮೋಹರಮ ೨ ಇ. ೧೭೦೩ ಮೇ ೮

ಜುಲ್ಫಿಕಾರಖಾನ > ಅಮರಸಿಂಘ

ಅಮರಸಿಂಘ ತಿಳಿದುಕೊಳ್ಳಬೇಕಾದದ್ದು, ಗೋದಾಮದಲ್ಲಿ ವೃತಬಂಧದ ಅವಶ್ಯಕತೆ ಇದೆ ಎಂದು ಬರೆಯಲಾಗುತ್ತದೆ. ಈ ಪತ್ರವನ್ನು ನೋಡಿದಮೇಲೆ ಸಾಧ್ಯವಾದಷ್ಟು ಆ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕು. ಈ ವಿಷಯದಬಗ್ಗೆ ಎಚ್ಚರಿಕೆ ಇರಲಿ. ಜು.೪೭ ಮೋಹರಮ ೨ ಮುಂಜಿವೆ ಮತ್ತು ಇತರ ಬೇಡಿಕೆಯ ಕುರಿತು ಖಾನಬಹಾದ್ದೂರ ನುಸ್ರತಜಂಗ ಇವರಿಗೆ ಪತ್ರ. ಜು.೪೭ ಮೋಹರಮ ೭ .

೨೩೮

(ಆಲಮಗಿರೀ) ಜು. ೪೮ ಶಾ. ೧೬೨೫ ಪೌಷ್ಯ ಶುದ್ಧ ೯
ರಮಜಾನ ೭ ಇ. ೧೭೦೪ ಜಾನೇವಾರಿ ೪

- ದಂಡರಾಜಪುರೀ ಸಂಬಂಧವಾಗಿ ಶಕರು ಖೋರ್‍ಯಾನ ೧೨ ಎತ್ತುಗಳು ಬರತ್ತಿವೆ. ಎಂದು ತಿಳಿದು ಬಂದಿದೆ, ಆ ಸಾಹೇಬರ ಠಾಣೆಯ ಮೇಲೆ ಯಾರೋ ಅವರಿಗೆ ಅಡ್ಡ ಬಂದಿದ್ದಾರೆ. ಈ ಎತ್ತುಗಳು ಸರಕಾರದ ಕೇಶವದಾಸ ಮೆಹತಾನ ಇನಾಯಿತುಲ್ಲಾಖಾನ ಕಡೆಗೆ ಹೋಗುತ್ತಿವೆ. ಆದ್ದರಿಂದ ಇಚ್ಛೆ ಏನಿದೆ ಎಂದರೆ, ಸರಕಾರದ ಎಲ್ಲ ಜನರಿಗೆ ಎಚ್ಚರಿಕೆ ಕೊಟ್ಟು ಅವನು ಆ ಎತ್ತುಗಳನ್ನು ನಮ್ಮ ಹದ್ದಿನಿಂದ ಆ ಬದಿಗೆ ಮುಟ್ಟಿಸುತ್ತಾನೆ. ಅಂದರೆ ಅವು ಉಚ್ಚ ಸೈನ್ಯದಳದಲ್ಲಿ ಮುಟ್ಟುವವು. ಹೆಚ್ಚಿಗೆ ಕಾಳಜಿ ತೆಗೆದುಕೊಳ್ಳಬೇಕು. (ಪತ್ರದ ಹಿಂದೆ) ಗುಲಾಬರಾವ ವಕೀಲ ಇವರ ಮಹಾಜನರ ಎತ್ತುಗಳು ಬಹಾದ್ದೂರಗಢಕ್ಕೆ ಮುಟ್ಟುವಸಲುವಾಗಿ ಪತ್ರ. ಜು.೪೮ ರಮಜಾನ ೭

೨೩೯

(ಆಲಮಗಿರೀ) ಜು. ೪೯ ಶಾ. ೧೬೨೬ ಮಾಘ ಶುದ್ಧ ೧
ರಮಜಾನ ೨೯ ಇ. ೧೭೦೫ ಜನೆವರಿ ೧೫

➢ ಅಬ್ದುಲ ಗುಫರಖಾನ ಕಿಲ್ಲೇದಾರ ಅಹಮದನಗರ

ಯಾರೂ ಏನೂ ತೆಗೆದುಕೊಂಡು ಬರಬಾರದು ಮತ್ತು ಸಂಕೇತದಿಂದ ಪ್ರತಿಬಂಧಿಸಿದಾಗ್ಯೂ ಸರಾಯಿ ತೆಗೆದುಕೊಂಡು ಹೋಗುವದಕ್ಕಾಗಿ ಜನರನ್ನ ಕಳಿಸಿದ ಬಗ್ಗೆ ಪತ್ರ ಬಂದಿದೆ. ಅದನ್ನು ನೋಡಿದೆ. ಆ ಪ್ರಕಾರ ಸರಾಯಿ ಖರೀದಿಸಿ ಅವರ ಸ್ವಾಧೀನಕ್ಕೆ ಕೊಡಲಾಗಿದೆ. ಅವರು ಅದನ್ನ ಮುಟ್ಟಿಸುವರು ಅನ್ನುವ ಭರವಸೆ ಇದೆ. ಸಧ್ಯ ಪತ್ರದ ಮುಖಾಂತರ ತಮ್ಮ ಹಕೀಕತ ತಿಳಿಸಿರುವಿರಿ ಇದರಂತೆ ಮುಂದೆಯೂ ನಿಯಮಿತವಾಗಿ ಪತ್ರ ಬರಿಯುತ್ತಿರಿ ಎಂದು ಆಶೆ ಮಾಡುತ್ತೇವೆ. ಜು.೪೯ ರಮಜಾನ ೨೯

೨೪೦

(ಅಹಮದಶಾಹ) ಜು. ೯ ಶಾ.೧೬೭೦ ಮಾರ್ಗಶೀರ್ಷ ವದ್ಯ ೩
ಜಿಲ್ಹೇಜ ೧೬ ಇ. ೧೭೪೮ ನವ್ಹೆಂಬರ ೨೭

ರಾಜಾ ಬಲವಂತಸಿಂಗ ಕ್ಷೇಮದಿಂದ ಇರಬೇಕು. ಸಧ್ಯಾ ತಿಳಿದು ಬಂದದ್ದೇನಂದರೆ, ನಾರಾಯಣ ದಿಕ್ಷಿತರು ಕಾಲವಶವಾಗಿದ್ದಾರೆ. ಅವರ ಮಕ್ಕಳು ವಾಸುದೇವ, ಬಾಳಕೃಷ್ಣ ಮತ್ತು ಮೊಮ್ಮಗ ಬನಾರಸದಲ್ಲಿ ಇರುತ್ತಿದ್ದಾರೆ. ಬಾಳಾಜಿ ಬಾಜಿರಾವ ಅವರ ವಿಷಯದ ಬಗ್ಗೆ ಬರಿದಿದ್ದಾರೆ. ಆದ್ದರಿಂದ ಅವರ ವಿಚಾರಣೆ ಮತ್ತು ಅವರಿಗೆ ಸಹಾಯ ಮಾಡುವದು ಅವಶ್ಯವಾಗಿದೆ ಅಂತಾ ಬರೆಯಲಾಗಿದೆ. ಅಂದರೆ ಅವರು ದಾನಧರ್ಮದಲ್ಲಿ ಮಗ್ನವಾಗುತ್ತಾರೆ. ಜನರ ಹೇಳಿಕೆಯ ಮೇಲೆ ವಿಶ್ವಾಸ ಇಡಬಾರದು. ಯಾತ್ರಿ ಮತ್ತು ಗ್ರಾಮಸ್ಥರು ಇವರ ಬೈತುಲಮಾಲಾ ವಿಷಯದಲ್ಲಿ ಅನುಮತಿ ಪ್ರಕಾರ ಕ್ಷಮಾ ಮಾಡಲಾಗಿದೆ. ಅವರಿಗೆ ಯಾವದೇ ರೀತಿಯ ತೊಂದರೆ ಕೊಡಬಾರದೆಂದು ಬೈಲತುಲಾಮಾಲದ ಸೈನಿಕನಿಗೆ ತಾಕೀತ ಮಾಡಬೇಕು. ಜು. ೯ ಜಿಲ್ಹೇಜ ೧೬

೨೪೧

ಶಾ.೧೬೯೩ ಚೈತ್ರ ಶುದ್ಧ ೧೨ ರಿಂದ ಮಾರ್ಗ. ವದ್ಯ ೧೦
ಇ.೧೭೭೧ ಮಾರ್ಚ ೨೭ ರಿಂದ ಡಿಸೆಂಬರ ೩೧

- ಧೋಧಾ ಮತ್ತು ಭಾವನಗರದ ಬಂದರದ ಅಧಿಕಾರಿ ಭವಾನಿಸಿಂಗ ಇವನ ಮಗಾ ರಾವಳ ಅಖೇಯಜಿ > ರಾವಸಾಹೇಬ (ಮಾಧವರಾವ ಬಲ್ಲಾಳ)

ನಮ್ಮ ಸುದೈವದಿಂದ ಖಂಬಾಯದ ನಬಾಬ ಮೋಮಿನಖಾನ ಇವನ ಕೈಯಿಂದ ಧೋಧಾ ಕೋಟೆಯನ್ನು ನಮ್ಮ ಸೈನಿಕರು ವಶಪಡಿಸಿಕೊಂಡು ನಮ್ಮ ಅಧಿಕಾರಿಯ ಸ್ವಾಧೀನಕ್ಕೆ ಕೊಟ್ಟಿದ್ದಾರೆ. ಸಧ್ಯ ಇಂಗ್ಲೀಷರು ತಲಾಜ ಕೋಟೆಯನ್ನು ಕೋಳಿ ಇವರಿಂದ ಗೆದ್ದು ನವಾಬ ಮೋಮಿನಖಾನ ಇವರಿಗೆ ಅರ್ಪಿಸಿದ್ದಾರೆ. ಪೂರ್ಣ ಸಿಬ್ಬಂದಿ ಮತ್ತು ನಮ್ಮ ಅಧಿಕಾರಿ ಧೋಧಾ ಕೋಟೆಯ ಸಂರಕ್ಷಣೆ ಮಾಡದಿದ್ದರೆ ಮತ್ತೆ ತಿರುಗಿ ಹೋಗಿಬಿಡುತ್ತದೇನೋ ಎಂದು ಕಾಳಜಿ ಆಗುತ್ತಿದೆ. ಧೋಧಾ ಕೋಟೆಯನ್ನು ಒಳ್ಳೆಯ ರೀತಿಯಿಂದ ಸುರಕ್ಷಿತವಾಗಿಡಬೇಕೆಂದು ತಮ್ಮಲ್ಲಿ ನನ್ನ ವಿನಂತಿ ಇದೆ. ದೇವಿರಾಮ ದೇವಿ ಇವರನ್ನು ತಮ್ಮಕಡೆ ರವಾನಿಸಲಾಗಿದೆ. ಅವನು ತಮಗೆ ಎಲ್ಲ ಸಮಾಚಾರವನ್ನು ಸಾಂಗವಾಗಿ ಹೇಳುವನು.

೨೪೨

ರವಲ ೨೯

ಶಾ. ೧೬೯೮ ಜೇಷ್ಠ ಶುದ್ಧ ೧
ಇ. ೧೭೭೬ ಮೇ ೮

ನಬಾಬ ಸಾಹೇಬ ಪ್ರಕಾಶಮಾನ ಮತ್ತು ಶೋಭಾಯಮಾನ ಇದ್ದಾರೆ. ಸಧ್ಯ ಹರಿ ಪಂಡಿತರ ಪತ್ರ ಬಂದಿದೆ, ರವಲ ೨೯ ಕ್ಕೆ ಸಖರಾಮ ಹರಿ ಮತ್ತು ಮಾನಾಜಿ ಫಾಕಡೇ ಮತ್ತು ಇತರರೊಂದಿಗೆ ನಮ್ಮ ತಂಡವನ್ನು ರಘುನಾಥರಾವರಿಂದ ಬೇರೆ ಪಡೆಸಿ ಈ ಬದಿಗೆ ಬಂದಿದ್ದಾರೆ. ರಘುನಾಥರಾವ ಸುರತಕ್ಕ ಹೋಗಿದ್ದಾರೆ. ಅವರ ಹತ್ತಿರ ಎರಡನೂರು ಸೇವಕರು ಮತ್ತು ಸಿಪಾಯಿಗಳಿದ್ದಾರೆ. ಅವರ ಮನಸ್ಸಿನಲ್ಲಿ ಏನು ಇದೆ ನೋಡಬೇಕು. ಇತರ ವಿಷಯ, ಸಖಾರಾಮ ಪಂಡಿತ, ಬಾಳಾಜಿ ಪಂಡಿತ ಮತ್ತು ಕಿಶನರಾವ ಇವರ ಬರೆವಣಿಗೆಯಿಂದ ಸ್ಪಷ್ಟ ಆಗಬಹುದು. ಆ ಪತ್ರವನ್ನು ಜಿವಾಜಿ ಪಂಡಿತ ತಮಗೆ ಕಳಿಸಬಹುದು.

ಶಾ. ೧೬೯೯ ೧೭೦೦
೧೭೭೭ -೧೭೭೮

ನಬಾಬ ಸಾಹೇಬರು ಕ್ಷೇಮದಿಂದ ಇರಲಿ. ತಾವು ಹೈದರ ನಾಯಕರ ತೀವ್ರತೆಯ ಮೇಲೆ ಕಣ್ಣಿಟ್ಟು ಹರಿಪಂಡಿತ ಸಹಿತ ವಿಶ್ರಾಂತಿ ತೆಗೆದುಕೊಳ್ಳದೇ ತ್ವರಿತದಿಂದ ಈ ಪಕ್ಕಕ್ಕೆ ಬನ್ನಿ. ಆದರೆ ಕಾಳತೋಡ ಬಂಡಖೋರ ಬದಿಗೆ ಓಡಿಸಿದ. ಇನ್ನು ಮುಂದೆ ಬಂದರೆ ಅವನಿಗೆ ಎಚ್ಚರಿಕೆಯನ್ನು ಕೊಡುವದು ನಮಗೇನು ಕಠಿಣ ಇಲ್ಲಾ. ಅವನು ಯಾವಾಗ್ಯೂ ಹೋರಾಟ ಮಾಡುವದಿಲ್ಲಾ ಇದು ಸಂಪೂರ್ಣವಾಗಿ ಗೊತ್ತಿದೆ. ಆದರೆ ಸಂಧಿ ಸಾಧಿಸಿಕೊಂಡು ಕೆಡಕು ಮಾಡಬಹುದು. ಈಗಲೂ ಕೂಡ ಒಂದುವೇಳೆ ಸಾವನೂರ ಬಂಕಾಪೂರದ ಹಾಗೆ ಅಮೀರಊಲ ಉಮರಾದ ಹಳ್ಳಿಯನ್ನು ನಾಶ ಮಾಡಲಿಕ್ಕೆ ಅವನು ಸಿದ್ಧವಾದರೆ ನಾವು ಅಲ್ಲಿಗೆ ಹೋಗಿ ಅವನ ನಾಶ ಮಾಡುವದರಲ್ಲಿ ಯಾವ ಸಂಶಯವೂ ಇಲ್ಲಾ. ಈ ಕಡೆಗೂ ಸೈನ್ಯದಳ ರವಾನೆ ಮಾಡುವ ವಿಚಾರ ಇದೆ. ವಿಷಯವನ್ನು ಜವಾಜಿ ರಘುನಾಥ ಬರೆದಿದ್ದಾನೆ. ಅವನು ತಾನೇ ಹೇಳಬಹುದು.

೨೪೪

ಶಾ. ೧೬೯೦—೧೬೯೩
ಇ. ೧೭೮೮-೯೧

ಸುರತದಲ್ಲಿಯ ಡಚ್ ವಖಾರದ ಡಾಯರೆಕ್ಟರ ಮಾರ್ಟೀನ ಜಾನ ಬೋಸಮಾನ > ರಾವ ಸಾಹೇಬ (ಸವಾಯಿಮಾಧವರಾವ)

ನಮ್ಮ ಪ್ರತಿನಿಧಿ ತಮ್ಮಿಂದ ನಿರೋಪ, ತಮ್ಮ ಪತ್ರಗಳನ್ನು ಮತ್ತು ಸನ್ಮಾನಿಸಿದ ವಸ್ತ್ರಗಳನ್ನು ತೆಗೆದಕೊಂಡು ಬಂದಿದ್ದಾನೆ. ಅದರಿಂದ ನನಗೆ ಬಹಳ ಆನಂದ ಆಯಿತು. ಮತ್ತು ನಮ್ಮ ಕಂಪನಿಯ ಬಗ್ಗೆ ಸದ್ಭಾವನೆ ಇದೆ ಎಂಬುದರ ಖಾತ್ರಿ ಆಯಿತು. ನಮಗೂ ಸಹಾ ತಮಗಾಗಿ ಅದೇ ಭಾವನೆ ಇದೆ ಇದರ ಖಾತ್ರಿ ತಮಗೆ ಇರಲಿ. ವರ್ಷಾನುವರ್ಷ ತಮಗೆ ಭೇಟಿ ದಾಖಲಗಾಗಿ ಕುದುರೆ ಅಥವಾ ಇತರ ವಸ್ತು ಮತ್ತು ನಗದ ಈ ರೂಪದಲ್ಲಿ ಐದು ಸಾವಿರ ರುಪಾಯಿ ಕಳಿಸಕೊಡಬೇಕೆಂದು ನನ್ನ ಇಚ್ಛೆ ಇದೆ. ಕಂಪನಿಯ ಹಡಗುಗಳು ಮತ್ತು ವಸ್ತುಗಳನ್ನು ಗಲಬತ್ತಾದ ಮಾರ್ಗದ ತೀರ್ಪನ್ನು ಪಡೆದು ಅವರ ಪ್ರವಾಸ ಅಡತಡೆ ಬರದೇ ಆಗುವಂತೆ ಫೌಜದಾರ, ಸುಬೇದಾರ, ಸರಸುಬೇದಾರ ಇವರಿಂದ ಧ್ವಜವನ್ನು ಪಡೆಯುವ ಸಲುವಾಗಿ ಏನು ಮಾಡಬೇಕು, ಈ ಬಗ್ಗೆ ನಮ್ಮ ಪ್ರತಿನಿಧಿಗೆ ಸೂಚನೆ ಕೊಟ್ಟಿದ್ದಾರೆ. ತೀರ್ಪು ಪತ್ರದಿಂದ ಎರಡೂ ಪಕ್ಷದಲ್ಲಿ ಒಕ್ಕಟ್ಟು ಅಧಿಕವಾಗಿ ಬೆಳೆದೀತು ಈ ದೃಷ್ಟಿಯಿಂದ ಅದನ್ನು ದೊರಕಿಸಬೇಕು.

೨೪೫

ಶಾ. ೧೭೦೯

ಇ. ೧೭೭೬

ಸುರತ ಬಂದರದ ಫ್ರೆಂಚ ಕಂಪನಿಯ ಡೈರೆಕ್ಟರ ಜನರಲ ಇವರ ಕ್ಷೇಮದಿಂದ ಇರುವಿಕೆ.

ನೀವು, ನಿಮ್ಮ ಬಾದಶಹ ಮತ್ತು ನಮ್ಮ ಮಧ್ಯ ಗೆಳೆತನ, ವಿಶ್ವಾಸ ಮತ್ತು ಒಕ್ಕಟ್ಟು ಇದ್ದರೂ ಕೂಡಾ ತಮ್ಮಿಂದ ಪತ್ರ ಬರಲಾರದ್ದಕ್ಕೆ ನಮಗೆಲ್ಲರಿಗೂ ಸಮಾಧಾನವಿಲ್ಲ.. ಪ್ರತಿಯಾಗಿ ನಮಗೆ ಅತೀ ಆಶ್ಚರ್ಯ ಆಗಿದೆ. ಈಗ ತಮ್ಮ ಕುಶಲೋಪರಿಯ ಬಗ್ಗೆ ತಿಳಿದುಕೊಳ್ಳುವ ಉತ್ಸುಕತೆಯಲ್ಲಿ ನಾವಿದ್ದೇವೆಂದು ತಿಳಿದು ಮೇಲಿಂದಮೇಲೆ ಪತ್ರ ಬರೆದು ನಮ್ಮನ್ನು ಸಮಾಧಾನಗೊಳಿಸಬೇಕು. ಈ ಸಮಯದಲ್ಲಿ ಫ್ರೆಂಚ ಕಂಪನಿಯ ಡೈರೆಕ್ಟರ ಜನರಲ ಶಿವಾಲಿಯಾರ ಇವರು ಮೀರ ಜೈನುಲ ಆಬಿದೀನ ಹೆಸರಿನ ಮನುಷ್ಯನಿಂದ ನಿಮ್ಮ ಬಾದಶಾಹರ ಇಚ್ಛೇನುಸಾರ ಒಂದು ಒಡಂಬಡಿಕೆಯ ಪತ್ರವನ್ನು ಕೊಟ್ಟು ಕಳಿಸಿದ್ದಾರೆ. ಅದರ ತಾತ್ಪರ್ಯ ನಮ್ಮ ಕರ್ತೃತ್ವವನ್ನು ನೋಡಿ ಮತ್ತು ನಮ್ಮ ಬಾದಶಾಹರಿಗೆ ಸುಲುಖ ಇಟ್ಟು ಒಂದುವೇಳೆ ನಮ್ಮ ಬೇಡಿಕೆ ಮಾಡಿದಿರಿ ಮತ್ತು ಖರ್ಚ ಮತ್ತು ಇತರ ವಸ್ತುಗಳ ಸಹಾಯ ಮಾಡಿದರೆ, ಹಾಗೆ ನಮ್ಮನ್ನು ತಮ್ಮ ಸೇವಕ ಮತ್ತು ಸದಿಚ್ಛೆ ಬಯಸುವವ ಎಂದು ತಿಳಿದುಕೊಂಡರೆ ತಕ್ಷಣ ಇಂಗ್ಲೀಷರಿಗೆ ಎಚ್ಚರಿಕೆ ಕೊಟ್ಟು ಮುಂದೆ ನಾವು ನಮ್ಮ ಸೇವೆಯಲ್ಲಿ ಮಗ್ನರಾಗುತ್ತೇವೆ ಅನಿಸುತ್ತದೆ. ಈ ವಿಷಯದಲ್ಲಿ ನಾವು ಬಾದಶಾಹರ ಪರವಾಗಿ ವಚನ ಕೊಡುತ್ತೇವೆ. ಎರಡನಯದೇನೆಂದರೆ ತಾವು ಮತ್ತು ನಾವು ಒಂದೇ ಎಂದು ಭಾವಿಸಿರುವೆವು. ಹಾಗೇ ನಮ್ಮ ಪಂಗಡ ಮತ್ತು ಹಿಂದುಸ್ತಾನದಲ್ಲಿಯ ಜನರ ಮಧ್ಯ ಕರಾರು ಗಟ್ಟಿ ಆಗುತ್ತದೆ. ಮತ್ತು ಈ ವಿಷಯ ಇಂಗ್ಲೀಷರಿಗೆ ತಿಳಿಯಿತೆಂದರೆ, ಅವರು ಚನ್ನಾಗಿ ವಿಚಾರ ಮಾಡಿ ಮುಂದೆ ಬರುತ್ತಾರೆ ಮತ್ತು ಒಪ್ಪಂದದ ವಿನಂತಿ ಮಾಡಬಹುದು. ಆದರೂ ಅವರ ವಿನಂತಿ ಮಾನ್ಯ ಮಾಡಬಾರದು. ನಿಮ್ಮ ತಯಾರಿ ಮತ್ತು ಇಚ್ಛೆ ಇದ್ದರೆ ಫ್ರೆಂಚ ಸಿಪಾಯಿ ಸುರತ ಬಂದರದಲ್ಲಿಯ ಯುಧ್ಧದ ಸಾಮಾನು ಸಹಿತ ಯಾವುದಾದರೂ ಅಧಿಕಾರಿಯ ಅಧಿಪತ್ಯದ ಕೆಳಗೆ ತಮ್ಮ ಸೇವೆಗಾಗಿ ಬರುತ್ತಾರೆ. ಈ ಒಪ್ಪಂದದೊಂದಿಗೆ ಖಾನನು ಸುಸಮಯಿ ನಮ್ಮ ಸೇವಗೆ ಹಾಜರ ಆಗಿದ್ದಾನೆ. ನಾವು ಒಪ್ಪಂದಪತ್ರದ ಮೇಲೆ ನಮ್ಮ ದೃಷ್ಟಿಯನ್ನು ಹಾಯಿಸಲಾಗಿ ಅದರಲ್ಲಿಯ ಎಲ್ಲವೂ ವಿಸ್ತಾರವಾಗಿ ತಿಳಿಯಿತು. ಅದರಲ್ಲಿಯ ಮಜಕೂರದಿಂದ ಆನಂದವಾಯಿತು. ಬಹಳದಿನಗಳಿಂದ ಇಂಗ್ಲೀಷ ಕಂಪಸಿಯ ಅಧಿಕಾರಿಯೊಂದಿಗೆ ನಮ್ಮ ಸಖ್ಯ ಇದೆ

ಮತ್ತು ನಮ್ಮ ಬಗ್ಗೆ ಅವರ ಮನಸ್ಸಿನಲ್ಲಿ ಒಳ್ಳೆಯ ಭಾವನೆ ಇದೆ. ನಮ್ಮೊಂದಿಗೆ ಆದ ಕರಾರನ್ನು ಅವರು ಪಾಲಿಸುತ್ತಿದ್ದಾರೆ. ಆದರೆ ಒಂದು ವೇಳೆ ಯಾವಾಗ ಕರಾರನ್ನು ಮುರಿದು ವಿರೋಧದ ಭಾವನೆಯನ್ನು ತೋರಿಸಿದರು ಎಂದು ಕಂಡು ಬಂದರೆ ಅವರಿಗೆ ಎಚ್ಚರಿಕೆ ಕೊಡುವದಕ್ಕಾಗಿ ಅಧಿಕಾರಿಯ ನಿಯುಕ್ತಿ ಮಾಡಿ ಮೇಲಿಂದ ಮೇಲೆ ಅವರನ್ನು ಸ್ಥಿತ್ಯಂತರ ಮಾಡಬೇಕು. ಈ ಸಮಾಚಾರ ಕಲಕತ್ತೆಯ ಗವ್ಹರ್ನರನಿಗೆ ತಿಳಿದೊಡನೆ ಅವರು ಕರ್ನಲ ಆಪ್ಪನ್ನನನ್ನು ವಕಾಲತ್ತ ಮಾಡಲು ನಮ್ಮ ಹತ್ತಿರ ಕಳಿಸಿದ್ದಾನೆ. ಅವರು ಯೇಸು ಮತ್ತು ಧರ್ಮದ ಹೆಸರಿನಿಂದ ಕರಾರನಾಮಾ ಬರೆದರು ಮತ್ತು ಒಪ್ಪಿದರು. ಆದರೆ ಸ್ವಲ್ಪ ವೇಳೆಯಲ್ಲಿ ಮತ್ತೆ ಅವರು ದಂಗೆ ಎಬ್ಬಿಸಿದರು. ಅದೇ ಸಮಯಕ್ಕೆ ಅವರ ಕೃತ ಕಾರ್ಯದ ಫಲ ಅವರಿಗೆ ಸಿಕ್ಕಿತು. ಇಂಗ್ಲೀಷರ ಅಸಹಾಯಕತೆ ಮತ್ತು ಅಪಮಾನಿತವಾಗುವದು ಈ ಸುದ್ದಿ ನಿಮ್ಮ ಕಡೆ ಬಂದಿರಬಹುದು... ಸೂಕ್ಷ್ಮದಿಂದ ನೋಡಲಾಗಿ ಇಂಗ್ಲೀಷರು ಮೋಸಗಾರರು, ಬೇಯಿಮಾನಿ ಮತ್ತು ಸಂಧಿ ಸಾಧಕರು ಅಂತಾ ಲಕ್ಷಕ್ಕೆ ಬಂದಿತು. ಆದ್ದರಿಂದ ಅವರ ನಾಶ ಮಾಡುವ ಇಚ್ಛೆಯಿಂದ ಭೂಮಿಯ ಮೇಲಿನ ಮತ್ತು ಹಿಂದುಸ್ತಾನದಲ್ಲಿಯ ಅವರೆಲ್ಲರನ್ನು ಹೋಗಲಾಡಿಸುವ ಉಪಾಯ ಮಾಡಲಾಯಿತು. ಯಾವ ಉಪಾಯ ಮಾಡಲಾಗಿತ್ತೋ ಅದೇ ಪ್ರಕಾರ ನಮ್ಮ ಅಧಿಕಾರಿ, ನಬಾಬ ಆಸಫಜಾಹ (ನಿಜಾಮ), ಮುಧೋಜಿ ಭೋಸಲೆ ಮತ್ತು ಹೈದರ ಅಲಿಖಾನ ಇವರು ಯುದ್ಧ ಸುರು ಮಾಡಿದ್ದಾರೆ. ಸ್ವಲ್ಪ ಕಾಲದಲ್ಲಿ ಇಂಗ್ಲೀಷರಿಗೆ ನಾಲ್ಕೂ ಬದಿಯಿಂದ ಸೋಲಿಸೋಣ ಮತ್ತು ಅವರ ಕೃತ್ಯಕ್ಕಾಗಿ ಅವರಿಗೆ ಯೋಗ್ಯ ಶಿಕ್ಷೆಯನ್ನು ಕೊಡೋಣ ಮತ್ತು ಭೂಮಿಯಮೇಲಿಂದ ಅವರನ್ನು ತಳ್ಳಿ ಹಾಕೋಣ. ಇಂಗ್ಲೀಷರು ಫ್ರೆಂಚ ಜನ ಮತ್ತು ಅವರ ಬಾದಶಾಹ ಇವರೊಂದಿಗೆ ಒಪ್ಪಂದ ಮಾಡಿಕೊಂಡು ಹಿಂದುಸ್ತಾನದಲ್ಲಿಯ ಫ್ರೆಂಚರು ಎಲ್ಲಿ ಹಸ್ತಗತ ಮಾಡಿದ್ದಾರೆ ಅನ್ನುವದು ಸೂರ್ಯಪ್ರಕಾಶದಷ್ಟು ನಿಖರವಾಗಿದೆ. ಸದ್ಯ ಇಂಗ್ಲೀಷರು ಗರ್ವದಿಂದ ಮೆರೆಯುತ್ತಿದ್ದಾರೆ. ಆದರೂ ಫ್ರೆಂಚ ಜನ ಸಾಹಸಾ ಮತ್ತು ಶೌರ್ಯ ತೋರಿಸುತ್ತಿದ್ದಾರೆ. ಮತ್ತು ಇದು ಅವರ ಸಾಹಸಕ್ಕೆ ಯೋಗ್ಯವಾಗಿದೆ. ಈ ಸಮಯ ಎಲ್ಲ ಬದಿಯಿಂದ ಯುದ್ಧಕ್ಕೆ ಸರಿಯಾದ ಸಮಯವಿದೆ. ಇಂಥ ಸಮಯದಲ್ಲಿ ನಿಮ್ಮ ಜನರ ಆಗಮನದ ಸಂದೇಶ ಬಂದರೆ ಬಹಳ ಒಳ್ಳೆಯದಾಗುವದು. ಇಂಥಾ ಸಮಯ ಪ್ರಯತ್ನ ಮಾಡಿದರೂ ಬರುವದಿಲ್ಲಾ. ತಾವು ಬುದ್ಧಿವಂತರು, ದೂರದರ್ಶಿಗಳು ಮತ್ತು ಅವರ ಕಟ್ಟಾ ಶತ್ರುಗಳಾಗಿದ್ದೀರಿ ಅಂತಾ ಬರೆಯುವ ಅವಶ್ಯವಿಲ್ಲಾ. ಆ ಪ್ರಕಾರ ಉಪಯುಕ್ತ ಖಾನರು ನಿಮ್ಮ ಶೂರತನ, ವಚನಪಾಲಿಸುವದು ಮತ್ತು ಒಪ್ಪಂದದ ಗಟ್ಟಿತನ ನಮಗೆ ಹೇಳಿದರು. ಆದ್ದರಿಂದ ತಮ್ಮ ವಿನಂತಿ ಪ್ರಕಾರ ಖರ್ಚಿನ ವ್ಯವಸ್ಥೆ ಮಾಡುವದು ಕರಾರನಾಮದ ಯಾದಿಯನ್ನು (ನಮ್ಮ) ಶಿಕ್ಕಾ ಸಹಿತ ಖಾನವರ ಜೊತೆ ಕಳಿಸಲಾಗಿದೆ. ಈಗ ಕರಾರನಾಮದ ಯಾದಿ ಮುಟ್ಟದಾಕ್ಷಣ ಎರಡು ಸಾವಿರ ಫ್ರೆಂಚ ಸಿಪಾಯಿಗಳು,

ಯುದ್ಧದ ಸಾಮಾನುಗಳು ಮತ್ತು ಅನುಭವಿ ಅಧಿಕಾರಿಯೊಂದಿಗೆ ಒಡನೆ ಕರಾರದಲ್ಲಿಯ ವಿವರಗಳ ಪ್ರಕಾರ ಹುಜೂರರಿಗೆ ಕಳಿಸಿಕೊಡಲೇಬೇಕು. ಈ ಕೆಲಸ ಲಕ್ಷಕ್ಕೆ ಬಂದರೆ ಅಧಿಕ ವಿಶ್ವಾಸ ನಿರ್ಮಾಣ ಆಗುವದು ಮತ್ತು ತಾವು (ಫ್ರಾನ್ಸದ ಬಾದಶಾಹ) ಮತ್ತು ನಾವು ಇದರಲ್ಲಿ ಒಕ್ಕಟ್ಟು, ಸ್ವಚ್ಛಮನಸ್ಸು ಗಟ್ಟಿ ಆಗಿ ಇಂಗ್ಲೀಷರಿಗೆ ಎಚ್ಚರಿಕೆ ಕೊಟ್ಟು ಓಡಿಸುವದಕ್ಕಾಗಿ ಉಪಾಯ ಯೋಜನೆ ಮಾಡಲಾಗುವದು. ನಮ್ಮ ಒಂದೇ ಮನಸ್ಸು, ಒಕ್ಕಟ್ಟು ಮತ್ತು ಮಧ್ಯಸ್ತಿಕೆ ಇವೆಲ್ಲವುಗಳಿಂದ ಎರಡೂ ಪಕ್ಕಕ್ಕೆ ಬಹಳಷ್ಟು ಲಾಭ ಒದಗಿ ಬರುತ್ತದೆ. ಈ ವಿಷಯದ ಬಗ್ಗೆ ಖಾನರಿಗೆ ಬಹಳಷ್ಟು ಮಜಕೂರ ಹೇಳಿ ಕಳಿಸಲಾಗಿದೆ. ಅವನು ತಮಗೆ ತಿಳಿಸುತ್ತಾನೆ. ಇದರ ತಾತ್ಪರ್ಯ ಇಷ್ಟೇ ಇದೆ ತಾವು ಕರಾರನಾಮಾ ಪ್ರಕಾರ ೨೦೦೦ ಸಿಪಾಯಿ, ಯುದ್ಧದ ಸಾಮಾನು ಮತ್ತು ಅಧಿಕಾರಿ ರವಾನಿಸಬೇಕು. ಹೆಚ್ಚಿನದನ್ನು ಬರೆಯಬೇಕು.

೨೪೬

ಶಾ.೧೭೧೦-೧೧
ಇ.೧೭೮೮—೮೯

ರಾವ ಸಾಹೇಬರು ಕುಶಲದಿಂದ ಇರಬೇಕು

ಮದುರಾ ವಗೈರೆ ಕಿಲ್ಲೆಯ ವಿಜಯದ ಮಾಹಿತಿ ಇದ್ದ ಪತ್ರ ಮುಟ್ಟಿ ತಮಗೆ ಸಮಾಧಾನ ಅನಿಸಿರಬೇಕು.

ಈ ವಿಜಯ ಭಗವಂತನ ಕೃಪೆ ಮತ್ತು ತಮ್ಮ ಸಹಾಯ ಇದರ ಪರಿಣಾಮ ಆಗಿದೆ. ಈ ಮೊದಲು ಬರೆದ ಪತ್ರ ಮುಟ್ಟಿ ನಮ್ಮ ಗೆಳತನ ಮತ್ತು ಕೈಫಿಯತ ಇದರ ವಿವರವನ್ನು ಹರಿ ಪಂಡಿತ ಮತ್ತು ಗೋವಿಂದರಾವ ಇವರ ಬರವಣಿಗೆಯಿಂದ ಸ್ಪಷ್ಟವಾಗಿರಬಹುದು. ತಮ್ಮ ಕಲ್ಯಾಣ ಐಶ್ವರ್ಯ ಮತ್ತು ಆಯುರಾರೋಗ್ಯವಾಗಿರಲೆಂದು ಆಶಿಸುತ್ತೇವೆ. ಬೇಗನೆ ನಮ್ಮ ನಿಮ್ಮ ಭೇಟಿ ಆಗಲಿದೆ. ನಮ್ಮ ಮನಸ್ಸಿನಲ್ಲಿರುವ ಹಂಚಿಕೆಗಳು ನಮ್ಮ ತಿಳಿಸಿಹೇಳುವಿಕೆ ಮತ್ತು ಹರಿ ಪಂಡಿತರ ಹೇಳುವಿಕೆ ಇದರ ಮೇಲಿಂದ ತಮಗೆ ನಿಚ್ಚಳ ಆಗುವದು. ಇತರ ಸಾಮಾನುಗಳನ್ನು ಪಂಡಿತರ ಜೊತೆ ಕಳಿಸಿಕೊಡಲಾಗಿದೆ. ಅದನ್ನು ಸ್ವೀಕಾರ ಮಾಡಿ ತಮ್ಮ ಆನಂದವನ್ನು ವ್ಯಕ್ತ ಮಾಡಬೇಕು. ನಮ್ಮ ಜನರ ಉತ್ತಮ ಕಾರ್ಯಗಳ ಬಗ್ಗೆ ತಮಗೆ ಸಮಾಚಾರವನ್ನು ಪತ್ರದ ಮುಖಾಂತರ ನೀಡಲು ನಮಗೆ ಬಹಳ ಆನಂದ ಮತ್ತು ಸಮಾಧಾನ ಆಗುತ್ತದೆ.

೨೪೭

ಶಾ. ೧೭೧೩ ಆಶ್ವಿನ ವದ್ಯ ೭
ಇ. ೧೭೯೧ ಅಕ್ಟೋಬರ ೧೯

ರಾವಸಾಹೇಬರು ಕ್ಷೇಮ ಇರಲಿ

ಅಕ್ಟೋಬರ ೧೮ರ ರಾತ್ರಿ ನಂದಿದುರ್ಗ ಉರ್ಫ ಗರ್ದೂನಶಿಕೋಹ ಈ ಶತ್ರುವಿನ ಭರಭಕ್ಕಮ ಮತ್ತು ಅಜಿಂಕ್ಯ ಕಿಲ್ಲೆಯ ಮೇಲೆ ಹಲ್ಲೆ ಮಾಡಿ ನಮ್ಮ ಸೈನ್ಯಗಳು ಅದನ್ನು ವಶಪಡಿಸಿಕೊಂಡರು. ಕಿಲ್ಲೆಯಲ್ಲಿಯ ಸೈನ್ಯಗಳು ಹೆದರಿ ಓಡಿಹೋದರು. ರಾತ್ರಿ ಅಂಥ ಕತ್ತಲೆಯಲ್ಲಿ ಕೆಲವೊಂದು ಜನರು ಕಿಲ್ಲೆಯ ಗೋಡೆಗೆ ಹಗ್ಗ ಕಟ್ಟಿ ಅದನ್ನ ಹಿಡಿದು ಕೆಳಗೆ ಇಳಿದರು ಮತ್ತು ಫರಾರಿ ಆದರು. ಕೆಲವು ಜನ ಕೊಲ್ಲಲ್ಪಟ್ಟರು ಪುತ್ತು ಕಿಲ್ಲೇದಾರ ಮತ್ತು ಕೆಲವು ಜನ ಬಂಧಿಸಲ್ಪಟ್ಟರು. ಈ ಒಂದು ಗೆಲವು ನಮ್ಮ ಮುಂದಿನ ವಿಜಯಕ್ಕೆ ನಾಂದಿ ಆಯಿತು. ಈ ಯೋಗದಿಂದ ನಮೆಗೆಲ್ಲಾ ಆನಂದ ಆಯಿತು. ಈ ಕಿಲ್ಲೆಯ ಗೆಲವು ಕಠಿಣ ಇದ್ದರೂ ಕೂಡಾ ಇಂಥ ಭಕ್ಕಮಕಿಲ್ಲಾ ಶತ್ರುಗಳ ವಶದಲ್ಲಿರುವದು ಯೋಗ್ಯವಿದ್ದಿಲ್ಲಾ. ಈ ಸಂಯೋಗದಿಂದ ನಮ್ಮ ಗುರಮಕೊಂಡಾದಿಂದ ಬರುವ ವ್ಯಾಪಾರಿಗಳ ಧವಸ ಧಾನ್ಯಗಳನ್ನು ಸಾಗಿಸಲು ವ್ಯತ್ಯಯವಾಗಿ ಲುಕ್ಸಾನ ಆಗುತ್ತಿತ್ತು. ಅದು ನಮ್ಮ ಮೂವರಿಗೂ (ಇಂಗ್ಲೀಷರು, ಮರಾಠಿಗರು ಮತ್ತು ನಿಜಾಮ) ಲಾಭದಾಯಕವಾಗಿರಲಿಲ್ಲಾ. ಅಂತಲೇ ಆವಶ್ಯಕವಿದ್ದ ಪ್ರಯತ್ನಗಳನ್ನು ಮಾಡಿ ಆ ತೊಂದರೆಯನ್ನು ದೂರ ಮಾಡಿದೆವು. ಲಮಾಣಿಗಳಿಂದ ಸೈನಿಕರ ಧಾನ್ಯಸಂಗ್ರಹವನ್ನು ಮುಟ್ಟಿಸುವದರಲ್ಲಿ ಯಾವದೇ ಅಡೆತಡೆ ಆಗುವದಿಲ್ಲಾ ಮತ್ತು ಈ ಮೋಹಿಮದ ಉದ್ದೇಶ ಫಲದ್ರೂಪಿ ಆಗುವದೆಂದು ನಮ್ಮ ವಿಶ್ವಾಸವಿದೆ. ತಮ್ಮಿಂದ ಕುಶಲೋಪರಿಯ ಪತ್ರಗಳು ಬರುವವೆಂದು ನಾವು ಇಚ್ಛಿಸುತ್ತೇವೆ.

ಧಾರವಾಡ ದೇಸಾಯಿ

೨೪೮

ಸು ೧೧೯೧ ಶಕ, ೧೬೧೩ ಜ್ಯೇಷ್ಠ ಶು ೧

ಜು. ೩೪ ಸಾಬಾನ ೨೯ ಕ್ರಿ ಶ ೧೬೯೧ ಮೇ ೧೮

ಸುರತ ಮಜಾಲಿಸೀ ಬಿಹುಜೂರ [ಖಾಲೀ ಬಿಟ್ಟ ಸ್ಥಳ] ಕೋಟೆ ನಸೀರಾಬಾದ ಊರ್ಫ ಧಾರವಾಡ ಸನ್ ೩೪ ಜುಲೂಸ ವಾಲಾ ಸು ಇಹಿದೆ ತಿಸ್ಸೈನ ಅಲಫ ಜಾಹಾಲೆ ಸುರತ ಮಜಲಿಸಿನ ಹಾಗೆ ಯಾರು ರಾಯಾಜೀ ಭಾನಜೀ ಪಿದರ ಲಿಂಗೋಜಿ ರಾಯಾಜೀ ಈತನು ಪೇಸಗಿ ಲಿಂಗನಗೌಡ ದೇಶಮುಖ ಮಾಮಲೆ ತೊರಗಲ ಈತನ ನೌಕರನಾಗಿದ್ದು ಗುಮಾಸ್ತೆಗಿರಿಯ ಕೆಲಸವನ್ನು ಬಹಳ ದಿನಗಳ ವರೆಗೆ ಮಾಡಿದ್ದನು. ಆಮೇಲೆ ಅಲ್ಲಿಂದ ನಿರುದ್ಯೋಗಿಯಾಗಿ ಮೇಲೆ ಹೇಳಿದ [ಧಾರವಾಡ] ಕೋಟೆಗೆ ಬಂದಿದ್ದನು. [ಖಾಲೀ ಸ್ಥಳ] ರಾಮದರಿಯಾಕ್ಕೆ [ರಾಮದುರ್ಗಕ್ಕೆ] ಸಂಪಗಾವ ಮಾರ್ಗವಾಗಿ ಹೋಗಿ [ಧಾರವಾಡ] ಕೋಟೆಗೆ ಬಂದನು. [ಧಾರವಾಡ] ಕೋಟೆಯ ನರಸಿಂಗರಾವ ದೇಶಮುಖ ಈತನು ರಾಯಾಜೀ ಭಾನಜೀಯನ್ನು ತನ್ನ ನೌಕರನನ್ನಾಗಿ ಇಟ್ಟುಕೊಂಡು, ತನ್ನ ವತಿಯಿಂದ ರಾಯಭಾರಿಯನ್ನಾಗಿ [ವಕೀಲ] ಇಟ್ಟುಕೊಂಡು ರಾಜಪುತ್ರನ [ಶಾಹಜಾದೆ ಸಾಹೇಬ] ಕಡೆಗೆ ಮರ್ಯಾದೆಯನ್ನು ಮಾಡಲು ಕಾಣಿಕೆಯನ್ನು ಕೊಟ್ಟು ಅಲ್ಲಿಂದ ಸಂಪಗಾವ ದಂಡಿಗೆ [ಲಷ್ಕರ] ಕಳಿಸಿದ್ದನು. ಅಲ್ಲಿ ಮರ್ಯಾದೆಯನ್ನು ಮಾಡಿದನು. ರಾಜಪುತ್ರನು ನರಸಿಂಗರಾವ ದೇಶಮುಖನ ಮೇಲೆ ಬಹಳ ಗೌರವವನ್ನು [ಮೆಹರಬಾನ] ತೋರಿಸಿ, ರಾಯಾಜೀ ಭಾನಜೀಯ ಗುಮಾಸ್ತೆನ ಜೊತೆಗೆ ವಸ್ತ್ರಗಳನ್ನು [ಸಿರೋಪಾವು] ಕೊಟ್ಟು [ಧಾರವಾಡ] ಕೋಟೆಗೆ ಕಳಿಸಿದನು. ರಾಯಾಜೀ ಭಾನಜೀಯು ಎರಡು ವರುಷ ನರಸಿಂಗರಾವ ದೇಶಮುಖನ ನೌಕರನಾಗಿದ್ದಾಗ ಎರಡನೆಯ ಸಲ ರಾಜಪುತ್ರನು ಈ ಕಡೆಗೆ ಬಂದು [ಧಾರವಾಡ] ಕೋಟೆಗೆ ಮುತ್ತಿಗೆ ಹಾಕಿದನು. ಆಗ ಮೊದಲ ಸಲದ ಹಾಗೆ ನರಸಿಂಗರಾವ ದೇಶಮುಖನು, ರಾಯಾಜೀ ಭಾನಜೀಯನ್ನು ತನ್ನ ಕಡೆಯಿಂದ ದಂಡಿನ ಮಧ್ಯೆ

ಕಳಿಸಿದನು. ನರಸಿಂಗರಾವ ದೇಶಮುಖನು ರಾಯಾ[ಜೀ] ಭಾನಜೀಯು ದಂಡಿನ ಮಧ್ಯೆ ಪರಿಚಯವಿದ್ದವನಾದ್ದರಿಂದ [ವಾಕೀಫಹಾಲ] ತನ್ನ ನೌಕರನನ್ನಾಗಿ ಠರಾವಿಸಿ ದಂಡಿನ ಮಧ್ಯ ಕಳಿಸಿದ್ದನು. [ಧಾರವಾಡ] ಸದರೀ ಕೋಟೆಯನ್ನು ಪಾದಶಾಹಿಯು ಕೈವಶಮಾಡಿಕೊಳ್ಳುತ್ತಿರುವಂತೆ ರಾಯಾ[ಜೀ] ಭಾನಜೀಯು ತನ್ನ ಧಣಿಯ [ಖಾವಂದರ] ಹೆಸರನ್ನು ಜಾಹೀರ ಮಾಡದೆ, [ಧಾರವಾಡ] ಕೋಟೆಯ ಹಕೀಮನ ಮುಂದೆ ಗೌರವವನ್ನು ತೋರಿಸಿ ಸದರೀ ಕೋಟೆಯ ದೇಶಮುಖರಲ್ಲಿ ಇದ್ದಾಗ, ಗೌರವಾನ್ವಿತರಾದ [ಕಿಬಲೆ ಜಾಹ] [ಖಾಲೀ ಸ್ಥಳ] ಸಾಹೇಬ[ರಾದ] ನರಸಿಂಗರಾವ ವ್ಯಾಸರಾವ ದೇಶಮುಖ ಕೋಟೆ ಮಾ ಕದೀಮ ಇವರ ಮೇಲೆ ಮೆಹರಬಾನಿಯನ್ನು ಮಾಡಿ, ಗೌರವ ತೋರಿಸಿ [ಸರಫರಾಜ] ದೇಶಮುಖಿಯನ್ನು ಉಳಿಸಿ [ಮರಾಹಾಮತ] ಕೊಟ್ಟು, ಕೋಟೆಗೆ [ಧಾರವಾಡಕ್ಕೆ] ಕಳಿಸಿ ಕೊಟ್ಟನು. ಮರಸಿಂಗರಾವ ದೇಶಮುಖ ಸದರೀ ಕೋಟೆಯ ಕದೀಮನನ್ನಾಗಿ ಲಿ[ಂಗೋಜಿ] ಫರ್ಜಂದ ರಾಯಾಜೀ ಭಾನಜೀಯು ಆತನ ನೌಕರ ಗುಮಾಸ್ತೆಯಾಗಿದ್ದಾನೆಂಬುದು ಜಾಹೀರವಿದೆ. ಈ ಪಂಚನಾಮೆಯು [ಮಹಜರ] ಸಹೀ ಛ ೨೯ ಮಾಹೆ ಶಾಬಾನ.

ಸು ೧೧೧೫ ಶಕ ೧೬೨೬-೨೭
ಕ್ರಿ ಶ ೧೭೦೪-೦೫

ಜಿಬದತುಲ ಯೆಕರಾನ ನರಸಿಂಗರಾವು ವ್ಯಾಸರಾವು ದೇಸಾಯಿ ಮತ್ತು ನಾಡಗೌಡ ಪಾ ನಸೀರಾಬಾದ ಊರ್ಫ ಧಾರವಾಡ ಸರಕಾರ ಬಂಕಾಪುರ ಸುಬೆ ದಾರುಲ ಜಫರ ಬಿಜಾಪುರ ಸು ಸನ್ ಖಮಸ ಮಯಾ ಅಲಫ ಜೇಳೂಸ ಬಾಲಾ ದರೀ ವಿಲೆ ಸರಕಾರ, ಸದರೀ ಕೋಟೆಗೆ ಬಂದು ಎರಡು ವರುಷಗಳಾದುವು. ನೀವು ಬಾದಶಹರ ಕೆಲಸದಲ್ಲಿ ಯೋಗ್ಯ ಹಾಗೂ ಸರಳ ರೀತಿಯಲ್ಲಿ ಸೇವೆಯನ್ನು ಮಾಡುತ್ತಿದ್ದೀರಿ. ಧನಾಜೀ ಮತ್ತು ಹಿಂದುರಾವ ಜಮಾವಸಹಿತವಾಗಿ ಹತ್ತಿರದ ಕೋಟೆಗಳಿಗೆ ಬಂದು ಇಳಿದರು. ವಖತೀ ಕೋಟೆಯ ಸುತ್ತಲಿನ ಚೌಕೀ ಅಲಂಗ ನೌಬತ್ ಮಾಡಿ ಯುದ್ಧದಲ್ಲಿ ಭಾಗವಹಿಸಿ ಒಳ್ಳೇಯ ಕೆಲಸ ಮಾಡಿದಿರಿ. ಈ ಬಗ್ಗೆ [ಮಾಯಿಲೆಸ ಕಾರ] ಬಾದಶಹರು ಲಾಭವನ್ನು [ಆಮದನೀ] ತಿಳಿದುಕೊಂಡು ನಿಮ್ಮ ಮಾಲಗುಜಾರ ನೋಡಿ ಸದರೀ [ಕೋಟೆಯ] ಸರದೇಸಗತಿಯನ್ನು [ಮರಹಮತ] ಮುಂದುವರಿಸಿದ್ದಾರೆ ಅವರಿಗೆ ಮೌಜೆ ಲಖಮನಹಳ್ಳಿ ಗ್ರಾಮವನ್ನು ಇನಾಮ ಕೂಡ ಜಮಾಬಂದೀ, ಕುಲಬಾಬ ಕುಲಕಾನೂ ಅಜರಾಹ ಮುಂದುವರಿಸಿದ್ದಾರೆ. ಅದರ ಹಕ್ಕನ್ನು ಮತ್ತು ಇನಾಮವನ್ನು ಮತ್ತು ಫಸಗೀ ಮತ್ತು ಪಲಗೀ ಮತ್ತು ಬಾಜೆ ಲವಾಜಿಮಾ ಬರಹುಕುಮ್ ದೇಸಗತಿಯನ್ನು ಮತ್ತು ಚಿನಿವಾಲ ದರವನ್ನು ಒಂದು ಗೋಣಿಗೆ ರೂ ೩ ಮೊಕರರ್ ಮಾಡಿ ಕೊಟ್ಟಿದ್ದಾರೆ. ಆದ್ದರಿಂದ ಎಲ್ಲ ಬಾಬುಗಳನ್ನು ತಮ್ಮ ಹತ್ತಿರವೇ ಇಟ್ಟುಕೊಂಡು ಬಾದಶಹರ ಕೆಲಸದಲ್ಲಿ ಒಳ್ಳೆಯ ನಡತೆಯನ್ನು ಇಟ್ಟುಕೊಂಡು ಪ್ರದೇಶವನ್ನು ಫಲವತ್ತಾಗಿಸಿ ಆರಾಮವಾಗಿ ಇರಬೇಕು. ಪ್ರತಿಯೊಂದು ಬಾಬುಗಳನ್ನು ಖಾತರಜಮಾ ಇಟ್ಟುಕೊಳ್ಳಬೇಕು. ಮೋರ್ತಬ್ [ಅಲಫಖಾನ ಎಂದು ಉದ್ದವರ್ತುಳಾಕಾರದ ಮೋರ್ತಬ್]

ಜು ೧, ರಜಬ ೨೫ ದಿಲೇರಖಾನ
ಶಕ ೧೬೪೧ ಜ್ಯೇಷ್ಠ ವದ್ಯ ೧೨ ಕ್ರಿ ಶ ೧೭೭೯ ಜೂನ ೩

ದೇಶಮುಖ, ದೇಶಪಾಂಡೆ ಮತ್ತು ಮುಕದ್ದಮ, ಪಾ ನಸೀರಾಬಾದ ಉರ್ಫ ಧಾರವಾಡ ಸರಕಾರ ಬಂಕಾಪುರ ಬಿದಾನಂದ ದರೀ ಬಿಲಾ ಇಜತ ಆಸಾರ ಶ್ರೀನಿವಾಸರಾವ ಅವರ ಜಹಗೀರು ಮತ್ತು ಮಹಲ ಖಾಲ್ಸಾದ ದಖಲ ಅಮಲದಲ್ಲಿ ತರುವ ಸಲುವಾಗಿ ಕಳಿಸಿದ್ದರಿಂದ ನೀವು ಕಿಲ್ಲೇದಾರನ ಹಿಮಾಯತ ಮಾಡಿ ಆತನ ದಖಲನ್ನು ಅಮಲಿನಲ್ಲಿ ತರುತ್ತಿಲ್ಲ ಮಕಸದೀ ದರಪೇಶ ಮಾಡಿದ್ದು ಎಲ್ಲರಿಗೂ ಗೊತ್ತಿದೆ. ಕಾಯಂ ತರೀಕವಾಗಿ ದರಗಾಹ ಆಮಾರತ ಮರತಬತ [ಖಿಲ್ಲ ಜಾಗಾ] ನಾಜೀಮ ಸುಬೆ ಸಾ ಕಲಘಟಗಿಗೆ ಸ್ವಾಮಿತ್ವದ ಅಧಿಕಾರವನ್ನು ಕೊಟ್ಟಿದೆ. ನೀವು ಏನೆಂದು ತಿಳಿದು ಅದಕ್ಕೆ ಹರತಕತ್ [ತಕರಾರು] ಕೊಟ್ಟಿದ್ದೀರಿ. ಇದರಲ್ಲಿ ನಿಮಗೆ ಒಳ್ಳೇಯದಾಗುವುದಿಲ್ಲ. ಈಗ ಈ ಕೆಲಸಕ್ಕಾಗಿ ಶೇಖ ಮಹಮ್ಮದ ಆರೀಪ ಮತ್ತು ಶೇಖ ರಹಿಮಾನ ಕಳಿಸಿದ್ದೇವೆ ಆದ್ದರಿಂದ ಪಂಡಿತ ಮಶಾರ ಇಲೇನಿಗೆ ಕರಾರಿನಂತೆ ಅಮಲಿನಲ್ಲಿ ತರಬೇಕು. ತಕರಾರು ದೂರು ಬರಬಾರದು ಇದಕ್ಕೆ ದೂರು ಬಂದರೆ ಪರಿಣಾಮ ಒಳ್ಳೆಯದಾಗುವುದಿಲ್ಲ. ಇದನ್ನು ಸರಿಯಾಗಿ ತಿಳಿದುಕೊಳ್ಳಿರಿ. ದರೀ ಬಾಬ ತಾಕೀದು ಬಲೀಗ ದಾನಂದ ಬತಾರೀಕ ೨೫ ಮಾಹೆ ರಜೆಬ ಸನ್ ೧ ಜಳೂಸ [ಬೈರ್ಘಾ]

ಖಿಡಿಳು ದಫ್ತರ ಸರಕಾರ ರಸೀದ ಛ ೨೬ ರಜೆಬ

ಸು ೧೧೭೦ ಶಕ ೧೬೯೧-೯೨
ಖರಿ ಸ ೧೭೬೯-೭೦

ಸೇವೆಯಲ್ಲಿ ಅರ್ಜಿ, ಭೀಮರಾವ ನರಸಿಂಗರಾವ ದೇಸಾಯಿ ಮತ್ತು ನಾಡಗೌಡಾ ಮತ್ತು ಸರದೇಸಾಯಿ ಪಾ ಧಾರವಾಡ ಇವರಿಂದ, ಸುಹುರ ಸನ್ ಸಬೈನ ಮಯಾ ವ ಅಲಫ ಪೂರ್ವೀ ವತನ, ದೇಸಗತ ಮತ್ತು ನಾಡಗೌಡಕೀ ಇತ್ತು. ಅದರಮೇಲೆ ಸದರೀ ಕೋಟೆಯು ವಿಜಾಪುರ ಬಾದಶಹನ ಠಾಣೆಯು ಇತ್ತು. ಕಿಲ್ಲೇದಾರ ಆಲಮಖಾನ ಎಂಬವನು ಇದ್ದನು. ಅವನ ಕಾಲಕಿರ್ದಿಯಲ್ಲಿ ಧನಾಜೀ ಹಿಂದುರಾವ ಇವರು ಸೈನ್ಯಸಹಿತವಾಗಿ ಬಂದು ಸದರೀ ಕಿಲ್ಲೆಯಮೇಲೆ ದಾಳಿ ಮಾಡಿದ್ದರು. ಆ ಸಮಯದಲ್ಲಿ ದೇಸಾಯಿಯು ತನ್ನ ಸ್ವಂತ ಖರ್ಚಿನಿಂದ ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ, ಮೆಹನತ ಮಾಡಿ ದಾಳಿಯನ್ನು ಹಾಳು ಮಾಡಿದನು. ಮರಾಠೀ ಸೈನ್ಯವು ಹೋದನಂತರ ಕಿಲ್ಲೇದಾರನು ಬಾದಶಹನಿಗೆ ಅರ್ಜಿಯನ್ನು ಬರೆದು ವಿಜಾಪುರಕ್ಕೆ ಕಳಿಸಿದನು. ಅದರ ಮೇಲಿಂದ ಬಾದಶಹನಿಂದ ಕಿಲ್ಲೇದಾರನಿಗೆ ಆದೇಶ ಬಂದಿತು. ಸದರೀ ದೇಸಾಯಿಗೆ ಮತ್ತೊಂದು ವತನವನ್ನು ಹಾಕಿ ಕೊಡಬೇಕು. ಸರಕಾರದ ಒಪ್ಪಿಗೆ ಇದೆ. ಒಪ್ಪಿಗೆ ಇದ್ದುದರಿಂದ ಅದರಮೇಲಿಂದ ಕಿಲ್ಲೇದಾರನು ಸರದೇಶಗತ ವತನ ಉಮಲೀ ಹಳ್ಳಿಯನ್ನು ಮತ್ತು ಹಕ್ಕುವರ್ತನೆ, ಫಸಗೀ ಪಳಗೀ ಮತ್ತು ಪಡದ ಮತ್ತು ಗೈರ ರುಸೂಮ ದೇಸಗತಿಯನ್ನು ಮಾಡಿ ಕೊಡಲಾಗಿದೆ. ಅನಂತರ ಹತ್ತು ಹನ್ನೆರಡು ವರುಷ ವತನವನ್ನು ಅನುಭವಿಸಲಾಗಿದೆ. ಅನಂತರ ಸವಣೂರಕರ ನವಾಬ ಅವರ ಸಚಿವನ ದಿವಾಣ ಅಲೀಖಾನ ಎಂಬವನು ಇದ್ದನು. ಅವನು ಪರಗಣಾ ರಾಯರ ಹುಬ್ಬಳ್ಳಿ ಮತ್ತು ನರೇಂದ್ರ ಮತ್ತು ಗೈರ ಮಹಾಲದ ಸರದೇಸಗತ ವತನವನ್ನು ನವಾಬನಿಂದ ಮಾಡಿಕೊಂಡನು ಆಗ ಧಾರವಾಡದ ಸರದೇಸಗತ ವತನವನ್ನು ಮಾಡಿಕೊಡಬೇಕೆಂದು ನವಾಬನಿಗೆ ಅರ್ಜಿಯನ್ನು ಮಾಡಿದನು. ನವಾಬನು ಉತ್ತರವನ್ನು ಕೊಟ್ಟನು. ಈಗಾಗಲೇ ವತನದಾರರಿದ್ದಾಗ ಹೇಗೆ ಮಾಡಿಕೊಡಲು ಬರುತ್ತದೆ ? ಅದಕ್ಕೆ ಅಲೀಖಾನನು ಹಟನಿಗ್ರಹವನ್ನು ಮಾಡಿ, ಆ ಬಡವನು ಏನು ಮಾಡಬೇಕು ಎಂದು ಹೇಳುತ್ತ ನವಾಬನಿಂದ ವತನವನ್ನು ಮಾಡಿಸಿದನು. ಸದರೀ ಸ್ಥಳಕ್ಕೆ ಸೈನ್ಯವನ್ನು ತೆಗೆದುಕೊಂಡು ಬಂದು ಸರದೇಸಗತಿಯ ಉಮಲೀ ಗ್ರಾಮವನ್ನು ಮುತ್ತಿ ಜಬರದಸ್ತಿಯಿಂದ ವತನವನ್ನು ಅನುಭವಿಸಹತ್ತಿದನು. ನಾಲ್ಕು ವರುಷ ಅನುಭವಿಸಿದನು. ಮತ್ತು ಕಿಲ್ಲೆ ಹಾಗೂ ಕಿಲ್ಲೆಯ ಠಾಣೆಯನ್ನು ನವಾಬನದಾಯಿತು. ಅನಂತರ ನಿಜಾಮುಲ್ಮುಕನ ಸ್ವಾರಿಯು ಕರ್ನಾಟಕದಲ್ಲಿ ಬಂದಿತು

ಆಗ ನವಾಬ ಸವಣೂರಕರನು ಧಾರವಾಡದ ಕಿಲ್ಲೆಯನ್ನು ಕೊಟ್ಟನು. ಆಗ ನಿಜಾಮುಲ್ಮುಲ್ಕನು ತನ್ನ ವತಿಯಿಂದ ಪೃಥ್ವಿಸಿಂಗ ಎಂಬವನ್ನು ಕಿಲ್ಲೇದಾರನೆಂದು ಕಳಿಸಿದನು. ಅವನಿಗೆ ಸರದೇಸಗತಿಯ ಹಕೀಕತನ್ನು ನಿವೇದನ ಮಾಡಲಾಯಿತು. ಅದಕ್ಕೆ ಕಿಲ್ಲೇದಾರನು ಸನದನ್ನು ಮಾಡಿಕೊಟ್ಟು ನಿಮ್ಮ ವತನವನ್ನು ನೀವು ತೆಗೆದುಕೊಳ್ಳಿರಿ ಎಂದು ಹೇಳಿದನು. ಆಮೇಲೆ ಪ್ರಯತ್ನವನ್ನು ಮಾಡಿದರೂ ಉಮಲೀ ಗ್ರಾಮದ ಠಾಣೆಯನ್ನು ಜಬರದಸ್ತಿಯಲ್ಲೆ ಬಿದ್ದಿದೆ. ಅದಕ್ಕೆ ಉಪಾಯವನ್ನು ಮಾಡಲಾಗಿಲ್ಲ. ಆಮೇಲೆ ಶ್ರೀಮಂತರ ಕಡೆಗೆ ಸದರೀ ಅಮಲಾಯಿತು. ಅವರಿಗೆ ಈ ಸುದ್ದಿಯನ್ನು ರಾಜಶ್ರೀ ಯೇಸಾಜೀರಾಮ ಅವರಿಗೆ ವಿನಂತಿಯನ್ನು ಮಾಡಿಕೊಂಡರೂ ನಮ್ಮ ಮುತಾಲಿಕನನ್ನು ಪುಣೆಗೆ ಕರೆದುಕೊಂಡು ಬಂದರು. ಆ ದಿನಗಳಲ್ಲಿ ಶ್ರೀಮಂತರ ಸವಾರಿಯು ಹಿಂದುಸ್ಥಾನದಲ್ಲಿ ಮಜಲಿನ ಮೇಲೆ ಮಜಲು ನಡೆದಿತ್ತು. ನಂತರ ಶ್ರೀಮಂತರು ಪುಣೆಗೆ ಬಂದ ನಂತರ ನಮ್ಮ ಮುತಾಲಿಕನಿಗೆ ಯೇಸಾಜೀ ಪಂತನು, ನಿರೋಪ ಕೊಟ್ಟು ಕಳಿಸಿದನು. ಅನಂತರ ಇಂದಿನವರೆಗೂ ದಿವಸಗಳು ಉರಳಿಹೋಗಿವೆ ಇದರಮೇಲಿಂದ ನಮ್ಮ ನಮ್ಮ ವತನವನ್ನು ನಮಗೆ ಸ್ವಾಧೀನ ಮಾಡಿಕೊಡಲು ಸ್ವಾಮಿ ಧಣಿಯು ಸಮರ್ಥನಿದ್ದಾನೆ.

೨೫೨

ನಸೀರಾಬಾದ ಊರ್ಫ ಧಾರವಾಡದಲ್ಲಿಯ ದೇಸಾಯಿ, ಸರದೇಸಾಯಿ ನಾಡಗೌಡಾ ಇವರ ವಂಶಾವಳಿ ಮತ್ತು ವತನವನ್ನು ಸಂಪಾದಿಸಿದ ನಕಾಶೆಯು. [ಇಲ್ಲಿ ಕಾಣಿಸಿದ ವಂಶಾವಳಿಯನ್ನು ಮೂಲದಲ್ಲಿ ವೃಕ್ಷರೂಪದಲ್ಲಿ ಕೊಡಲಾಗಿದೆ. ಅದರಲ್ಲಿ ಅವರ ವಯಸ್ಸನ್ನು ತಿಳಿದುಕೊಳ್ಳುವುದಾಗುವುದಿಲ್ಲ. ಅಲ್ಲದೆ ಕ್ರಮ ಸಂಖ್ಯೆನ್ನೂ ಕೊಟ್ಟಿಲ್ಲ. ಮುದ್ರಣದ ದೃಷ್ಟಿಯಿಂದ ಇಲ್ಲಿ ಕ್ರಮ ಸಂಖ್ಯೆಯನ್ನು ಕೊಡಲಾಗಿದೆ. ಮತ್ತು ಅದೇ ಕ್ರಮಾಂಕದಲ್ಲಿ ಮೂಲದಲ್ಲಿ ಇರುವ ವಿಶಿಷ್ಟ ವ್ಯಕ್ತಿಯ ವಿಷಯದ ತಪಶೀಲನ್ನು ಮುಂದೆ ಕೊಡಲಾಗಿದೆ. ಕ್ರಮ ಸಂಖ್ಯೆ ಮತ್ತು ವಯಸ್ಸು ಇವುಗಳ ಸಂಬಂಧವಿಲ್ಲ.]

೧. ನಿರೆರಾವ – ೨ ಭೀಮರಾವ –೫ ಶ್ರೀಪತರಾವ – ೯ ನರಸಿಂಗರಾವ

– ೩ ನರಸಿಂಗರಾವ – ೬ ವ್ಯಾಸಪ್ಪಾ – ೧೦– ನರಸಿಂಗರಾವ

– ೪ ಅಮಣರಾವ – ೭ ಲಕ್ಷ್ಮೀಕಾಂತರಾವ

– – ೮ ಶಾಮರಾವ

೯. ನರಸಿಂಗರಾವ – – ೧೧ ವೆಂಕಟರಾಯ ೦

– ೧೨ ಶ್ರೀಪತರಾವ – ೧೫ ಭೀಮರಾವ – ೧೮ ರಾಮರಾವ – ೨೨ ನರಸಿಂಗರಾವ

– ೧೯ ಶ್ರೀಪತರಾವ – ೨೩ ವೆಂಕಟರಾವ

೧೦. ನರಸಿಂಗರಾವ – ೧೩ ಕೃಷ್ಣರಾವ ೦

– ೧೪ ಭೀಮರಾವ – –೧೬ ಕೃಷ್ಣರಾವ ೦

– ೧೭ ನರಸಿಂಗರಾವ – –೨೦ ಪ್ರಲ್ಹಾದರಾವ

– ೨೧ ರಾಮರಾವ

೧. ನಿರೆರಾವ ಅವರು ಬತ್ತೀಸಶಿರಾಳದ ದೇಶಪಾಂಡೆಗಿರಿ ಬಿಟ್ಟು ಈ ರಾಜ್ಯಕ್ಕೆ ಬಂದರು.

೬. ಮೂಲ ಪುರುಷ ವ್ಯಾಸಪ್ಪಾ ನರಸಿಂಗರಾವ ಅವರು ವಿಜಾಪುರ ಬಾದಶಾಹಿ ಕಾಲದಲ್ಲಿ ದೆಸಗತ ವತನವನ್ನು ಸಂಪಾದಿಸಿದರು. ಅದರ ವರುಷವನ್ನು

ನಮೂದಿಸಬೇಕೆಂದರೆ ಸನದು ಪತ್ರ ಉಪಲಬ್ಧವಿಲ್ಲ. ಅವರ ಮಗ ನರಸಿಂಗರಾವ ವತನ ಅನುಭವಿಸಿದ ವರುಷಗಳು ೬೦.

೮. ಪಟಣದೇಶದ ಕಡೆಗೆ ಹೋದರು.

೧೦. ನರಸಿಂಗರಾವ ವ್ಯಾಸರಾವ ಅವರು ನಾಡಗೌಡಕೀ ಮತ್ತು ಸರದೇಸಾಯಿ ಬಾದಶಾಹಿ ಕಾಲದಲ್ಲಿ ಸಂಪಾದಿಸಿದ ವತನವನ್ನು ಕೊಟ್ಟರು.

೧. ನಾಡಗೌಡಕೀಯ ವತನವನ್ನು ಸಂಪಾದಿಸಿದ ಮಿರ್ಜಾ ಸೈಫುಲ್ಲಾ ಕಿಲ್ಲೇದಾರ ಹಾಗೂ ಫೌಜದಾರ ಕಿಲ್ಲೆ ಮಸ್ತೂರ ಸಮ್ಮುಖದಲ್ಲಿ ಬಿತಘುಲಾ ನಿಂಗಪ್ಪಾ ದೇಶಮುಖ ಪಾ ತಾರಗಲ [ತೊರಗಲ ?] ಅವರು ಕರ್ಯಾತ ಹೆಬಲೀ ಕಿಲ್ಲೇದಿಂದ ನಾಲ್ಕು ಕೋಸ ಇರುವ ಅವನಿಗೆ ಮುತ್ತಿಗೆ ಹಾಕಿ ತಮ್ಮ ಕಬಜೆಕ್ಕೆ ಮುಲೂಕ ಬಾದಶಾಹೀ ಆಜಾರ ಮುಟ್ಟಿಸಿದರು ಆಗ ಫೌಜದಾರ ಹಮರಾಹಾ ಸೈನ್ಯದಲ್ಲಿ ಕೂಡಿಕೊಂಡು ಬಹಳ ಮೆಹನತ ಮಾಡಿದ್ದರಿಂದ ಸರಕಾರವು ಮೆಹರಬಾನಗಿ ಮಾಡಿ ನಾಡಗೌಡಕಿಯ ವತನವನ್ನು ಮಾಡಿಕೊಟ್ಟು ಮೌಜೆ ಸುತಗಟ್ಟಿ ಗ್ರಾಮವನ್ನು ಇನಾಮ ಹಾಗೂ ಚಾವರಾತ ಹಕ್ಕನ್ನು ವರ್ತನಾ ವಗೈರೆ ಕುಲ ಬಾಬ ಬಮೋಜೀಬ ದೇಸಗತ ಈ ಪ್ರಮಾಣದಲ್ಲಿ ವತನವನ್ನು ಸಂಪಾದಿಸಿದ್ದು ತಾ ಥ ಮಾಹೆ ರಜಬ ಸನ್ ೪೦ ಜುಳೂಸಬಾಲ ಮುತಾಬಿಕ ಸನ್ ೧೧೦೬ ಹಿಜರಿ ಸನ್.

೧. ಸರದೇಸಗತಿಯ ವತನವನ್ನು ಸಂಪಾದಿಸಿದ ಧನಾಜೀ ಹಿಂದುರಾವ ನಾಸರದಾರ ಖುದ ಜಮಾವ ಸುಧ ಹತ್ತಿರ ಬಂದು ಇಳಿದ ಸಮಯದಲ್ಲಿ ಮೆಹನತ ಮಾಡಿದ್ದರಿಂದ ಸರಕಾರವು ಮೆಹರಬಾನಗಿ ಮಾಡಿ ಸರದೇಸಗತಿಯ ವತನವನ್ನು ಮಂಜೂರು ಮಾಡಿ ಕೊಟ್ಟರು. ಇದು ಸನದ ತಾ ಥ ೨ ರಮಜಾನ ಸನ್ ೪೯ ಜುಲೂಸಬಾಲ

ಇತ್ತೀಚೆಗೆ ಸವಣೂರಕರ ದಿವಾನ ಅಲೀಖಾನನು ಜಬರದಸ್ತಿಯಿಂದ ಅನುಭವಿಸುತ್ತಿದ್ದನು. ಅದನ್ನು ಶ್ರೀಮಂತ ನಾನಾಸಾಹೇಬ ಪೆಶವೆಯ ಕಾಲಕಿರ್ದಿಯಲ್ಲಿ ಅಲೀಖಾನನಿಂದ ವತನವನ್ನು ಜಪ್ತಿ ಮಾಡಿತು. ಅದರಮೇಲೆ ಸನ್ ೧೧೮೧ ಫಸಲೀಯಲ್ಲಿ ಶ್ರೀಮಂತ ಮಾಧವರಾವ ಸಾ ಪ್ರಧಾನ ಪೇಶವೆ ಕಾಲಕೀರ್ದಿಯಲ್ಲಿ ಸದರೀ ಸರದೇಸಗತಿಯ ವತನವನ್ನು ನರಸಿಂಗರಾವ ಅವರು ತೆಗೆದುಕೊಂಡು ಮೌಜೆ ನುಗ್ಗೀಕೇರಿ ಇನಾಮ ಗ್ರಾಮ ಹಾಗೂ ಚಾವರಾತ ಹಕ್ ವರ್ತನಾ ವಗೈರೆ ಕುಲ ಬಾಬ ಪುರಾತನ ಸದರೀ ವತನವನ್ನು ಭಾಲ ಮಾಡಿಕೊಟ್ಟರು. ಅದರ ಸನದು,

೧. ಶ್ರೀಮಂತ ನಾರಾಯಣರಾವ ಬಲ್ಲಾಲ ಸಾಹೇಬ ಸುಭ ಅವರ ಸನದ ಛ
೨೦ ಜಿಲ್ಕಾದ ಇಸನೆ ಸಬೈಮ ಮಯಾ ಅಲಕ
೧/೨ ಶ್ರೀಮಂತ ಮಾಧವರಾವ ಸಾ ಪ್ರಧಾನ ಅವರ ಸನದು ಛ ೧೯ ಮೋಹರಮ್ ಸನ್ ಮಜಕೂರ

೧೪ ಮೇಲೆ ಹೇಳಿದಂತೆ ದೇಸಾಯಿ ಸರದೇಸಾಯಿ ನಾಡಗೌಡಾ ಮೂರೂ ವತನವನ್ನು ೪೦ ನಾಲವತ್ತು ವರುಷ ಅನುಭವಿಸಿದರು.

೧೭ ಮೇಲೆ ಹೇಳಿದಂತೆ ದೇಸಾಯಿ ಸರದೇಸಾಯಿ ನಾಡಗೌಡಾ ಮೂರೂ ವತನವನ್ನು ೨೮ ಇಪ್ಪತ್ತೆಂಟು ವರುಷ ಅನುಭವಿಸಿದರು.

೨೧ ಮೇಲೆ ಹೇಳಿದಂತೆ ಸಧ್ಯ ವಹಿವಾಟ ಸು ಸನ್ ೧೧೯೯ ಫಸಲೀಯಿಂದ ದೇಸಾಯಿ ಸರದೇಸಾಯಿ ನಾಡಗೌಡಾ ಮೂರೂ ವತನಗಳನ್ನು ಸನ ಇಸನೆ ಅಶರೀನ ಮಯ್ಯತೈನ ಹಾಗೂ ಅಲಫ ಸನ್ ೧೨೩೧ ಫಸಲೀ ಮಿನಹೂ ವರ್ಷ ೩೨ ಅನುಭವಿಸಿ ಈಗಲೂ ವಹಿವಾಟವನ್ನು ಮಾಡುತ್ತಿದ್ದಾರೆ.

೨೫೩

ಸು. ೧೦೨೧	ಶಾ. ೧೫೪೨ ಕಾರ್ತೀಕ ವದ್ಯ ೨-೩
ಜಿಲ್ಹೇಜ ೧೬	ಇ. ೧೬೨೦ ನವ್ಹೆಂಬರ ೨

ತೀರ್ಪು ವಾದಿಗಳು, ನರಸಣ್ಣಾ ಮತ್ತು ತಿಮ್ಮಣ್ಣಾ ಸರ ಮೊಕದಮ ಮತ್ತು ಶೇಷಪ್ಪಾ ಪಟೇಲ ಮತ್ತು ತಿಮರಸ ಕುಲಕರ್ಣಿ ಮತ್ತು ಎಲ್ಲ ನಾಗರಿಕರು ಕಸಬೇ ನರೇಗಲ ಇವರು ತಮ್ಮ ಊರಿಗೆ ಹೊಸ ಮುಖ್ಯಸ್ಥನನ್ನು ಘೋಷಿಸಿದಂದಿನಿಂದ ಅವರು ಹಣ ಬೇಡಿ ತೊಂದರೆ ಕೊಟ್ಟರು ಎಂದು ನೀವು ಹೆದರಿದಿರಿ ಎಂದು ತಿಳಿದು ಬಂದಿದೆ. ಆದ್ದರಿಂದ ಈ ತೀರ್ಪು. ನಿಮಗೆ ಹೆಚ್ಚಿನ ತೊಂದರೆ ಆಗಬಾರದು ಎಂದು ಕಳೆದ ವರ್ಷ ಹೇಗೆ ಕೊಡುತ್ತಿದ್ದಿರೋ ಹಾಗೆ ಮುಂದೆಯೂ ಕೊಡುತ್ತ ಹೋಗಿರಿ. ಮತ್ತು ಯಾವದೇ ಆತಂಕ ಪಡದೇ ಬರುತ್ತಾ ಇರಬೇಕು. ಮೋ ಛ ೧೬ ಮಾಹೇ ಜಿಲ್ಹೇಜ

೨೫೪

ಸು. ೧೦೨೨ ಶಾ. ೧೫೪೪ ಜ್ಯೇಷ್ಠ ಶುದ್ಧ ೭
ರಜಬ ೬ ಇ. ೧೬೨೨ ಮೇ ೭

➤ ದಿವಾಣ ಮಾಮಲೇ ಬಂಕಾಪೂರ ಸಾಹೇಬ ಸದರ ತಾ ದೇಸಾಯಿ ಸಾ ನರೇಗಲ ಮಾಮಲೇ ಸದರಿ

ಪಂಡಿತರ ಉಪಸ್ಥಿತಿಯಲ್ಲಿ ಬಂದು ಗೊತ್ತು ಮಾಡಿ ಒಂದು ಒಪ್ಪಂದ ಬಂದಿದೆ. ನಾಳೆ ಸ್ವಾಮಿಯಿಂದ ನಿಮಗೆ ಸಾಮರ್ಥ್ಯವನ್ನು ದೊರಕಿಸಿ ಕೊಡುವುದರ'ಸಲುವಾಗಿ ಮಾ ಅಣ್ಣಾಜಿ, ಸಾಗುವಳಿ ಆದ ಮತ್ತು ಸಾಗುವಳಿ ಆಗದ ನಜೀರ ಮತ್ತು ಸೇಖ.. ನಾಮಜಾದ ಸಾ ಮಜಕೂರ ಮತ್ತು ಹುದ್ದೇದಾರರು ಕಸಬೇ ನರೇಗಲ... ನರಸೋ ಕಾವೂಜೀ ಸಾಗುವಳಿ ಆಗದ ಎಲ್ಲವನ್ನೂ ತಮ್ಮ ಸ್ವಾಮಿತ್ವಕ್ಕೆ ಕೊಡುತ್ತಿದ್ದಾಗ ತಾವು ಯಾವದೇ ರೀತಿಯ ಆತಂಕಕ್ಕೆ ಒಳಗಾಗದೇ ಬರಬೇಕು ತಾವು ಹೇಳಿ ಕಳಿಸಬೇಕು (ಲೇ) ಆ ಪ್ರಕಾರ ತೀರ್ಪು ಬರೆದು ಕಳಿಸಲಾಗುತ್ತದೆ ಎಂದು ತಿಳಿಯಬೇಕು. ಮೋ ಛ ೬ ರಜಬ (ಫಾ. ಷ. ಮೋ.)

೨೫೫

ಸು. (೧೦೨) ೪ ಶಾ. ೧೫೪೫ ಆಶ್ವೀನ ಶುದ್ಧ ೧೩
ಜಿಲ್ಹೇಜ ೧೧ ಇ. ೧೬೨೩ ಸೆಪ್ಟಂಬರ ೨೬

ತಿಮಣ ನರಸಾಣ ದೇಸಾಯಿ ಸಾ ನರೇಗಲ

ನೀವು ಸಣ್ಣಹಳ್ಳೀ ನೆಲೆಬೀಡ ವಿಷಯಿ ಸಂಶಯಕ್ಕೊಳಗಾಗಿರುವಿರಂತೆ, ಆ ಊರಿನ ಮುಖ್ಯಸ್ಥರು ತಮ್ಮದನ್ನು ತಾವೇ ನಿರ್ವಹಿಸುತ್ತಾರೆ ತಾವು ವ್ಯಥಿತರಾಗಬಾರದು ಮತ್ತು ಪರದೇಶದ ಲೆಕ್ಕದ ಪತ್ರದ ಪುಸ್ತಕದ ವಿಚಾರಣೆ ಮಾಡಿ ಯಾವ ಯಾವ ಊರಿನ ಪಾಟೀಲ ಕುಲಕರ್ಣಿ ಹೋಗಿರಬಹುದು ಅದರದು ನೀವು ಮತ್ತು ನಾಗೋಜೀ ಸುರೋ ನಾಮಜಾದ ಸಾ ಸದರ ತೀರ್ಪು ಕೊಟ್ಟು ತರುವದು ಮೋ ಛ ೧೧ ಮಾಹೇ ಜಲ್ಹೇಜ(ಫಾ.ಷ.ಮೋ.)

೨೫೬

ಸು. (೧೦೨) ೬ ಶಾ. ೧೫೪೭ ಕಾರ್ತೀಕ ಶುದ್ಧ ೯
ಸಫರ ೭ ಇ. ೧೬೨೫ ಅಕ್ಟೋಬರ ೨೯

ತೀರ್ಪು ಬನಾಮ ತಿಮಣಾ ನರಸಣ ಸರಮೋಕದಮ ಸಾ ನರೇಗಲ.

ನೀವು ಅರ್ಜಿ ಕಳಿಸಿದ್ದೀರಿ ಅದರಲ್ಲಿ ಬರೆದದ್ದು ನಾಗೋಜಿ ಸುರೋ ನಾಮಜಾದ ಸಾ ಸದರಿ ಪಾ ಮುಲಗುದಸಿ ಕಳಿಸಲ್ಪಟ್ಟಿದೆ ತಾವು ವೃತ್ತಾಂತ ಹೇಳಿದರೂ ಕೂಡಾ ನಾಗೋಜೀ ಸುರೋ ಇವರಿಗೆ ಕಳಿಸಿಕೊಡಲಾಗಿದೆಯಂತೆ ತಾವು ಸುಸ್ಥಿತಿ ವೃತ್ತಾಂತವನ್ನು ಹೇಳಿ ಅದನ್ನು ಬರೆದ ಪ್ರಕಾರ ನೋಡಲಾಗುವದು. ಮೋ ಛ ೭ ಮಾಹೇ ಸಫರ (ಫಾ. ಷ. ಮೋ.)

೨೫೭

ಸು – ೧೦೧೯ ಶಕ ೧೫೪೨ ಕಾರ್ತಿಕ ವದ್ಯ ೨೩
ಜಿಲ್ಹೇಜ್ ೧೬ ಇ. ೧೬೨೦ ನವ್ಹೆಂಬರ ೨

ಕಉಲುನಾಮಾ ಅಜ ದಿವಾಣ ಮಾಮಲೆ ಬಂಕಾಪುರ ಸಾಹೆಬ ಸದರ ವಡೆರು ಕಸಬೆ ನರೆಗಲ ಸರಮೊಕದಮ ತ್ತಿಂಮಂಣ ನರಸಂಣ ಗಉಡ ಸೆಶಪ ಸೆನಬಾವ ಹಿದ ಕಉಲುಅದಾಗಿ ನಿಂಮ್ಮ ಗ್ರಾಮಕೆ ಹೊಸ ಮೊಖಾಸಿಗಳು ಬಂದು ರೊಕ್ಕ(?) ರೂಪಿಗೆ ಬಾಹಳವಾಗಿ ತಸವಿಸ ಕೊಟರೆಂದು ಬೆದಿಲಾಗಿ ಹೊಗಿಯಿದಿರಿ ತಮಗೆ ಸಾಲಾಬಾದಿನ ಪಂದ ನಡಸಿಕೊಳಬೇಕೆಂಬ ಹಾಗೆ ಕಉಲಾದರೆ ಬಂಧಾರು ಯೆಂಬ ಹಾಗೆ ಮಾಲುಮಾಯಿತ್ತು ನಿಮಗೆ ಕಉಲು ಯಿಧೆತ್ತು ನಿಮಗೆ ಸಾಲಾಬಾದಿನ ಪಂದ ನಂಮ್ಮ ಮುಂದಿಟು ಸಿಸ್ತು ಮಾಡಿ ನಡಸಿಕೊಂಧೆಉ ಜಾಜತ್ತಿ ತಸವಿನ ಅಂಗಲಿಸೆಉ ನಿಉ ಮತ್ತೆನು ವಿಶೆದಲ್ಲಿ ಯೆದೆಹಾರ ಮಾಡದೆ ನಂಮ್ಮ ಕಉಲು ನಂಬಿ ಬಾಹದು.

೨೫೮

ಸು – ೧೦೨೪ ಶಕ ೧೫೪೫ ಅಶ್ವೀನ ಶು ೧೩
ಜಿಲ್ಹೇಜ್ ೧೧ ಇ ೧೬೨೩ ಸಪ್ಟಂಬರ ೨೬

ಕಉಲುನಾ[ಮಾ ಅ] ಜ ದಿವಾಣ ಮಾಮ್ಮಲೈ ಬಂಕಾಪುರದ ಸಾಹೆಬ ಸದರ................ ತ್ತಿಂಮಣ ನರಸಂಣ[ನಿಗೆ ಕೊ]ಟ್ಟ, ಕಉಲು ಸು॥ ಅರ್ಬಾದಲ್ಲು ಅದಾಗಿ। ನಿಂಮ್ಮ ವಿಷಯವಾಗಿ ಸಮಸ್ತಿನ ಪಾರಪತೆಗಾರ ನಾಗೊಜಿ ಪಂಡಿತನೂ ಮಾಲೂಮ ಮಾಡಿದ ವಿವರ। ನೆಲ್ಲೈಬಿಡ ಗ್ರಾಮದ ವಿಷಯಕ್ಕೆ ಯದೆಹಾರ ಮಾಡಿ ಬೆದಿಲಾಗಿದ್ದಿರಂತ್ತೆ ಆ ಗ್ರಾಮದ ಚಿಂತೆ ನಿಮಗೆ ಬೆಡ ಮೊಖಾಸಿಗಳು ತ್ತಂಮಿಂದ ತ್ತಾವೆ ಸೊಸಿಕೊಂಡಾರು ಆ ಸಿಮೆ ಗೌಡ[ನ] ಪ್ರಜೆಗಳು ಮೊದಲ ಪಾರಪತ್ತೆಗಾರ [ಸೆಖ] ಯಿಜದಿನ......ತ್ತಸವಿಸಿನಿಂದ ಆರಾರೂ ಬಿಟ್ಟುಹೋಗಿ ಧಾರು ಅವರಿಗೆಲ್ಲಾ ನಾಗೊಜಿಪಂಡಿತರೂ ನಿಉ ಸಹ ಕಉಲು ತಾಕೆದೀ ದಿಲದಾರಕ್ಕೆ ಕೊಟ್ಟು ಗ್ರಾಮಕ್ಕೆ ಕರತ್ತಂದು ಕೀರ್ದಿಮಾಮೂರಾಹಾಗೆ ಮಾಡುವದು । ನಿಂಮ್ಮ ಸುಖದುಖವೇನಿದ್ದರೂ ಪಾರಪತ್ತೆಗಾರರಿಗೆ ಹೆಳುತ್ತಾ ಬಾಹದು ಅವರು ಯಲ್ಲಾ ಸರಂಜಾಮಿ ಮಾಡುತ್ತಾ ಬಂಧಾರು । ನಿಉ ದಿವಾಣದ ಹಲಾಲಖೊರ ರಿದ್ಧಿರಿ । ಮನಸಿಲ್ಲ ಯರಡನೆ ವಿಚಾರ ಮಾಡದೆ ದಿವಾಣರ ಕಾರಬಾರ ನಡಸಿ ಸುಖ ದಲ್ಲಿಹದು ಯೆಂದು ಕೊಟ್ಟ ಕಉಲು ಸಮಸ್ತ ಗ್ರಾಮಾನು ಗ್ರಾಮದ .... ಕೂಡಿಕೊಂಡು ಪಾರಪತ್ತೆಗಾರರೂ ನಿಉ ಸ .... ಜುರು ಬಂದು ಕಾಣಿಸಿ ಅಹವಾಲ ಮಾಲು .... ಹೋಹುದು.

ಸು – ೧೦೨೬ ಶಕ ೧೫೪೭ ಕಾರ್ತೀಕ ಶುದ್ಧ ೧
ಸಫರ ೭ ಇ. ೧೬೨೫ ಅಕ್ಟೋಬರ ೨೯

ಕಉಲುನಾಮಾ ಅಜ ದಿವಾ(ಣ) ಮಾಮ್ಮಲೆ ಬಂಕಾಪುರದ ಸಾಹೆಬ ಸದರ ವಡೆರು ನರೆಗಲ್ಲು ಸ ॥ ಸರಮೊಕದಮ ತ್ತಿಂಮ್ಮಂಣ ನರಸಂಣಗೆ ಕೊಟ್ಟ ಕಉಲು ಸು ॥ ಸಿತ್ತದಲ್ಲು ಅದಾಗಿ । ನಿಉ ಕಳುಹಿದ ಅರ್ದಾಸಿನಿಂದ ಯಲ್ಲಾ ಮ್ಮಾನಸಿತ್ತಂದೆಯ ನಿಂಮ್ಮ ಬಳಿಗೆ ಸಮತ್ತಿನ ಪಾರಪತ್ತೆಗಾರ ದುರ್ವಾಸಪಂಡಿತರ ಕಳುಹಿದರೇ ಅವರಕೂಡೆ ನಿಂಮ್ಮ ಸುಖದುಖವ ಹೆಳಿಕೊಂಡು ಆಮೆಲೆ ಸಮಿಪಕ್ಕೆ ಬಂದು ಯಿಲ್ಲಿಂದ ಗುರಿಯಾದ ಮನುಷ್ಯರನ್ನು ಕರಸಿಕೊಂಡು ಅವರಕೂಡೆ ಯಿಲ್ಲಿ ಬಂಧಿವ್ಯೆಂಬಹಾಗೆ ಬರದಿದ್ರಿಉ ಅದಕ್ಕೆ ಆರಿತ್ತಿಯಲ್ಲಿ ಯೀಗ ದುರ್ವಾಸಪಂಡಿತ ಕಳುಹಿಸಿದ್ದೆವೆ ಅವರಕೂಡೆ ನಿಂಮ್ಮ ಅಹವಾಲನ್ನು ಹೆಳಿಕೊಂಡು ಅವರು ಯೆ ಹೆಳಿದಮಾತನ್ನು ನಂಮ್ಮ ಮಾತ್ತನ್ನು ಕೆಳಿ ಅವನ್ಯ ಕಉಲು ನಂಬಿಬಾಹದು ನಿಉ ಸಮಿಪಕ್ಕೆ ಬಂದು ಹೆಳಿಕಳುಹಿದರೇ ಯಿಲ್ಲಿಂದ ಗುರಿಯಾದ ಮನುಷ್ಯರನ್ನು ಕಳುಕರಸಿ ಕೊಂಡಿಉ । ನಿಂಕಾ ದಿವಾಣದ ಹಲಾಲಖೋರರಾಗಿದಲ್ಲಿ ಹಿಗೆ ತಲಬುತ ಹಸಿಲಿನ ಹಂಗಾಮದೊಳಗೆ ಮೂರು ನಾಲ್ಕು ತ್ತಿಂಗಳೂ ಹೊರಗೆ ಹೋಗಿ ಖಲಿ ಮಾಡಬಾರದು ಕಸಬೆದ ಗ್ರಾಮಲೂ ವಜಿರರಿಗೆ ಮೊಖಾಸಿಕ್ಕೆ ಯಿದಲ್ಲಿ ಗ್ರಾಮ ರೊಕರೂಪಿನ ಸರಂಜಾಮಿ ಯೆನೂ ಆಹದಿಲ್ಲ ನಿಂಮ್ಮ ಮೆಲ್ಯೆ ಮಾತ ತಪ್ಪಿಕೊ ನಡೆಬಾರದು ಯಿದಕ್ಕೆಲ್ಲಾ ದುರ್ವಾಸಪಂಡಿತ ಹೆಗೆ ಹೆಳ್ಯಾರು ಹಾಗೆ ಕೆಳಿಕೊ ಮನಸಿಲ್ಲಿ ಯರಡನೆ ವಿಚಾರ ಮಾಡದೆ ಸಿಪ್ರದಲ್ಲಿ ಬಂದು ಕಾರಬಾರ ನಡೆಸಿ ರಾಜಾಹದು ಅರಿವ್ದ.

೨೬೦

ಶಕ ೧೫೮೧ ವೈಶಾಖ ಶು ೧೫
ಇ. ೧೬೫೯ ಎಪ್ರಿಲ್ ೨೬

ಶ್ರೀನಿವಾಸ ತೊಳಪಾಚಾರ್ಯರಿಗೆ ವುಡಿ ಚಪ್ಪನಾಯಕರು ಕೊಟ್ಟ ವುಮ್ಮಳಿಧಿಕ ಶಾಸನ.

ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನಶಕವರುಷಂಗಳು ೧೫೮೧ನೆಯ ಶಾರ್ವರಿ ನಾಮ ಸಂ॥ದ ವೈಶಾಖ ಶು ॥ ೧೫ ಯಲ್ಲು ಶ್ರೀಮದ್ವೇದವಾರ್ಗ ಪ್ರತಿ ಷ್ಠಾಪನಾಚಾರ್ಯ್ಯ ವುಭಯವೇಂದಾಂತ್ತ ಪ್ರವರ್ತ್ತಕರಾದ ರಾಜಾಧಿರಾಜರಾಯ ಗುರುಸಾರ್ವಭೌಮರಾದಂಥಾ ಶಠಮರುಷಣಗೋತ್ರದ ಆಪಸ್ತಂಭಸೂತ್ರದ ಯಜುಶಾಖಾಧ್ಯಾಯುಗಳಾದ ಯೆಟೂರ ತಿರುಮಲಕೊಮಾರ ತೊಳ್‌ಪಾಚಾರ್ಯ್ಯ ಗುರುಸ್ವಾಮಿಗಳವರ ದಿವ್ಯಶ್ರೀಪಾದಪದ್ಮಂಗಳಿಗೆ ....

ದೇವರವರ ಪರಮಪ್ರಿಯ್ಯಶಿಶ್ಯನಾದ ಕನಕಗಿರಿ ಲಕ್ಷ್ಮಾನಾಗತ್ತಿ ರಾಜಾರಾಮ ಝುಂಮ್ಮಡಿ ವುಡಿಸಿನಾಯಕನು ನದ್ವಿನಿಯಭಯಭಕ್ತಿಗಳಿಂದ ಬರಸಿಕೊಟ್ಟ ವುಂಮ್ಮಳಿಗ್ರಾಮದ ಧರ್ಮಶಾಸನದ ಕ್ರಮವೆಂತ್ತೆಂದರೆ ನಾವು ಶಾಹಾಜಿಯವರ ರಾಜಕಾರ್ಯ್ಯದ ದುರ್ಗಠಣಗಳ ಗೆದ್ದು ಸ್ವಸ್ತಳಕೆ ಬಂದು ಶ್ರೀ ಸ್ವಾಮಿ ದೇವಾಲಯದ ಗೋಪುರರ(?) ಮುಂತ್ತಾದ ಶೆವೆಗಳೆಲ್ಲ ದೆವರವರ ಕೃಪಾಕಟಾಕ್ಷದಿಂದ ನಮ್ಮ ಮನಸಿನಂತ್ತೆ ಆದ ಪ್ರಯುಕ್ತ ದೇವರವರಿಗೆ ನಂಮ ಭಕ್ತಿಪೂರ್ವಕದಿಂದ ನಮ್ಮ ಮನಸಿನಂತ್ತೆ ಆದ ಪ್ರಯುಕ್ತ ದೇವರವರಿಗೆ ನಂಮ ಭಕ್ತಿಪೂರ್ವಕದಿಂದ ಪ ॥ ಯಲಬುರಿಗೆ ಸಿಮೆ ಮಾಗೆರೆ ಸ ॥ವಳಗೆ ಮ ಗೌಡಗೆರೆ ಯಂಬ ಗ್ರಾಮವಂನ್ನು ನಂಮ್ಮ ಮನಃಪೂರ್ವಕವಾಗಿ ಸಮರ್ಪಣೆ ಮಾಡಿಕೊಂಡು ಯಿಥೆವೆ ಯಿದಕ್ಕೆ ಸಲುವನು ವರ್ಷಾದಾಯದ ವಸಾದಾಯ ನಿದರಂಭ ಕಾಡಾರಂಭ ನಿಧಿನಿಕ್ಷೆಪ ಜಲಪಾಷಾಣ ಅಕ್ಷಿಣು ಆಗಾಮಿ ಸಿಧ'ಸಾಧಿಂಗಳೆಂಬ ಅಷ್ಟ ಭೊಗ ತೆಜೊಪಾರ್ಜನೆಯೆನ್ನುಂಟಾದ್ದು ತ್ತಿಕರುಣ ತ್ತಿವಾಜಾ ಸಮರ್ಪಣ ಮಾಡಿಕೊಂಡು ಯಿಥೆವೆ ದೆವರವರು ತಂಮ್ಮ ಪುತ್ರಪವುತ್ರಪಾರಂಪರ್ಯ್ಯ ಆಚದ್ರಾರ್ಕ ಸ್ತಾಯುಗಳಾಗಿ ಸುಖದಲ್ಲಿ ಅನುಭವಿಸಿಕೊಂಡು ಯೀಪ್ಪೆದೆಂದು ಬರಸಿಕೊಟ್ಟ ಮ॥ಗೌಡಗೆರೆ ವುಂಮ್ಮಳೆಗ್ರಾಮದ ಧರ್ಮಶಾಸನವು ಕನಕ ವುಡಿಸಿನಯಕ.

ಆದಿಲಶಾಹಿ ಸಾಹಿತ್ಯ ಸಂಪುಟ : ೧೪ / ೨೯೬

॥ ಸ್ವದತ್ತಾ ದ್ವಿಗುಣ ಪುಣ್ಯಂ । ಪರದತ್ತಾನುಪಾಲನಂ ।
ಪರದತ್ತಾಪಹಾರೇಣ । ಸ್ವದತ್ತಂ ನಿಷ್ಫಲಂ ಭವೇತ್ತು ॥ ೧ ॥

॥ ದಾನಪಾಲನಯೋರ್ಮಧೇ । ದಾನಾಚ್ಛ್ರೆಯೊನ್ನುಪಾಲನಂ ।
ದಾನಾ ಸ್ವರ್ಗಮವಾಪ್ನೋತಿ । ಪಾಲಾನಾದಚ್ಯುತಂ ಪದಂ ॥ ೨ ॥

ಸ್ವದತ್ತಾ ತನಯಾ ಭೂಮಿ । ಪಿತ್ರುದತ್ತಾ ಸಹೊದರಿ ।
ಪರದತ್ತೇಷು ಯಾ ಮಾತ್ತಾ । ತ್ರಿಭಭೂರ್ಮಿ ಪರಿತ್ತೆಜೆತ್ತು ॥ ೩ ॥

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ
ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359